ವಿಶ್ವವಾಣಿ
ವಿಶ್ವಾಸವೇ ವಿಶ್ವ

ಎಸ್‌ಟಿಎಫ್‌ಗೆ ಸಾರಾ ನಿರ್ದೇಶಕಿ

ಸಚಿನ್ ತೆಂಡೂಲ್ಕರ್ ಫೌಂಡೇಷನ್ (ಎಸ್‌ಟಿಎಫ್) ನಿರ್ದೇಶಕಿ ಆಗಿ ಪುತ್ರಿ ಸಾರಾ ತೆಂಡೂಲ್ಕರ್ ಅವರನ್ನು ನೇಮಿಸಲಾಗಿದೆ ಎಂದು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಘೋಷಿಸಿದ್ದಾರೆ.

ಪುಟ ತೆರೆದಂತೆ...

ವಿಮಾನ ಅಪಘಾತವೂ, ಜಪಾನಿಯರ ವರ್ತನೆಯೂ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಅಮೆರಿಕದಿಂದ ಭಾರತಕ್ಕೆ ಬಂದ ಯಯಾತಿ
ಕಾಡುದಾರಿ
ಹರೀಶ್ ಕೇರ

ಸಂ.ಗಮ | 7

ಮಾತಂದ್ರೆ ಮಾತು

ಸೀಟು ಹಂಚಿಕೆ ಒಪ್ಪಂದದ ಬಗ್ಗೆ ನಮ್ಮ ಮುಖ್ಯಮಂತ್ರಿ ಹೇಳಿದ ಮೇಲೆ ಅವರು ಹೇಳಿದ್ದೇ ಫೈನಲ್. ಸಿಎಂ ಹೇಳಿದ ಮೇಲೆ ತಕರಾರೇ ಇಲ್ಲ. ನಾನು ಯಾವತ್ತೂ ನನ್ನ ಸ್ಥಾನಕ್ಕೆ ನಿಷ್ಠೆಯಿಂದ ಇರುತ್ತೇನೆ. ಪಕ್ಷಕ್ಕೆ ನಿಷ್ಠೆಯಿಂದ ಇರುತ್ತೇನೆ. ಇದೀಗ ಒಪ್ಪಂದದ ಬಗ್ಗೆ ಸಿಎಂ ಹೇಳಿದ ಮೇಲೆ ಇದಕ್ಕೆ ಯಾವುದೇ ಪ್ರತಿಕ್ರಿಯೆ ಕೊಡಲ್ಲ.

– ಡಿ.ಕೆ.ಶಿವಕುಮಾರ್
ಡಿಸಿಎಂ

ದಾರಿದೀಪೋಕ್ತಿ

ನಿಮಗೆ ಯಾವುದು ಸಂತೋಷ ಕೊಡುವುದೋ ಅದನ್ನೇ ಮಾಡಬೇಕು, ಯಾರ ಜತೆಯಲ್ಲಿದ್ದಾಗ ಹೆಚ್ಚು ಪ್ರೇರಣೆ, ಸ್ಫೂರ್ತಿ ಸಿಗುವುದೋ, ಅವರ ಹತ್ತಿರವೇ ಇರಬೇಕು. ಯಾರು ನಮ್ಮನ್ನು ಇಷ್ಟಪಡುತ್ತಾರೋ, ಅವರ ಸ್ನೇಹ ಮಾಡಬೇಕು.

ವಕ್ರತುಂಡೋಕ್ತಿ

ಶಾಪಿಂಗ್ ಪ್ರಿಯರಿಗೆ ಅನ್ವಯಿಸುವ ಅತಿ ಚಿಕ್ಕ ಹಾರರ್ ಸ್ಟೋರಿ-ಸೋಲ್ಡ್ ಔಟ್ ಎಂಬ ಫಲಕ

ತೆಲಂಗಾಣದಲ್ಲಿ ಭೂಕಂಪ

ಹೈದ್ರಾಬಾದ್: ತೆಲಂಗಾಣದ ಮುಲುಗು ಎಂಬಲ್ಲಿ ಬುಧವಾರ ಬೆಳಗ್ಗೆ 7.27ರಲ್ಲಿ ಭೂಕಂಪವಾಗಿದೆ. ರಿಕ್ಟರ್ ಮಾಪಕದಲ್ಲಿ 5.3ರಷ್ಟು ತೀವ್ರತೆ ದಾಖಲಾಗಿದೆ. ಕಳೆದ 20 ವರ್ಷಗಳಲ್ಲಿ ಇಷ್ಟೊಂದು ತೀವ್ರತೆಯ ಭೂಕಂಪ ತೆಲಂಗಾಣದಲ್ಲಿ ಸಂಭವಿಸಿರಲಿಲ್ಲ ಎನ್ನಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ದೆಹಲಿಯಲ್ಲಿ ಶಿಸ್ತು ಸಮಿತಿ ಮುಂದೆ ಹಾಜರಾಗಿ ದೂರು ಸಲ್ಲಿಸಿದ ಶಾಸಕ ಯತ್ನಾಳ
ಆರ್.ಅಶೋಕ ದೆಹಲಿಯಲ್ಲಿ ದಿಢೀರ್ ಪ್ರತ್ಯಕ್ಷ | ಶಾಂತಿ ಸಂದೇಶ ಸಾರಿದ ಬಿಎಸ್‌ವೈ

ಬಣದಾಟಕ್ಕೆ ಬಿಳಿ ಬಾವುಟ?

ಬೆಂಗಳೂರು/ದೆಹಲಿ: ಒಂದೆಡೆ ದೆಹಲಿಯಲ್ಲಿ ಬಿಜೆಪಿಯ ಯತ್ನಾಳ ಬಣದ ಸದಸ್ಯರು ಪಕ್ಷದ ವರಿಷ್ಠರನ್ನು ಭೇಟಿಯಾಗಿ ದೂರು ಸಲ್ಲಿಸಿದ್ದರೆ, ಇನ್ನೊಂದೆಡೆ 'ಯತ್ನಾಳ ಹೊರಗಿನವರಲ್ಲ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕು' ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳುವ ಮೂಲಕ ಬಣ ಬಡಿ ದಾಟಕ್ಕೆ ಸದ್ಯಕ್ಕೆ ಬಿಳಿ ಬಾವುಟದ ಸಂದೇಶ ರವಾನಿಸಿದ್ದಾರೆ. ಇದೇ ವೇಳೆ ಕೇಂದ್ರದ ವರಿಷ್ಠರಿಗೆ ರಾಜ್ಯದಿಂದ ಪತ್ರವೊಂದು ರವಾನೆಯಾಗಿದ್ದು ಸಂಚಲನ ಸೃಷ್ಟಿಸಿದೆ.

ವಕ್ಫ್ ವಿವಾದ ವಿಚಾರವಾಗಿ ಜನಾಂದೋಲನ ಮಾಡಿದ್ದ ಶಾಸಕ ಯತ್ನಾಳ ಬಣ ಜೆಪಿಸಿಗೆ ವರದಿ ನೀಡಲು ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಬೀಡುಬಿಟ್ಟಿದೆ ಎನ್ನಲಾಗಿತ್ತು. ಆದರೆ ಮಂಗಳವಾರ ಹಾಗೂ ಬುಧವಾರ ನಡೆದ ಬೆಳವಣಿಯಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವು ಪ್ರಮುಖರನ್ನು ಭೇಟಿಯಾಗಿದ್ದಾರೆ. ಅಲ್ಲದೆ ಯತ್ನಾಳ ತಮಗೆ ನೀಡಿದ್ದ ಶೋಕಾಸ್ ನೋಟಿಸ್‌ಗೆ ಉತ್ತರ ನೀಡಿದ್ದಾರೆ. ಶಿಸ್ತು ಸಮಿತಿ ಅಧ್ಯಕ್ಷ ಓಂ ಪಾಠಕ್ ಕೇಳಿದ ಪ್ರಶ್ನೆಗಳಿಗೆ ಸುದೀರ್ಘ ಉತ್ತರ ನೀಡಿದ್ದಾರೆ. ಅಲ್ಲದೆ ಯತ್ನಾಳ ಅವರು ವಿಜಯೇಂದ್ರ ಮತ್ತು ಯಡಿಯೂರಪ್ಪ ವಿರುದ್ಧ ಆರು ಪುಟಗಳ ದೂರನ್ನೂ ಪ್ರತ್ಯೇಕವಾಗಿ ಸಲ್ಲಿಸಿ ನಗುನಗುತ್ತಾ ಹೊರಗಡೆ ಬಂದಿದ್ದಾರೆ.

ಇದಾಗುತ್ತಿದ್ದಂತೆ ಪ್ರತಿಪಕ್ಷದ ನಾಯಕ ಆರ್.ಅಶೋಕ ದೆಹಲಿಯಲ್ಲಿ ದಿಢೀರ್ ಬಿಜೆಪಿ ರಾಷ್ಟ್ರಾಧ್ಯಕ್ಷರ ಮುಂದೆ ಪ್ರತ್ಯಕ್ಷರಾಗಿದ್ದಾರೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಶಾಸಕ ಯತ್ನಾಳ ದೆಹಲಿಯಲ್ಲಿ ದೂರು ನೀಡುತ್ತಿದ್ದಂತೆ, ಇತ್ತ ಕೇಂದ್ರ ವರಿಷ್ಠರು ಪ್ರತಿಪಕ್ಷದ ನಾಯಕ ಆರ್.ಅಶೋಕ ಅವರನ್ನು ಕರೆಸಿಕೊಂಡು ರಾಜ್ಯದ ಸ್ಥಿತಿಗತಿಯ ವಿವರ ಪಡೆದಿದ್ದಾರೆ ಎನ್ನಲಾಗಿದೆ.

→ 4



ಯಡಿಯೂರಪ್ಪ ವಿರುದ್ಧ ಇರುವ ಗಂಭೀರ ಪ್ರಕರಣಗಳ ಕುರಿತು ಮಾಹಿತಿ, ಹೊಂದಾಣಿಕೆ ಯಾರ ಜತೆಗೆ ಹೇಗೆ ಆಗಿದ್ದಾರೆ. ಭ್ರಷ್ಟಾಚಾರ ಕಳಂಕ, ಪಕ್ಷದ ಸ್ಥಿತಿಗತಿ ಕುರಿತು ಮಾಹಿತಿ ನೀಡಲಾಗಿದೆ. ನಿಮಗೆ ಉತ್ತಮ ಭವಿಷ್ಯವಿದೆ. ಸ್ವಲ್ಪ ತಾಳ್ಮೆಯಿಂದ ಇರಬೇಕು. ಪಕ್ಷದ ವಿಚಾರ ಹೊರಗೆ ಮಾತನಾಡಬೇಡಿ ಎಂದು ತಿಳಿಸಿದ್ದಾರೆ. ವಕ್ಫ್ ಹೋರಾಟ ಮುಂದುವರಿಸುವಂತೆ ಸೂಚನೆಯೂ ಸಿಕ್ಕಿದೆ.

– ಬಸನಗೌಡ ಪಾಟೀಲ ಯತ್ನಾಳ್

ದೆಹಲಿಯಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದ ಯತ್ನಾಳ ಬಣ.

- ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದ ಯತ್ನಾಳ ನೇತೃತ್ವದ ಬಣ
- ಶಿಸ್ತುಸಮಿತಿಯ ಶೋಕಾಸ್ ನೋಟಿಸ್‌ಗೆ ಸಂಬಂಧಿಸಿದ ಉತ್ತರ ನೀಡಿದ ಯತ್ನಾಳ
- ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ಆರು ಪುಟಗಳ ಪತ್ಯೇಕ ದೂರು ಸಲ್ಲಿಕೆ
- ಆರ್.ಅಶೋಕ ಅವರನ್ನು ಕರೆಸಿಕೊಂಡು ರಾಜ್ಯದ ಸ್ಥಿತಿಗತಿ ವಿವರ ಪಡೆದ ವರಿಷ್ಠರು

ಒಟ್ಟಾಗಿ ಹೋಗಬೇಕು ಎಂಬುದು ನನ್ನ ಅಪೇಕ್ಷೆ

ಬಸನಗೌಡ ಪಾಟೀಲ್ ಯತ್ನಾಳ ಹೊರಗಿನವರಲ್ಲ, ಅವರು ಕೂಡ ನಮ್ಮ ಪಕ್ಷದವರೇ. ಯತ್ನಾಳ ಅವರು ಯಾವುದೋ ಕಾರಣಕ್ಕಾಗಿ ಆಕ್ರೋಶದಲ್ಲಿರಬಹುದು. ಆದರೆ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕೆನ್ನುವುದು ನನ್ನ ಅಪೇಕ್ಷೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಯತ್ನಾಳ ಆರೋಪದ ಕೆಲ ಹೊತ್ತಲ್ಲೇ ಶಿವಮೊಗ್ಗದಲ್ಲಿ ಮಾತನಾಡಿದ ಅವರು, ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕೆನ್ನುವುದು ನನ್ನ ಅಪೇಕ್ಷೆ ಇದೆ. ವಿಜಯೇಂದ್ರ, ರಾಘವೇಂದ್ರ ಹಾಗೂ ನಮ್ಮ ಅಪೇಕ್ಷೆ ಕೂಡ ಅದೇ ಇದೆ. ಏನೇ ವಿಚಾರ ಇದ್ದರೂ ಎದುರು-ಬದುರು ಕೂತು ಮಾತನಾಡಬೇಕು. ಇದಕ್ಕೆ ಎಲ್ಲರೂ ಸಹಕರಿಸುತ್ತಾರೆಂಬ ನಂಬಿಕೆ ಇದೆ ಎಂದಿದ್ದಾರೆ.

ಸಂಚಲನ ಸೃಷ್ಟಿಸಿದ ಅನಾಮಧೇಯ ಪತ್ರ

ಬಣ ಬಡಿದಾಟದ ಮಧ್ಯೆಯೇ ಅನಾಮಧೇಯ ಪತ್ರವೊಂದು ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸಿದೆ. ವಿಜಯೇಂದ್ರ, ಯಡಿಯೂರಪ್ಪ, ಅಶೋಕ ಇವರು ಕಾಂಗ್ರೆಸ್‌ನೊಂದಿಗೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿ ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ್ ಭಾಗವತ್, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆಯಲಾಗಿದೆ. ಇದು ಪಕ್ಷ ಹಾಗೂ ಸಂಘನಿಷ್ಠರಾಗಿರುವ ರಾಜ್ಯದ ಪ್ರಮುಖರೊಬ್ಬರು ಪತ್ರ ಬರೆದಿದ್ದಾರೆ ಎನ್ನಲಾಗಿದೆ. ಕೆಳಮಟ್ಟದ ಬಿಜೆಪಿ ಸದಸ್ಯರ ಗುಂಪಾದ ನಾವು, ಕರ್ನಾಟಕದ ಬಿಜೆಪಿ ನಾಯಕತ್ವದಲ್ಲಿ ನಡೆಯುತ್ತಿರುವ ದುಸ್ಥಿತಿಯನ್ನು ಹಂಚಿಕೊಳ್ಳಲು ಪತ್ರ ಬರೆಯುತ್ತಿದ್ದೇವೆ. ಇತ್ತೀಚೆಗೆ ನಡೆದ ವಿಧಾನಸಭೆ ಉಪಚುನಾವಣೆಯಲ್ಲಿ ಬಿಜೆಪಿ 3 ಕ್ಷೇತ್ರಗಳಲ್ಲೂ ಸೋತಿದ್ದು, ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ತಂದೆ ಯಡಿಯೂರಪ್ಪ ನಡೆಸುತ್ತಿರುವ ಒಪ್ಪಂದ ರಾಜಕೀಯದ ಮೇಲೆ ಬೆಳಕು ಚೆಲ್ಲಬೇಕಾಗಿದೆ. ಇವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆ ಕೈಜೋಡಿಸಿದ್ದಾರೆ. ಪೋಕ್ಸೋ ಪ್ರಕರಣದಲ್ಲಿ ಯಡಿಯೂರಪ್ಪ ಅವರನ್ನು ರಕ್ಷಿಸಿದ ಕಾರಣಕ್ಕೆ ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಸಾಕಷ್ಟು ಅವಕಾಶ ಇದ್ದರೂ ಕೈಚೆಲ್ಲಿದ್ದಾರೆ. ವಿಜಯೇಂದ್ರ ಹಾಗೂ ಡಿ.ಕೆ.ಶಿವಕುಮಾರ್ ವ್ಯಾಪಾರ ಹಿತಾಸಕ್ತಿಗಳನ್ನು ಹೊಂದಿದ್ದಾರೆ. ಅಶೋಕ ಕೂಡ ಈ ಸಂಬಂಧದಲ್ಲಿ ವಿಭಿನ್ನರಲ್ಲ. ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಇಳಿಸಿ, ಪಕ್ಷ ಉಳಿಸಿ. ಈ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸದಿದ್ದರೆ ಭವಿಷ್ಯದಲ್ಲಿ ಪಕ್ಷದ ಪತನಕ್ಕೆ ಕಾರಣವಾಗಲಿದೆ ಎಂದು ಪತ್ರದಲ್ಲಿ ಬರೆಯಲಾಗಿದೆ.

ಇಂದು ಹಾಸನದಲ್ಲಿ ಸಿದ್ದು ಬಲ ಪ್ರದರ್ಶನ

ಸುಮಾರು 70 ಸಾವಿರ ಜನರನ್ನು ಸೇರಿಸುವ ಲೆಕ್ಕಾಚಾರ
ಕಾಂಗ್ರೆಸ್ ಒಳಗಿರುವ ಗೊಂದಲ ನಿವಾರಿಸಲು ಪ್ರಯತ್ನ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನಕ್ಕೆ ಮತ್ತೊಂದು ವೇದಿಕೆ ಸಜ್ಜಾಗಿದ್ದು, ಗುರುವಾರ 'ಜನಕಲ್ಯಾಣ' ಸಮಾವೇಶಕ್ಕೆ ಹಾಸನ ಸಜ್ಜಾಗಿದೆ.

ಆರಂಭದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಆಪ್ತರು, ಶೋಷಿತ ಸಮುದಾಯದ ಮುಖಂಡರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 'ಸ್ವಾಭಿಮಾನಿ ಸಮಾವೇಶ'ಕ್ಕೆ ಪಕ್ಷದಲ್ಲಿಯೇ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ಪಕ್ಷದ ಕಾರ್ಯಕ್ರಮವನ್ನಾಗಿ ಮಾರ್ಪಡಿಸಲಾಗಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಹಾಗೂ ಪಕ್ಷದ ಚಿಹ್ನೆಯಲ್ಲಿಯೇ ಈ ಸಮಾವೇಶ ನಡೆಯಲಿದೆ. ರಾಜ್ಯದಲ್ಲಿ ಇತ್ತೀಚೆಗೆ ಮುಕ್ತಾಯ ಗೊಂಡಿರುವ ಉಪಚುನಾವಣೆ, ಮುಡಾ ಸೇರಿದಂತೆ ವಿವಿಧ ಆರೋಪ ಹಾಗೂ ಬಿಜೆಪಿ ನಾಯಕರ ಸರಣಿ ಆರೋಪಗಳಿಗೆ ಪ್ರತಿಯಾಗಿ ಈ ಬೃಹತ್ ಸಮಾವೇಶ ಆಯೋಜಿಸಲು ಕಾಂಗ್ರೆಸ್ ತೀರ್ಮಾನಿಸಿದೆ. ಈಗಾಗಲೇ ಮೈಸೂರು, ಕಲಬುರಗಿ, ಬೆಳಗಾವಿ ಸೇರಿದಂತೆ ವಿವಿಧ ಭಾಗಗಳಲ್ಲಿ ಬೃಹತ್ ಸಮಾವೇಶ ನಡೆಸಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಆಪ್ತರು, ಇದೀಗ ಹಾಸನದಲ್ಲಿ ನಡೆಸಲು ತೀರ್ಮಾನಿಸಿದ್ದರು. ಆದರೆ ಪಕ್ಷದ ವೇದಿಕೆಯ ಲ್ಲಿಯೇ ಸಮಾವೇಶ ನಡೆಯಲಿ ಎಂದು ಹೈಕಮಾಂಡ್ ಸಂದೇಶ ರವಾನಿಸಿರುವುದರಿಂದ ಸ್ವಾಭಿಮಾನಿ ಸಮಾವೇಶದ ಬದಲಿಗೆ ಜನಕಲ್ಯಾಣ ಸಮಾವೇಶ ಆಯೋಜಿಸಲು ತೀರ್ಮಾನಿಸಲಾಗಿದೆ. ಹಾಸನದಲ್ಲಿ ನಡೆಯಲಿರುವ ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎನ್ನುವ ಖಡಕ್ ಸೂಚನೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈಗಾಗಲೇ ನೀಡಿದ್ದಾರೆ. ಆದ್ದರಿಂದ ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರದಿಂದ ಭಾರಿ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸುವ ಸಾಧ್ಯತೆ ಯಿದೆ.

ಹಾಸನದ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಜನಕಲ್ಯಾಣ ಸಮಾವೇಶಕ್ಕೆ ಸಿದ್ಧತೆ ನಡೆದಿದೆ.

ಹಾಸನದ ಸಮಾವೇಶಕ್ಕೆ ಸ್ವಾಭಿಮಾನಿ ಒಕ್ಕೂಟದಿಂದ ಹೆಚ್ಚಿನ ಜನ ಬಂದರೆ ಸಂತೋಷ. ಅವರು ಬರಲಿ. ಎಲ್ಲ ವರ್ಗದ ಜನರ ಬೆಂಬಲದಿಂದಾಗಿ ನಮ್ಮ ಸರಕಾರ ಅಧಿಕಾರಕ್ಕೆ ಬಂದಿದೆ. ನಾವು ಈ ಕಾರ್ಯಕ್ರಮಕ್ಕಾಗಿ ಎಲ್ಲರಿಗೂ ಆಹ್ವಾನ ನೀಡಿದ್ದೇವೆ. ಈ ಸಮಾವೇಶವನ್ನು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಸಲಾಗುತ್ತಿದೆ. ನಮ್ಮ ಸಮಾವೇಶ ಯಶಸ್ವಿಯಾಗುತ್ತದೆ ಎಂದು ಬಿಜೆಪಿಯವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಗೌಡರ ಭದ್ರಕೋಟೆಯಲ್ಲಿ ಸಿಎಂ ಶಕ್ತಿ ಪ್ರದರ್ಶನ

ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ಆರಂಭಿಸಿದ್ದ ಈ ಯಾತ್ರೆಯು ಕಾಂಗ್ರೆಸ್ ಸಮಾವೇಶವಾಗಿ ಮಾರ್ಪಟ್ಟಿದೆ. ಆದರೆ ಈ ಎರಡರಲ್ಲಿಯೂ ಮಾಜಿ ಪ್ರಧಾನಿ ದೇವೇಗೌಡರ ಹಾಗೂ ಜೆಡಿಎಸ್‌ನ ಭದ್ರಕೋಟೆ ಎನಿಸಿರುವ ಹಾಸನ ಜಿಲ್ಲೆಯಲ್ಲಿ ಬಿರುಕು ಹುಟ್ಟಿಸಬೇಕು ಎನ್ನುವ ಲೆಕ್ಕಾಚಾರಗಳಿವೆ. ಈಗಿನಿಂದಲೇ ಹಾಸನದಲ್ಲಿ ಸಂಘಟನೆಗೆ ಒತ್ತು ನೀಡುವ ಮೂಲಕ, ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆ ಹಾಗೂ 2028ರ ವಿಧಾನಸಭಾ ಚುನಾವಣೆಗೆ ತಯಾರಿ ಆರಂಭಿಸುವುದು ಕಾಂಗ್ರೆಸ್ ನಾಯಕರ ಲೆಕ್ಕಾಚಾರವಾಗಿದೆ.



ಹಾಸನದಲ್ಲಿ ಕಾಂಗ್ರೆಸ್ ನಡೆಸಲಿರುವ ಸಮಾವೇಶದ ಬಗ್ಗೆ ನಾವು ತಲೆ ಕೆಡಿಸಿಕೊಂಡಿಲ್ಲ. ಜೆಡಿಎಸ್ ಗುರಿಯಾಗಿಸಿಕೊಂಡು ಸಮಾವೇಶ ಮಾಡುವುದಾದರೆ ಮಾಡಲಿ. ಏನೇನು ಮಾಡುತ್ತಾರೋ ಮಾಡಲಿ. ನಾವು ಕೂಡ ಇದಕ್ಕೆಲ್ಲ ತಯಾರಿದ್ದೇವೆ. ಆದರೆ, 2028ರ ವಿಧಾನಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡುತ್ತೇವೆ.

– ಎಚ್.ಡಿ.ರೇವಣ್ಣ ಮಾಜಿ ಸಚಿವ

3 ತಿಂಗಳೊಳಗೆ ತನಿಖಾ ವರದಿ ಸಲ್ಲಿಸಲು ಹೈ ಗಡುವು

ವಕೀಲೆ ಆತ್ಮಹತ್ಯೆ; ತನಿಖೆಗೆ ಎಸ್‌ಐಟಿ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮ ಬಹುಕೋಟಿ ಹಗರಣದ ತನಿಖೆಯ ನೆಪದಲ್ಲಿ ಸಿಐಡಿ ಪೊಲೀಸರು ನೀಡಿದ ಕಿರುಕುಳದಿಂದ ಮನನೊಂದು ಆತ್ಮಹತ್ಯೆಗೆ ಮಾಡಿಕೊಂಡಿದ್ದ ವಕೀಲೆ ಎಸ್.ಜೀವಾ ಪ್ರಕರಣದ ತನಿಖೆಗೆ ಹೈಕೋರ್ಟ್ ಮೂವರು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು (ಸಿಬಿಐ) ರಚಿಸಿದ್ದು, ಮೂರು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಎಸ್‌ಐಟಿಗೆ ಗಡುವು ನೀಡಿದೆ.

ಬೆಂಗಳೂರು ಸಿಬಿಐನ ಪೊಲೀಸ್ ವರಿಷ್ಠಾಧಿಕಾರಿ ವಿನಾಯಕ್ ವರ್ಮಾ ನೇತೃತ್ವದ ಮೂರು ಅಧಿಕಾರಿಗಳ ವಿಶೇಷ ತನಿಖಾ ತಂಡ ನಡೆಸಲಿದೆ. ಕರ್ನಾಟಕ ಹೋಮ್ ಗಾರ್ಡ್‌ನ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಅಕ್ಷಯ್ ಮಚೀಂದ್ರ ಹಾಕೆ, ಆಂತರಿಕ ಭದ್ರತಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ನಿಶಾ ಜೇಮ್ಸ್ ಅವರು ಎಸ್‌ಐಟಿಯ ಇನ್ನಿಬ್ಬರು ಸದಸ್ಯರಾಗಿರಲಿದ್ದಾರೆ ಎಂದು ನ್ಯಾಯಾಲಯ ಆದೇಶಿಸಿದೆ.

ಸೂಚನೆಗಳೇನು?

- ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ತಕ್ಷಣ ಎಸ್‌ಐಟಿ ಆರಂಭಿಸಬೇಕು
- ಎಲ್ಲ ದಾಖಲೆಗಳನ್ನು ಸಂಬಂಧಿತ ಅಧಿಕಾರಿಗಳು ಎಸ್‌ಐಟಿಗೆ ಒದಗಿಸಬೇಕು
- ಅಗತ್ಯಬಿದ್ದರೆ ಇತರೆ ಪೊಲೀಸ್ ಅಧಿಕಾರಿಗಳನ್ನು ಎಸ್‌ಐಟಿ ನೆರವಿಗೆ ಪಡೆಯಬಹುದು
- ತನಿಖೆ ಆರಂಭವಾದಗಿನಿಂದ ಮೂರು ತಿಂಗಳಲ್ಲಿ ತನಿಖೆ ಮುಗಿಯಬೇಕು
- ಎಸ್‌ಐಟಿಗೆ ಅಗತ್ಯವಾದ ಕಚೇರಿ ಮತ್ತಿತರ ಸೌಲಭ್ಯವನ್ನು ರಾಜ್ಯ ಸರಕಾರ ಒದಗಿಸಬೇಕು

ಮುಡಾ ಮಾಜಿ ಅಧ್ಯಕ್ಷರ ವಿಚಾರಣೆ

ಮೈಸೂರು: ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ 14 ಬದಲಿ ನಿವೇಶನ ಸೇರಿದಂತೆ 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಬುಧವಾರ ಲೋಕಾಯುಕ್ತ ಎಸ್‌ಪಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು. ಮಧ್ಯಾಹ್ನ 4ರಿಂದ ಸಂಜೆ 7ರವರೆಗೆ ಅವರನ್ನು ತನಿಖಾಧಿಕಾರಿಗಳ ತಂಡವು ವಿಚಾರಣೆಗೆ ಒಳಪಡಿಸಿತು.

ಇಂದು ಫಡ್ನವೀಸ್ ಪ್ರಮಾಣವಚನ

ಮುಂಬೈ: ಮಹಾರಾಷ್ಟ್ರದ ನೂತನ ಸಿಎಂ ಆಗಿ ದೇವೇಂದ್ರ ಫಡ್ನವೀಸ್ ಅವರು ಗುರುವಾರ ಸಂಜೆ 5.30ಕ್ಕೆ ಪ್ರಮಾಣ ವಚನ ಸ್ವೀಕರಿಸಲಿ ದ್ದಾರೆ. ಏಕನಾಥ ಶಿಂದೆ ಮತ್ತು ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ.

ದರ್ಶನ್ ಜಾಮೀನು ರದ್ದು ಕೋರಿ ಸುಪ್ರೀಂಗೆ ಅರ್ಜಿ

ಬೆಂಗಳೂರು: ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್‌ಗೆ ಹೈಕೋರ್ಟ್ ಮಂಜೂರು ಮಾಡಿದ್ದ ಮಧ್ಯಂತರ ಜಾಮೀನು ರದ್ದು ಕೋರಿ ಸುಪ್ರೀಂಕೋರ್ಟ್‌ನಲ್ಲಿ ಬುಧವಾರ ಮೇಲ್ಮನವಿ ಸಲ್ಲಿಸಲಾಗಿದೆ. ಪ್ರಾಸಿಕ್ಯೂಷನ್ ಪರವಾಗಿ ವಕೀಲರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ದರ್ಶನ್ ಅವರಿಗೆ ಕರ್ನಾಟಕ ಹೈಕೋರ್ಟ್ ಷರತ್ತುಬದ್ಧ ಮಂಜೂರು ಮಾಡಿರುವ ಮಧ್ಯಂತರ ಜಾಮೀನು ರದ್ದು ಮಾಡುವಂತೆ ಅರ್ಜಿಯಲ್ಲಿ ಕೋರಲಾಗಿದೆ. ಡಿ.6 ಅಥವಾ ಡಿ.9ರಂದು ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆ ಇದೆ. ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ಅನುಮತಿ ನೀಡಿತ್ತು. ಅನುಮತಿ ನೀಡಿದ ಬೆನ್ನಲ್ಲೇ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

- ಚಿಕಿತ್ಸೆಗೆ ಮಧ್ಯಂತರ ಜಾಮೀನು ಪಡೆದಿರುವ ದರ್ಶನ್
- ಜೈಲಿನಿಂದ ಬಿಡುಗಡೆಯಾಗಿ ಬಿಜಿಎಸ್ ಆಸ್ಪತ್ರೆಗೆ ದಾಖಲು
- ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ಅನುಮತಿ

ಯಲ್ಲಮ್ಮ ದೇಗುಲಕ್ಕೆ 100 ಕೋಟಿ ರು.

ಬೆಂಗಳೂರು: ಸವದತ್ತಿ ಯಲ್ಲಮ್ಮ ದೇವಾಲ ಯದ ಅಭಿವೃದ್ಧಿಗೆ ಕೇಂದ್ರ ಸರಕಾರದಿಂದ ನೂರು ಕೋಟಿ ರು. ಅನುದಾನ ಮಂಜೂ ರಾಗಿದೆ. ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಅವರು ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮ ದೇವಾಲಯದ ಅಭಿವೃದ್ಧಿಗೆ ಅನುದಾನ ನೀಡುವಂತೆ ಕೇಂದ್ರಕ್ಕೆ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ಅನುದಾನ ಬಿಡುಗಡೆಯಾಗಿದೆ. ರೋರಿಕ್ ಮತ್ತು ದೇವಿಕಾರಾಣಿ ಎಸ್ಟೇಟ್ ಅಭಿವೃದ್ಧಿಗೂ ಕೇಂದ್ರ ಸರಕಾರ 99.17 ಕೋಟಿ ರು. ಬಿಡುಗಡೆ ಮಾಡಿದೆ.

ಪ್ರೊಬಾ 3-ಮಿಷನ್ ಉಡ್ಡಯನ ಇಂದು

ಶ್ರೀಹರಿಕೋಟಾ: ಇಸ್ರೊ, ವಾಣಿಜ್ಯ ಉದ್ದೇಶಕ್ಕಾಗಿ ಪ್ರಾರಂಭಿಸಿರುವ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮೂಲಕ ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ (ಇಎಸ್‌ಎ) ಉಪಗ್ರಹದ ಉಡ್ಡಯನವನ್ನು ತಾಂತ್ರಿಕ ದೋಷ ಕಂಡುಬಂದ ಹಿನ್ನೆಲೆಯಲ್ಲಿ ಡಿ.5ಕ್ಕೆ ಮುಂದೂಡಿದೆ. ಗುರುವಾರ ಸಂಜೆ 4.12ಕ್ಕೆ ಶ್ರೀಹರಿಕೋಟಾದಲ್ಲಿ ಇವು ನಭಕ್ಕೆ ಚಿಮ್ಮಲಿವೆ.

ಸುಧಾರಿಸಿದ ದೆಹಲಿ ಗಾಳಿಯ ಗುಣಮಟ್ಟ

ದೆಹಲಿ: ಬರೋಬ್ಬರಿ 50 ದಿನಗಳ ಬಳಿಕ ರಾಷ್ಟ್ರ ರಾಜಧಾನಿ ದೆಹಲಿ ವಾತಾವರಣ ಸುಧಾರಿಸಿದೆ. ಬುಧವಾರ ಸಂಜೆ 4 ಗಂಟೆಯ ಹೊತ್ತಿಗೆ ಗಾಳಿಯ ಸೂಚ್ಯಂಕ (ಎಕ್ಯೂಐ) 178ಕ್ಕೆ ತಲುಪಿದೆ. ಈ ಕುರಿತು ಮಾಹಿತಿ ನೀಡಿರುವ ಹವಾಮಾನ ಇಲಾಖೆ, ಬುಧವಾರ ನಗರದಲ್ಲಿ ಈ ಹಿಂದಿನ ದಿನಗಳಿಗೆ ಹೋಲಿಸಿದರೆ ಗಾಳಿಯ ಗುಣಮಟ್ಟ ಉತ್ತಮವಾಗಿದೆ. ಡಿ.7ರವರೆಗೂ ಇದೇ ರೀತಿಯವ ವಾತಾವರಣ ಇರಲಿದೆ ಎಂದು ಹೇಳಿದೆ. ಹಗಲಿನಲ್ಲಿ ಶುದ್ಧಗಾಳಿಯೊಂದಿಗೆ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಲೋಕಾಯುಕ್ತದೊಂದಿಗೆ ಇಡಿ ಹಂಚಿಕೊಂಡಿರುವ ಮಾಹಿತಿ ಪತ್ರ ಸೋರಿಕೆ

ಇಡಿ ನಡೆಗೆ ಮುಖ್ಯಮಂತ್ರಿ ಕಿಡಿ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖಾ ಪ್ರಗತಿಯನ್ನು ಲೋಕಾಯುಕ್ತದೊಂದಿಗೆ 'ಹಂಚಿಕೊಂಡಿರುವ' ಇಡಿ ನಡೆಯನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು 'ತನಿಖೆಯ ದಾರಿ ತಪ್ಪಿಸುವ ತಂತ್ರ'ವೆಂದು ಟೀಕಿಸಿದ್ದಾರೆ.

ಲೋಕಾಯುಕ್ತದೊಂದಿಗೆ ಇಡಿ ಹಂಚಿಕೊಂಡಿರುವ ಮಾಹಿತಿಯ ಪತ್ರ ಸೋರಿಕೆಯಾಗಿರುವುದು ಇದೀಗ ವಿವಾದಕ್ಕೆ ಕಾರಣವಾಗಿದ್ದು, ರಾಜಕೀಯ ಕಾರಣ ಹಾಗೂ ತನಿಖೆಯ ದಿಕ್ಕುತಪ್ಪಿಸುವ ಕಾರಣಕ್ಕೆ ಮಾಹಿತಿಯನ್ನು ಸೋರಿಕೆ ಮಾಡಿದ್ದಾರೆ. ಈ ಮೂಲಕ ನ್ಯಾಯಾಲಯದ ದಾರಿ ತಪ್ಪಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದು ಆರೋಪ ಮಾಡಿದ್ದಾರೆ.

→ 4

ಒಂದೇ ಪ್ರಕರಣದ ಬಗ್ಗೆ ಎರಡು ತನಿಖಾ ಏಜೆನ್ಸಿಗಳು ತನಿಖೆ ನಡೆಸುವಂತಿಲ್ಲ. ಇಡಿ ಅವರು ಪತ್ರದಲ್ಲಿ ಕೆಲವೊಂದಕ್ಕೆ ತೀರ್ಪಿಗೆ ಬಂದಂತಿದೆ. ಲೋಕಾಯುಕ್ತದ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಇದು ಕಾನೂನು ವಿರೋಧಿ ನಡೆಯಾಗಿದೆ. ರಾಜಕೀಯವಾಗಿ ಬಿಜೆಪಿಗೆ ಹಿನ್ನಡೆಯಾಗಿರುವುರಿಂದ ಈ ರೀತಿ ಮಾಡುತ್ತಿದೆ.

– ಡಾ.ಜಿ.ಪರಮೇಶ್ವರ, ಗೃಹ ಸಚಿವ

ಇಡಿ ಪತ್ರದಲ್ಲಿ ಏನಿದೆ?

ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಗೆ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ನಿಯಮ ಉಲ್ಲಂಘಿಸಿ ನಿವೇಶನ ಹಂಚಿಕೆ ಮಾಡಲಾಗಿದೆ. 14 ನಿವೇಶನಗಳನ್ನು ಹಸ್ತಾಂತರಿಸಿರುವ ಪ್ರಕರಣದಲ್ಲಿ ಹಲವು ಅಕ್ರಮಗಳು ನಡೆದಿರುವ ಬಗ್ಗೆ ಪುರಾವೆಗಳಿವೆ. ಇದರೊಂದಿಗೆ ಮುಡಾದಲ್ಲಿ ಒಟ್ಟು 1,095 ಸೈಟ್‌ಗಳನ್ನು ಬೇನಾಮಿ ಮತ್ತು ಇತರ ವಹಿವಾಟುಗಳಲ್ಲಿ ಅಕ್ರಮವಾಗಿ ಮಂಜೂರು ಮಾಡಿದೆ ಎಂಬುದು ತನ್ನ ತನಿಖೆಯಲ್ಲಿ ಕಂಡುಬಂದಿದೆ ಎಂದು ಹೇಳಿಕೊಂಡಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ವೇಳೆ, ಭೂಪರಿವರ್ತನೆಯಲ್ಲಿ ಕಾನೂನುಬದ್ಧ ಮಾರ್ಗಸೂಚಿಗಳ ಉಲ್ಲಂಘನೆ, ಕಚೇರಿಯ ಕಾರ್ಯವಿಧಾನಗಳ ಉಲ್ಲಂಘನೆ, ಅನಾವಶ್ಯಕ ಕೃಪಾಕಟಾಕ್ಷ ಮತ್ತು ಪ್ರಭಾವದ ಬಳಕೆ ಹಾಗೂ ಸಹಿಗಳ ಫೋರ್ಜರಿಗೆ ಸಾಕ್ಷ್ಯಾಧಾರಗಳು ಪತ್ತೆಯಾಗಿವೆ. ಮುಡಾದಲ್ಲಿ ಆಪಾದಿತ ಅಕ್ರಮ ಚಟುವಟಿಕೆಗಳು ಪಾರ್ವತಿ ಪ್ರಕರಣದೊಂದಿಗೆ ಕೊನೆಗೊಂಡಿಲ್ಲ. 700 ಕೋಟಿಗಿಂತ ಹೆಚ್ಚು ಮಾರುಕಟ್ಟೆ ಮೌಲ್ಯದ ಒಟ್ಟು 1,095 ಸೈಟ್‌ಗಳನ್ನು ಕಾನೂನುಬಾಹಿರವಾಗಿ ಹಂಚಿಕೆ ಮಾಡಲಾಗಿದೆ ಎಂದು ಹೇಳಲಾಗಿದೆ.

ಪತ್ರದ ಹಿಂದೆ ದುರುದ್ದೇಶ: ಸಿಎಂ

ಈ ವಿಷಯಕ್ಕೆ ಸಂಬಂಧಿಸಿದಂತೆ ಮಂಡ್ಯದ ಕೆ.ಆರ್.ಪೇಟೆಯಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೈಕೋರ್ಟ್‌ನಲ್ಲಿ ನಮ್ಮ ಅರ್ಜಿ ವಿಚಾರಣೆಗೆ ಬರುವ ಸಮಯದಲ್ಲಿ ಇಡಿ ಲೋಕಾಯುಕ್ತಕ್ಕೆ ಪತ್ರ ಬರೆದಿದ್ದೇ ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಎಂದು ಆರೋಪಿಸಿದರು. ಇಡಿ ತನಿಖೆ ನಡೆಸುತ್ತಿರುವುದೇ ಸರಿಯಲ್ಲ. ತನಿಖೆ ನಡೆಸಿದ ಮೇಲೆ ತನಿಖಾ ವರದಿಯನ್ನು ಲೋಕಾಯುಕ್ತಕ್ಕೆ ನೀಡಬಹುದಿತ್ತು. ಅದನ್ನು ಬಿಟ್ಟು, ಲೋಕಾಯುಕ್ತಕ್ಕೆ ಪತ್ರ ಬರೆಯುವುದು ಮತ್ತು ಮಾಧ್ಯಮಗಳಿಗೆ ಸೋರಿಕೆ ಮಾಡುವುದರ ಹಿಂದೆ ರಾಜಕೀಯ ದುರುದ್ದೇಶವಿದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಗುರುವಾರ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ ಬರುತ್ತಿದೆ. ಇದಕ್ಕೆ ಒಂದು ದಿನ ಮೊದಲು ಮಾಧ್ಯಮಗಳಲ್ಲಿ ಪ್ರಚಾರ ಮಾಡಿರುವುದರ ಹಿಂದೆ ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಮತ್ತು ನ್ಯಾಯಾಲಯವನ್ನು ಪೂರ್ವಾಗ್ರಹದ ನಿಲುವಿಗೆ ತರುವ ದುರುದ್ದೇಶದ ರಾಜಕೀಯ ನಡೆಯಾಗಿದೆ ಎಂದು ಆರೋಪಿಸಿದರು.

ವಕ್ಫ್ ವಿರೋಧಿ ಪ್ರತಿಭಟನಾ ಸಭೆಯಲ್ಲಿ ವಿಜಯೇಂದ್ರ ಗುಡುಗು

ರೈತರಿಗೆ ಅನ್ಯಾಯವಾಗಲು ಬಿಡಲ್ಲ

ಬೀದರ್: ವಕ್ಫ್ ಹೆಸರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರು, ಹಿಂದೂಗಳ ಜಮೀನು ಕಸಿದುಕೊಂಡು ಅವರನ್ನು ಬೀದಿಗೆ ತರುವ ಕೆಲಸ ಮಾಡುತ್ತಿದ್ದಾರೆ. ಆದರೆ, ಬಿಜೆಪಿ ಈ ನಾಡಿನ ರೈತರು, ಹಿಂದೂಗಳ ಬೆನ್ನಿಗಿದೆ. ಯಾರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಉಸಿರು ಇರುವ ತನಕ ರೈತರಿಗೆ ನ್ಯಾಯ ಒದಗಿಸಲು ಹೋರಾಟ ಮಾಡುತ್ತೇವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಶ್ವಾಸನೆ ನೀಡಿದರು.

ಬಿಜೆಪಿ ಜಿಲ್ಲಾ ಘಟಕದಿಂದ ನಗರದ ಗಾಂಧಿ ಗಂಜ್‌ನಲ್ಲಿ ಬುಧವಾರ ಏರ್ಪಡಿಸಿದ್ದ 'ನಮ್ಮ ಭೂಮಿ ನಮ್ಮ ಹಕ್ಕು' ವಕ್ಫ್ ವಿರೋಧಿ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹಿಂದೂಗಳ ಹತ್ಯೆಯಾಗುತ್ತಿದ್ದರೂ ಮುಖ್ಯಮಂತ್ರಿ ಏನೂ ಮಾತನಾಡುತ್ತಿಲ್ಲ. ಅಧಿಕಾರದ ದರ್ಪ, ಮದದಿಂದ ಕಾಂಗ್ರೆಸ್ ಸರಕಾರ ಕೆಲಸ ಮಾಡುತ್ತಿದೆ. ರೈತರ ಕಣ್ಣಲ್ಲಿ ನೀರು ತರಿಸಿದರೆ ಅದರ ಶಾಪ ತಟ್ಟುತ್ತದೆ. ಬಿಜೆಪಿ ಯಾವುದೇ ಕಾರಣಕ್ಕೂ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಬಿಜೆಪಿ ರೈತರ ಬೆನ್ನಿಗಿದೆ. ಬಿಜೆಪಿ ರೈತರ ಪರ ಬೀದಿಗಿಳಿದು ಹೋರಾಟ ನಡೆಸಲಿದೆ. ರೈತರಿಗೆ ನ್ಯಾಯ ಕೊಡಿಸಲಿದೆ. ಈ ಮೂಲಕ ಸಿದ್ದರಾಮಯ್ಯನವರಿಗೆ ತಕ್ಕ ಪಾಠ ಕಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಭೈರತಿ ಬಸವರಾಜ, ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದಲಿಂಗಪ್ಪ ಪಾಟೀಲ, ಶರಣು ಸಲಗರ, ಎಂ.ಜಿ.ಮುಳೆ, ಪ್ರಭು ಚವಾಣ್, ಎಂ.ಪಿ.ರೇಣುಕಾಚಾರ್ಯ, ಪ್ರಕಾಶ ಖಂಡ್ರೆ, ಬಸವರಾಜ ಮತ್ತಿಮೂಡ್, ರಘುನಾಥರಾವ್ ಮಲ್ಕಾಪೂರೆ, ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಬಿ.ಶ್ರೀರಾಮುಲು, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ, ನಗರ ಮಂಡಲ ಘಟಕದ ಅಧ್ಯಕ್ಷ ಶಶಿಧರ ಹೊಸಳ್ಳಿ ಹಾಜರಿದ್ದರು.



ಬೀದರ್‌ನ ಗಾಂಧಿ ಗಂಜ್‌ನಲ್ಲಿ ಬುಧವಾರ ಏರ್ಪಡಿಸಿದ್ದ 'ನಮ್ಮ ಭೂಮಿ ನಮ್ಮ ಹಕ್ಕು' ವಕ್ಫ್ ವಿರೋಧಿ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ಸತತವಾಗಿ ಅದರ ವಿರುದ್ಧ ಹೋರಾಟಗಳನ್ನು ಮಾಡುತ್ತ ಒಂದೊಂದೇ ಹಗರಣಗಳನ್ನು ಬಯಲಿಗೆಳೆದು ಅದರಲ್ಲಿ ಯಶ ಕಂಡಿದೆ. ಈ ಭ್ರಷ್ಟ ಸರಕಾರದ ವಿರುದ್ಧ ಮುಂದೆಯೂ ನಿರಂತರವಾಗಿ ಹೋರಾಟಗಳನ್ನು ನಡೆಸಿ, ರಾಜ್ಯದ ಜನತೆಗೆ ನ್ಯಾಯ ಒದಗಿಸಿಕೊಡಲಾಗುವುದು.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಶ್ರೀ ಹನುಮಾನ ಕಾರ್ತಿಕೋತ್ಸವ ಡಿ.7ಕ್ಕೆ

ಹುಣಸಗಿ: ಪಟ್ಟಣದ ಹೊರವಲಯದ ಹಳ್ಳದ ಹನುಮಾನ ದೇವಸ್ಥಾನದಲ್ಲಿ ಎಂಟನೇ ವರ್ಷದ ಕಾರ್ತಿಕೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ಜರುಗಲಿದೆ. ಡಿ.6 ರಂದು ಸಂಜೆ 6 ಗಂಟೆಯಿಂದ ಸಂಗೀತ ಹಾಗೂ ಸಾಮೂಹಿಕ ಭಜನೆ ಕಾರ್ಯಕ್ರಮ. ಡಿ .7 ರಂದು ಶನಿವಾರ ಬೆಳಗ್ಗೆ 5:30 ಕ್ಕೆ ಸಕಲ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಲಿದೆ. ಅಂದು ಅಭಿಷೇಕ, ಮಹಾಮಂಗಳಾರತಿ ನಂತರ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ ಎಂದು ಮಲ್ಲಯ್ಯ ನಂದಿಕೋಲ, ಪ್ರಕಾಶ ದೇಸಾಯಿ, ಮುತ್ತು ಜಂಬಲದಿನ್ನಿ, ಆನಂದ್ ಬಾರಿಗಿಡದ, ನಂದೂಲಾಲ ಠವಾಣಿ, ನೀಲಕಂಠ ವೈಲಿ, ವೆಂಕಟೇಶ್ ಅರಳಿಗಿಡದ, ವೀರಭದ್ರ ಹೂಗಾರ ಅವರು ಪ್ರಕಟಣೆಗೆ ತಿಳಿಸಿದ್ದಾರೆ.

ಸ್ನಾತಕೋತ್ತರ ಪದವಿ ಅರ್ಜಿ ಅಹ್ವಾನ

ಬೀದರ್: ಬೀದರ ವಿಶ್ವವಿದ್ಯಾಲಯದ 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ವಿಷಯಗಳಿಗೆ ಈಗಾಗಲೇ ಪ್ರವೇಶಾತಿ ಪ್ರಾರಂಭವಾಗಿದ್ದು, ವಿಶ್ವವಿದ್ಯಾಲಯದ ಆವರಣದಲ್ಲಿ ಉಳಿದಿರುವ ಸ್ನಾತಕೋತ್ತರ ಪದವಿಗಳ ಹಾಗೂ ಸಂಯೋಜಿತ ಕಾಲೇಜುಗಳ ಸ್ನಾತಕೋತ್ತರ ಪದವಿಗಳ ಉಳಿದ ಸೀಟುಗಳಿಗೆ ಅರ್ಜಿ ಕರೆಯಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಖಿಖಿಇಖುಖ ನಲ್ಲಿ ಡಿ 15 ರಿಂದ ಡಿ 9 ರ ವರೆಗೆ ಅರ್ಜಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಡಿ. 9 ರಂದು 5:30 ಗಂಟೆಯೊಳಗೆ ಬೀದರ ವಿಶ್ವವಿದ್ಯಾಲಯದ ಆವರಣದಲ್ಲಿ ಅಥವಾ ಸಂಯೋಜಿತ ಕಾಲೇಜುಗಳಲ್ಲಿ ಸಲ್ಲಿಸಬೇಕು. ಪ್ರವೇಶ ಪಡೆಯುವ ದಿನಾಂಕ ಮೆರಿಟ್ ಆಧಾರಿತ ದಿನಾಂಕ ಡಿ. 10 ಮತ್ತು ಎಇ.11 ಆಗಿರುತ್ತದೆ. ಖಾಲಿ ಉಳಿದಿರುವ ಸೀಟುಗಳ ವಿವರ ಹಾಗೂ ಅರ್ಜಿ ಶುಲ್ಕದ ವಿವರಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆಯಬಹುದು ಎಂದು ಬೀದರ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಅಪಘಾತ ಸುರಕ್ಷತೆ ಜಾಗೃತಿ

ಬೀದರ್: ಚಿಟಗುಪ್ಪಾ ತಾಲೂಕಿನ ಮುದನಾಳ ಗ್ರಾಮದ ವಿದ್ಯಾ ಭಾರತಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ಕೆ.ಪಿ.ಟಿ.ಸಿ.ಎಲ್ ವತಿಯಿಂದ ವಿದ್ಯುತ್ ಅಪಘಾತ ಮತ್ತು ಸುರಕ್ಷತೆಯ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಅಭಿಯಾನದಲ್ಲಿ ವಿದ್ಯುತ್‌ನಿಂದ ಆಗುವ ಅಪಘಾತ ಕುರಿತು ಹಲವಾರು ರೀತಿಯ ಮಾಹಿತಿಯನ್ನು ಯುವ ವಿದ್ಯಾರ್ಥಿ, ವಿದ್ಯಾರ್ಥಿನಿಯವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಟಿಎಕ್ಯೂ ಕಲಬುರಗಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶಿವಕುಮಾರ ಬುಕ್ಕೆಗಾರ, ಹುಮನಾಬಾದ ಟಿಎಲ್ಎಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಸೈಯ್ಯದ ಅಸ್ಗರ ಅಲಿ, ಹುಮನಾಬಾದ ಟಿಎಲ್‌ಈ ಶಾಖೆಯ ಕಿರಿಯ ಅಭಿಯಂತರರಾದ ಶ್ರೀನಿವಾಸರಾವ ಹಾಗೂ ವಿದ್ಯಾಭಾರತಿ ಶಾಲೆಯ ಮುಖ್ಯೋಪಾಧ್ಯಾಯರಾದ ಮಲ್ಲಿಕಾರ್ಜುನ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿ ವೇತನ ಅರ್ಜಿ ಅಹ್ವಾನ

ಬೀದರ್: ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ ಮತ್ತು ಸಮನಾಂತರ ಸಾಮಾನ್ಯ ಪದವಿ (General Degree Courses) ಮತ್ತು ಸಂಯೋಜಿತ ಉಭಯ ಪದವಿ ಕೋರ್ಸುಗಳಲ್ಲಿ ((Integrated Degree Courses) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2024-25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ (ಊಟ ಮತ್ತು ವಸತಿ ಸಹಾಯ ಯೋಜನೆ) ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರ್ಹರು ಆನ್‌ಲೈನ್ ವೆಬ್‌ಸೈಟ್ www.ssp.postmatric.karnataka.gov.in ಮೂಲಕ ಡಿ. 20 ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಬೀದರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿ+ ಸೋಮವಾರ

ಸಿಎಂ ವಕ್ಫ್ ರದ್ದುಗೊಳಿಸಲಿ

'ವಕ್ಫ್ ಹಟಾವೋ ದೇಶ ಬಚಾವೋ' ಬೀದರ್‌ನಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ



ನಮ್ಮ ಭೂಮಿ ನಮ್ಮ ಹಕ್ಕು. ವಕ್ಫ್ ವಿರೋಧಿ ಪ್ರತಿಭಟನಾ ಸಭೆಯಲ್ಲಿ ಶಾಸಕ ಶೈಲೇಂದ್ರ ಬೆಲ್ದಾಳೆ ಮಾತನಾಡಿದರು.

ಬೀದರ: ಹಲವಾರು ದಶಕಗಳಿಂದ ಕೃಷಿ ಮಾಡಿಕೊಂಡು ಬಂದ ಬಡ ರೈತರ ಜಮೀನು.
ಶಿಕ್ಷಣ, ಅನ್ನದಾಸೋಹ ಕಲ್ಪಿಸುವ ಮಠದ ಆಸ್ತಿಗಳನ್ನು ವಕ್ಫ್ ಕಾಯ್ದೆ ಮೂಲಕ ಕಬಳಿಸುವ ಹುನ್ನಾರಕ್ಕೆ ರಾಜ್ಯ ಸರಕಾರ ಮುಂದಾಗಿದೆ ಎಂದು ಶಾಸಕ ಶೈಲೇಂದ್ರ ಬೆಲ್ದಾಳೆ ಅವರು ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು.

ಬಿಜೆಪಿ ಜಿಲ್ಲಾ ಘಟಕದಿಂದ ನಗರದ ಗಾಂಧಿ ಗಂಜ್ ನಲ್ಲಿ ಆಯೋಜಿಸಿದ ನಮ್ಮ ಭೂಮಿ ನಮ್ಮ ಹಕ್ಕು. ವಕ್ಫ್ ವಿರೋಧಿ ಪ್ರತಿಭಟನಾ ಸಭೆಯಲ್ಲಿ ಮಾತನಾಡಿ, ಬೀದರ್ ಜಿಲ್ಲೆಯಲ್ಲೂ ಇಂತಹ ಕೆಲವು ಪ್ರಕರಣ ಬೆಳಕಿಗೆ ಬಂದಿವೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ನೇತೃತ್ವದಲ್ಲಿ ಹೋರಾಟ ಕೈಗೊಳ್ಳಲಾಗುತ್ತಿದೆ.

ಖಂಡ್ರೆ ಸಹೋದರ ಜಮೀನು ಕಬಳಿಕೆ

ಬೀದರ ಜಿಲ್ಲೆಯಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಉಳ್ಳುವರಿಗೆ ಮನೆ ನೀಡಲಾಗುತ್ತಿದೆ. ಆದೇ ಬಡವರಿಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಸಹೋದರ ಅರಣ್ಯ ಜಮೀನು ಕಬಳಿಸಿದ್ದಾರೆ. ಈ ಕುರಿತು ದೂರು ನೀಡಿದರು ಕೂಡ ಯಾವುದೇ ಕ್ರಮಕ್ಕೆಗೊಂಡಿಲ್ಲ ಎಂದು ಮಾಜಿ ಸಚಿವ ಭಗವಂತ ಖೂಬಾ ಅಸಮಧಾನ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ನಾಲ್ಕು ಬಿಜೆಪಿ ಶಾಸಕರಿಗೆ ಜನ ಆಶಿರ್ವಾದ ಮಾಡಿದ್ದಾರೆ. ಅರಣ್ಯ ಭೂಮಿ ಕಬಳಿಕೆ ಕುರಿತು ರಾಜ್ಯಾಧ್ಯಕ್ಷರಿಗೆ ಮಾಹಿತಿ ಒದಗಿಸಬೇಕು. ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಸದನ ಸಮಿತಿ ರಚಿಸಲು ಒತ್ತಡ ಹೇರಬೇಕು. ಈಶ್ವರ ಖಂಡ್ರೆ ಅವರ ಸಹೋದರ ಕಬಳಿಸಿರುವ ಅರಣ್ಯ ಭೂಮಿ ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ನಾವೆಲ್ಲರೂ ಅವರ ಜತೆಯಲ್ಲಿ ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಒಂದು ಏಕರೆ ಕೂಡ ವಕ್ಫ್ ಬೋಡ್ ‍ಗೆ ಬಿಡಲ್ಲ. ಮುಖ್ಯಮಂತ್ರಿ ಅವರು ವಕ್ಫ್ ಬೋರ್ಡ್ ರದ್ದುಪಡಿಸಲಿ ಬಡವರಿಗೆ ರೈತರಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಿ ಎಂದು ಒತ್ತಾಯಿಸಿದರು. ಮಾಜಿ ಸಚಿವ ಶ್ರೀರಾಮಲು, ಭೈರತಿ ಬಸವರಾಜ, ಅಶ್ವಥ ನಾರಾಯಣ, ಮುರುಗೇಶ ನಿರಾಣಿ, ಭಗವಂತ ಖೂಬಾ, ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್, ಶಾಸಕರಾದ ಶೈಲೇಂದ್ರ ಬೆಲ್ದಾಳೆ, ಸಿದ್ದಲಿಂಗಪ್ಪ ಪಾಟೀಲ್, ಶರಣು ಸಲಗರ, ಮುಖಂಡರಾದ ರಘುನಾಥ ಮಲ್ಕಾಪೂರೆ, ಎಂ.ಜಿ.ಮೂಳೆ, ಬಾಬು ವಾಲಿ, ಪ್ರಕಾಶ ಖಂಡ್ರೆ ಸೇರಿದಂತೆ ತಾಲೂಕು ಅಧ್ಯಕ್ಷರು, ಕಾರ್ಯಕರ್ತರು ಉಪಸ್ಥಿತರಿದ್ದರು.

> ವಕ್ಫ್ ಹೆಸರಿನಲ್ಲಿ ರಾಜ್ಯ ಸರಕಾರ ಬಡವರ, ರೈತರ ಭೂಮಿ ಕಸಿದುಕೊಂಡು ಅವರನ್ನು ಬೀದಿಗೆ ತರುವ ಕೆಲಸ ಮಾಡುತ್ತಿದೆ. ಯಾವುದೇ ಕಾರಣಕ್ಕೂ ರೈತರು ಅತಂಕಕ್ಕೆ ಒಳಗಾಗಬಾರದು. ಬಿಜೆಪಿ ಬೀದಿಗಿಳಿದು ರೈತರ ಪರ ಹೋರಾಟ ನಡೆಸಿ ರೈತರಿಗೆ ನ್ಯಾಯ ಕೊಡಿಸಲಿದೆ.
> -ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

> ವಕ್ಫ್ ಬೋರ್ಡ್ ನಿಂದ ಅನ್ಯಾಯವಾದವರಿಗೆ ಹೋರಾಟ ಮೂಲಕ ಧೈರ್ಯ ತುಂಬುವ ಕೆಲಸ ಮಾಡಲಾಗುತ್ತಿದೆ.ನ್ಯಾಯ ಒದಗಿಸುವ ಉದ್ದೇಶವಾಗಿದೆ.
> -ಮುರುಗೇಶ ನಿರಾಣಿ ಬಿಜೆಪಿ ಮುಖಂಡ

ಹಿಂದೂ ಮುಸ್ಲಿಂ ಮಧ್ಯ ಬೆಂಕಿ

ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರಕಾರ ಬಡವರಿಗೆ.ರೈತರಿಗೆ ಮೋಸ ಮಾಡುತ್ತಿದೆ. ಒಂದು ಸಮುದಾಯಕ್ಕೆ ಎತ್ತಿ ಕಟ್ಟುವ ಕೆಲಸ ಮಾಡಿ ಅನ್ಯಾಯ ಮಾಡುತ್ತಿದೆ. ಹಿಂದು ಮುಸ್ಲಿಂ ಮಧ್ಯ ಬೆಂಕಿ ಹಚ್ಚಿದೆ ಎಂದು ಶಾಸಕ ಪ್ರಭು ಚವ್ಹಾಣ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಯಾವುದೇ ಅಭಿವೃದ್ಧಿ ಕೆಲಸವಿಲ್ಲ. ವಕ್ಫ್ ಬೋರ್ಡ್ ನಿಂದ ರೈತರ ಬಡವರ ಭೂಕಬಳಿಕೆ ಮಾಡಲಾಗುತ್ತಿದೆ. ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಬೀದರನಿಂದ ದೆಹಲಿ ವರೆಗೆ ಹೋರಾಟಕ್ಕೆ ಸಿದ್ದ ಎಂದು ಶಾಸಕ ಚವ್ಹಾಣ ತಿಳಿಸಿದರು.

ಒಂದು ಕೋಟಿ ವೆಚ್ಚದ ದರ್ಗಾ ರಸ್ತೆ ಕಾಮಗಾರಿ ಸಚಿವ ವೀಕ್ಷಣೆ

ದೇವಸ್ಥಾನ,ದರ್ಗಾಗಳ ಅಭಿವೃದ್ಧಿಗೆ ಅಗತ್ಯ ಅನುದಾನ

ಶಹಾಪುರ: ತಾಲೂಕಿನ ವ್ಯಾಪ್ತಿಯಲ್ಲಿರುವ ದೇವಸ್ಥಾನ, ದರ್ಗಾಗಳ ಅಭಿವೃದ್ಧಿಗೆ ಅಗತ್ಯ ಅನುದಾನ ಒದಗಿಸಲಾಗುತ್ತಿದೆ ಮತ್ತು ಇದರ ಜೊತೆಗೆ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ತಾಲೂಕಿನ ಸಗರ ಗ್ರಾಮದ ಸೂಫಿ ಸರಮಸ್ತ ದರ್ಗಾಕ್ಕೆ ಬೇಟಿ ನೀಡಿ ಆರ್ಶೀವಾದ ಪಡೆದರು. ಬಳಿಕ ದರ್ಗಾದ ಆವರಣದಲ್ಲಿ ಪ್ರಗತಿಯಲ್ಲಿರುವ ಕೆಕೆಆರ್‌ಡಿಬಿ ಯೋಜನೆಯಡಿ 1 ಕೋಟಿ ರು.ವೆಚ್ಚದ ಸಿಸಿ ರಸ್ತೆ, ದರ್ಗಾದ ಲೈಟಿಂಗ್ಸ್ ಹಾಗೂ ಇತರೆ ಕಾಮಗಾರಿ ವಿಕ್ಷಿಸಿ ಮಾತನಾಡಿದ ಅವರು ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಕುಡಿಯುವ ನೀರು, ಆರೋಗ್ಯ ಸೇರಿ ಎಲ್ಲಾ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ. ಇದರ ಜೊತೆಗೆ ಗ್ರಾಮೀಣ ಭಾಗಗಳಲ್ಲಿ ನಿರೀಕ್ಷೆ ಮತ್ತು ಅನುಕೂಲತೆಗಳಿಗೆ ತಕ್ಕಂತೆ ರಸ್ತೆಗಳ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ ಇದಕ್ಕೆ ಸ್ಥಳಿಯ ಗ್ರಾಮಸ್ಥರು ಸಹಕಾರ ನೀಡಬೇಕು ಎಂದರು.

ಸೂಫಿ ದರ್ಗಾದ ಪೀಠಾಧಿಪತಿ ಸಜ್ಜಾದ ನಷೀನ್ ಸಯದ್ ಮುಜೀಬುದ್ದಿನ ಸರ್ಮಸ್ತ ಮಾತನಾಡಿದರು. ಈ ಸಂದರ್ಭದಲ್ಲಿ ಸಯದ್ ಶಾ ನಜಮುಲ್ಲ ಉಲ್ ಉದಾ ಸರ್ಮಸ್ತ, ಬಸಣಗೌಡ ಸುಬೇದಾರ, ಲಿಂಗಣ್ಣ ಪಡಶೆಟ್ಟಿ, ಚೆಂದಪ್ಪ ಸೇರಿ, ಲಕ್ಷ್ಮಣ ಹೊಸಳ್ಳಿ, ಸಂತೋಷಗೌಡ ಸುಬೇದಾರ, ಅಮೀನರೆಡ್ಡಿ, ಬಸವರಾಜ ಕನಗೊಂಡ, ಹಣಮಂತ ಗುರಳ್ಳಿ, ಸಲೀಂ ಸಗ್ರಾಂ, ಸೈಯದ್ ಚಾಂದ್ ಪಟೇಲ್, ತಲಖ್ ಚಾಂದ್, ಶೇಖ್ ಅಲೀಂ ತವಕಲಿ, ಸಯದ್ ಅಸಿಮ್ ಸರ್ಮಸ್ತ, ಸಾಯಿಬಣ್ಣ ಪುರ್ಲೆ, ಶರಣಬಸವ ಸಗರ, ರಫೀಕ್ ಚೌಧರಿ, ತಲಕ್ ಚಾಂದ್, ಕರೀಮ್ ದರ್ಬನ್, ಶಫಿ ಸರ್ಮಸ್ತ, ಸಯದ್ ಖಾದ್ರಿ, ಮುಸ್ತಫ ದರ್ಬಾನ್, ಇಸ್ಮಾಯಿಲ್ ಚಾಂದ್, ಸಯ್ಯದ್ ಚಾಂದ್ ಪಾಷಾ, ಶೇಖ್ ಖಲೀಮ್, ಅಲ್ಲಾ ಪಟೇಲ್ ಮಕ್ತಾಪುರ ಸೇರಿದಂತೆ ಗ್ರಾಮದ ಮುಖಂಡರು ಇದ್ದರು.

- ಜನರ ಇಚ್ಛೆಯಂತೆ ಮಿನಿವಿಧಾನಸೌಧ ನಿರ್ಮಾಣ
- ತಾಲೂಕಿನ ಪಿಂಜಾರದೊಡ್ಡಿ ಗ್ರಾಮದಲ್ಲಿ ರಸ್ತೆ ನಿರ್ಮಾಣಕ್ಕೆ ಸಚಿವರು ಭರವಸೆ ನೀಡಿದರು.

ಪಪಂ ಸಾಮಾನ್ಯ ಸಭೆ | ಶಾಸಕ ಆರ್‌ವಿಎನ್ ಸೂಚನೆ

ನೀರಿನ ಸಮಸ್ಯೆಯಾಗದಂತೆ ನಿಗಾವಹಿಸಿ

ಹುಣಸಗಿ ಪಟ್ಟಣ ಪಂಚಾಯತ ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನುದ್ದೇಶಿಸಿ ಶಾಸಕ ರಾಜಾ ವೇಣುಗೋಪಾಲನಾಯಕ ಮಾತನಾಡಿದರು.

ಹುಣಸಗಿ: ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ನಿಗಾವಹಿಸಿ,ಬಾವಿಗಳಲ್ಲಿ ಕುಡಿಯಲು ನೀರು ಯೋಗ್ಯವಿದ್ದರೆ ಅಂತಹವುಗಳಿಗೆ ಅಗತ್ಯ ಕೆಲಸ ನಿರ್ವಹಿಸಿ ಜನರಿಗೆ ಅನುಕೂಲ ಕಲ್ಪಿಸಬೇಕು. ಉಳಿದವು ಅವುಗಳ ಯಾವ ರೀತಿ ಉಪಯೋಗಿಸಬಹುದೆಂದು ಪರಿಶೀಲಿಸಿ ವರದಿ ಕೊಡಿ ಎಂದು ಶಾಸಕ ರಾಜಾ ವೇಣುಗೋಪಾಲನಾಯಕ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣ ಪಂಚಾಯತ ಸಭಾಂಗಣದಲ್ಲಿ ಬುಧವಾರ ಪ.ಪಂ.ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಅಮೃತ-2.0 ಅಡಿಯಲ್ಲಿ ಪ್ರಾರಂಭಗೊಂಡ 24★7 ಕುಡಿಯುವ ನೀರಿನ ಪೈಪಲೈನ್ ಕಾಮಗಾರಿ ಗುಣಮಟ್ಟದಾಗಿ ಆದಷ್ಟು ಶೀಘ್ರವೇ ಮುಗಿಸಿಕೊಡಬೇಕು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹಣಕಾಸಿನ ಅನುಮೋದನೆ ಪಡೆಯದೇ ಟೆಂಡರ್ ಕರೆದ ಕಾಮಗಾರಿಗಳು ವಿಳಂಬ ಆಗಿದ್ದು, ನಿಜ ಆದರೆ ಯಾವುದೇ ಕಾಮಗಾರಿಗೆ ಟೆಂಡರ್ ಕರೆಯಲು ಮೊದಲು ಹಣಕಾಸಿನ ಅನುಮೋದನೆ ಬೇಕಾಗುತ್ತದೆ.

ಪ್ರಸ್ತುತ ಅನುಮೋದನೆಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿಸುವಂತೆ ಸೂಚಿಸಿದರು.

ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುವ ಸಿದ್ಧತೆ ಮಾಡಿಕೊಂಡಿದೆ ಎಂದು ಸಭೆಯಲ್ಲಿ ಪಪಂ ಮುಖ್ಯಾಧಿಕಾರಿ ಸಿದ್ರಾಮಪ್ಪ ಶಖಾಪುರ ಗಮನಕ್ಕೆ ತಂದರು. ಸದಸ್ಯ ಸಿದ್ರಾಮಪ್ಪ ಮುದಗಲ್ ಹಾಗೂ ಶರಣು ದಂಡಿನ್ ಅವರು, ದೇವಾಪುರ ಕುಡಿಯುವ ನೀರಿನ ಬಾವಿಗೆ ನಿರಂತರ ವಿದ್ಯುತ್ ಒದಗಿಸಿದರೆ ಸಾರ್ವಜನಿಕರಿಗೆ ನೀರಿನ ಅನುಕೂಲ ಆಗಲಿದೆ. ಪಟ್ಟಣದಲ್ಲಿ ಹೊಸ ವಿದ್ಯುತ್ ಕಂಬಳ ಜೋಡಣೆ ಮಾಡಬೇಕು ಎಂದರು. ರಸ್ತೆ ಇಕ್ಕಟಾಗಿದ್ದು, ಹದ್ದು ಮೀರಿದ ಸಣ್ಣಪುಟ್ಟ ಕಟ್ಟಡ ತೆರವುಗೊಳಿಸಿ ರಸ್ತೆ ಅಗಲೀಕರಿಸುವುದು ಸೂಕ್ತ ಎಂದರು. 13ನೇ ವಾರ್ಡ್‌ನಲ್ಲಿ ಅಂಗನವಾಡಿ ಕಟ್ಟಡ, ಬಸವೇಶ್ವರ ವೃತ್ತದ ಮೆಟ್ಟಿಲು ನಿರ್ಮಾಣ ಹಾಗೂ ಕಾನೂನು ಸಲಹೆಗಾರ ನೇಮಕ, ವಾಣಜ್ಯ ಕಟ್ಟಡ ದುರಸ್ತಿಗೊಳಿಸುವುದು ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಿ ಅನುಮತಿಸಲಾಯಿತು. ಈ ಸಂದರ್ಭ ಪ.ಪಂ.ಅಧ್ಯಕ್ಷ ತಿಪ್ಪಣ್ಣ ರಾಠೋಡ, ಉಪಾಧ್ಯಕ್ಷ ಶಾಂತಣ್ಣ ಮಲಗಲದಿನ್ನಿ, ಪ.ಪಂ. ಮುಖ್ಯಾಧಿಕಾರಿ ಸಿದ್ರಾಮಪ್ಪ ಹಾಗೂ ಸದಸ್ಯರಾದ ಜಯಶ್ರೀ ವಾಲಿ, ಅನ್ನಮ್ಮ ಸಿ.ಮಲಗಲದಿನ್ನಿ, ನಿಖಿತಾ, ಕಾಶೀಮಸಾಬ ಟೊಣ್ಣೂರು, ಭೀಮವ್ವ ಕಡಿಮನಿ, ಮಲ್ಲಣ್ಣ , ಮರಲಿಂಗಪ್ಪ ನಾಟೇಕರ ಸೇರಿದಂತೆ ಇದ್ದರು.

ಯೋಗಾಭ್ಯಾಸದಿಂದ ಉತ್ತಮ ಆರೋಗ್ಯ

ಯೋಗ ಫಿಟ್ನೆಸ್ ತರಬೇತಿ ಕೇಂದ್ರದಲ್ಲಿ ಶ್ರೀಗಳಿ ಸನ್ಮಾನ ಮಾಡಲಾಯಿತು

ಭಾಲ್ಕಿ: ವ್ಯಕ್ತಿಯ ಉತ್ತಮ ಆರೋಗ್ಯ ಮತ್ತು ಶಿಸ್ತುಬದ್ಧ ಜೀವನಕ್ಕಾಗಿ ಯೋಗಾಭ್ಯಾಸದಲ್ಲಿ ತೊಡಗಿಸಿ ಕೊಳ್ಳುವುದು ಅವಶ್ಯಕ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಹೇಳಿದರು.

ಪಟ್ಟಣದ ಲೆಕ್ಚರ್ ಕಾಲೋನಿಯ ಹನುಮಾನ ಮಂದಿರ ಸಮೀಪದ ಅನುಭವ ಯೋಗ ಫಿಟ್ನೆಸ್ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಇಂದಿನ ಆಧುನಿಕ ಭರಾಟೆಯಲ್ಲಿ ಮನುಷ್ಯ ಒತ್ತಡದ ಜೀವನ ಸಾಗಿಸುತ್ತಿದ್ದಾನೆ. ಶಾಂತಿ, ನೆಮ್ಮದಿ ಇಲ್ಲದಂತಾಗಿದೆ. ಹೆಚ್ಚಾಗಿ ಎಲ್ಲ ಕೆಲಸಕ್ಕೂ ಯಂತ್ರಗಳ ಮೊರೆ ಹೋಗುತ್ತಿರುವುದರಿಂದ ಶಾರೀರಿಕ ಶ್ರಮ ಕಡಿಮೆಯಾಗುತ್ತಿದೆ.

ತಿಂದ ಊಟವೂ ಸರಿಯಾಗಿ ಜೀರ್ಣ ಆಗುತ್ತಿಲ್ಲ. ಅನೇಕ ರೋಗಗಳು ಅಂಟಿಕೊಳ್ಳುತ್ತಿವೆ. ಇದರಿಂದ ಹೊರ ಬರಲು ಪ್ರತಿಯೊಬ್ಬರು ಪ್ರತಿದಿನ ಯೋಗಾಭ್ಯಾಸದ ಜತೆಗೆ ಉತ್ತಮ ಜೀವನ ಶೈಲಿ ರೂಢಿಸಿಕೊಂಡು ಆರೋಗ್ಯ ಪೂರ್ಣ ಜೀವನ ಸಾಗಿಸಬೇಕು ಎಂದು ತಿಳಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದರು. ಈ ಸಂದರ್ಭದಲ್ಲಿ ಅನುಭವ ಯೋಗ ಫಿಟ್ನೆಸ್ ತರಬೇತಿ ಕೇಂದ್ರದ ಮುಖ್ಯಸ್ಥ ಓಂ ಪಾಟೀಲ್, ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ನ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಮುಖರಾದ ರವೀಂದ್ರ ಚಿಡಗುಪ್ಪೆ, ಸಂಜು ಪ್ರಭಾ, ಸಂತೋಷ ವಾಡೆ, ರಾಜಕುಮಾರ ಸಿರ್ಸೆ, ಶರಣು ನಾಗಶೆಟ್ಟಿ, ಓಂ ಭಾಲ್ಕೆ, ಸಂಗಮೇಶ ಠಮಕೆ ಇದ್ದರು.

ಉಚಿತ ಯೋಗ ಶಿಬಿರ

ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ ಜಯಂತ್ಯುತ್ಸವ ಅಂಗವಾಗಿ ಡಿ.14 ರಿಂದ 21ರ ವರೆಗೆ ಉಚಿತ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಅನುಭವ ಯೋಗ ಫಿಟ್ನೆಸ್ ಕೇಂದ್ರದ ಮುಖ್ಯಸ್ಥ ಓಂ ಪಾಟೀಲ್ ಹೇಳಿದರು.

> ಯೋಗಾಸನಗಳು, ಪ್ರಾಣಾಯಾಮ ಮತ್ತು ಧ್ಯಾನ ಮೊದಲಾದ ಕ್ರಮಗಳಿಂದ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಸ್ಥೈರ್ಯ, ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಶಕ್ತಿಗಳು ವೃದ್ಧಿಸಿಸಲು ಸಹಕಾರಿಯಾಗುತ್ತದೆ.
> -ಗುರುಬಸವ ಪಟ್ಟದೇವರು ಹಿರೇಮಠ ಸಂಸ್ಥಾನ ಭಾಲ್ಕಿ

ಸಂಚಾರ ನಿಯಮಗಳ ಪಾಲನೆ ಕಡ್ಡಾಯ

ಬೈಕ್ ರ‍್ಯಾಲಿ ಮೂಲಕ ಹೆಲ್ಮೆಟ್ ಜಾಗೃತಿ: ಡಿವೈಎಸ್ಪಿ ಜಾವಿದ್ ಇನಂದಾರ

ನಗರದ ನಾಲ್ವಡಿ ರಾಜ ವೆಂಕಟಪ್ಪ ನಾಯಕ ವೃತ್ತದಲ್ಲಿ ಸಂಚಾರಿ ನಿಯಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಸುರಪುರ: ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವ ಮೂಲಕ ನಿಮ್ಮ ಜೀವದ ಜತೆಗೆ ನಿಮ್ಮ ಕುಟುಂಬವನ್ನು ರಕ್ಷಿಸಿ, ಪ್ರತಿಯೊಬ್ಬ ಸವಾರನು ಕಡ್ಡಾಯವಾಗಿ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಸುರಪುರ ಉಪ ವಿಭಾಗದ ಡಿವೈಸ್ಪಿ ಜಾವಿದ್ ಇನಂದಾರ ಸೂಚಿಸಿದರು.

ನಗರದಲ್ಲಿ ಸಂಚಾರಿ ನಿಯಮಗಳ ಜಾಗೃತಿ ರ‍್ಯಾಲಿಗೆ ಚಾಲನೆ ನೀಡಿ ನಂತರ ಮಾತನಾಡಿ, ಪ್ರತಿ ವರ್ಷ ದೇಶದಾದ್ಯಂತ ಅಪಘಾತಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಜನ ಸಾವಿಗೀಡಾಗುತ್ತಿದ್ದಾರೆ. ಆದ್ದರಿಂದ ವಾಹನ ಸವಾರರು ಸಂಚರಿಸುವ ಸಂದರ್ಭದಲ್ಲಿ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಸುಗಮ ಸಂಚಾರ ಮಾಡುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪಿಎಸ್ಐಗಳಾದ ಶಿವರಾಜ್ ಪಾಟೀಲ್, ಕೃಷ್ಣ ಸುಬೇದಾರ, ಶರಣಪ್ಪ ಹವಾಲ್ದಾರ, ಹಾಗೂ ಎಎಸ್‌ಐ ಗಳಾದ ಮಾನಪ್ಪ ಶಾರದಳ್ಳಿ, ಮನೋಹರ್ ರಾಥೋಡ, ನಾಗಪ್ಪ ಮಾಲಿ ಪಾಟೀಲ, ಮುಖ್ಯಪೇದೆಗಳಾದ ಶಿವರಾಜ್ ಪಾಣೆಗಾವ, ಈರಣ್ಣ, ವೆಂಕಟೇಶ, ವೆಂಕಟೇಶ, ಮಹೇಶ್ ತಳವಾರ, ಮಹಾಂತೇಶ, ಕೆಂಚಪ್ಪ, ಮಹಾದೇವ, ಸಣ್ಣಕ್ಕೆಪ್ಪ, ನಂದಪ್ಪ, ತಾಯಣ್ಣ, ಲಕ್ಷ್ಮಣ, ಪ್ರಕಾಶ್ ಕುಮಾರ, ಬಸವರಾಜ, ನಿಂಗಯ್ಯ, ದಯಾನಂದ್ ಜಮಾದಾರ, ವೆಂಕಟೇಶ್ ಮಹಿಳಾ ಪೇದೆಗಳಾದ ಗುರಮ್ಮ ಕಾವ್ಯ ಭಾಗಿಯಾಗಿದ್ದರು.

> ತಾಲೂಕಿನ ಅತ್ಯಂತ ದ್ವಿಚಕ್ರ ವಾಹನ ಸವಾರು ಹೆಲ್ಮೆಟ್ ಧರಿಸದೆ ಅಪಘಾತಗಳು ಸಂಭವಿಸಿ, ಸಾವು ನೋವುಗಳು ಸಂಖ್ಯೆ ಹೆಚ್ಚಾಗಿದೆ ಅದರಿಂದ ಪ್ರತಿಯೊಬ್ಬ ಸವಾರನು ಹೆಲ್ಮೆಟ್ ಧರಿಸಬೇಕು, ನಾಲ್ಕು ಚಕ್ರವಹನದ ಸವಾರನು ಸೀಟ್ ಬೆಲ್ಟ ಹಾಕಿಕೊಳ್ಳಬೇಕು, ಅಪ್ರಾಪ್ತರು ವಾಹನ ಚಾಲನೆ ಮಾಡಿದ್ದಲ್ಲಿ, ಸಂಚಾರಿ ನಿಯಮ ಉಲ್ಲಂಘನೆಯಾದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.
> -ಆನಂದ್ ವಾಗ್ಮೊಡೆ, ಸರ್ಕಲ್ ಇನ್ಸ್‌ಪೆಕ್ಟರ್

ಸಾರ್ವಜನಿಕರಿಂದ ದೂರು: 8 ಮಂದಿ ಜೆಇಗಳು ವರ್ಗಾವಣೆ

ಬಸವಕಲ್ಯಾಣ: ಸಾರ್ವಜನಿಕರಿಂದ ಬಂದ ದೂರಿನ ಆಧಾರದ ಮೇರೆಗೆ ಬಸವಕಲ್ಯಾಣ ತಾಲೂಕು ಪಂಚಾಯತ್ ಕಚೇರಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಐದು ಜನ ತಾಂತ್ರಿಕ ಸಹಾಯಕರನ್ನ ವರ್ಗಾವಣೆ ಮಾಡಿ ಜಿ ಪಂ ಸಿಇಒ ಗಿರೀಶ್ ಬದೋಲೆ ಆದೇಶಿಸಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವ ಹಿಸುತ್ತಿರುವ ಮಾಣಿಕ್, ಜಲೀಲ್ ಅಹಮದ್, ಮಲ್ಲಿಕಾರ್ಜುನ್ ಜಾಧವ್, ಮಿಥುನ್, ಶ್ರೀಕಾಂತ್ ಪಾಟೀಲ್, ಹಾಗೂ ಕೃಷಿ ಇಲಾಖೆಯಲ್ಲಿ ಕಾರ್ಯನಿರ್ವ ಹಿಸುತ್ತಿರುವ ಸುರೇಶ್ ಜೋನ್ ತೋಟಗಾರಿಕೆ ಇಲಾಖೆಯ ನವಾಜ್ ಖಾನ್ ಹಾಗೂ ಅರಣ್ಯ ಇಲಾಖೆ ಶ್ರೀಕಾಂತ್ ಅವರನ್ನು ಬಸವಕಲ್ಯಾಣದಿಂದ ಬೇರಡೆ ವರ್ಗಾಯಿಸಿ ಆದೇಶಿಸಲಾಗಿದೆ. ಅಧಿಕಾರಿಗಳ ಕಾರ್ಯ ವೈಖರಿ ಕುರಿತು ಸಾರ್ವಜನಿಕರಿಂದ ಬಂದ ದೂರಿನ ಆಧಾರದ ಮೇರೆಗೆ ಹಾಗೂ ನಾಲ್ಕು ವರ್ಷಗಳಿಂದ ಬಸವಕಲ್ಯಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಆಡಳಿತಾತ್ಮಕ ಹಿತ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ವರ್ಗಾವಣೆ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರವಚನ, ಕೀರ್ತನೆ ಆಚರಣೆ ಇರಲಿ

ಪಟ್ಟಣದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಮಂಗಳವಾರದಿಂದ ಆರಂಭಗೊಂಡ ಪ್ರವಚನ ಕಾರ್ಯಕ್ರಮವನ್ನು ಪ್ರವಚನಕಾರ ಮಧುಗೊಂಡ ಮಹಾರಾಜರ ಉದ್ಘಾಟಿಸಿದರು.

ಕೆಂಭಾವಿ: ಭಾರತದ ಸನಾತನ ಸಂಸ್ಕೃತಿಯಲ್ಲಿ ಹೋಮ-ಹವನ, ಯಜ್ಞಯಾಗಾದಿಗಳು ಹಾಗೂ ಪುರಾಣ ಪ್ರವಚನ ಕೀರ್ತನೆಗಳು ಸದಾ ಕಾಲ ಆಚರಣೆಯಲ್ಲಿರಬೇಕೆಂದು ಪ್ರವಚನಕಾರ ಮಧುಗೊಂಡ ಮಹಾರಾಜರ ಅಭಿಪ್ರಾಯಪಟ್ಟರು.

ಪಟ್ಟಣದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಮ್ಯಾಗೇರಿಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ 3ನೇ ವರ್ಷದ ಪ್ರವಚನ ಕಾರ್ಯಕ್ರಮದ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಪುರಾಣ, ಪ್ರವಚನಗಳನ್ನು ಆಲಿಸುವುದರ ಜತೆಗೆ ಅವುಗಳಿಂದ ಸಿಗುವ ಮೌಲ್ಯಯುತ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ಸಾಗಿಸಬೇಕೆಂದರು.

ದೇವಾನುದೇವತೆಗಳಿಗಿಂತ ಮನುಷ್ಯನ ಜನ್ಮ ಮಿಗಿಲಾಗಿದ್ದು, ಹಾಗಾಗಿ ಬಸವಣ್ಣನವರ ವಚನದಂತೆ ಯಾವುದೇ ಕಳ್ಳತನ ಮಾಡದೆ, ಯಾರನ್ನು ಕೊಲ್ಲದೆ ಹಾಗೂ ಮತ್ತೊಬ್ಬರ ಕುರಿತು ಮಾತನಾಡದೆ ಸಹಬಾಳ್ವೆಯೊಂದಿಗೆ ಇರುವದರಲ್ಲಿ ಖುಷಿಯಿಂದ ಬದುಕು ರೂಪಿಸಿಕೊಂಡು ಶ್ರೇಷ್ಠರೆನ್ನಿಸಿಕೊಳ್ಳಿ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ರೇವಣಸಿದ್ದಯ್ಯ ಮಠ, ಮಾಲಹಳ್ಳಿ ಕೆಂಚರಾಯ ಪೂಜಾರಿ, ನಾಗರಾಜ ಏವೂರ, ರಮೇಶ ಕರಡಕಲ್ ಸೇರಿ ಅನೇಕ ಭಕ್ತಾಧಿಗಳಿದ್ದರು.

> ಡಿ.13ರವರೆಗೆ ಪ್ರತಿದಿನ ಸಾಯಂಕಾಲ 7.30ರಿಂದ ಪ್ರವಚನ ಕಾರ್ಯಕ್ರಮ ನಡೆಯಲಿದ್ದು,ಪ್ರತಿದಿನ ದಾಸೋಹದ ವ್ಯವಸ್ಥೆ ಕೂಡಾ ಮಾಡಲಾಗಿದೆ. ಸಕಲ ಭಕ್ತಾಧಿಗಳು ಆಗಮಿಸಿ ಪ್ರವಚನ ಆಲಿಸಿ ದೇವರ ಕೃಪೆಗೆ ಪಾತ್ರರಾಗಬೇಕು.
> -ಸಾಹೇಬಗೌಡ ಹೂಗಾರ, ದೇವಸ್ಥಾನದ ಅರ್ಚಕ

ಬೇವಿನಹಳ್ಳಿ: ಶಿಕ್ಷಕರ ಅಮಾನತು ಆದೇಶ ಹಿಂಪಡೆಯಲು ಪ್ರತಿಭಟನೆ

ಕೊಂಕಲ್ ಗ್ರಾಮದ ಸರಕಾರಿ ಶಾಲೆಯ ಮುಖ್ಯ ಗುರುವಿನ ವಿರುದ್ಧ ತಿರುಗಿಬಿದ್ದ ವಿದ್ಯಾರ್ಥಿಗಳು

ಬುಧವಾರ ಬೆಳಿಗ್ಗೆ ತರಗತಿ ದಿಕ್ಕರಿಸಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು ಶಹಾಪುರ ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಯಾದಗಿರಿ/ಶಹಾಪುರ: ಶಿಕ್ಷಕರ ಕೊರತೆಯಿಂದಾಗಿ ಮಕ್ಕಳು ಸಹ ಬೀದಿಗಿಳಿದು ಪ್ರತಿಭಟನೆ ಮಾಡಬೇಕಾದ ಅನಿವಾರ್ಯತೆ ಜೊತೆಗೆ ದುಸ್ಥಿತಿ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ನಿರ್ಮಾಣವಾಗಿದೆ.

ಮಂಗಳವಾರ ವಡಗೇರಾ ತಾಲೂಕಿನ ಕೊಂಕಲ್ ಗ್ರಾಮದ ಸರಕಾರಿ ಶಾಲೆಯ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರೆ ಬುಧವಾರದಂದು ಶಹಾಪುರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಅಧೀನದ ಬೇವಿನಹಳ್ಳಿ ಮೊರಾರ್ಜಿ ಶಾಲೆಯ ಮಕ್ಕಳು ಶಹಾಪುರದ ತಹಸೀಲ್ದಾರ್ ಕಚೇರಿವರೆಗೆ ಪಾದಯಾತ್ರೆ ನಡೆಸಿದ್ದಾರೆ.

> ಈ ಹಿಂದೆ ಶಾಲೆಯಲಿ ಹುಟ್ಟಹಬ್ಬ ಆಚರಣೆ ಮಾಡಿರುವ ಕಾರಣಕ್ಕೆ ಶಿಕ್ಷಕನನ್ನು ಮೇಲಾಧಿಕಾರಿಗಳು ಅಮಾನತುಗೊಳಿಸಿದ್ದಾರೆ.ಆದರೆ, ಇದನ್ನೇ ಕಾರಣವಾಗಿ ಟ್ಟುಕೊಂಡು ನನ್ನ ಮೇಲೆ ಸುಖಾಸುಮ್ಮನೆ ಆರೋಪ ಹೊರಿಸಿ ವಿದ್ಯಾರ್ಥಿಗಳನ್ನು ಪ್ರಚೋಧಿಸಿ ಪ್ರತಿಭಟನೆ ಮಾಡುವ ಹುನ್ನಾರ ನಡೆಸಿದ್ದಾರೆ.
> -ನೀಲಮ್ಮ ಪ್ರಾಂಶುಪಾಲರು ಮೊರಾರ್ಜಿ ಶಾಲೆ

ತರಗತಿ ದಿಕ್ಕರಿಸಿ ಪ್ರತಿಭಟನೆ ಆರಂಭಿಸಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು, ಪ್ರಾಂಶುಪಾಲರು ಮತ್ತು ವಾರ್ಡನ್ ಅವರುಗಳು ಶಿಕ್ಷಕರ ಮೇಲೆ ವಿನಾಕಾರಣ ಇಲ್ಲಸಲ್ಲದ ಆರೋಪ ಹೊರಿಸಿ ಸಮಾಜ ವಿಜ್ಞಾನ ಶಿಕ್ಷಕ ಶಿವರಾಜ್ ಬಿರನೂರ ಹಾಗೂ ಹಿಂದಿ ಶಿಕ್ಷಕ ಮುಬಾರಕ್ ಅವರನ್ನು ಅಮಾನತು ಮಾಡಿದ್ದಾರೆ ಎಂದು ಆರೋಪಿಸಿದರು. ಈ ಇಬ್ಬರ ಅತಿರೇಕದ ವರ್ತನೆ ಮತ್ತು ದುರಾಡಳಿತಕ್ಕೆ ಬೇಸತ್ತಿದ್ದು, ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿರುವು ದಲ್ಲದೇ ವಿದ್ಯಾರ್ಥಿಗಳ ಹಿತವನ್ನು ಮರೆತಿದ್ದಾರೆ. ಇದರಿಂದ ನಮ್ಮ ಶೈಕ್ಷಣಿಕ ಜೀವನ ಹಾಳಾಗುತ್ತಿದ್ದು ಕೂಡಲೇ ಪ್ರಾಂಶುಪಾಲರಾದ ನೀಲಮ್ಮ ಮತ್ತು ನಿಲಯಪಾಲಕ ರಾವುತಪ್ಪ ಅವರನ್ನು ಅಮಾನತುಗೊಳಿಸಬೇಕು ಎಂದು ವಿದ್ಯಾರ್ಥಿಗಳು ಪಟ್ಟು ಹಿಡಿದರು. ಇನ್ನೂ ಪ್ರತಿಭಟನೆ ಬಿಸಿ ಮುಟ್ಟುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಚನ್ನಬಸಪ್ಪ, ವಿದ್ಯಾರ್ಥಿಗಳ ಮನವಿ ಆಲಿಸಿ ಸಮಸ್ಯೆ ಪರಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಈ ಸಂದರ್ಭದಲ್ಲಿ ತಹಸೀಲ್ದಾರ ಉಮಾಕಾಂತ ಹಳ್ಳೆ, ಪಿಐ ಎಸ್.ಎಂ ಪಾಟೀಲ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಇದ್ದರು.

ಮುಖ್ಯ ಶಿಕ್ಷಕ ಸಮಸ್ಯೆ ಬಗೆಹರಿಸುತ್ತಿಲ್ಲ

ವಡಗೇರಾ ತಾಲೂಕಿನ ಕೊಂಕಲ್ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ ಮಕ್ಕಳು ಪ್ರತಿಭಟನೆ ನಡೆಸಿದ್ದಾರೆ. ಶಾಲೆಯಲ್ಲಿ ಎಲ್ಲಾ ವಿಷಯಗಳಿಗೆ ಶಿಕ್ಷಕರು ಇಲ್ಲ, ಸೆಲೆಬಸ್ ಇನ್ನುವರೆಗೂ ಮುಗಿದಿಲ್ಲ ಎಂದು ಸಾಲು ಸಾಲು ಆರೋಪ ಮಾಡಿ ತರಗತಿ ಧಿಕ್ಕರಿಸಿ ಧರಣೆ ನಡೆಸಿದ್ದಾರೆ. ಕೊಂಕಲ್ ಪ್ರೌಢಶಾಲೆಯಲ್ಲಿ 8 -10ನೇಯ ತರಗತಿಯವರೆಗೆ ಸುಮಾರು 258 ವಿದ್ಯಾರ್ಥಿಗಳು ಇದ್ದಾರೆ. ಈ ಶಾಲೆಯಲ್ಲಿ 6 ಜನ ಶಿಕ್ಷಕರಿದ್ದಾರೆ. ಈ ಪೈಕಿ ಓರ್ವ ಖಾಯಂ ಶಿಕ್ಷಕರಿದ್ದರೆ, ಇನ್ನೊಬ್ಬರು ಪ್ರಭಾರಿ ಶಿಕ್ಷಕರಿದ್ದಾರೆ. ಉಳಿದ ನಾಲ್ವರು ಅತಿಥಿ ಶಿಕ್ಷಕರಿದ್ದಾರೆ. ಇದರಲ್ಲಿ ಒಬ್ಬ ಅತಿಥಿ ಶಿಕ್ಷಕರು ಚೆನ್ನಾಗಿ ಪಾಠ ಮಾಡುತ್ತಿದ್ದರೂ, ಅವರನ್ನು ಏಕಾಏಕಿ ಮನೆಗೆ ಕಳುಹಿಸಿ ನಮ್ಮ ಹಿತ ಮರೆತಿದ್ದಾರೆ ಎಂದು ಮುಖ್ಯ ಗುರುಗಳ ವಿರುದ್ಧ ವಿದ್ಯಾರ್ಥಿಗಳು ಆರೋಪ ಮಾಡಿದ್ದಾರೆ.

ಇನ್ನು 10ನೇ ತರಗತಿ ಮುಗಿಸಿ ಎರಡು ವರ್ಷಗಳ ಕಾಲ ಮನೆಯಲ್ಲಿ ಕುಳಿತಿರುವವರನ್ನು ಅತಿಥಿ ಶಿಕ್ಷಕರಾಗಿ ನೇಮಕ ಮಾಡಿಕೊಂಡಿದ್ದಾರೆ ಎಂಬ ಆರೋಪವನ್ನು ಕೂಡ ವಿದ್ಯಾರ್ಥಿಗಳು ಮಾಡಿದ್ದಾರೆ. ಅವರ ಪಾಠ ನಮಗೆ ತಿಳಿಯುತ್ತಿಲ್ಲ ಎಂದು ಮುಖ್ಯ ಗುರುಗಳಿಗೆ ಹೇಳಿದರೆ, ನೀವೇ ಶಿಕ್ಷಕರನ್ನು ಹುಡುಕಿಕೊಂಡು ಬನ್ನಿ ಎಂದು ಗದರಿಸುತ್ತಾರೆ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

{ ತನ್ವಿರ್ ಸೇಠ್ } ಶಾಸಕ

ಭಾರತದಲ್ಲಿರುವಷ್ಟು ಯುವಕ ಯುವತಿಯರ ಸಂಖ್ಯೆ ಬೇರೆ ಯಾವುದೇ ದೇಶದಲ್ಲಿ ಇಲ್ಲ. ದೇಶದ ಯುವ ಶಕ್ತಿಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಬೇಕು. ಯುವಕರಿಗೆ ಪ್ರೋತ್ಸಾಹ ಕೊಡಲು ಸರಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು.

ಸಮಾಚಾರ ಸಣ್ಣದಲ್ಲ

ನೌಕರರ ಸಂಘದ ಜಿಲ್ಲಾಧ್ಯಕ್ಷ ಮಹೇಶ

ಕಲಬುರಗಿ: ಕಲ್ಯಾಣ ಕರ್ನಾಟಕ ಸರಕಾರಿ ನೌಕರರ ಸಂಘದ ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಮಹೇಶಕುಮಾರ್ ಹೆಬ್ಬಾಳೆ ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತು ಸಂಘದ ಸಂಸ್ಥಾಪಕ ಅಧ್ಯಕ್ಷ ರವಿ ಡೋಳೆ ಅವರು ಆದೇಶ ಹೊರಡಿಸಿದ್ದು, ತಮ್ಮಗೆ ನೀಡಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುತ್ತಾ, ಸಂಘದ ತತ್ವ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಅನುಷ್ಠಾಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಲಬುರಗಿ ಜಿಲ್ಲೆಯಲ್ಲಿ ಸಂಘಟನೆ ಬಲಪಡಿಸಿ, ಸರಕಾರಿ ನೌಕರರ ಹಿತ ಕಾಯಬೇಕು ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನಕ್ಕೆ ದಿನಾಂಕ ವಿಸ್ತರಣೆ

ಚಿಂಚೋಳಿ: ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ, ವೃತ್ತಿಪರ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ಹಾಗೂ ಪ್ರವರ್ಗ 1 ರ ಅಲೆಮಾರಿ /ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿಸಲ್ಲಿಸಲು ನ. 30 ರಿಂದ ಡಿಸೆಂಬರ್ 20 ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸದೆ ಇರುವ ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಲು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ನಾಡ ಕಚೇರಿಗೆ ಬೇಕು ಆಧಾರ್ ಕೇಂದ್ರ

ಜೇವರ್ಗಿ: ತಾಲೂಕಿನಲ್ಲಿ ಆಧಾರ್ ಕೇಂದ್ರಗಳು ಸ್ಥಗಿಗೊಳಿಸಿದ್ದು, ಆಧಾರ ತಿದ್ದುಪಡಿಗೆ ಸಾರ್ವಜನಿಕರು ಪರದಾಡುವಂತ ಪರಿಸ್ಥಿತಿ ಎದುರಾಗಿದೆ ಎಂದು

ಕ್ರಾಂತಿಕಾಲ ರೈತ ಸೇನೆಯ ಜಿಲ್ಲಾ ಅಧ್ಯಕ್ಷ ಮಹ್ಮದ್ ಶೋಹೇಬ ಗಿರಣಿ ಹೇಳಿದರು. ಪಟ್ಟಣದ ಹಳೆ ತಹಸೀಲ್ದಾರ್ ಕಾರ್ಯಾಲದಲ್ಲಿ ಅಟಲಜಿ ಜನಸ್ನೇಹಿ ಆಧಾರ್ ಕೇಂದ್ರ ಹಾಗೂ ನೆಲೋಗಿ, ಆಂದೋಲಾ ಹೋಬಳಿ ನಾಡ ಕಚೇರಿಯ ಆಧಾರ್ ಕೇಂದ್ರಗಳು ಸ್ಥಗಿತ ಗೊಳಿಸಿರುವದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ಎಲ್ಲಾ ಕೆಲಸಕ್ಕೆ ಆಧಾರ್ ಕಾರ್ಡ ಕಡ್ಡಾಯವಾಗಿ ಮಾಡಿದ್ದಾರೆ, ಸರಕಾರಿ ಸೌಲಭ್ಯಗಳು ಪಡೆದುಕೊಳ್ಳಲ್ಲು ಆಧಾರ್ ಕಾರ್ಡ್ ಅತ್ಯಂತ ಅವಶ್ಯಕತೆವಾಗಿದೆ ಇಂತಹ ಪರಿಸ್ಥಿತಿಯಲ್ಲಿ ಸರಕಾರಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲೂಕಿನ 3 ಆಧಾರ್ ಕೇಂದ್ರಗಳು ಸ್ಥಗಿತಗೊಳಿಸಿದ್ದು ಸಾರ್ವಜನಿಕರು ಸಮಸ್ಯ ಎದುರಿಸುವಂತೆ ಆಗಿದೆ ಎಂದರು. ಜಿಲ್ಲೆಯ ಎಲ್ಲಾ ಹೋಬಳಿಗಳಲ್ಲಿ ತಲಾ ಒಂದು ಆಧಾರ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು 100ಕ್ಕಿಂತ ಹೆಚ್ಚು ಹಳ್ಳಿಗಳು ಇರುವ ನಮ್ಮ ಜೇವರ್ಗಿ ತಾಲೂಕಿನ ನೆಲೋಗಿ, ಅಂದೋಲಾ ಎರಡು ಕಡೆ ಆಧಾರ್ ಕೇಂದ್ರ ಸ್ಥಗಿತಗೊಳಿಸಿದಾರೆ. ಇದರಿಂದ ನೆಲೋಗಿ , ಆಂದೋಲ ಹೋಬಳಿ ಯ ಹಳ್ಳಿಗಳ ಜನರು ತಮ್ಮ ಮಕ್ಕಳಿಗೆ ಕರೆದುಕೊಂಡು ಆಧಾರ್ ನೋಂದಣಿ ತಿದ್ದುಪಡಿ ಮಾಡಿಸಿಕೊಳ್ಳಲ್ಲೂ ತಾಲೂಕಿಗೆ ಬರುವ ಪರಸ್ಥಿತಿ ನಿರ್ಮಾಣವಾಗಿದೆ ಆದ್ದರಿಂದ ತಕ್ಷಣ ಜೇವರ್ಗಿ, ಅಂದೊಲಾ, ನೆಲೊಗಿ, ನಾಡ ಕಚೇರಿಯ ಆಧಾರ್ ಕೇಂದ್ರಗಳು ತಕ್ಷಣ ಪ್ರಾರಂಭಿಸಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತೆ ಎಂದು ಹೇಳಿದರು.

ಶಸ್ತ್ರ ಪಡೆಗಳ ಧ್ವಜ ದಿನಾಚರಣೆ 7ರಂದು

ಕಲಬುರಗಿ: ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರ ಕಚೇರಿ ವತಿಯಿಂದ ಇದೇ ಡಿಸೆಂಬರ್ 7 ರಂದು ಬೆಳಿಗ್ಗೆ 10 ಗಂಟೆಗೆ ಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದ್ದು, ಈ ಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಕಾರ್ಯಕ್ರಮಕ್ಕೆ ಯಾದಗಿರಿ, ಬೀದರ, ರಾಯಚೂರು ಹಾಗೂ ಕಲಬುರಗಿ ಜಿಲ್ಲೆಗಳ ಮಾಜಿ ಸೈನಿಕರನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಸಶಸ್ತ್ರ ಪಡೆಗಳ ಧ್ವಜ್ ದಿನಾಚರಣೆಯನ್ನು ದೇಶಾದ್ಯಂತ ಹಾಗೂ ಹೊರ ದೇಶದಲ್ಲಿರುವ ಭಾರತೀಯ ಎಲ್ಲಾ ದೂತವಾಸಗಳಲ್ಲಿ ಇದೇ ಡಿಸೆಂಬರ್ 7ರಂದು ಆಚರಿಸಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08472-225003 ಗೆ ಕರೆಮಾಡಬೇಕೆಂದು ಅವರು ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆಪ್

{ಬಿ.ಎಸ್.ಯಡಿಯೂರಪ್ಪ} ಮಾಜಿ ಮುಖ್ಯಮಂತ್ರಿ

ಮುಡಾ ಸೇರಿದಂತೆ ಇತರೆ ಹಗರಣಗಳು ಹೊರ ಬರುತ್ತಿವೆ. ಸೈಟ್ ವಾಪಸ್ ಕೊಡೋದು ಬಿಡೋದು ಬೇರೆ ವಿಷಯವಾಗಿದೆ. ಕೇವಲ ಅಷ್ಟೇ ಅಲ್ಲ, ಸಾವಿರಾರು ಸೈಟುಗಳನ್ನು ಕಾನೂನು ಬಾಹಿರವಾಗಿ ಹಂಚಿದ್ದಾರೆಂದು ತಿಳಿಸಿದ್ದಾರೆ. ಇನ್ನು ಇಡಿ ಅವರು ಪುರಾವೆಗಳಿಲ್ಲದೆ ಹೇಳುವುದಿಲ್ಲ. ಏನೇನೂ ಆಗುತ್ತದೆ ನೋಡೋಣ.

ಏಳು ಜಿಲ್ಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಡಿಸಿ , ಸಿಇಒ, ಡಿಡಿಪಿಐಗಳಿಗೆ ಅಜಯ್ ಸಿಂಗ್ ಕರೆ

ಅಕ್ಷರ ಆವಿಷ್ಕಾರ ಅನುಷ್ಠಾನದಿಂದ ಮೂರು ವರ್ಷದಲ್ಲಿ ಶಿಕ್ಷಣ ಕ್ರಾಂತಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆ ಸವಾಲಾಗಿ ಸ್ವೀಕರಿಸಿ, ಮುಂದಿನ 100 ದಿನಗಳಲ್ಲಿ ಹೆಚ್ಚಿನ ಪರಿಶ್ರಮವಹಿಸುವ ಮೂಲಕ ಪರೀಕ್ಷೆ ಬರೆಯಲು ಮಕ್ಕಳಿಗೆ ಸಿದ್ಧ ಮಾಡುವಂತೆ ಕಲ್ಯಾಣದ ಜಿಲ್ಲೆಗಳ ಎಲ್ಲಾ ಡಿಸಿ, ಸಿಇಒ, ಡಿಡಿಪಿಐಗಳಿಗೆ ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಕರೆ ನೀಡಿದರು.

ಶಿಕ್ಷಣ ಆಯುಕ್ತಾಲಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶಕುಮಾರ್ ಸಿಂಗ್ ಜತೆಗೂಡಿ ಕಲ್ಯಾಣದ ಜಿಲ್ಲೆಗಳಲ್ಲಿ ಸಾಗಿರುವ ಅಕ್ಷರ ಆವಿಷ್ಕಾರ ಅನುಷ್ಠಾನ, ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಯ ಕ್ರಮಗಳ ಕುರಿತಂತೆ ಜಿಲ್ಲಾಡಳಿತಗಳು, ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆದಿರುವ ಕೆಲಸ ಕಾರ್ಯಗಳ ಪರಿಶೀಲನೆ ನಡೆಸಿ ಮಾತನಾಡಿದರು.

ನಮ್ಮ ಭಾಗದ ಮಕ್ಕಳು ಎಸ್ಸೆಸ್ಸೆಲ್ಸಿ ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಬೇಕಷ್ಟೆ. ಅದಕ್ಕಾಗಿ ಅವರನ್ನು ಅಣಿಗೊಳಿಸಿರಿ, ನಾವು ವೆಚ್ಚ ಮಾಡುವ ಹಣ, ನಮ್ಮ ನಿಮ್ಮ ಪ್ರಯತ್ನವನ್ನೆಲ್ಲ ಹೊರಗಿನ ಜನ ಯಾರೂ ಕೇಳೋದಿಲ್ಲ. ಕೋಟಿಗಟ್ಟಲೇ ವೆಚ್ಚವಾದರೂ ಫಲಿತಾಂಶ ಸುಧಾರಣಯಾಗದೆ ಹೋದಲ್ಲಿ ಟೀಕಿಸುತ್ತಾರೆ. 10 ನೇ ಫಲಿತಾಂಶ ನೋಡಿ ಮಾತಾಡ್ತಾರೆ. ನಾವು ಅವರಿಗೆ ಫಲಿತಾಂಶದಲ್ಲಿ ಸುಧಾರಣೆ ತೋರಿಸಲೇಬೇಕು ಎಂದು ಖಡಕ್ ಸೂಚನೆ ನೀಡಿದರು.

ಅಕ್ಷರ ಆವಿಷ್ಕಾರ ಯೋಜನೆ ರೂಪಿಸಿ ತಾವು ಶಿಕ್ಷಣ ಇಲಾಖೆಗೆ ಸಾಕಷ್ಟು ಅನುದಾನ ನೀಡುತ್ತಿರೋದಾಗಿ ಹೇಳಿದ ಡಾ. ಅಜಯ್ ಸಿಂಗ್ ಅದಕ್ಕೆ ಪ್ರತಿಯಾಗಿ ತಾವು ಫಲಿತಾಂಶದಲ್ಲಿ ಸುದಾರಣೆ ನಿರೀಕ್ಷಿಸೋದಾಗಿ ಹೇಳಿದರು.

ಅತಿಥಿ ಶಿಕ್ಷಕರ ವೇತನ ಹೆಚ್ಚಿಸುವ ಚಿಂತನೆ:

ಅಕ್ಷರ ಮಿತ್ರ ಯೋಜನೆಯಲ್ಲಿ ಎಲ್ಲಾ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕ ಮಾಡಲಾಗಿದೆ. ಅವರಿಗೆ ಪಗಾರ ಬೋಡ್ರ್, ನೀಡುತ್ತಿದೆ. ಇಷ್ಟಾದರೂ ಮತ್ತೆ ಶಿಕ್ಷರ ಕೊರತೆ ಯಾಕೆ? ಇವರ ವೇತನದಲ್ಲಿ ಅಲ್ಪ ಹೆಚ್ಚಳ ಮಾಡುವ ಚಿಂತನೆ ಇದೆ. ನಿಮ್ಮ ಸಲಹೆ ನೀಡಿರಿ. ಅರ್ಹರನ್ನು ನೇಮಕ ಮಾಡಿಕೊಂಡು ಮಕ್ಕಳಿಗೆ ಉತ್ತಮ ಬೋಧನೆಯಾಗುವಂತೆ ನೋಡಿಕೊಳ್ಳಿರೆಂದು ಜಿಲ್ಲಾಡಳಿತದ ಪ್ರಮುಖರಿಗೆ ಸೂಚಿಸಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶಕುಮಾರ್ ಸಿಂಗ್, ಕೆಕೆಆರ್ ಡಿಬಿ ಕಾರ್ಯದರ್ಶಿ ಸುಂದರೇಶ ಬಾಬೂ, ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ಆಯುಕ್ತ ಡಾ. ಆಕಾಶ್ ಶಂಕರ್, ಕಲಬುರಗಿ ಸಿಇಒ ಭಂವರ್ ಸಿಂಗ್ ಮೀನಾ, ಕಲ್ಯಾಣದ ಜಿಲ್ಲೆಗಳ ಡಿಡಿಪಿಐಗಳು ಹಾಜರಿದ್ದು ಸಲಹೆ ಸೂಚನೆ ನೀಡಿದರು.

ಶಿಕ್ಷಣ ಆಯುಕ್ತಾಲಯದಲ್ಲಿ ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಮಾತನಾಡಿದರು.

ಕಕ ಭಾಗಕ್ಕೆ ದೂರಗಾಮಿ ಯೋಜನೆ: ಡಾ. ಅಜಯ್ ಸಿಂಗ್

ಕಲ್ಯಾಣ ಭಾಗದಲ್ಲಿನ ಶಿಕ್ಷಣದಲ್ಲಿ ಸುಧಾರಣೆ ತರಲು ಕೆಕೆಆರ್‌ಡಿಬಿಯ ಅನುದಾನದಲ್ಲೇ ಶೇ. 25 ಅಕ್ಷರ ಆವಿಷ್ಕಾರಕ್ಕೆ ವೆಚ್ಚ ಮಾಡುವ ನಿರ್ಣಯ ಮಂಡಳಿ ಪ್ರಕಟಿಸಿದ್ದಲ್ಲದೆ 2 ವರ್ಷಗಳನ್ನೇ ಶಿಕ್ಷಣ ವರ್ಷವೆಂದು ಘೋಷಿಸಿದೆ. ಪಬ್ಲಿಕ್ ಶಾಲೆಗಳು, ಹೈಸ್ಕೂಲ್‌ಗಳನ್ನು ಕಾಲೇಜುಗಳಾಗಿ ಮೇಲ್ದರ್ಜೆಗೇರಿಸುವುದು ಸೇರಿಂತೆ ಅನೇಕ ಕ್ರಮಗಳು ಕೈಗೊಳ್ಳಬೇಕಾಗಿದೆ. 2023-24 ರಲ್ಲಿ 2 ಸಾ. ಕೋಟಿ ರು ಯೋಜನೆಯಡಿ ವೆಚ್ಚಕ್ಕೆ ದೊರಕಿದರೆ, 2024- 25 ರಲ್ಲಿ ಈ ಮೊತ್ತ 3, 750 ಕೋಟಿ ಯಾಗಲಿದೆ. ಮುಂದಿನ 3 ವರ್ಷದಲ್ಲಿ ಈ ಭಾಗದಲ್ಲಿ ಶಾಲಾ ಶಿಕ್ಷಣದಲ್ಲಿ ಗುಮಾತ್ಮಕ ಬದಲಾವಣೆ ಕಾಣಲೇಬೇಕು ಎಂಬುದೇ ತಮ್ಮ ಸದಿಚ್ಛೆ ಎಂದು ಡಾ. ಅಜಯ್ ಸಿಂಗ್ ಹೇಳಿದರು.

ಕಲ್ಯಾಣ ಬಾಗದ 7 ಜಿಲ್ಲೆಗಳಲ್ಲಿನ ಶಾಲಾ ಶಿಕ್ಷಣ ಸುಧಾರಣೆಗೆ ಆದ್ಯತೆ ನೀಡಿದ್ದರ ಫಲವಾಗಿ ಅಕ್ಷರ ಆವಿಷ್ಕಾರ ಯೋಜನೆ ತಂದೆ, ಶೇ. 25 ಹಣ ಈ ಯೋಜನೆಗೆ ಮೀಸಲಿಟ್ಟು 2 ವರ್ಷ ಶೈಕ್ಷಣಿಕ ವರ್ಷವಾಗಿ ಘೋಷಿಸಿದ್ದೇನೆ. ಇವೆಲ್ಲ ಸವಾಲು ನಾವು ಮೆಟ್ಟ ನಿಂತಿದ್ದೇವೆ. ಅಧಿಕಾರಿಗಳು ದೂರಗಾಮಿ ಚಿಂತನೆ ಮಾಡಿ ಯೋಜನೆ ಜಾರಿಗೆ ತನ್ನಿ. ಇದರಿಂದ ಇಡೀ ಪ್ರದೇಶ ಅಭಿವೃದ್ಧಿಯಾಗಲಿದೆ.

- ಡಾ. ಅಜಯ್ ಸಿಂಗ್
ಅಧ್ಯಕ್ಷ, ಕೆಕೆಆರ್‌ಡಿಬಿ

ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಅವರ ಕನಸಿನ ಕೂಸು ಅಕ್ಷರ ಆವಿಷ್ಕಾರದಲ್ಲಿ ಸಾವಿರಾರು ಕೋಟಿ ರುಪಾಯಿ ಲಭ್ಯವಿದ್ದು ದೂರಗಾಮಿ ಯೋಜನೆ ರೂಪಿಸಿ ಜಾರಿಗೆ ತಂದಲ್ಲಿ ಕಲ್ಯಾಣ ನಾಡಲ್ಲಿ ಶಿಕ್ಷಣ ಕ್ರಾಂತಿ ನಿಶ್ಚಿತ. ಇದು ಗೇಮ್ ಚೇಂಜರ್ ರೀತಿ ಆಗಬೇಕು. ಕೆಕೆಆರ್ ಡಿಬಿ ಅಧ್ಯಕ್ಷರಿಗೆ ಇದಕ್ಕಾಗಿ ನಾನು ಅಭಿನಂದಿಸುವೆ.

- ರಿತೇಶ ಕುಮಾರ್ ಸಿಂಗ್
ಪ್ರ. ಕಾರ್ಯದರ್ಶಿ.ಶಾಲಾ ಶಿಕ್ಷಣ ಇಲಾಖೆ

ಅಪ್ರಾಪ್ತ ಮೇಲೆ ಅತ್ಯಾಚಾರ: ಆರೋಪಿಗೆ ಗಲ್ಲು ಶಿಕ್ಷೆನೀಡಿ

ಜೇವರ್ಗಿ: ಯಡ್ರಾಮಿ ಪಟ್ಟಣದ ಖಾಸಗಿ ಶಾಲೆಯೊಂದರ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸೆದ ಶಿಕ್ಷಕನನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕು ಎಂದು ತಾಲೂಕ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಯಡ್ರಾಮಿ ಪಟ್ಟಣದಲ್ಲಿ ನಡೆಸುತ್ತಿರುವ ಖಾಸಗಿ ಶಾಲೆಯ ಮಾನ್ಯತೆ ರದ್ದುಪಡಿಸ ಬೇಕು. ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಕ್ರೂರ ಶಿಕ್ಷಕನನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು. ಬಾಲಕಿಯ ಕುಟುಂಬಕ್ಕೆ ಸೂಕ್ತ ಭದ್ರತೆ ಹಾಗೂ ಸರಕಾರದ ನೆರವು ನೀಡಬೇಕು ಎಂದು ಒತ್ತಾಯಿಸಿದರು. ದಲಿತ ಮುಖಂಡರಾದ ಭೀಮರಾಯ ನಗನೂರ, ಮಲ್ಲಣ ಕೊಡಚಿ, ಶ್ರೀ ಹು ಕರಕಿಹಳ್ಳಿ, ಸಿದ್ದು ಕೆರೂರ, ದವಲಪ್ಪ ಮದನ, ರವಿ ಕುರಳಗೇರಾ, ಶರಣಬಸಪ್ಪ ಲಖಣಾ ಪೂರ, ಜೈಭೀಮ ಸಿದ್ದಾಳ, ವಿಶ್ವರಾದ್ಧ ಗಂವ್ಹಾರ, ಯಶವಂತ ಬಡಿಗೇರ, ಭಾಗಣ್ಣ ಸಿದ್ದಾಳ, ರವಿ ಸರಕಾರ, ಇದ್ದರು.



ನೆಟೆ ರೋಗ ಪರಿಹಾರಕ್ಕೆ ಒತ್ತಾಯ

ಆಳಂದ: ನೆಟೆ ರೋಗದಿಂದ ಒಣಗುತ್ತಿರುವ ತೊಗರಿ ಬೆಳೆಯ ಸಮೀಕ್ಷೆ ಮಾಡಿ ರೈತರಿಗೆ ಸೂಕ್ತ ಪರಿಹಾರ, ಬೆಳೆ ವಿಮೆ ಮಂಜೂರಿ ಮಾಡಬೇಕು ಎಂದು ಆಳಂದ ಮಂಡಲ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ನಾಗರಾಜ ಶೇಗಜಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನೆಟೆ ರೋಗದಿಂದ ಒಣಗುತ್ತಿರುವ ತೊಗರಿ ಬೆಳೆ ಸಮೀಕ್ಷೆ ಮಾಡಿ ಪ್ರತಿ ಎಕೆರೆಗೆ 25 ಸಾವಿರ ಪರಿಹಾರ ನೀಡಬೇಕು. ಅದರ ಜೊತೆಗೆ ಬೆಳೆ ವಿಮೆಯೂ ಮಂಜೂರು ಮಾಡಬೇಕು. ಪ್ರತಿ ಕ್ವಿಂಟಲ್ ತೊಗರಿಗೆ 12 ಸಾವಿರ ಬೆಂಬಲ ಬೆಲೆ ನಿಗದಿಪಡಿಸಿ ಮುಖ್ಯಮಂತ್ರಿಗಳು 1 ಸಾವಿರ ಪ್ರೋತ್ಸಾಹ ಧನ ನೀಡಬೇಕು. ಎಂದು ಆಗ್ರಹಿಸಿದ್ದಾರೆ. ಈ ಸಲ ಉತ್ತಮ ಮಳೆ ಬಂದು ತೊಗರಿ ಬೆಳೆಯು ಸಹ ಚೆನ್ನಾಗಿ ಬೆಳೆದಿತ್ತು. ಆದಾಗ್ಯೂ, ನೆಟೆರೋಗ ರೋಗ ಬಂದಿದ್ದರಿಂದ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ನಡೆಸಿ ಸಮಗ್ರ ವರದಿ ತಯಾರಿಸಿ ರೈತಾಪಿ ವರ್ಗಕ್ಕೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಒತ್ತಾಯಿಸಿದ್ದಾರೆ. ಜಿಲ್ಲೆಯಲ್ಲಿ ಕೆಲ ದಿನಗಳಿಂದ ನೆಟೆ ರೋಗದಿಂದ ತೊಗರಿ ನಾಶವಾಗುತ್ತಿದೆ. ಹವಾಮಾನ ವೈಪರೀತ್ಯದಿಂದ ಜಿಲ್ಲೆಯ ವಿವಿಧ ತಾಲ್ಲೂಕುಗಳು ಸೇರಿದಂತೆ ಆಳಂದ ತಾಲ್ಲೂಕಿನಲ್ಲಿ ಬಹಳಷ್ಟು ತೊಗರಿ ಬೆಳೆ ನಾಶವಾಗುತ್ತಿದೆ. ಇಷ್ಟು ದಿನ ಚೆನ್ನಾಗಿದ್ದು ಈಗ ದಿಢೀರನೆ ಹಾನಿಯಾಗುತ್ತಿದೆ. ಈ ಸಲದ ತೊಗರಿ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಕಾಣುತ್ತಿದೆ ಎಂದು ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ನದಿ: ಇಬ್ಬರು ಬಾಲಕರ ಶವ ಪತ್ತೆ

ಸೇಡಂ: ತಾಲೂಕಿನ ಕಾಗಿಣಾ ನದಿಯಲ್ಲಿ ಈಜಾಡಲು ಹೋಗಿ ನಾಪತ್ತೆಯಾಗಿದ್ದ ಬಾಲಕರಿಬ್ಬರು ಮೂರು ದಿನಗಳ ಬಳಿಕ ಶವವಾಗಿ ಪತ್ತೆಯಾದ ಘಟನೆ ಮಂಗಳವಾರ ನಡೆದಿದೆ. ತಾಲೂಕಿನ ಕುಕ್ಕುಂದಾ ಗ್ರಾಮದ ಬಳಿಯ ಕಾಗಿಣಾ ನದಿಯಲ್ಲಿ ಈಜಾಡಲು ತೆರಳಿದ್ದ ಬಾಲಕರು ನೀರು ಪಾಲಾಗಿದ್ದ ಘಟನೆ ಭಾನುವಾರ ಸಾಯಂಕಾಲ ನಡೆದಿತ್ತು. ಅಬ್ದುಲ್ ರೆಹಮಾನ್ (17) ಹಾಗೂ ಮಹ್ಮದ್ ಕೈಫ್ (16) ಇಬ್ಬರು ನಾಪತ್ತೆಯಾಗಿದ್ದರು. ಕಾಗಿಣಾ ನದಿಯಲ್ಲಿ ಈಜಾಡಲು ತೆರಳಿದ ಸಂದರ್ಭದಲ್ಲಿ ಈಜು ಬಾರದ ಅಬ್ದುಲ್ ರೆಹಮಾನ್ ಮುಳುಗುತ್ತಿದ್ದ. ಇದನ್ನು ಕಂಡು ರಕ್ಷಿಸಲು ಹೋದ ಮಹ್ಮದ್ ಕೈಫ್ ಸಹ ನೀರಿನಲ್ಲಿ ಮುಳುಗಿ ಹೋಗಿದ್ದ. ಇಬ್ಬರ ಪತ್ತೆಗೆ ಮಳಖೇಡ್ ಠಾಣೆಯ ಪೊಲೀಸ್ ಸಿಬ್ಬಂದಿ, ಕಲಬುರಗಿ ಹಾಗೂ ಸೇಡಂ ಅಗ್ನಿಶಾಮಕ ದಳದ ಅಧಿಕಾರಿಗಳು ಜತೆಗೆ ಮೀನುಗಾರರು ಶೋಧ ಕಾರ್ಯ ನಡೆಸಿದರು. ಮೂರು ದಿನಗಳ ಬಳಿಕ ಮಂಗಳವಾರ ಬೆಳಗ್ಗೆ 7.30ಕ್ಕೆ ಕುಕ್ಕುಂದಾ ಗ್ರಾಮದ ನದಿಯಲ್ಲಿ ಬಾಲಕರ ಶವ ಪತ್ತೆಯಾಗಿವೆ. ಶವ ಪತ್ತೆಯಾದ ಬಳಿಕ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು, ಈ ಕುರಿತು ಮಳಖೇಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ ವಿಮಾಗೆ ಕೆನರಾ ಬ್ಯಾಂಕ್ ಜತೆಗೆ ಕೆಕೆಆರ್‌ಟಿಸಿ ಒಪ್ಪಂದ

ಸಾರಿಗೆ ನೌಕರರಿಗೆ 1 ಕೋಟಿ ರು. ಅಪಘಾತ ವಿಮೆ ಯೋಜನೆ ಜಾರಿ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ತನ್ನ ನೌಕರರಿಗೆ ಪ್ರೀಮಿಯಮ್ ರಹಿತ 1 ಕೋಟಿ ರು. ಮೊತ್ತದ ಅಪಘಾತ ವಿಮೆ ಯೋಜನೆಗೆ ಕೆನರಾ ಬ್ಯಾಂಕ್ ನೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿಯವರ ಬೆಂಗಳೂರಿನ ಗೃಹ ಕಚೇರಿಯಲ್ಲಿ ಸಚಿವ ಸಮಕ್ಷಮ ಕೆನರಾ ಬ್ಯಾಂಕ್ ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪಾ ಮತ್ತು ಕೆನರಾ ಬ್ಯಾಂಕಿನ ಜನರಲ್ ಮ್ಯಾನೇಜರ್ ವಿಜಯಕುಮಾರ ಪರಸ್ಪರ ಒಡಂಬಡಿಕೆ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಚಿವ ರಮಾಲಿಂಗಾರೆಡ್ಡಿ ಮಾತನಾಡಿ, ಸಾರಿಗೆ ನಿಗಮದಲ್ಲಿ ಇತ್ತೀಚಿನ ದಿನಗಳಲ್ಲಿ ಅಪಘಾತದಿಂದಾಗುತ್ತಿರುವ ಸಾವು-ನೋವುಗಳ ಪ್ರಮಾಣವನ್ನು ಗಮನಿಸಿ ಕೆಕೆಆರ್‌ಟಿಸಿ ನಿಗಮವು ವೈಯಕ್ತಿಕ ಮತ್ತು ಕರ್ತವ್ಯ ನಿರತ ಸಮಯದಲ್ಲಿ ಅಪಘಾತದಿಂದಾಗಿ ನೌಕರರು ನಿಧನರಾದಲ್ಲಿ 1 ಕೋಟಿ ರು. ಗಳ ಪ್ರೀಮಿಯಮ್ ರಹಿತ ಅಪಘಾತ ವಿಮೆ ಯೋಜನೆ ಜಾರಿಗೊಳಿಸಿದಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

ಕೆಕೆಆರ್‌ಟಿಸಿ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ನಿಗಮದ ನೌಕರರಿಗೆ ಈ ವಿಮಾ ಸೌಲಭ್ಯ ಸಿಗಲಿದೆ. ವೇತನ ಖಾತೆಗಳನ್ನು ಕೆನರಾ ಬ್ಯಾಂಕಿನ ಪೇ-ರೋಲ್ ಪ್ಯಾಕೇಜ್ ಸ್ಕೀಮ್ ಅಡಿಯಲ್ಲಿ ತೆರೆದು ಈ ವಿಮಾ ಸೌಲಭ್ಯವನ್ನು ಶುಲ್ಕ ರಹಿತವಾಗಿ ಪಡೆಯಬಹುದಾಗಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುರಕ್ಷಿತ, ಮಿತವ್ಯಯ ಸಾರಿಗೆ ಸೌಲಭ್ಯವನ್ನು ಕಲ್ಪಿಸುವುದರ ಜತೆಗೆ ನೌಕರರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕಿನಲ್ಲಿ ವೇತನ ಪಡೆಯುತ್ತಿರುವ ನಿಗಮದ ನೌಕರರು ಅಪಘಾತ ವಿಮೆಗೆ ಒಳಪಟ್ಟಿರುತ್ತಾರೆ. ಇದೀಗ ಆ ಸಾಲಿಗೆ ಕೆನರಾ ಬ್ಯಾಂಕ್ ಸೇರ್ಪಡೆಯಾಗಿದೆ. ಅಪಘಾತ ಹೊರತುಪಡಿಸಿ ಇತರೇ ನೈಸರ್ಗಿಕ ಸಾವುಗಳಿಗೆ ಕೆನರಾ ಬ್ಯಾಂಕ್ ಪ್ರೀಮಿಯಂ ರಹಿತ 6 ಲಕ್ಷ ರು. ವರೆಗೆ ಉಚಿತ ಟರ್ಮ್ ಇನ್ಸುರೆನ್ಸ್ ಪಾಲಿಸಿ ಸಹ ನಿಡುತ್ತಿದೆ. ಇದಲ್ಲದೆ ನೌಕರರ ಮಕ್ಕಳ ವಿದ್ಯಾಭ್ಯಾಸ, ಗೃಹ ಸಾಲ ಹಾಗೂ ವೈಯಕ್ತಿಕ ಮತ್ತು ವಾಹನ ಸಾಲಗಳಿಗೆ ವಿಶೇಷ ಬಡ್ಡಿ ದರ ನಿಇಗದಿಪಡಿಸಿದ್ದು, ನೌಕರ ವರ್ಗಕ್ಕೆ ಅನುಕೂಲವಾಗಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪಾ ಅವರು ಸಚಿವರ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಕೆ.ಕೆ.ಆರ್.ಟಿ.ಸಿ. ನಿಗಮ ಮತ್ತು ಕೆನರಾ ಬ್ಯಾಂಕಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಮುಕ ಶಿಕ್ಷಕನಿಗೆ ಗಲ್ಲು ಶಿಕ್ಷೆ ನೀಡಿ: ಬಾಬುರಾವ್ ಚವ್ಹಾಣ

ಕಲಬುರಗಿ: ಜಿಲ್ಲೆಯ ಯಡ್ರಾಮಿ ತಾಲೂಕಿನ ಖಾಸಗಿಶಾಲೆಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ನಡೆಸಿರುವ ಕಾಮುಕ ಶಿಕ್ಷಕ ಹಾಜಿಮಲಂಗ್ ಗಿಡಯಾರ್ ನನ್ನು ತಕ್ಷಣವೇ ಗಲ್ಲು ಶಿಕ್ಷೆ ನೀಡಬೇಕು ಎಂದು ಮಾಜಿ ಸಚಿವ ಬಾಬುರಾವ್ ಚವ್ಹಾಣ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ದಲಿತರ ಮೇಲೆ ನಿರಂತರ ಅತ್ಯಾಚಾರ, ಕೊಲೆ, ಸುಲಿಗೆಯಂತಹ ಅನ್ಯಾಯಗಳು ನಡೆಯುತ್ತಿದ್ದು, ಅದರಲ್ಲೂ ಲಂಬಾಣಿ ಸಮುದಾಯವನ್ನು ಗುರಿಯಾಗಿಸಿ ಇಂತಹ ಹೇಯ ಕೃತ್ಯ ನಡೆಸುವ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಲೆಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರದಂತ ಕೃತ್ಯಗಳು ತಡೆಯಲು ಸರಕಾರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳನ್ನು ಮಹಿಳೆಯರಿಗೆ ಮಾತ್ರ ಸೀಮಿತ ಮಾಡಬೇಕು. ಆಗ ಮಾತ್ರ ಇಂತಹ ಕೃತ್ಯ ತಡೆಯಲು ಸಾಧ್ಯ ಎಂದ ಅವರು, ಮುಂಬರುವ ದಿನಗಳಲ್ಲಿ ಮುಖ್ಯಮಂತ್ರಿ ಹಾಗೂ ಗೃಹಸಚಿವರಿಗೆ ನಿಯೋಗದೊಂದಿಗೆ ಭೇಟಿ ನೀಡಿ ದೂರು ನೀಡಲಾಗುವುದೆಂದು ತಿಳಿಸಿದರು.

ಇದಲ್ಲದೇ, ಅತ್ಯಾಚಾರಕ್ಕೆ ಒಳಗಾಗಿರುವ ಬಾಲಕಿಯ ಸಂಪೂರ್ಣ ಶಿಕ್ಷಣದ ಖರ್ಚು ವೆಚ್ಚ ಸರಕಾರವೇ ಭರಿಸಬೇಕು. ಜತೆಗೆ ಸಂತ್ರಸ್ತ ಮಗುವಿಗೆ 18 ವರ್ಷ ತುಂಬಿದ ಮೇಲೆ ಸರಕಾರಿ ನೌಕರಿ ಕೊಡಬೇಕು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಮಣಿಕಂಠ ರಾಠೋಡ, ಛತ್ರು ರಾಠೋಡ, ಚಂದ್ರಶೇಖರ್ ರಾಠೋಡ, ಬಿಕ್ಕುಸಿಂಗ ರಾಠೋಡ, ಸಂಜು ರಾಠೋಡ ಇದ್ದರು.



ಜಿಲ್ಲೆಯಲ್ಲಿ ಜಿಹಾದಿಗಳ ಆರ್ಭಟ ಹೆಚ್ಚಾಗಿದೆ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿಂದ ಜಿಲ್ಲೆಯಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಮುಸ್ಲಿಂರನ್ನು ತಲೆ ಮೇಲೆ ಎತ್ತಿಕೊಳುತ್ತಿದ್ದಾರೆ. ಇದರಿಂದಾಗಿ ಜಿಹಾದಿ ಚಟುವಟಿಕೆಗಳು ಹೆಚ್ಚಾಗಿವೆ. ಕಳೆದ 15 ದಿನಗಳಲ್ಲಿ ಚಂದ್ರಂಪಳ್ಳಿಯಲ್ಲಿ ವೃದ್ದೆಯ ಮೇಲೆ ಅತ್ಯಾಚಾರ, ಜಿಮ್ಸ್‌ನಲ್ಲಿ ಮಗುವಿನ ಅಪಹರಣ ಹಾಗೂ ಯಡ್ರಾಮಿಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಸೇರಿ ಅನೇಕ ಕೃತ್ಯಗಳು ನಡೆದಿದ್ದು, ಇದೆಲ್ಲಾ ಜಿಹಾದಿಗಳ ಆರ್ಭಟದಿಂದಲೇ ಆಗಿದೆ. ಅಲ್ಲದೇ, ಜಿಲ್ಲಾಧಿಕಾರಿಗಳು ಒಳಗೊಳಗೇ ಜಿಹಾದಿ ಚಟುವಟಿಕೆ ನಡೆಸುತ್ತಿದ್ದಾರೆ ಎನ್ನುವ ಮಾತು ಸಹ ಕೇಳಿ ಬಂದಿದೆ. ಇದಕ್ಕೆಲ್ಲಾ, ಜಿಲ್ಲಾ ಉಸ್ತುವಾರಿ ಸಚಿವರ ಕುಮ್ಮಕ್ಕೆ ಪ್ರಮುಖ ಕಾರಣವಾಗಿದೆ. ಅಧಿಕಾರಿಗಳು ಖರ್ಗೆ ಕುಟುಂಬದ ನೌಕರಸ್ತರಂತೆ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಆರೋಪಿಸಿದರು.

ನಗರದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ

ಕಲಬುರಗಿ: ವಾರ್ಡ ನಂ.54ರಲ್ಲಿ ಬರುವ ನವಜೀವನ ನಗರದಲ್ಲಿ ಕೆಕೆಆರ್‌ಡಿಬಿ ಅನುದಾನದಲ್ಲಿ 53ಲಕ್ಷ ರು. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಬಹಳ ದಿನಗಳಿಂದ ನಿರ್ಲಕ್ಷ್ಯ ಒಳಗಾದ ಈ ರಸ್ತೆಗಳನ್ನು ಪ್ರಾರಂಭಿಸುತ್ತಿರುವುದು ಸಂತೋಷ ತಂದಿದೆ. ನವಜೀವನ ನಗರದ ಹಸಿರು ಉದ್ಯಾನ ಸಾರ್ವಜನಿಕ ಉದ್ಯಾನವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ನಿವಾಸಿಗಳಿಗೆ ಭರವಸೆಯನ್ನು ನೀಡಿದರು. ರಸ್ತೆಯ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚನೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ನಿಂಗಮ್ಮ ಕಟ್ಟಿಮನಿ, ನವ ಜೀವನ ನಗರದ ನಿವಾಸಿಗಳಾದ ಶಾಂತಪ್ಪ ಜಾದವ್, ವಿಶ್ವರೂಪ, ನಿಂಗನಗೌಡ ಪಾಟೀಲ್, ಅಶೋಕ್ ಪಾಟೀಲ್, ಅಂಬಯ್ಯ ಗುತ್ತೇದಾರ್, ಬಸವರಾಜ್ ಪಾಟೀಲ್, ಅಭಿಲಾಶ್ ಹೇಮನೂರ್, ಸಂಜೀವ್ ಬೋದ್ದಾರ್, ರೋಷನ್ ರಾಯ್ಕರ್ ಭೀಮ್ ಸೇನ್ ಸಿಂಗ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಯುವಕರ, ಮಹಿಳೆಯರ ಸಬಲೀಕರಣಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ: ಶರಣ್ ಪ್ರಕಾಶ್ ಪಾಟೀಲ್

ಜಿಟಿಟಿಸಿ- ಬಹು ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ ಗುಲ್ಬರ್ಗ ವಿವಿ ಜತೆ ಒಪ್ಪಂದ | ಜರ್ಮನ್, ಜಪಾನೀಸ್ ಭಾಷೆ ಕಲಿಸಲು ಕ್ರಮ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಪ್ರಪಂಚ ಈಗ ಅಸಾಧಾರಣ ವೇಗದಲ್ಲಿ ವಿಕಸನಗೊಳ್ಳುತ್ತಿದ್ದು, ತಂತ್ರಜ್ಞಾನ, ಡಿಜಿಟಲೀಕರಣ ಮತ್ತುಆಧುನಿಕತೆಯು ಒಟ್ಟಾರೆ ವ್ಯವಸ್ಥೆಯನ್ನು ಬದಲಾಯಿಸಿ, ಅನೇಕ ಸವಾಲುಮತ್ತು ಅವಕಾಶಗಳನ್ನು ಸೃಷ್ಟಿಸುತ್ತಿದೆ. ಈ ನಿಟ್ಟಿನಲ್ಲಿ ಸಾಮರ್ಥ ಮತ್ತುಹೊಸ ಕೌಶಲ್ಯವನ್ನು ಅನಾವರಣಗೊಳಿಸಲು ಜಿಟಿಟಿಸಿ- ಬಹುಕೌಶಲ್ಯಾಭಿವೃದ್ಧಿ ಕೇಂದ್ರದ (ಒಖಆಅ) ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಗುಲಬರ್ಗಾ ವಿವಿಯ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸಚಿವರ ಸಮ್ಮುಖದಲ್ಲಿ ಜಿಟಿಟಿಸಿ ಅಧಿಕಾರಿಗಳು ಮತ್ತು ಗುಲ್ಬರ್ಗ ವಿಶ್ವವಿದ್ಯಾಲಯದ ಅಧಿಕಾರಿಗಳು ಒಡಂಬಡಿಕೆಗೆ ಸಹಿ ಹಾಕಿ ವಿನಿಮಯ ಮಾಡಿಕೊಂಡ ಬಳಿಕ ಮಾತನಾಡಿದರು.

ಸುಮಾರು 25 ಎಕರೆ ವಿಶಾಲಪ್ರದೇಶದಲ್ಲಿ 120 ಕೋಟಿ ರುಪಾಯಿ ವೆಚ್ಚದಲ್ಲಿ ಈ ಕೇಂದ್ರ ತಲೆ ಎತ್ತಲಿದೆ. ಇದರಿಂದ ಪ್ರೌಢಶಾಲೆ, ಪದವೀಧರರು, ಸ್ನಾತಕೋತ್ತರ ಪದವಿವಿದ್ಯಾರ್ಥಿಗಳಿಗೆ ವಿಶ್ವ ದರ್ಜೆಯ ತರಬೇತಿ ನೀಡಲು ಸಾಧ್ಯವಾಗಲಿದೆ.ಸ್ಥಳೀಯ ಕೌಶಲ್ಯ , ಜಾಗತಿಕ ಕೆಲಸ ಎಂಬುದು ನಮ್ಮಮೂಲಮಂತ್ರವಾಗಿದೆ ಎಂದು ತಿಳಿಸಿದರು.

ಉದ್ಯಮಶೀಲತೆ ಮತ್ತು ನಾವೀನ್ಯತೆಗೆ ಹೊಸ ಮಾರ್ಗಗಳನ್ನು ಕಂಡುಕೊಳ್ಳುವುದು ಇಂದಿನ ಅಗತ್ಯವಾಗಿದೆ. ವಿದ್ಯಾರ್ಥಿಗಳು ಮಾತ್ರವಲ್ಲದೇ, ಯುವಕರು, ಮಹಿಳೆಯರ ಸಬಲೀಕರಣಕ್ಕೆ ಹಾಗೂ ಸ್ವಾವಲಂಬಿಯಾಗಲು ಕೂಡ ಕ್ರಮ ಕೈಗೊಳ್ಳಲಾಗುತ್ತದೆ. ಇದಲ್ಲದೇ ಭಾಷಾ ಪ್ರಯೋಗಾಲಯ ಸ್ಥಾಪಿಸಲಾಗುತ್ತಿದ್ದು, ಜರ್ಮನ್, ಜಪಾನೀಸ್ ಭಾಷೆ ಕಲಿಸಲಾಗುತ್ತದೆ ಎಂದು ಶರಣ್ ಪ್ರಕಾಶ್ ಪಾಟೀಲ್ ವಿವರಿಸಿದರು.

ರಾಜ್ಯದ ಮೂರು ಕಡೆ ಸ್ಥಾಪಿಸಲಾಗುತ್ತದೆ. ಕಲಬುರಗಿ, ಕೊಪ್ಪಳ ಜಿಲ್ಲೆಯ ತಳಕಲ್ ಹಾಗೂ ಮೈಸೂರಿನ ವರುಣಾದಲ್ಲಿ ಇದು ತಲೆ ಎತ್ತಲಿವೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಅಜಯ್ ಸಿಂಗ್, ಗುಲ್ಬರ್ಗ ವಿಶ್ವವಿದ್ಯಾಲಯ ಕುಲಪತಿ ಪ್ರೊ.ದಯಾನಂದ ಅಗಸರ, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ, ಜಿಟಿಟಿಸಿ ವ್ಯವಸ್ಥಾಪಕ ನಿರ್ದೇಶಕ ವೈ.ಕೆ. ದಿನೇಶ್ ಕುಮಾರ್ ಉಪಸ್ಥಿತರಿದ್ದರು.



ಬಹು ಕೌಶಲ್ಯಾಭಿವೃದ್ಧಿ ಕೇಂದ್ರಗ ಸ್ಥಾಪನೆಯಿಂದ ತರಬೇತಿ, ಯುವಕರು, ಮಹಿಳೆಯರ ಸಬಲೀಕರಣ, ವೃತ್ತಿಪರತೆ, ಪ್ರಾದೇಶಿಕ ಅಸಮತೋಲನ, ವಾಣಿಜ್ಯೋದ್ಯಮ ಅವಕಾಶಗಳು, ಉದ್ಯೋಗ ಸೃಷ್ಟಿ, ವಿದೇಶಿ ಭಾಷಾಕಲಿಕೆ, ಪ್ರೌಢಶಾಲೆ ಹಂತದಿಂದ ಕೌಶಲ್ಯ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ, ಅಂತಾರಾಷ್ಟ್ರೀಯ ಉದ್ಯೋಗ ಅವಕಾಶಗಳು ದೊರೆಯಲಿದೆ.

-ಡಾ.ಶರಣಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಸಚಿವ

ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರ ನೆರವು

ನೂತನ ಜಿಟಿಟಿಸಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆಯ ಒಡಂಬಡಿಕೆ ಸಹಿ ಮತ್ತು ವಿನಿಮಯದಿಂದ ಎಐ ಮತ್ತು ಎಂಎಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಬ್ಯಾಂಕಿಂಗ್ ಮತ್ತು ಫೈನಾನ್ಸ್, ಇಂಡಸ್ಟ್ರಿ 4.0, ಮಾಹಿತಿ ತಂತ್ರಜ್ಞಾನ, ಮತ್ತಿತರ ಕೌಶಲ್ಯಗಳನ್ನು ಕಲಿತು, ಭವಿಷ್ಯದಲ್ಲಿ ಉತ್ತಮ ಉದ್ಯೋಗಗಳನ್ನು ಪಡೆಯಲು ಹಾಗೂ ಸ್ವಂತ ಉದ್ಯಮ ಆರಂಭಿಸಲು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಈ ಕೇಂದ್ರವು ನೆರವಾಗಲಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಅಭಿಪ್ರಾಯಪಟ್ಟರು.

ತರಬೇತಿಗಳು

- ಅಡ್ವಾನ್ಸ್ಡ ಮ್ಯಾನ್ಯುಫ್ಯಾಕ್ಚರಿಂಗ್
- ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ
- ಮೆಕಾಟ್ರಾನಿಕ್ಸ್ ಮತ್ತು ಆಟೊಮೇಷನ್
- ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ರೂಪಾಂತರ
- ನವೀಕರಿಸಬಹುದಾದ ಇಂಧನ ಮತ್ತು ಸುಸ್ಥಿರತೆ
- ಆರೋಗ್ಯ ಮತ್ತು ಸಂಬಂಧಿತ ವಲಯಗಳು
- ಆತಿಥ್ಯ ಮತ್ತು ಸೇವಾ ಉದ್ಯಮಗಳು
- ಸಾಫ್ಟ್ ಸ್ಕಿಲ್ಸ್, ಸಂವಹನ ಮತ್ತು ನಾಯಕತ್ವ

ದಡ ಸೇರಿದ ದೋಣಿ; ಮೀನುಗಾರರಿಗೆ ಹೊಡೆತ

ಮಂಗಳೂರು: ಮೊದಲೇ ಮತ್ಸ್ಯ ಕ್ಷಾಮದಿಂದ ಕರಾವಳಿಯ ಮೀನುಗಾರಿಕೆ ವಲಯ ತತ್ತರಿಸಿ ಹೋಗಿದೆ. ಇದೀಗ ಕರಾವಳಿಯಲ್ಲಿ ವಕ್ಕರಿಸಿದ ಚಂಡಮಾರುತ ಮೀನುಗಾರರಿಗೆ ಮತ್ತಷ್ಟು ಹೊಡೆತ ನೀಡಿದೆ. ಫೆಂಗಲ್ ಚಂಡಮಾರುತದಿಂದಾಗಿ ಅರಬ್ಬಿ ಸಮುದ್ರದಲ್ಲಿ ಕಳೆದ ಎರಡು ಮೂರು ದಿನಗಳಿಂದ ಗಾಳಿಯ ಒತ್ತಡ ಮತ್ತು ಅಲೆಗಳ ಅಬ್ಬರ ಜೋರಾಗಿರುವುದರಿಂದ ಸಮುದ್ರದಲ್ಲಿ ಮೀನುಗಾರಿಕೆ ನಡೆಸಲಾಗದೆ ಮೀನುಗಾರಿಕೆ ದೋಣಿಗಳು ದಡ ಸೇರಿವೆ.

ಈ ಬಾರಿ ಆರಂಭದ ದಿನದಿಂದಲೂ ಕಡಲಿನಲ್ಲಿ ಮೀನಿನ ಇಳುವರಿ ಸಂಪೂರ್ಣ ಕುಸಿದಿದ್ದು ಆಳಸಮುದ್ರ ಮೀನುಗಾರರು ಸಂಪೂರ್ಣವಾಗಿ ತತ್ತರಿಸಿ ಹೋಗಿದ್ದಾರೆ. ಪ್ರಾಕೃತಿಕ ವೈಪರೀತ್ಯ ಹಾಗೂ ಇನ್ನಿತರ ಕಾರಣದಿಂದಾಗಿ ವರ್ಷದಿಂದ ವರ್ಷಕ್ಕೆ ಮೀನಿನ ಸಂತತಿ ನಾಶವಾಗುತ್ತಿದ್ದು ಇದು ಕರಾವಳಿಯ ಮೀನುಗಾರಿಕೆ ಕ್ಷೇತ್ರಕ್ಕೆ ಭಾರೀ ಹೊಡೆತವನ್ನು ನೀಡುತ್ತಿದೆ.

ಚಂಡಮಾರುತದಿಂದಾಗಿ ಇದೀಗ ಕಳೆದ ಎರಡು ಮೂರು ದಿನಗಳಿಂದ ಎಲ್ಲ ಬೋಟುಗಳು ದಡ ಸೇರಿದ್ದು, ಶೇ. 80ರಷ್ಟು ಬೋಟುಗಳು ಮಲ್ಪೆ ಬಂದರಿನಲ್ಲಿ ಲಂಗರು ಹಾಕಿವೆ. ಪರ್ಸಿನ್, ಸಣ್ಣ ಟ್ರಾಲ್‌ಬೋಟ್, ನಾಡದೋಣಿಗಳು ಸಂಪೂರ್ಣ ಸ್ಥಗಿತಗೊಳಿಸಿ ಬಂದರಿನಲ್ಲಿ ಲಂಗರು ಹಾಕಿವೆ. ಸಮುದ್ರದಲ್ಲಿದ್ದ ಆಳಸಮುದ್ರ ಬೋಟುಗಳು ಸಮೀಪದ ಬಂದರು ಪ್ರವೇಶಿಸಿವೆ.

ಸಮುದ್ರಕ್ಕೆ ತೆರಳದಂತೆ ಸೂಚನೆ: ಫೆಂಗಲ್ ಚಂಡಮಾರುತದ ಪರಿಣಾಮ ಸಮುದ್ರದಲ್ಲಿ ದೊಡ್ಡ ಗಾತ್ರದ ಅಲೆಗಳು ಏಳುವ ಸಾಧ್ಯತೆ ಇರುವುದರಿಂದ ಹವಾಮಾನ ಇಲಾಖೆ ನೀಡಿದ ಎಚ್ಚರಿಕೆ ಸೂಚನೆಯಂತೆ ಮೀನುಗಾರರು ಸಮುದ್ರಕ್ಕೆ ತೆರಳದಂತೆ ಎಲ್ಲ ಮೀನುಗಾರರಿಗೆ ಸೂಚನೆ ನೀಡಲಾಗಿದೆ. ಮಲ್ಪೆಯಲ್ಲಿ ಬಹುತೇಕ ಎಲ್ಲ ವರ್ಗದ ಬೋಟುಗಳು ಲಂಗರು ಹಾಕಿವೆ. ಡಿ.5ರವರೆಗೆ ಚಂಡಮಾರುತ ಇರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

ಪಂಡಿತ್ ವೆಂಕಟೇಶ್ ಕುಮಾರ್‌ಗೆ ಆಳ್ವಾಸ್ ಪ್ರಶಸ್ತಿ । ವೈಭವದ ಸಾಂಸ್ಕೃತಿಕ ಸಮ್ಮೇಳನಕ್ಕೆ ಭಾರಿ ಸಿದ್ಧತೆ

ಡಿ.10ರಿಂದ 30ನೇ ವರ್ಷದ ಆಳ್ವಾಸ್ ವಿರಾಸತ್

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗುವ ಆಳ್ವಾಸ್ ವಿರಾಸತ್ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಡಿ.10ರಿಂದ 15ರವರೆಗೆ ಪುತ್ತಿಗೆ ವಿವೇಕಾನಂದ ನಗರದ ವನಜಾಕ್ಷಿ ಕೆ. ಶ್ರೀಪತಿ ಭಟ್ ಬಯಲು ರಂಗ ಮಂದಿರದಲ್ಲಿ ನಡೆಯಲಿದೆ.

30ನೇ ವರ್ಷದ ಆಳ್ವಾಸ್ ವಿರಾಸತ್ ನಲ್ಲಿ ವಿಶೇಷ ಆಕರ್ಷಣೆಯಾಗಿ, ಕೈಮಗ್ಗ ಸೀರೆಗಳ ಉತ್ಸವವನ್ನು ಆಯೋಜಿಸಲಾಗಿದೆ. ಭಾರತದ 30 ಪ್ರದೇಶವಾರು ಹಾಗೂ ಜಿಐ ಟ್ಯಾಗ್ ಹೊಂದಿರುವ ಕೈಮಗ್ಗ ಸೀರೆಗಳ ಹಾಗೂ ಬಟ್ಟೆಗಳ ಉತ್ಸವ ವಿರಾಸತ್ ನಲ್ಲಿರಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

2024ನೇ ಸಾಲಿನ ಆಳ್ವಾಸ್ ವಿರಾಸತ್ ಪ್ರಶಸ್ತಿಯನ್ನು ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪದ್ಮಶ್ರೀ ಪುರಸ್ಕೃತ ಪಂಡಿತ್ ವೆಂಕಟೇಶ್ ಕುಮಾರ್ ರಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ನೇಕಾರರಿಂದ ನೇರ ಮಾರಾಟ: ಭಾರತೀಯ ಪರಂಪರೆಯನ್ನು ಬಿಂಬಿಸುವ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ನೇಕಾರರಿಂದ ಗ್ರಾಹಕರಿಗೆ ನೇರ ಮಾರಾಟವೂ ನಡೆಯಲಿದ್ದು, ಉಡುಪಿ, ಇಳಕಲ್, ಕೋಲ್ಕತ್ತಾ, ತುಮ್ಮಿನಕಟ್ಟೆ, ವೆಂಕಟಗಿರಿ, ಕಾಶ್ಮೀರಿ, ಕಾಂಚೀವರಂ, ಮೈಸೂರು, ಕೊಳ್ಳೇಗಾಲ, ದಾವಣಗೆರೆ, ಚೆಟ್ಟಿನಾಡ್, ಕೇರಳ, ಹೈದರಾಬಾದ್, ಮದ್ರಾಸ್ ನ ಸೀರೆಗಳು ಮತ್ತು ಬಟ್ಟೆಗಳು ಈ ಮೇಳದಲ್ಲಿರಲಿವೆ. ಉಡುಪಿಯ ಪದ್ಮಶಾಲಿ ನೇಕಾರರ ಪ್ರತಿಷ್ಠಾನದ ಸಹಕಾರದೊಂದಿಗೆ ಈ ಉತ್ಸವ ಆಯೋಜಿಸಲಾಗಿದೆ ಎಂದು ಅವರು ವಿವರಿಸಿದರು.

ಡಿ. 10ರ ಸಂಜೆ ಕಾರ್ಯಕ್ರಮವನ್ನು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ. ಉಡುಪಿ ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಅಧ್ಯಕ್ಷ ಜಿ. ಶಂಕರ್ ಅಧ್ಯಕ್ಷತೆ ವಹಿಸುವರು ಎಂದು ಡಾ. ಮೋಹನ್ ಆಳ್ವ ತಿಳಿಸಿದರು.

ಆಳ್ವಾಸ್ ವಿರಾಸತ್ ಅಂಗವಾಗಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿವಿಧ ಸಾಂಸ್ಕೃತಿ ಕಾರ್ಯಕ್ರಮ: ಆಳ್ವಾಸ್ ವಿರಾಸತ್ ಅಂಗವಾಗಿ ಡಿ. 10 ರಂದು ಸಂಜೆ ಜಾನಪದ ಕಲಾತಂಡಗಳಿಂದ ಸಾಂಸ್ಕೃತಿಕ ಮೆರವಣಿಗೆ, ಸಾಂಸ್ಕೃತಿಕ ರಥ ಸಂಚಲನ ಹಾಗೂ ರಥಾರತಿ ನಡೆಯಲಿದೆ.ನಂತರ ಡಿ.11 ರಂದು ಆಳ್ವಾಸ್ ವಿರಾಸತ್ 2024 ಪ್ರಶಸ್ತಿ ಪ್ರದಾನ, ಹಿಂದೂಸ್ತಾನಿ ಗಾಯನ, ಗುಜರಾತ್ ನ ರಂಗ್ ಮಲಹರ್ ದಿ. ಫೋಕ್ ಆರ್ಟ್ಸ್ ತಂಡದಿಂದ ಜಾನಪದ ನೃತ್ಯ ಪ್ರದರ್ಶನ, ಆಳ್ವಾಸ್ ವೈವಿಧ್ಯಮಯ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಏರ್ಪಟ್ಟಿದೆ. ನಂತರ ಡಿ. 15 ರವರೆಗೆ ವಿವಿಧ ನೃತ್ಯಕಲಾಪ್ರಕಾರಗಳ ಪ್ರದರ್ಶನ, ಸಂಗೀತ ರಸದೌತಣ

ಡಿ.14ರಂದು ಸಂಜೆ ಚೆನ್ನೈನ ಸ್ಕೇಟೋದ 25 ಕಲಾವಿದರಿಂದ ಮತ್ತು ಸಾಂಸ್ಕೃತಿಕ ರಥ ಸ್ವಸ್ಥಾನ ಗಮನದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ. ಡಿ.15 ರವರೆಗೆ ಮಾರಾಟ ಮಳಿಗೆಗಳ ಮೇಳ ದಿನಪೂರ್ತಿ ತೆರೆದಿರುತ್ತದೆ ಎಂದು ಡಾ. ಆಳ್ವ ವಿವರಿಸಿದರು.

ಭಾರತೀಯ ಕರಕುಶಲಗಳ ಬಜಾರ್

ಈ ಹಿಂದಿನಂತೆಯೇ ಈ ಬಾರಿಯ ವಿರಾಸತ್ ನಲ್ಲೂ ಕೃಷಿ, ಆಹಾರ, ಫಲಪುಷ್ಪ ಸೇರಿದಂತೆ ವಿವಿಧ ಮೇಳಗಳು ಇರಲಿವೆ. ಕಲೆ ಮತ್ತು ಕರಕುಶಲ ವಸ್ತುಗಳು, ಉಡುಪುಗಳು, ಆಭರಣಗಳು, ಗೃಹಾಲಂಕಾರಿಕ ವಸ್ತುಗಳು, ಅಪರೂಪದ ಹಾಗೂ ಸಮಕಾಲೀನ ವಸ್ತುಗಳ ಬಜಾರ್ ಈ ಬಾರಿಯ ವಿರಾಸತ್ ನಲ್ಲಿರಲಿದೆ. ದೇಶದ ವಿವಿಧ ಭಾಗದಲ್ಲಿ ತಯಾರಾದ ವೈವಿಧ್ಯಮಯ ಕರಕುಶಲ ವಸ್ತುಗಳು, ಆಯಾ ರಾಜ್ಯಗಳ ಕುಶಲ ಕರ್ಮಿಗಳಿಂದ ನೇರ ಮಾರಾಟ ನಡೆಯಲಿದೆ. ಬೆಂಗಳೂರು ಆರ್ಟ್ಸ್ ಮತ್ತು ಕ್ರಾಫ್ಟ್ ಮೇಳ ಹಾಗೂ ದಿಲ್ಲಿಯ ಮೀನಾ ಬಝಾರ್ ಮೇಳಗಳಂತೆ ನಡೆಯಲಿದೆ ಎಂದು ಡಾ.ಮೋಹನ್ ಆಳ್ವ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಳ್ವಾಸ್ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಸಂತ್ರಸ್ತರ ಹೋರಾಟ ಸಮಿತಿ ಆಗ್ರಹ

ಯುಕೆಪಿ ಪೂರ್ಣಗೊಳಿಸಿ; ಇಲ್ಲದಿದ್ದರೆ ರದ್ದುಪಡಿಸಿ

ಬಾಗಲಕೋಟೆ: ಯುಕೆಪಿ 3ನೇ ಹಂತದ ಯೋಜನೆ ಸರಕಾರ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಯೋಜನೆ ಕೈಬಿಟ್ಟು ರೈತರ ಜಮೀನುಗಳ ಮೇಲಿನ ನಿರ್ಬಂಧ ಸಡಿಲಗೊಳಿಸಬೇಕು ಎಂದು ಯುಕೆಪಿ ಬಾಧಿತ ಸಂತ್ರಸ್ತರ ಹೋರಾಟ ಸಮಿತಿ ಮುಖಂಡರು ಸರಕಾರಕ್ಕೆ ಸವಾಲು ಹಾಕಿದರು.

ಇಲ್ಲಿನ ಜಿಲ್ಲಾಡಳಿತ ಎದುರು ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಧರಣಿ ಹೋರಾಟ ವೇದಿಕೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಗೌರವಾಧ್ಯಕ್ಷ ಅಜಯಕುಮಾರ ಸರನಾಯಕ ಹಾಗೂ ಅಧ್ಯಕ್ಷ ಅದೃಶ್ಯಪ್ಪ ದೇಸಾಯಿ, 130 ಟಿಎಂಸಿ ನಿಲ್ಲಿಸಿದರೆ 7 ಜಿಲ್ಲೆಯ ಜನ ಫಲಾನುಭವಿಗಳಾಗಲಿದ್ದಾರೆ. ನೀರು ಪಡೆದು ಫಲಾನುಭವಿಗಳಾಗುವ ಜನರೇ ಈ ಬಗ್ಗೆ ಎಚ್ಚೆತ್ತು ಧ್ವನಿ ಎತ್ತದಿರುವಾಗ ನಮಗೂ ಭೂಮಿ ಕಳೆದುಕೊಂಡು ಕೂರಲು ಇಷ್ಟವಿಲ್ಲ. ನಾವೇನು ಸರಕಾರದ ಪುಡಿಗಾಸಿನ ಪರಿಹಾರ ಕ್ಕಾಗಿ ಹೋರಾಟ ನಡೆಸುತ್ತಿಲ್ಲ. ಇಲ್ಲಿನ ಜನರ ತ್ಯಾಗಕ್ಕೆ ಬೆಲೆ ಇಲ್ಲದಂತೆ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರಿಗೆ ದ್ರೋಹ: 1997ರಲ್ಲಿ ಜೆ.ಎಚ್ .ಪಟೇಲರ ಅವಧಿಯಲ್ಲಿ ನೀರಾವರಿ ಭೂಮಿಗೆ 1.48 ಲಕ್ಷ ರು., ಒಣಬೇಸಾಯಕ್ಕೆ 98 ಸಾವಿರ ರು.ಗಳನ್ನು ಘೋಷಿಸಲಾಗಿತ್ತು. ಅಂದು ಆ ಬೆಲೆ ಮಾರುಕಟ್ಟೆಗೆ ತಕ್ಕದಾಗಿತ್ತು. ಈಗ ಪ್ರತಿ ಎಕರೆ ಭೂಮಿ 35 ರಿಂದ 40 ಲಕ್ಷ ರು.ಗಳಿಗೆ ಮಾರಾಟವಾಗುತ್ತಿರುವಾಗ ಸರಕಾರ ನೀರಾವರಿ ಭೂಮಿಗೆ 24 ಲಕ್ಷ ರು. ಒಣಬೇಸಾಯಕ್ಕೆ 20 ಲಕ್ಷ ರು.ಗಳನ್ನು ಘೋಷಿಸಿರುವುದು ರೈತರಿಗೆ ಬಗೆದಿರುವ ದ್ರೋಹ. ಈ ಬಾರಿಯ ಹೋರಾಟ ತಾರ್ಕಿಕ ಅಂತ್ಯದವರೆಗೂ ಮುಂದವರಿಯಲಿದೆ. ನಾವು ಯಾವ ಒತ್ತಡಕ್ಕೂ ಮಣಿಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಯುಕೆಪಿ ಸಂತ್ರಸ್ತರ ಹೋರಾಟ ಸಮಿತಿ ಗೌರವಾಧ್ಯಕ್ಷ ಅಜಯಕುಮಾರ ಸರನಾಯಕ ಹಾಗೂ ಅಧ್ಯಕ್ಷ ಅದೃಶ್ಯಪ್ಪ ದೇಸಾಯಿ, ಎಸ್.ಆರ್.ಪಾಟೀಲ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕೃಷ್ಣೆಯ ನೀರು ಬಿಡುವುದಿಲ್ಲ: ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತಿಯಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಕೃಷ್ಣೆಯ ನೀರನ್ನು ಕಾವೇರಿ ಭಾಗಕ್ಕೆ ಕೊಂಡೊಯ್ಯುವ ಮಾತುಗಳನ್ನಾಡಿದ್ದಾರೆ. ಉತ್ತರ ಕರ್ನಾಟಕದವರು ಸುಲಭ ಎಂದು ಭಾವಿಸಿರುವುದು ತಪ್ಪು

ಡಿ.7ರಂದು ಕೋರ್ ಕಮಿಟಿ ಮಹತ್ವದ ಸಭೆ: ವಿಜಯೇಂದ್ರ । ಯತ್ನಾಳ್ ತಂಡದ ಮೇಲೆ ತೂಗುಗತ್ತಿ..?

ವರಿಷ್ಠರ ತೀರ್ಮಾನಕ್ಕೆ ಬದ್ಧ: ವಿಜಯೇಂದ್ರ

ಕಲಬುರಗಿ: ಬಸವನಗೌಡ ಪಾಟೀಲ್ ಯತ್ನಾಳ್ ಅಲ್ಲ, ರೈತರ ಪರವಾಗಿ ಯಾರೂ ಬೇಕಾದರೂ ಹೋಗಿ ಜಂಟಿ ಸಂಸದೀಯ ಸಮಿತಿಯನ್ನು ಭೇಟಿ ಮಾಡಬಹುದು. ಬಿಜೆಪಿ ವತಿಯಿಂದ ಸಂಪೂರ್ಣವಾಗಿ ವರದಿ ನೀಡಿ, ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರ ಸಮಸ್ಯೆಗಳ ಕುರಿತು ಯಾರು ಬೇಕಾದರೂ ದೆಹಲಿಗೆ ಜೆಪಿಸಿಸಿ ಮುಖ್ಯಸ್ಥರನ್ನು ಹೋಗಿ ಭೇಟಿ ಮಾಡಬಹುದು ಅದಕ್ಕೆ ನಮ್ಮದೇನೂ ತಕರಾರಿಲ್ಲ. ಪಕ್ಷ ವಿರೋಧ ಚಟುವಟಿಕೆಗಳಲ್ಲಿ ತೊಡಗಿರುವವರು ಎಷ್ಟೇ ದೊಡ್ಡವರಾದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಯತ್ನಾಳ್ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು.

ಕೋರ್ ಕಮಿಟಿ ಸಭೆಯಲ್ಲಿ ಚರ್ಚೆ: ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಳ್ಳುತ್ತಿರುವ ಎಸ್.ಟಿ.ಸೋಮಶೇಖರ್ ಸೇರಿ ನಮ್ಮ ಪಕ್ಷದ ನಾಯಕರ ವಿರುದ್ಧವೇ ಹೇಳಿಕೆ ನೀಡುತ್ತಿರುವ ಮುಖಂಡರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕೆಂದು ಹಿರಿಯರ ಅಪೇಕ್ಷೆ ಇದೆ. ಹಾಗಾಗಿ, ಡಿ.7ರಂದು ನಡೆಯಲಿರುವ ಕೋರ್ ಕಮಿಟಿಯಲ್ಲಿ ಇದರ ಬಗ್ಗೆ ಚರ್ಚಿಸಲಿದ್ದೇವೆ ಎಂದರು.

ಯತ್ನಾಳ್ ಗೆ ನೋಟಿಸ್ ಕೊಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈಗಾಗಲೇ ಹೈಕಮಾಂಡ್ ಗಮನಕ್ಕೆ ಬಂದಿದೆ, ಅವರಿಗೆ ನೋಟಿಸ್ ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ಹೆಚ್ಚಿನ ಹೇಳಿಕೆ ಕೊಡುವುದಿಲ್ಲ, ಅಂತಿಮವಾಗಿ ಕೇಂದ್ರ ವರಿಷ್ಠರು ಏನು ನಿರ್ಧಾರ ಕೈಗೊಳ್ಳುತ್ತಾರೆ ಅದಕ್ಕೆ ನಾವು ಬದ್ಧ ಎಂದು ಸ್ಪಷ್ಟಪಡಿಸಿದರು.

ಕಲಬುರಗಿಯಲ್ಲಿ ಬುಧವಾರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ವಕ್ಫ್ ವಿರುದ್ಧ ಭಾರಿ ಮೆರವಣಿಗೆ ನಡೆಯಿತು..

ಪಿಜಿ ವೈದ್ಯಕೀಯ ಕೋರ್ಸ್ 2ನೇ ಸುತ್ತಿನ ಸೀಟು ಹಂಚಿಕೆ: ವೇಳಾಪಟ್ಟಿ ಬಿಡುಗಡೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ನ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹರಿಗೆ ಅವರ ರಾಂಕ್ ಆಧಾರದ ಮೇಲೆ ಕೆಇಎ ಕಚೇರಿಯಲ್ಲಿ ಮೂಲ ದಾಖಲೆ ಸಲ್ಲಿಸಲು ಡಿ.6 ರಿಂದ 17ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾತನಾಡಿ, ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಚಾಯ್ಸ್-2 ಆಯ್ಕೆ ಮಾಡಿ ಶುಲ್ಕ ಪಾವತಿಸಿರುವವರು ಹಾಗೂ ಯಾವುದೇ ಸೀಟು ಹಂಚಿಕೆಯಾಗದೇ ಇರುವವರು ಮೂಲ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ ಎಂದು ತಿಳಿಸಿದರು.

ಚಾಯ್ಸ್- 2 ಮತ್ತು 3 ಅನ್ನು ಆಯ್ಕೆ ಮಾಡಿಕೊಂಡವರು ಡಿ.6, 7 ಮತ್ತು 9 ರಂದು ದಾಖಲೆ ಸಲ್ಲಿಸಬೇಕು. ಸೀಟು ಹಂಚಿಕೆಯಾಗದವರು ಡಿ.10ರಿಂದ 17ರವರೆಗೆ ದಾಖಲೆ ಸಲ್ಲಿಸಬೇಕು. ನಿಗದಿತ ದಿನಾಂಕಗಳಂದು ಮೂಲ ದಾಖಲೆ ಸಲ್ಲಿಸದಿದ್ದಲ್ಲಿ 2ನೇ ಸುತ್ತಿನ ಸೀಟು ಹಂಚಿಕೆಗೆ ಅಂತಹವರನ್ನು ಪರಿಗಣಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪಿಜಿಸಿಇಟಿ ಶುಲ್ಕ ಪಾವತಿಗೆ ಡಿ.6 ಕೊನೆ ದಿನ: ಎಂಬಿಎ, ಎಂಸಿಎ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ 2ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದವರಿಗೆ ಶುಲ್ಕ ಪಾವತಿಸಲು ಡಿ.6ರವರೆಗೆ ದಿನಾಂಕ ವಿಸ್ತರಿಸಲಾಗಿದೆ. ಪ್ರವೇಶಪತ್ರ ಡೌನ್ ಲೋಡ್ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಳ್ಳಲು ಡಿ.7 ಕೊನೆ ದಿನವಾಗಿದೆ. ಇದರ ನಂತರ ಯಾವುದೇ ಕಾರಣಕ್ಕೂ ವಿಸ್ತರಣೆ ಮಾಡುವುದಿಲ್ಲ ಎಂದಿದ್ದಾರೆ.

ಇಡಿ ನಡೆಗೆ ಸಿಎಂ ಕಿಡಿ

← ಮೊದಲಪುಟದಿಂದ

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಈಗಾಗಲೇ ಹಲವರನ್ನು ವಿಚಾ ರಣೆಗೆ ಒಳಪಡಿಸಿದೆ. ಇದೇ ರೀತಿ ಲೋಕಾಯುಕ್ತವೂ ವಿಚಾರಣೆ ನಡೆಸುತ್ತಿದೆ. ಆದ್ದರಿಂದ ಗೊಂದಲ ಸೃಷ್ಟಿಯಾ ಗದಿರಲಿ ಎನ್ನುವ ಕಾರಣಕ್ಕೆ ಈ ರೀತಿ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ ಎನ್ನುವ ಮಾತುಗಳನ್ನು ಬಿಜೆಪಿ ನಾಯಕರು ಸಮರ್ಥಿಸಿಕೊಂಡಿದ್ದಾರೆ.

ರಾಜಕೀಯ ಕುತಂತ್ರವೆಂದ ಕೈ ನಾಯಕರು: ಇಡಿ ನೀಡಿರುವ ವರದಿಯ ಮಾಹಿತಿಯನ್ನು ಬಿಡುಗಡೆ ಮಾಡಿರುವುದಕ್ಕೆ ಕಾಂಗ್ರೆಸ್ ನಾಯಕರು ಕೆಂಡಕಾರಿದ್ದು, ರಾಜಕೀಯ ಕಾರಣಕ್ಕೆ ಈ ರೀತಿ ಮಾಡುತ್ತಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ ಅವರು, ಇಡಿ, ಸಿಬಿಐ, ಐಟಿ ಸಂಸ್ಥೆಗಳು ಕೇಂದ್ರ ಸರಕಾರದ ಕೈಗೊಂಬೆಗಳಾಗಿವೆ ಎಂದು ಟೀಕಿಸಿದರೆ, ಗೃಹ ಸಚಿವ ಪರಮೇಶ್ವರ, ಲೋಕಾಯುಕ್ತ ತನಿಖೆ ಪ್ರಗತಿಯಲ್ಲಿರುವಾಗ ಈ ಮಧ್ಯಂತರ ವರದಿ ನೀಡುವ ಅಗತ್ಯವೇನಿತ್ತು? ಎಂದು ಪ್ರಶ್ನಿಸಿದ್ದಾರೆ.

ಬಣದಾಟಕ್ಕೆ ಬಿಳಿ ಬಾವುಟ?

← ಮೊದಲಪುಟದಿಂದ

ಶಿಸ್ತು ಸಮಿತಿಯ ವಿಚಾರಣೆ ಮುಗಿಸಿ ದೆಹಲಿಯಲ್ಲಿ ಮಾತನಾಡಿದ ಬಸನಗೌಡ ಪಾಟೀಲ ಯತ್ನಾಳ, ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ, ಕೆಲವರು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಬಹಿರಂಗವಾಗಿ ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಈ ಬಗ್ಗೆ ನಾವು ಆರು ಪುಟಗಳ ದೂರು ನೀಡಿದ್ದೇನೆ ಎಂದಿದ್ದಾರೆ. ಪಕ್ಷದ ಶಿಸ್ತು ಉಲ್ಲಂಘನೆ ಹಿನ್ನೆಲೆಯಲ್ಲಿ ಕಾರಣ ಕೇಳಿ ನೀಡಿದ ಶೋಕಾಸ್ ನೋಟಿಸ್‌ಗೆ ಉತ್ತರ ನೀಡಿದ್ದೇನೆ. ನಮ್ಮ ಅಳಲು ಹೈಕಮಾಂಡ್ ಗಮ ನಕ್ಕೆ ತಂದಿದ್ದೇವೆ. ನಾವು ಯಾರು ಕೂಡ ಎಲ್ಲಿಯೂ ಯಡಿಯೂರಪ್ಪ ಹಾಗೂ ಅವರ ಕುಟುಂಬದ ವಿರುದ್ಧ ಬಿಟ್ಟು ಬೇರೆ ಯಾರ ಬಗ್ಗೆಯೂ ಮಾತನಾಡಿಲ್ಲ. ನಮ್ಮ ರಾಜ್ಯದಲ್ಲಿ ಬಿಜೆಪಿ ಬಲಿಷ್ಠವಾಗಬೇಕಾ ದರೆ ಭ್ರಷ್ಟಾಚಾರ ರಹಿತ, ಕುಟುಂಬ ರಹಿತವಾಗಿರಬೇಕು. ಪ್ರಖರ ಹಿಂದುತ್ವದ ನಾಯಕನಾಗಿರಬೇಕು ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ. ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ. ಎಲ್ಲವೂ ಸುಖಾಂತ್ಯವಾಗಲಿದ್ದು, ಕಾರ್ಯಕರ್ತರಿಗೆ ಸಂತೋಷವಾಗುವ ತೀರ್ಮಾನವನ್ನು ವರಿಷ್ಠರು ಮಾಡುತ್ತಾರೆ.
ಆರ್.ಅಶೋಕ, ಪ್ರತಿಪಕ್ಷ ನಾಯಕ

ಡಿ.7 ರಂದು ತೀರ್ಮಾನ ಆಗಲು ಉಸ್ತುವಾರಿಗಳ ಕೈಯಲ್ಲಿ ಏನೂ ಇಲ್ಲ. ಏನೇ ಆದರೂ ಜೆ.ಪಿ.ನಡ್ಡಾ ತೀರ್ಮಾನ ಮಾಡಬೇಕು. ಉಸ್ತುವಾರಿಗಳು ವರದಿ ಪಡೆದು ಹೈಕಮಾಂಡ್‌ಗೆ ವರದಿ ಕೊಡಬೇಕು ಅಷ್ಟೇ. ಆರ್.ಅಶೋಕ ಅವರ ಜತೆ ಮಾತನಾಡಿದ್ದೆ. ದೆಹಲಿಗೆ ಹೋಗುತ್ತಾರೆ ಅಂತ ನನಗೆ ಗೊತ್ತಿರಲಿಲ್ಲ. ನಾವೆಲ್ಲರೂ ಮಾತನಾಡುವುದು ಸರಿ ಇದೆ ಅಂತ ಅಶೋಕ ಹೇಳಿದ್ದಾರೆ. ಪರಿಹಾರ ಇದ್ದೇ ಇದೆ, ಎಲ್ಲರೂ ತಾಳ್ಮೆಯಿಂದ ಇರಬೇಕು.
- ಡಿ.ವಿ.ಸದಾನಂದಗೌಡ, ಮಾಜಿ ಮುಖ್ಯಮಂತ್ರಿ

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಾರ್ಯಾಲಯ, ಕಲಬುರಗಿ
ಎನ್.ಹೆಚ್.ಎಂ/ಆರ್.ಸಿ.ಹೆಚ್.ಓ/ಕ/67/2024-25 ದಿನಾಂಕ: 03/12/2024

:: ಟೆಂಡರ ಪ್ರಕಟಣೆ ::

ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು (https://kppp.karnataka.gov.in/) ಪೋರ್ಟಲ್ ಮುಖಾಂತರ ಟೆಂಡರ ಆಹ್ವಾನ

ವಿವರ: 1) ಸರಕು: **ಎನ್.ಹೆಚ್.ಎಂ ಅಡಿಯಲ್ಲಿ ಹೊರ ಮಾನವ ಸಂಪನ್ಮೂಲದಡಿಯಲ್ಲಿ 200 ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು,** 2) ಟೆಂಡರ್ ಅಂದಾಜು ಮೊತ್ತ: **ಒಟ್ಟು ಟೆಂಡರ ಮೊತ್ತ ರೂ: 4,16,51,781/- (ನಾಲ್ಕು ಕೋಟಿ ಹದಿನಾರು ಲಕ್ಷ ಐವತ್ತೊಂದು ಸಾವಿರದ ಏಳು ನೂರ ಎಂಬತ್ತೊಂದು ರೂ ಗಳು ಮಾತ್ರ),** 3) ಟೆಂಡರ್‌ದೊಂದಿಗೆ e-Procurement Cell ಇವರಿಗೆ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ 2% : ರೂ. 8,33,036/- (ಎಂಟು ಲಕ್ಷ ಮೂವತ್ತೂರು ಸಾವಿರ ಮೂವತ್ತಾರು ಮಾತ್ರ), 4) ಟೆಂಡರದಾರರು ಆನ್-ಲೈನ್ (https://kppp.karnataka.gov.in/) ನಲ್ಲಿ ಬಿಡ್'ಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ: **5.12.2024, 10.00 ಗಂಟೆ ನಂತರ,** 5) ಪ್ರೀ ಬಿಡ್ ಸಭೆ ದಿನಾಂಕ: **17.12.2024, 11.00 ಗಂಟೆಗೆ,** 6) ಟೆಂಡರದಾರರು ಆನ್-ಲೈನ್ ಮೇಲೆ ಬಿಡ್'ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **04.01.2025 ಸಾಯಂಕಾಲ : 4:00 ಗಂಟೆ,** 7) ತಾಂತ್ರಿಕ ಟೆಂಡರ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: **06.01.2025 ಸಾಯಂಕಾಲ: 4:30 ಗಂಟೆ,** 8) ಹಣಕಾಸಿನ ಟೆಂಡರ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 13.01.2025 ಮಧ್ಯಾಹ್ನ: 1:00 ಗಂಟೆ,** 9) ಟೆಂಡರ ತೆರೆಯುವ ಸ್ಥಳ ಮತ್ತು ಪ್ರಾಧಿಕಾರ ಮತ್ತು ವಿವರ ಪಡೆಯಬೇಕಾದ ವಿಳಾಸ & ದೂರವಾಣಿ ಸಂಖ್ಯೆ: ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಆರೋಗ್ಯ & ಕು.ಕ.ಸಂಘ, & ಜಿಲ್ಲಾ ಆರ್.ಸಿ.ಹೆಚ್‌ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕಲಬುರಗಿ-08472-278620

ಸಹಿ/- ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕು.ಕ ಸಂಘ ಹಾಗೂ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/685/ಕೆ.ಎಸ್.ಎಂ.ಸಿ.&ಎ/2024-25

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ (ಪಿ.ಎಂ.ಜಿ.ಎಸ್.ವೈ), ಚಿಕ್ಕಬಳ್ಳಾಪುರ
#441, 3 ನೇ ಮಹಡಿ, ಐ.ಡಿ.ಎಸ್.ಎಂ.ಟಿ ಬಡಾವಣೆ, ಎ.ಪಿ.ಎಂ.ಸಿ ಹಿಂದಿನ ಬಾಗಿಲು, ಚಿಕ್ಕಬಳ್ಳಾಪುರ-562101, ಇ-ಮೇಲ್: pmgsycbp@gmail.com, ದೂರವಾಣಿ ಸಂಖ್ಯೆ: 08156-274638
ಸಂಖ್ಯೆ: ಕಾಪಾಅ/ಯೋವಿ/ಚಿಪುರ/ ಟೆಂಡರ್/2ನೇ ಕರೆ/2024-25/412 ದಿನಾಂಕ:21.11.2024

ಮರು ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಚಿಕ್ಕಬಳ್ಳಾಪುರ ಪಿ.ಎಂ.ಜಿ.ಎಸ್.ವೈ ಕಛೇರಿಯಿಂದ ಐಟಂ ರೇಟ್ ದರಗಳಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದ್ವಿ-ಲಕೋಟೆಯಲ್ಲಿ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳನ್ನು ಕರೆದಿದ್ದು, ಈ ಯೋಜನೆಯು ಸಂಪೂರ್ಣವಾಗಿ ರಾಜ್ಯ ಸರ್ಕಾದ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.

ಕ್ರಮ ಸಂಖ್ಯೆ	ಯೋಜನೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ರೂ.ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿ)
1	5054 ಮುಖ್ಯ ಮಂತ್ರಿಗಳ ವಿಶೇಷ ಅನುದಾನ (5054-03-337-075-059)	846.46	12.70	11 ತಿಂಗಳು

ಟೆಂಡರ್ ಪಕಿಯೆಯ ವಿವರಗಳು ಕೆಳಕಂಡಂತಿವೆ: (1) ಆನ್ ಲೈನ್ ಮುಖಾಂತರ ಬಿಡ್ ಸಲ್ಲಿಸಲು ಪ್ರಾರಂಭ **ದಿನಾಂಕ: 26.11.2024 , 11.00 ಘಂಟೆಗೆ.** (2) ಪ್ರಿ-ಬಿಡ್ ಸಭೆ **ದಿನಾಂಕ: 02.12.2024, 11.00 ಘಂಟೆಗೆ.** (3) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ: 10.12.2024, 16.30 ಘಂಟೆಗೆ.** (4) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 11.12.2024, 16.35 ಘಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 12.12.2024, 10.30 ಘಂಟೆಗೆ** ಅಥವಾ ಈ ಟೆಂಡರ್‌ನ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ. (1) ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಒಂದನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. (2) ಕೆಆರ್‌ಆರ್‌ಡಿಎ ವತಿಯಿಂದ ಕೈಗೊಂಡ ಕಾಮಗಾರಿ ಪೂರ್ಣಗೊಳಿಸದೇ ಗುತ್ತಿಗೆ ರದ್ದುಪಡಿಸಲಾದ (terminate) ಅಥವಾ ರಸ್ತೆ ನಿರ್ವಹಣೆ ಗುತ್ತಿಗೆ ಕಾಮಗಾರಿಗಳನ್ನು ನಿರ್ವಹಣೆ ಮಾಡದಿರುವುದರಿಂದ ಗುತ್ತಿಗೆ ರದ್ದಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. (3) ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು. (4) ಕೆಳಗೆ ಸಹಿ ಮಾಡಿರುವವರಿಗೆ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ/ಮುಂದೂಡುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ. (5) ಈ ಪ್ಯಾಕೇಜ್ ಕಾಮಗಾರಿಯ ಟೆಂಡರ್‌ನ ಸಂಪೂರ್ಣ ಮಾಹಿತಿಯನ್ನು https://kppp.karnataka.gov.in ರಿಂದ ಪಡೆಯಬಹುದಾಗಿರುತ್ತದೆ.

ಸಹಿ/- ಟೆಂಡರಿಂಗ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ (ಪಿ.ಎಂ.ಜಿ.ಎಸ್.ವೈ), ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:298/ಕೆಎಸ್‌ಎಂಸಿಎ/2024-25

ಪಟ್ಟಣ ಪಂಚಾಯತ ಕಾರ್ಯಾಲಯ ಕಲಘಟಗಿ
TPK/JE/TenderCall/SFC-15th/2024-25/12 ದಿನಾಂಕ:30-11-2024

:ಟೆಂಡರ ಪ್ರಕಟಣೆ:

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999 ಮತ್ತು (ತಿದ್ದುಪಡಿ) 2001 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಇ-ಪ್ರೊಕ್ಯುರೆಮೆಂಟನಲ್ಲಿ ನೊಂದಣಿ ಮಾಡಿಸಿದ ಅರ್ಹ ಗುತ್ತಿಗೆದಾರರಿಂದ ವಿವಿಧ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿದ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ ಡ್ವಾಕ್ಯುಮೆಂಟ್‌ರನ್ವಯ ಇಂಡೆಂಟ ನಂ : 27021/ Call-2, 21882/ Call-2 & 134773/Call-2 ಗಳಿಗೆ ಇ-ಪ್ರೊಕ್ಯುರೆಮೆಂಟ್ (E-Procurement) ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್‌ಜಾಲ ವಿಳಾಸ: https://kppp.karnataka.gov.in/ ದಲ್ಲಿ ತಿಳಿದುಕೊಳ್ಳಬಹುದಾಗಿದೆ.

1. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: **19-12-2024 ರಂದು ಸಂಜೆ 5.00 ಗಂಟೆಗೆ**
2. ಟೆಂಡರ ತೆರೆಯುವ ದಿನಾಂಕ: **21-12-2024ರಂದು ಬೆಳಿಗ್ಗೆ 11.00 ಗಂಟೆಗೆ**

ಸಹಿ/- ಅಧ್ಯಕ್ಷರು, ಪಟ್ಟಣ ಪಂಚಾಯತ, ಕಲಘಟಗಿ
ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಕಲಘಟಗಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)
ಕ್ರಸಂ: ಅ.ಇಂ(ವಿ)/ಪ್ರ(ನಿ)/ಬೆಂ.ಗ್ರಾ.ಕ್ಷೇ.ವ/ಸ.ಕಾ.ಇಂ.(ಕಾ)/ಕಿ.ಇಂ(ಕಾ)/2024-25/4160-63 ದಿನಾಂಕ: 04.12.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕ.ವಿ.ಪ್ರ.ನಿ.ನಿ ಯ ಪ್ರಸರಣ (ನಿರ್ವಹಣೆ) ವೃತ್ತ, ಬೆಂ.ಗ್ರಾ.ಕ್ಷೇ.ವ, ಕ.ವಿ.ಪ್ರ.ನಿ.ನಿ., ಬೆಂಗಳೂರು ವೃತ್ತದ ವ್ಯಾಪ್ತಿಯಲ್ಲಿ ಬರುವ 01 ಸಂಖ್ಯೆ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಯ (R&M Work) ಟೆಂಡರ್ ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗೆ ಕ.ವಿ.ಪ್ರ.ನಿ.ನಿ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "E Procurement KPTCL"ಗೆ ಅಥವಾ ನೇರವಾಗಿ KPP-ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 09.12.2024 ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ), ಬೆಂ.ಗ್ರಾ.ಕ್ಷೇ.ವ., ಕವಿಪ್ರನಿನಿ, ಯು.ಎ.ಎಸ್ ಕ್ಯಾಂಪಸ್, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024. ದೂರವಾಣಿ: 080-23513952, 23415347.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029ಫೋನ್: 26096832/822/910 ಫ್ಯಾಕ್ಸ್: 080-25536105 ಇ-ಮೇಲ್: purchase@kmf.coop
ಅ ಸಂ: ಕಹಾಮ/ಖರೀದಿ/ಟೆಂಡರ್-720/2024-25 ದಿನಾಂಕ: 02.12.2024

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ವ್ಯಾಪ್ತಿಯ ಘಟಕವಾರು ಪಶು ಆಹಾರ ಕಾರ್ಖಾನೆಗಳಲ್ಲಿ ಉಪಯೋಗಿಸಿದ ಹಳೆಯ ಗೋಣಿ ಚೀಲಗಳನ್ನು ಮತ್ತು ಹಳೆಯ ಪ್ಲಾಸ್ಟಿಕ್ ಚೀಲಗಳನ್ನು ಆರು ತಿಂಗಳ ಅವಧಿಗೆ ಎತ್ತುವಳಿ ಮಾಡುವ ಸಂಬಂಧ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ ಸಂ.	ವಿವರ	ಪಶು ಆಹಾರ ಘಟಕ	ಇ.ಎಂ.ಡಿ (ರೂ.)
1	ಹಳೆಯ ಗೋಣಿ ಚೀಲಗಳು	ರಾಜನಕುಂಟೆ	49,000/-
2		ಗುಬ್ಬಿ	85,000/-
3		ಧಾರವಾಡ	48,000/-
4		ಶಿಕಾರಿಪುರ	82,000/-
5		ಹಾಸನ	1,74,000/-
01	ಹಳೆಯ ಪ್ಲಾಸ್ಟಿಕ ಚೀಲಗಳು	ಶಿಕಾರಿಪುರ	23,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 18.12.2024 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಪ್ರಾದೇಶಿಕ ವಿಭಾಗ, ಸಾಗರ, ವಿನೋಭನಗರ, ಸಾಗರ-577401.
Ph: 08183-226071 Emai.: dcfsagar123@gmail.com
ಕ್ರ:ಬಿ5/ಎಸ್‌ಎಎಸ್/ಇ-ಹರಾಜು/ಸಿಆರ್-11/2024-25 ದಿ: 22.11.2024

ನಾಟಾ/ಸೌದೆ/ಬಿಲ್ಲೇಟ್ಸ್/ಪೋಲ್ಸ್ ಮುಂತಾದ ಅರಣ್ಯ ಉತ್ಪನ್ನಗಳನ್ನು ಇ-ಹರಾಜು ಮೂಲಕ ವಿಲೇ ಮಾಡುವ ಬಗ್ಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಸಾಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಹೊಸನಗರ ವಲಯದ, ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ ಲಭ್ಯವಿರುವ ನಾಟಾ/ಸೌದೆ/ಬಿಲ್ಲೇಟ್ಸ್/ಪೋಲ್ಸ್ ಮುಂತಾದ ಅರಣ್ಯ ಉತ್ಪನ್ನಗಳನ್ನು ಇ-ಹರಾಜು ಮೂಲಕ ವಿಲೇಗೊಳಿಸಲು ದಿನಾಂಕ:12.12.2024 ರಂದು ದಿನಾಂಕ ನಿಗದಿಗೊಳಿಸಿದ್ದು, ಸದರಿ ಇ-ಹರಾಜು ಮಾರಾಟ ಪ್ರಕಟಣೆಯನ್ನು ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:22.11.2024ರಲ್ಲಿ ಪ್ರಕಟಿಸಿದ್ದು, ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಎಲ್ಲಾ ಷರತ್ತಿಗೊಳಪಟ್ಟು, ಆಸಕ್ತ ಖರೀದಿದಾರರು ಇ-ಹರಾಜಿನಲ್ಲಿ ಭಾಗವಹಿಸಿ, ಹರಾಜಿಗಿಟ್ಟಿರುವ ಲಾಟುಗಳನ್ನು ಖರೀದಿಸಬಹುದಾಗಿರುತ್ತದೆ. ಇ-ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ ಸಂಖ್ಯೆ: www.msteecommree.com ಮತ್ತು www.etimber.in ಮೂಲಕ ಪಡೆದು ಕೊಳ್ಳಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/24-25/14/12/1160

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001. ದೂರವಾಣಿ: +91-0821-2520512
ಇಮೇಲ್: mmcrimysore@yahoo.com, ವೆಬ್‌ಸೈಟ್: www.mmcri.karnataka.gov.in
ಸಂಖ್ಯೆ: ಸರಬ/ವಿವ/279/2024-25 ದಿನಾಂಕ: 02.12.2024

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿಷಯ : **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಗಳಿಗೆ ಔಷಧಿ (ಫ್ಯಾಕ್ಟರ್ಸ್, ಕಿಟ್ಸ್ & ಇತರೆ ಪದಾರ್ಥಗಳನ್ನು) ಖರೀದಿಸಲು** ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 - ನಿಯಮ 2000ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ **ಸಹ ಆಸ್ಪತ್ರೆಗಳಾದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಪಿ.ಕೆ.ಟಿ.ಬಿ. ಮತ್ತು ಸಿ.ಡಿ. ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಔಷಧಿ (ಫ್ಯಾಕ್ಟರ್ಸ್, ಕಿಟ್ಸ್ & ಇತರೆ ಪದಾರ್ಥಗಳನ್ನು) ಒಂದು ವರ್ಷದ ಅವಧಿಗೆ ಖರೀದಿಸಲು** ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಮೂಲಕ **ದಿನಾಂಕ 06.12.2024** ರಿಂದ ಪಡೆಯಬಹುದಾಗಿದ್ದು, **ದಿನಾಂಕ 20.12.2024 ರಂದು ಅಪರಾಹ್ನ 5.00** ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/- ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
DIPR/MYS/KAVITA/905/2024-25

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾನು ಬಡತನ ರೇಖೆಗಿಂತ ಕೆಳಗಿಲ್ಲ. ಹೀಗಾಗಿ ಅನ್ನಭಾಗ್ಯ ನನಗೆ ಸಿಗಬಾರದು. ನನ್ನಂಥವರಿಗೆ ಅನ್ನಭಾಗ್ಯ ಸಿಗಬಾರದು ಎನ್ನುವ ಉದ್ದೇಶಕ್ಕಷ್ಟೇ ಅನರ್ಹರ ಬಿಪಿಎಲ್ ಕಾರ್ಡ್ ಎಪಿಎಲ್‌ಗೆ ಬದಲಾಗಿದೆ. ತೆರಿಗೆ ಕಟ್ಟುವವರಿಗೆ ಅನ್ನಭಾಗ್ಯದ ಅಗತ್ಯ ಇಲ್ಲ ಅಲ್ಲವೇ..?

ರೇಣುಕಾಪ್ರಸಾದ್, ಬೆಂಗಳೂರು

ಹಾಗೇನೇ ಮೀಸಲಾತಿ ಕೂಡ ಆಗಬೇಕು ಸರ್. ಮೀಸಲಾತಿ ಪಡೆದುಕೊಂಡು ಸ್ಥಿತಿವಂತರಾದವರ ಮಕ್ಕಳಿಗೆ ಮತ್ತೆ ಮೀಸಲಾತಿ ಬೇಕಾ ಸರ್..?

ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್‌ಗೆ ವರದಿ ಸಲ್ಲಿಸಿದ ಯತ್ನಾಳ್ ಬಣ | ವಕ್ಫ್ ವಿರುದ್ಧ ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ನಾಯಕರು | ಮುಂದಿನ ದಿನದಲ್ಲಿ ಸಂತ್ರಸ್ತರಿಂದ ಹೇಳಿಕೆ ಪಡೆಯುವ ಸಾಧ್ಯತೆ

ವಕ್ಫ್ ವರದಿ; ಜನವರಿಯಲ್ಲಿ ಮತ್ತೆ ಬುಲಾವ್?

ಬೆಂಗಳೂರು: ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಡೆದ ಜನಜಾಗೃತಿ ಯಾತ್ರೆ ಮಧ್ಯಂತರ ವರದಿಯನ್ನು ವಕ್ಫ್ ತಿದ್ದುಪಡಿ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್‌ಗೆ ಸಲ್ಲಿಸಲಾಗಿದೆ.

ಕೇಂದ್ರ ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್,ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಏಳು ಜಿಲ್ಲೆಗಳಲ್ಲಿ ನಡೆದ ಮೊದಲ ಹಂತದ ವಕ್ಫ್ ಜನಜಾಗೃತಿ ಯಾತ್ರೆಯ ಬಳಿಕ ಮಧ್ಯಂತರ ವರದಿಯನ್ನು ಸಿದ್ಧಪಡಿಸಲಾಗಿತ್ತು. ಏಳು ಜಿಲ್ಲೆಗಳಲ್ಲಿ ಸುಮಾರು ಒಂದುವರೆ ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಭೂಮಿಯನ್ನು ವಕ್ಫ್ ತನ್ನದೆಂದು ಘೋಷಿಸಿದೆ ಎಂದು ಆರೋಪಿಸಿ ದೂರು ನೀಡಿದ್ದರು. ಈ ಎಲ್ಲ ದೂರುಗಳನ್ನು ಸಂಗ್ರಹಿಸಿ, ಮಧ್ಯಂತರ ವರದಿಯನ್ನು ಸಿದ್ಧಪಡಿಸಲಾಗಿದೆ.

ಬೀದರ್, ಕಲಬುರಗಿ, ಬಾಗಲಕೋಟೆ, ರಾಯಚೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ವಕ್ಫ್‌ನಿಂದ ಸಮಸ್ಯೆಗೊಳಗಾದ ರೈತರು, ಮಠ-ಮಂದಿರಗಳು, ದಲಿತ-ಹಿಂದುಳಿದ ಸೇರಿದಂತೆ ಸಂತ್ರಸ್ತರ ಹಿಂದೂಗಳ ಮತ್ತು ಅವರ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಅವರಿಂದ ಮಾಹಿತಿಯನ್ನು ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಂಗಳವಾರ ರಾತ್ರಿ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಹಾಗೂ ಇತರೆ ಸದಸ್ಯರನ್ನು ಭೇಟಿಯಾದ ನಿಯೋಗ, ಬಿಜೆಪಿ ಪಕ್ಷದ ವತಿಯಿಂದ ನಡೆದಿರುವ ಈ ಜನಜಾಗೃತಿ ಯಾತ್ರೆಯಲ್ಲಿ ಸಿಕ್ಕಿರುವ ಅಂಶಗಳ ಮಧ್ಯಂತರ ವರದಿಯನ್ನು ಸಲ್ಲಿಕೆ ಮಾಡಲಾಯಿತು. ಈ ವೇಳೆ ಅರವಿಂದ ಲಿಂಬಾವಳಿ ಅವರು ಆರಂಭಿಸಿರುವ ವಾರ್ ರೂಂ ಹಾಗೂ ಈ ಜನಜಾಗೃತಿ ರ್‍ಯಾಲಿಯ ಬಗ್ಗೆ ಮಾಹಿತಿ ನೀಡಲಾಯಿತು. ನಾಯಕರ ಈ ನಡೆಯನ್ನು ಜಗದಾಂಬಿಕ ಪಾಲ್ ಶ್ಲಾಘಿಸಿದ್ದು, ಈ ವರದಿಯ ಅಂಶಗಳನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸುವ ವರದಿಯಲ್ಲಿ ಸೇರಿಸುವ ವರದಿಯಲ್ಲಿ ಸೇರಿಸಲಾಗುವುದು ಎನ್ನುವ ಭರವಸೆಯನ್ನು ನೀಡಿದ್ದಾರೆ ಎನ್ನಲಾಗಿದೆ.

ಸಂತ್ರಸ್ತರ ಭೇಟಿ ಸಾಧ್ಯತೆ: ಇನ್ನು ವಕ್ಫ್ ಬೋರ್ಡ್‌ನ ಆಸ್ತಿ ಘೋಷಣೆಯ ಕಾಯಿದೆಯಿಂದಾಗಿ ಏಳು ಜಿಲ್ಲೆಗಳಲ್ಲಿಯೇ ಸುಮಾರು ಒಂದುವರೆ ಸಾವಿರಕ್ಕೂ ಹೆಚ್ಚು ರೈತರು ದೂರು ನೀಡಿದ್ದಾರೆ. ಇದರಲ್ಲಿ ಕೇವಲ ರೈತರು ಮಾತ್ರವಲ್ಲದೇ, ಹಲವು ಸಂಘ ಸಂಸ್ಥೆ, ದೇವಾಲಯ, ಮಠ-ಮಾನ್ಯ, ಸರಕಾರಿ ಶಾಲೆಗಳ ಆಸ್ತಿಯೂ ಸೇರಿದೆ ಎಂದು ವಿವರಿಸಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಪಾಲ್ ಅವರು, ಮುಂದಿನ ದಿನದಲ್ಲಿ ಜಂಟಿ ಸದನ ಸಮಿತಿಯ ಸಭೆಯ ವೇಳೆ ನೋಟಿಸ್ ಪಡೆದವರಿಗೆ ಹಾಜರಾಗಲು ಹೇಳಲಾಗುವುದು. ಆಗ ಅವರನ್ನು ಕರೆತರುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಸದ್ಯ ಚಳಿಗಾಲದ ಅಧಿವೇಶನ ನಡೆಯುತ್ತಿರುವುದರಿಂದ ಜಂಟಿ ಸದನ ಸಮಿತಿ ಸುದೀರ್ಘ ಸಭೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಧಿವೇಶನದ ಬಳಿಕ ಡಿಸೆಂಬರ್ ಅಂತ್ಯಕ್ಕೆ ಅಥವಾ ಜನವರಿ ಆರಂಭದಲ್ಲಿ ಯತ್ನಾಳ್ ನೇತೃತ್ವದಲ್ಲಿ ರ್‍ಯಾಲಿ ನಡೆಸಿರುವ ನಾಯಕರಿಗೆ ಮತ್ತೊಮ್ಮೆ ಆಹ್ವಾನ ನೀಡಲಾಗುವುದು. ಆಗ ಸುದೀರ್ಘವಾಗಿ ಮತ್ತೊಮ್ಮೆ ಮಾಹಿತಿ ನೀಡಿ ಎಂದು ಹೇಳಿದ್ದಾರೆ. ಇದರೊಂದಿಗೆ ಈ ರೀತಿ ಜನಜಾಗೃತಿ ರ್‍ಯಾಲಿ ನಡೆಸಿ, ಈ ಪ್ರಮಾಣದಲ್ಲಿ ಅಂಕಿ-ಅಂಶವನ್ನು ಯಾವ ರಾಜ್ಯದಲ್ಲಿ ಮಾಡಿಲ್ಲ. ಈ ಕಾರ್ಯ ಮಾಡಿದ್ದಕ್ಕೆ ಇಡೀ ತಂಡಕ್ಕೆ ಪಾಲ್ ಶ್ಲಾಘಿಸಿದ್ದು, ಈ ವರದಿಯನ್ನು ಕೇಂದ್ರ ಸರಕಾರಕ್ಕೂ ಹಸ್ತಾಂತರಿಸುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.



ರಾಜ್ಯದಲ್ಲಿ ಕೈಗೊಂಡ ವಕ್ಫ್ ವಿರುದ್ಧ ಜನಜಾಗೃತಿ ಅಭಿಯಾನದ ವರದಿಯನ್ನು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ತಂಡ ದೆಹಲಿಯಲ್ಲಿ ಬುಧವಾರ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್‌ಗೆ ಸಲ್ಲಿಸಿತು. ಮಾಜಿ ಸಚಿವರಾದ ಅರವಿಂದ ಲಿಂಬಾವಳಿ ಮತ್ತು ರಮೇಶ್ ಜಾರಕಿಹೊಳಿ, ಶಾಸಕ ಬಿ.ಪಿ.ಹರೀಶ್, ಕುಮಾರ್ ಬಂಗಾರಪ್ಪ ಮೊದಲಾದವರು ಇದ್ದರು.

ರಾಜನಾಥ್ ಸಿಂಗ್‌ಗೆ ಪರಿಸ್ಥಿತಿ ವಿವರಣೆ

ಇನ್ನು ಬುಧವಾರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದ ಯತ್ನಾಳ್ ನಿಯೋಗ, ವಕ್ಫ್ ಸಮಸ್ಯೆಯ ಬಗ್ಗೆ ಚರ್ಚೆ ನಡೆಸಿದರು. ಇದರೊಂದಿಗೆ ರಾಜ್ಯ ಬಿಜೆಪಿಯಲ್ಲಾಗಿರುವ ಸಮಸ್ಯೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ವಿಜಯೇಂದ್ರ ಅವರ ಹೊಂದಾಣಿಕೆ ರಾಜಕೀಯದಿಂದ ಪಕ್ಷದ ಸಂಘಟನೆಗೆ ಭಾರಿ ಹೊಡೆತ ಬಿದ್ದಿದೆ. ಈ ಸಮಸ್ಯೆ ಬಗ್ಗೆ ಶೀಘ್ರವೇ ಪಕ್ಷದ ವರಿಷ್ಠರು ಗಮನಹರಿಸಬೇಕು ಎನ್ನುವ ಮನವಿ ಮಾಡಿದ್ದಾರೆ. ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿರುವ ರಾಜನಾಥ್ ಸಿಂಗ್, ರಾಜ್ಯದ ಸಮಸ್ಯೆಯ ಪೂರ್ಣ ಮಾಹಿತಿಯಿದೆ. ಈ ಬಗ್ಗೆ ಸೂಕ್ತ ವೇದಿಕೆಯಲ್ಲಿ ಚರ್ಚಿಸುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಇ.ಡಿ. ಎಂಬ ಸೀಳುನಾಯಿಯನ್ನು ಕಾಂಗ್ರೆಸ್ ವಿರುದ್ಧ ಛೂಬಿಟ್ಟ ಬಿಜೆಪಿ

ಬಿಜೆಪಿ ವಿರುದ್ಧ ಕೃಷ್ಣ ಬೈರೇಗೌಡ ವಾಗ್ದಾಳಿ

ಗದಗ: ಮುಡಾ ಹಗರಣ ಸಂಬಂಧಿಸಿದಂತೆ ಇಡಿ ಎಂಬ ಸೀಳುನಾಯಿಯನ್ನು ನಮ್ಮ ಮೇಲೆ ಬಿಟ್ಟಿದ್ದಾರೆ. ಇದು ರಾಜಕೀಯ ದಾಳಿ. ಇಡಿ ಎಂಬುದು ಎನ್ಫೋರ್ಸ್‌ಮೆಂಟ್ ಡೈರೆಕ್ಟರೇಟ್ ಅಲ್ಲ, ಅದು ರಾಜಕೀಯವಾಗಿ ವಿಚ್ ಹಂಟಿಂಗ್ ಏಜೆನ್ಸಿ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದ್ದಾರೆ.

ನಗರದಲ್ಲಿ ನಡೆದ ಡಿ.ಆರ್ ಪಾಟೀಲ ಗ್ರಂಥ ಬಿಡುಕಡೆ ಕಾರ್ಯಕ್ರಮ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ವಿರೋಧ ಪಕ್ಷಗಳನ್ನು ಗುರಿಮಾಡಲು ಇ.ಡಿ.ಯ ಮುಖ್ಯ ಉದ್ಯೋಗ. ಕರ್ನಾಟಕ ಉಪಚುನಾವಣೆಯಲ್ಲಿ 3 ಸ್ಥಾನ ಕಾಂಗ್ರೆಸ್ ಗೆದ್ದ ಮೇಲೆ, ಬಿಜೆಪಿಯವರಿಗೆ ಸಹಿಸಲು ಆಗುತ್ತಿಲ್ಲ ಎಂದು ದೂರಿದರು.

ರಾಜಕೀಯ ವಿರೋಧಿಗಳೇ ಟಾರ್ಗೆಟ್: ದೇಶದಲ್ಲಿ ಬಿಜೆಪಿಯವರು ಇಲ್ಲಿಯವರೆಗೆ ಬರೀ ರಾಜಕೀಯ ವಿರೋಧಿಗಳ ಮೇಲೆ ಕೇಸ್ ಹಾಕಿದ್ದಾರೆ. ಶ್ರೀಮಂತರ ಮೇಲೆ, ಕಪ್ಪುಹಣ ಇದ್ದವರ ಮೇಲೆ ಪ್ರಕರಣ ದಾಖಲಿಸಿದ್ದಾರಾ..? ಸ್ವಿಸ್ ಬ್ಯಾಂಕ್‌ನಲ್ಲಿ ದುಡ್ಡು ಇಟ್ಟವರ ಮೇಲೆ ಕೇಸ್ ಹಾಕಿದ್ದಾರಾ? ಇಂತಹ ಒಬ್ಬರ ಮೇಲೆ ಇ.ಡಿ. ಕೇಸ್ ಹಾಕಿರುವುದನ್ನು ತೋರಿಸಿ ಎಂದು ಪ್ರಶ್ನಿಸಿದರು.

ವಕ್ಫ್ ಹೋರಾಟಕ್ಕೆ ಟೀಕೆ

ವಕ್ಫ್ ಬೋರ್ಡ್ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಂಡ ಪ್ರತ್ಯೇಕ ಹೋರಾಟ ಕುರಿತು ಕೃಷ್ಣ ಬೈರೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯವರ ಅವಧಿಯಲ್ಲಿ 4 ಸಾವಿರ ಆಸ್ತಿಗಳನ್ನು ವಕ್ಫ್ ಖಾತೆಗೆ ಮಾಡಿಕೊಟ್ಟಿದ್ದಾರೆ. ಆಗ ಇವರೆಲ್ಲಾ ಎಲ್ಲಿ ಹೋಗಿದ್ರು? ಕಾಂಗ್ರೆಸ್ ಸರ್ಕಾರದ ಮೇಲೆ ಇರುವ ಜನರ ಅಭಿಮಾನ ಸಹಿಸಲಾಗದೆಸುಳ್ಳು ಸುದ್ದಿಗಳನ್ನು ಹಬ್ಬಿಸಿ, ಜನರ ಮನಸ್ಸು ಬೇರೆಡೆ ಸೆಳೆಯುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಅವರವರ ನಡುವೆಯೇ ಬಣ ರಾಜಕೀಯ ನಡೆಯುತ್ತಿದೆ. ಅವರ ಹೋರಾಟ ನಡೆಯುತ್ತಿರುವುದು ಅವರ ರಾಜಕೀಯ ಮೇಲಾಟಕ್ಕೆ ವಿನಃ ಬೇರೇನಲ್ಲ ಎಂದು ಸಚಿವರು ತರಾಟೆಗೆ ತೆಗೆದುಕೊಂಡರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಡೊಂಕಮಡು

ಸಮಸ್ಯೆಯೇನು..?

- ಡೊಂಕಮಡು ಗ್ರಾಮದ ಅಂಗನವಾಡಿ ಕಾರ್ಯಕರ್ತೆಯಿಂದ ಮಕ್ಕಳಿಗೆ ಕಳಪೆ ಆಹಾರ ಪೂರೈಕೆ
- **ಪರಿಹಾರ:** ಕಳಪೆ ಆಹಾರ ಪೂರೈಸಿದ್ದ ಅಂಗನವಾಡಿ ಕಾರ್ಯಕರ್ತೆಗೆ ನೋಟಿಸ್ ಜಾರಿಯಾಗಿದ್ದು, ಸೂಕ್ತ ಕ್ರಮಕ್ಕೆ ಸೂಚನೆ ನೀಡಲಾಗಿದೆ.

ಹಿಂದೂ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಮೆರವಣಿಗೆ

ಬಾಂಗ್ಲಾ ಹಿಂದೂಗಳ ರಕ್ಷಣೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದಿರುವ ದೌರ್ಜನ್ಯ ಖಂಡಿಸಿ ಮಂಗಳೂರಿನಲ್ಲಿ ಭಾರಿ ಪ್ರತಿಭಟನೆ ನಡೆಯಿತು.

ಮಂಗಳೂರು: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ನಡೆದಿರುವ ದೌರ್ಜನ್ಯ ಖಂಡಿಸಿ ಮಂಗಳೂರಿನಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಭಾರಿ ಮೆರವಣಿಗೆ ನಡೆಯಿತು. ಹಿಂದೂಗಳ ಮೇಲಿನ ದಾಳಿ ಮತ್ತು ದೌರ್ಜನ್ಯ ಕೂಡಲೇ ನಿಲ್ಲಬೇಕು; ಹಿಂದೂಗಳಿಗೆ ರಕ್ಷಣೆ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅಲ್ಲದೆ, ಸಾಧು-ಸಂತರ ರಕ್ಷಣೆ ಆಗಬೇಕು, ಮಾನವ ಹಕ್ಕು ರಕ್ಷಿಸಬೇಕು ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

ಹನುಮಾನ್ ಚಾಲೀಸಾ ಪಠಣ: ಮಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ದಿಂದ ಹೊರಟ ಮೆರವಣಿಗೆ ಮಿನಿ ವಿಧಾನಸೌಧದ ಎದುರು ಸಭೆಯಾಗಿ ಪರಿವರ್ತನೆಗೊಂಡಿತು. ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ಮಾಣಿಲ ಮಠದ ಮೋಹನದಾಸ ಸ್ವಾಮೀಜಿ, ವಿವಿಧ ಮಠಗಳ ಮಠಾಧೀಶರು, ಇಸ್ಕಾನ್ ಪ್ರಮುಖರು ಭಾಗವಹಿಸಿದ್ದ ಸಭೆಯಲ್ಲಿ ಸಾಮೂಹಿಕ ಹನುಮಾನ್ ಚಾಲೀಸ್ ಪಠಣ ನಡೆಯಿತು.

ವಕ್ಫ್ ಹಠಾವೋ ದೇಶ್ ಬಚಾವೋ: ನಮ್ಮ ಭೂಮಿ ನಮ್ಮ ಹಕ್ಕು | ಸರಕಾರದ ವಿರುದ್ಧ ಹೋರಾಟ: ಬಿವೈವಿ

ವಕ್ಫ್ ವಿರುದ್ಧ ಬೀದರ್‌ನಲ್ಲಿ ಬೃಹತ್ ಪ್ರತಿಭಟನೆ

ಬೀದರ್: ಮುಡಾ ಹಗರಣದ ವಿಷಯ ಸದನದಲ್ಲಿ ಚರ್ಚೆಗೆ ಅವಕಾಶ ಕೊಡಲಿಲ್ಲ. ಮುಖ್ಯಮಂತ್ರಿಯವರು ಹಗರಣ ಆಗಿಲ್ಲ, ಅಕ್ರಮ ನಡೆದಿಲ್ಲ ಎಂದಿದ್ದರು. ನಮ್ಮ ಪಾದಯಾತ್ರೆ ಬಳಿಕ ಸಿಎಂ ಸ್ಥಾನಕ್ಕೆ ಕುತ್ತು ಬರುವ ಭಯದಿಂದ 14 ನಿವೇಶನ ವಾಪಸ್ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ವಕ್ಫ್ ಬೋರ್ಡ್ ಭೂಕಬಳಿಕೆ ವಿರುದ್ಧ ಬೀದರ್‌ನಲ್ಲಿ ಹೋರಾಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮುಡಾದಲ್ಲಿನ ತಮ್ಮ ಪತ್ನಿಯ 14 ನಿವೇಶನಗಳು ವಾಪಸ್ ಕೊಡಲು 62 ಕೋಟಿ ಕೊಡಬೇಕು ಎಂದು ಮುಖ್ಯಮಂತ್ರಿ ಹೇಳಿದ್ದರು. ಬಿಜೆಪಿ ಹೋರಾಟದ ಫಲವಾಗಿ ಒಂದು ರುಪಾಯಿ ಪಡೆಯದೆ ಸೈಟ್ ಗಳನ್ನು ವಾಪಸ್ ಕೊಡಲು ಸಿಎಂ ಪತ್ನಿ ಪತ್ರ ಬರೆದಿದ್ದಾರೆ. ರೈತ ವಿರೋಧಿ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡುತ್ತಾ ಬಂದಿದ್ದು. ಜನರಿಗೆ ನ್ಯಾಯ ಕೊಡಲು ಮುಂದಾಗಿದ್ದೇವೆ ಎಂದರು.

ಪರಿಶಿಷ್ಟರ ಹಣ ದುರ್ಬಳಕೆ: ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಿಟ್ಟ ಅನುದಾನವು ಸಿದ್ದರಾಮಯ್ಯ ಸರಕಾರ ದುರ್ಬಳಕೆ ಮಾಡಿಕೊಂಡಿದೆ.ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ವಿರುದ್ಧ ಹೋರಾಟ ಕೈಗೊಳ್ಳಲಾಗಿದೆ. ಬಿಜೆಪಿ ಯಾವುದೇ ಕಾರಣಕ್ಕೂ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ರೈತರ ಪರ ಬೀದಿಗಿಳಿದು ಹೋರಾಟ ನಡೆಸಲಿದ್ದು, ಅವರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಪಕ್ಷ ರೈತರ ಬೆನ್ನಿಗಿದೆ ಎಂದರು.

ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನ ದುರ್ಬಳಕೆಯಾಗಿದೆ. ವಾಲ್ಮೀಕಿ ನಿಗಮದಲ್ಲಿ 187 ಕೋಟಿಯಲ್ಲ 97 ಕೋಟಿ ಹಗರಣ ವಾಗಿರುವುದಾಗಿ ಸದನದಲ್ಲೇ ಸಿಎಂ ಒಪ್ಪಿಕೊಂಡಿದ್ದಾರೆ. ರಾಜ್ಯದ ಜನತೆಗೆ ನ್ಯಾಯ ಒದಗಿಸಲು ಬಿಜೆಪಿ ನಿರಂತರ ಹೋರಾಟ ನಡೆಸಲಿದೆ ಎಂದು ವಿಜಯೇಂದ್ರ ಘೋಷಿಸಿದರು.

ಬೀದರ್‌ನಲ್ಲಿ ವಕ್ಫ್ ವಿರುದ್ಧ ನಡೆದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಡಿಸಿಎಂ ಅಶ್ವತ್ಥನಾರಾಯಣ, ಮಾಜಿ ಸಚಿವ ಬೈರತಿ ಬಸವರಾಜ ಮೊದಲಾದವರು ಭಾಗವಹಿಸಿದ್ದರು.

ಅಧಿಕಾರ ಶಾಶ್ವತವಲ್ಲ. ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿ ಇದ್ದಾಗ ರೈತರಿಗಾಗಿ ಸಾಕಷ್ಟು ಕೆಲಸ ಮಾಡಿದ್ದರು. ಅವರು ಈ ನಾಡಿನಲ್ಲಿ ಎಲ್ಲೇ ಹೋದರು ರೈತರು ನಮ್ಮ ಬಿಎಸ್ ವೈ ಎಂದು ಅಭಿಮಾನದಿಂದ ಹೇಳುತ್ತಾರೆ.

-ಬಿ. ವೈ.ವಿಜಯೇಂದ್ರ , ಬಿಜೆಪಿ ರಾಜ್ಯಾಧ್ಯಕ್ಷ

ಸುಳ್ಳು ಅಶ್ವಾಸನೆ ನೀಡುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಿದೆ. ರೈತರಿಗೆ ಮೋಸ ಮಾಡಿದೆ. ಒಂದು ಸಮುದಾಯ ಒಲೈಕೆ ಮಾಡುವ ನಿಟ್ಟನಲ್ಲಿ ಹಿಂದೂ ಮುಸ್ಲಿಂರ ಮಧ್ಯ ಬೆಂಕಿ ಹಚ್ಚಿದೆ. ರಾಜ್ಯದಲ್ಲಿ ವಿಜಯೇಂದ್ರ ಅವರು ಅಧ್ಯಕ್ಷರಾದ ನಂತರ ಪಕ್ಷ ಸಂಘಟನೆ ಬಲಗೊಂಡಿದೆ.

-ಪ್ರಭು ಚವ್ಹಾಣ, ಶಾಸಕ

ಶಾಸಕರಾದ ಭೈರತಿ ಬಸವರಾಜ, ಪ್ರಭು ಚವ್ಹಾಣ್, ಶೈಲೇಂದ್ರ ಬೆಲ್ದಾಳೆ, ಸಿದ್ದಲಿಂಗಪ್ಪ ಪಾಟೀಲ್, ಶರಣು ಸಲಗರ, ಮಾಜಿ ಡಿಸಿಎಂ ಡಾ.ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಸಚಿವರಾದ ಶ್ರೀರಾಮುಲು, ಮುರುಗೇಶ ನಿರಾಣಿ, ಮಾಜಿ ಸಂಸದ ಭಗವಂತ ಖೂಬಾ, ಪಿ.ರಾಜು, ರಘುನಾಥ ಮಲ್ಕಾಪುರೆ, ಎಂ.ಜಿ.ಮುಳೆ, ಬಾಬು ವಾಲಿ, ಪ್ರಕಾಶ ಖಂಡ್ರೆ ಮೊದಲಾದವರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಬಂಡೀಪುರ: ನಿರ್ಬಂಧ ತೆರವಿಗೆ ವಿರೋಧ

ಮೈಸೂರು: ನೆರೆಯ ಕೇರಳ ರಾಜ್ಯಕ್ಕೆ ಬಂಡೀಪುರ ಉದ್ಯಾನದ ಮೂಲಕ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧಿಸುವ ವಿಷಯದಲ್ಲಿ ಕಾಂಗ್ರೆಸ್ ನಾಯಕರ ನಡುವೆ ದ್ವಂದ್ವ ನಿಲುವು ಇದೆ ಎಂದು ಸಂಸದ ಯದುವೀರ್ ಒಡೆಯರ್ ಟೀಕಿಸಿದ್ದಾರೆ.

ರಾತ್ರಿ ಪ್ರಯಾಣ ನಿಷೇಧ ತೆರವು ವಿಚಾರದ ಬಗ್ಗೆ ಸಂಸದೆ ಪ್ರಿಯಾಂಕಾ ಗಾಂಧಿ ಇತ್ತೀಚೆಗೆ ನೀಡಿದ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಯದುವೀರ್, ವಾಹನ ಸಂಚಾರ ನಿರ್ಬಂಧ ತೆರವುಗೊಳಿಸುವ ಪ್ರಸ್ತಾವ ಇಲ್ಲ ಎಂದು ಒಂದೆಡೆ ಮುಖ್ಯಮಂತ್ರಿಗಳು ಸ್ಪಷ್ಟಪಡಿಸುತ್ತಾರೆ. ಆದರೆ ಇನ್ನೊಂದೆಡೆ ಕಾಂಗ್ರೆಸ್ ರಾಷ್ಟ್ರೀಯ ನಾಯಕರು ಅದಕ್ಕೆ ವಿರುದ್ಧವಾದ ಹೇಳಿಕೆ ನೀಡುತ್ತಿದ್ದಾರೆ. ಕಾಂಗ್ರೆಸ್ ನಾಯಕರಲ್ಲಿ ಸಮನ್ವಯದ ಕೊರತೆಯಿರುವುದು ಅವರ ಆಡಳಿತದ ಪ್ರಾಮಾಣಿಕತೆಯ ಬಗ್ಗೆ ಸಂದೇಹ ಹುಟ್ಟುಹಾಕುತ್ತದೆ ಎಂದಿದ್ದಾರೆ. ಬಂಡೀಪುರ ಕೇವಲ ಒಂದು ರಸ್ತೆ ಅಲ್ಲ, ಅದು ಅನೇಕ ವನ್ಯಜೀವಿಗಳ ವಾಸಸ್ಥಳ. ಅದನ್ನು ರಕ್ಷಿಸಲು ರಾತ್ರಿ ವೇಳೆ ಸೂಕ್ಷ್ಮ ಅವಧಿಯಲ್ಲಿ ಅವುಗಳಿಗೆ ರಕ್ಷಣೆ ಅಗತ್ಯವಿದೆ ಎಂದು ಸಂಸದ ಯದುವೀರ್ ಹೇಳಿಕೆ ಹಾಕಿದ್ದಾರೆ.

ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ

ಮಂಗಳೂರು: ಬಜ್ಪೆಯಲ್ಲಿರುವ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತೊಂದು ಹುಸಿ ಬಾಂಬ್ ಇ ಮೇಲ್ ಬಂದಿರುವುದು ತಡವಾಗಿ ಬೆಳಕಿಗೆ ಬಂದಿದೆ. ನ.30ರಂದು ಬಾಂಬ್ ಬೆದರಿಕೆ ಇ ಮೇಲ್ ಬಂದಿದೆ. ಈ ಬಗ್ಗೆ ಡಿ.1ರಂದು ಸಿಐಎಸ್ ಎಫ್ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಈ ಬೆದರಿಕೆ ಇ-ಮೇಲ್ ಅಕ್ರಮ್ ವೈಕರ್ ಹೆಸರಿನಿಂದ ಓಟ್‌ಲುಕ್.ಕಾಮ್ ಎಂಬ ವಿಳಾಸದಿಂದ ಬಂದಿದೆ. ಬೆದರಿಕೆ ಸಂದೇಶದ ಹಿನ್ನೆಲೆಯಲ್ಲಿ ಮಂಗಳೂರು ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ತೀವ್ರ ತಪಾಸಣೆ ನಡೆಸಿದಾಗ ಇದೊಂದು ಹುಸಿಬಾಂಬ್ ಬೆದರಿಕೆ ಎಂದು ದೃಢಪಟ್ಟಿದೆ.

ಶಿಶುವಿನಹಾಳದಲ್ಲಿ ಅಂಚೆ ಇಲಾಖೆಯಿಂದ ಬಿಡುಗಡೆ

ಶರೀಫರು-ಗುರು ಗೋವಿಂದಭಟ್ಟರ ಕಾಯಂ ವಿಶೇಷ ಅಂಚೆ ಮೊಹರು



ಶಿಗ್ಗಾವಿ ತಾಲ್ಲೂಕಿನ ಶಿಶುವಿನಹಾಳದಲ್ಲಿ ಸಂತ ಶಿಶುನಾಳ ಶರೀಫರು ಮತ್ತು ಗುರುಗೋವಿಂದ ಭಟ್ಟ ಅವರ ವಿಶೇಷ ಅಂಚೆ ಮುದ್ರೆಯನ್ನು ಬಿಡುಗಡೆ ಮಾಡಲಾಯಿತು.

ಹಾವೇರಿ: ಭಾವೈಕ್ಯದ ಹರಿಕಾರರಾದ ಸಂತ ಶರೀಫರು ಹಾಗೂ ಗುರು ಗೋವಿಂದಭಟ್ಟ ಅವರ ಕಾಯಂ ವಿಶೇಷ ಮುದ್ರೆಯನ್ನು ಮುದ್ರೆಯನ್ನು ಅಂಚೆ ಇಲಾಖೆ ಬಿಡುಗಡೆ ಮಾಡಿದೆ. ಅಂಚೆ ಭಾಷೆಯಲ್ಲಿ ಇದನ್ನು ಪರ್ಮನೆಂಟ್ ಪಿಕ್ಟೋರಿಯಲ್ ಕ್ಯಾನ್ಸಲೇಶನ್ ಎನ್ನಲಾಗುತ್ತದೆ.

ಶಿಗ್ಗಾವಿ ತಾಲ್ಲೂಕಿನ ಶಿಶುವಿನಹಾಳದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಭ್ರಮ50'ರ ಅಂಗವಾಗಿ ವಿಶೇಷ ಮುದ್ರೆಯನ್ನು ಬಿಡುಗಡೆಗೊಳಿ ಸಲಾಯಿತು.

ಅಂಚೆಚೀಟಿ ಸಂಗ್ರಾಹಕರಿಗೆ ಅನುಕೂಲ ಅಂಚೆ ಅಧೀಕ್ಷಕ ಬಿ. ನಾರಾಯಣ ಮಾತನಾಡಿ, ಈ ಕಾಯಂ ಅಂಚೆಮುದ್ರೆ ಯಿಂದಾಗಿ ನಾಡಿನ ಹೆಮ್ಮೆಯ ಭಾವೈಕ್ಯದ ಹರಿಕಾರರ ಇತಿಹಾಸ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಆಗಲಿದೆ ಎಂದರು.

ಈ ಮಹನೀಯರ ಜೀವನ, ನಮ್ಮೆಲ್ಲರಿಗೂ ಆದರ್ಶವಾಗಿದೆ. ಇಂಥವರ ಕಾಯಂ ಮುದ್ರೆ ಬಿಡುಗಡೆ ಮಾಡಿರುವುದು ಅಂಚೆ ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ. ಆಸಕ್ತ ಅಂಚೆಚೀಟಿ ಸಂಗ್ರಹಕಾರರು ಹಾಗೂ ಸಾರ್ವಜನಿಕರು ತಮ್ಮ ಪತ್ರಗಳ ಮತ್ತು ಅಂಚೆ ಚೀಟಿಗಳ ಮೇಲೆ ಈ ಮೊಹರನ್ನು ಹಾಕಿಸಿಕೊಳ್ಳಬಹುದು ಎಂದು ಬಿ.ನಾರಾಯಣ ತಿಳಿಸಿದರು.

ಕರ್ನಾಟಕ ವೃತ್ತದ ಮುಖ್ಯ ಮುಖ್ಯ ಅಂಚೆಪಾಲಕ ರಾಜೇಂದ್ರಕುಮಾರ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾದರು.

ಪಂಚಾಗ್ನಿ ಮಠದ ಟ್ರಸ್ಟಿ ಬಿ.ಆರರ್. ಮಳಲಿ, ಮಹಾವೀರ ಕುಂದೂರ , ಅಂಚೆ ನಿರೀಕ್ಷಕ ಮಂಜುನಾಥ ದೊಡ್ಡಮನಿ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪುಣೆಗೆ ಶೈಕ್ಷಣಿಕ ಪ್ರವಾಸ | ಇಡೀ ಯಾನದ ವೆಚ್ಚ ತಾನೇ ಭರಿಸಿದ ಶಿಕ್ಷಕ

51 ಮಕ್ಕಳನ್ನು ವಿಮಾನ ಹತ್ತಿಸಿದ ಶಿಕ್ಷಕ !

ರಂಗನಾಥ ಕೆ.ಮರಡಿ, ತುಮಕೂರು

ತಾನು ಕೆಲಸ ನಿರ್ವಹಿಸುವ ಶಾಲೆಯ 51 ಮಕ್ಕಳನ್ನು ಮತ್ತು 7 ಶಾಲಾ ಸಿಬ್ಬಂದಿಯನ್ನು ಮುಖ್ಯಶಿಕ್ಷಕರೊಬ್ಬರು ತಮ್ಮ ಸ್ವಂತಖರ್ಚಿನಲ್ಲಿ ಪ್ರವಾಸ ಕರೆದೊಯ್ದಿದ್ದಾರೆ. ಬಸ್‌ನಲ್ಲಿ ಅಲ್ಲ, ರೈಲಿನಲ್ಲಿ ಅಲ್ಲ, ಬಡವರಿಗೆ, ಬಹುತೇಕ ಮಧ್ಯಮ ವರ್ಗದವರಿಗೆ ಕೈಗೆಟುಕದಂಥ, ತೀರಾ ದುಬಾರಿ ಎನ್ನಬಹುದಾದ ವಿಮಾನದಲ್ಲಿ ಪ್ರಯಾಣ ಮಾಡಿಸಿದ್ದಾರೆ. ಈ ಮೂಲಕ ಅನೇಕರಿಗೆ ಮಾದರಿ ಶಿಕ್ಷಕರೆನಿಸಿದ್ದಾರೆ.

ಹರಳೂರು ಗ್ರಾಮದ ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ವೀರಭದ್ರೇಶ್ವರ ಗ್ರಾಮಾಂತರ ಅನುದಾನಿತ ಶಾಲೆಯ ಶಿಕ್ಷಕ ರಾಜಣ್ಣ ಇಂಥ ಮಾದರಿಯ ಶಿಕ್ಷಕ. ಅವರ ಈ ಅಮೋಘ ಸೇವೆಗೆ ಗ್ರಾಮೀಣ ಶಾಲಾ ಮಕ್ಕಳು ಮತ್ತು ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಕ್ಕಳಿಗೆ ವಿಮಾನದಲ್ಲಿ ಪ್ರವಾಸ: ಶಾಲೆಯ 51 ಮಕ್ಕಳು, ಐವರು ಶಿಕ್ಷಕರು, ಇಬ್ಬರು ಅಡುಗೆ ಸಿಬ್ಬಂದಿ ಸೇರಿ 58 ಮಂದಿಗೆ ಶಿಕ್ಷಕ ರಾಜಣ್ಣ ಅವರು ಬುಧವಾರ ಮೊದಲ ಬಾರಿಗೆ ಮಹಾರಾಷ್ಟ್ರದ ಪುಣೆಗೆ ವಿಮಾನದಲ್ಲಿ ಪ್ರವಾಸಕ್ಕಾಗಿ ಕರೆದೊಯ್ದಿದ್ದಾರೆ. ಪ್ರಯಾಣದ ವೆಚ್ಚ ಒಬ್ಬರಿಗೆ 4675 ರು.ಗಳಂತೆ ಒಟ್ಟು 2,71,150 ರು.ಗಳ ವೆಚ್ಚವಾಗಲಿದೆ.

ಮಾಗಡಿ ತಾಲೂಕು ಕುದೂರು ಹೋಬಳಿ ಕಣನೂರುಪಾಳ್ಯದ ಶಿಕ್ಷಕ ರಾಜಣ್ಣ ತಮ್ಮ ಸಂಬಳದ ಉಳಿತಾಯದ ಹಣದಲ್ಲಿ ಕನ್ನಡ ಮಾಧ್ಯಮದ 8, 9, 10 ನೇ ತರಗತಿಯ ಮಕ್ಕಳನ್ನು ಸದಾ ಸ್ಮರಣೆಯಲ್ಲಿ ಉಳಿಯುವ ಪ್ರವಾಸಕ್ಕೆ ಕರೆದೊಯ್ದಿದ್ದಾರೆ.

ಸಾಧಕರೊಂದಿಗೆ ಮಕ್ಕಳ ಸಂವಾದ: ಈ ಶಿಕ್ಷಕ ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ತನ್ನ ಶಾಲೆಗೆ ಕರೆತಂದು ಮಕ್ಕಳ ಜತೆ ಸಂವಾದ ಮಾಡಿಸುತ್ತಾರೆ. ಸಾಲುಮರದ ತಿಮ್ಮಕ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಲನಚಿತ್ರ ವಿಭಾಗ, ಅಧ್ಯಾತ್ಮ ಕ್ಷೇತ್ರ, ಮಾಧ್ಯಮರಂಗ ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧಕರನ್ನು ಶಾಲೆಗೆ ಕರೆಸಿ ಮಕ್ಕಳಿಗೆ ಅವರ ಅನುಭವವನ್ನು ಕೇಳಿಸುವ ಉತ್ತಮ ಕೆಲಸ ಮಾಡುತ್ತಾರೆ.

ರಾಜ್ಯ ಸಂಸ್ಕೃತ ಶಿಕ್ಷಕರ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ರಾಜಣ್ಣ ಅವರಿಗೆ ಸಾಲುಮರದ ತಿಮ್ಮಕ್ಕ ಪರಿಸರ ಪ್ರಶಸ್ತಿ, ಉತ್ತಮ ಶಿಕ್ಷಕ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ತುಮಕೂರು ಜಿಲ್ಲೆಯ ಹರಳೂರು ಗ್ರಾಮದ ಶಾಲೆಯ ಮಕ್ಕಳು ಸೇರಿ 58 ಮಂದಿಯನ್ನು ಶಿಕ್ಷಕ ರಾಜಣ್ಣ ವಿಮಾನದಲ್ಲಿ ಪ್ರವಾಸಕ್ಕೆ ಕರೆದೊಯ್ದಿದ್ದಾರೆ. ವಿಮಾನ ಹತ್ತುವ ಮುನ್ನ ಮಕ್ಕಳೊಂದಿಗೆ ಶಿಕ್ಷಕ ಮತ್ತು ಶಾಲೆಯ ಸಿಬ್ಬಂದಿ.

ಓದುವ ಸಂದರ್ಭದಲ್ಲೇ ಮಕ್ಕಳು ವಿಮಾನದಲ್ಲಿ ಒಮ್ಮೆಯಾದರೂ ಪ್ರಯಾಣಿಸಬೇಕು. ಏಕೆಂದರೆ ನಾನು ಚಿಕ್ಕಂದಿನಲ್ಲಿ ವಿಮಾನವನ್ನು ಹತ್ತಿರದಿಂದ ನೋಡಬೇಕು, ಅದರಲ್ಲಿ ಸಂಚರಿಸಬೇಕು ಎಂಬ ಆಸೆಯಿತ್ತು. ಅದು ಆಗದೇ ಇದ್ದಾಗ ಬಹಳ ಸಂಕಟಪಟ್ಟಿದ್ದೆ. ಇಂತಹ ಸಂಕಟ ನಮ್ಮ ಮಕ್ಕಳು ಪಡಬಾರದು. ಅದಕ್ಕಾಗಿ ಒಮ್ಮೆಯಾದರೂ ಅವರನ್ನು ವಿಮಾನದಲ್ಲಿ ಪ್ರಯಾಣ ಮಾಡಿಸಬೇಕು. ಮನುಷ್ಯ ಎತ್ತರಕ್ಕೆ ಹೋದಾಗ ಅವನ ಸಣ್ಣತನಗ ಳೆಲ್ಲಾ ಗೊತ್ತಾಗುತ್ತದೆ. ಮಕ್ಕಳ ಆಲೋಚನೆಗಳು ಎತ್ತರಕ್ಕೆ ಬೆಳೆಯಬೇಕು. ಅದಕ್ಕಾಗಿ ಇಂತಹ ಒಂದು ಪ್ರಯೋಗ. ಇದು ನನಗೆ ಖುಷಿ ತಂದಿದೆ

-ರಾಜಣ್ಣ, ಶಾಲಾ ಶಿಕ್ಷಕ

ಬಹಳಷ್ಟು ಪ್ರತಿಭಾವಂತರ ಸಂಪರ್ಕದಲ್ಲಿರುವ ಶಿಕ್ಷಕ ರಾಜಣ್ಣ ಮಕ್ಕಳೊಂದಿಗೆ ಅತ್ಯಂತ ಅಕ್ಕರೆಯಿಂದ ಬೆರೆಯುತ್ತಾರೆ. ಹಳ್ಳಿಗಾಡಿನ ಮಕ್ಕಳನ್ನು ತಮ್ಮ ಸ್ವಂತಖರ್ಚಿನಲ್ಲಿ ಪ್ರವಾಸ ಕರೆದುಕೊಂಡು ಹೋಗಿರುವುದು ನಮಗೆ ಹೆಮ್ಮೆ. ಮಕ್ಕಳಿಗೆ ಚೈತನ್ಯ ತುಂಬುವ ಕೆಲಸವನ್ನು ಅವರು ಮಾಡುತ್ತಿದ್ದಾರೆ.

-ಎಸ್.ಗುರುಮೂರ್ತಿ, ಮುಖ್ಯ ಶಿಕ್ಷಕ,

ವಿಶ್ವವಾಣಿ

ಸಂಪಾದಕೀಯ

ಸಚಿನ್-ಕಾಂಬ್ಳಿ ಬದುಕು ನಮಗೂ ಪಾಠ

ಸೋಶಿಯಲ್ ಮೀಡಿಯಾಗಳಲ್ಲಿ ವಿಶ್ವಶ್ರೇಷ್ಠ ಕ್ರಿಕೆಟಿಗ ಸಚಿನ್ ತೆಂಡುಲ್ಕರ್ ಮತ್ತು ಅವರ ಬಾಲ್ಯದ ಗೆಳೆಯ, ಪ್ರತಿಭಾನ್ವಿತ ಕ್ರಿಕೆಟಿಗ ವಿನೋದ್ ಕಾಂಬ್ಳಿ ಸಾರ್ವಜನಿಕ ವೇದಿಕೆಯೊಂದರಲ್ಲಿ ಪರಸ್ಪರ ಭೇಟಿಯಾಗುತ್ತಿರುವ ಚಿತ್ರ ವೈರಲ್ ಆಗುತ್ತಿದೆ. ರಮಾಕಾಂತ್ ಅಚ್ರೇಕರ್ ಸ್ಮಾರಕ ಅನಾವರಣ ಕಾರ್ಯಕ್ರಮಕ್ಕೆ ಸಚಿನ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕಾಂಬ್ಳಿ ಅವರಿಗೂ ಈ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿತ್ತು. ವೇದಿಕೆಯ ಮೂಲೆಯಲ್ಲಿ ಕುಳಿತಿದ್ದ ಕಾಂಬ್ಳಿ ಸಮೀಪಕ್ಕೆ ಸಾಗಿ ಅವರನ್ನು ಮಾತನಾಡಿಸುತ್ತಿದ್ದಂತೆಯೇ ಬಾಲ್ಯದ ಗೆಳೆಯನ ಕಣ್ಣಲ್ಲಿ ಹೊಳಪು ಕಾಣಿಸಿತ್ತು. ಆದರೆ ಕಾಂಬ್ಳಿ ಬಳಿ ಎದ್ದು ನಿಂತು ಆಲಂಗಿಸುವಷ್ಟು ಶಕ್ತಿ ಇರಲಿಲ್ಲ. ಜೀವನದಲ್ಲಿ ಶಿಸ್ತು, ಪರಿಶ್ರಮ, ಮೌಲ್ಯಗಳನ್ನು ಅಳವಡಿಸಿಕೊಳ್ಳದೇ ಹೋದರೆ, ಎಷ್ಟೇ ಪ್ರತಿಭಾವಂತರಾದರೂ ಮೇಲೇರಲು ಸಾಧ್ಯವಿಲ್ಲ ಎನ್ನುವುದಕ್ಕೆ ಕಾಂಬ್ಳಿ ಸಾಕ್ಷಿ. 18ನೇ ವಯಸ್ಸಿನಲ್ಲಿಯೇ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡುವ ಅವಕಾಶ ಪಡೆದ ಕಾಂಬ್ಳಿ, ಮೊದಲ ಟೆಸ್ಟ್ ಸರಣಿಯಲ್ಲಿಯೇ ಶತಕ ಬಾರಿಸಿ ಮಿಂಚಿದ್ದರು. ನಂತರ 3 ದೇಶಗಳ ಎದುರು ನಿರಂತರ 3 ಶತಕ ಬಾರಿಸಿ ಈ ಸಾಧನೆ ಮಾಡಿದ ಮೊದಲ ಕ್ರಿಕೆಟಿಗ ಎಂಬ ಕೀರ್ತಿಗೆ ಪಾತ್ರರಾಗಿದ್ದರು. ಟೆಸ್ಟ್‌ನಲ್ಲಿ ಅತಿ ವೇಗವಾಗಿ (14 ಇನ್ನಿಂಗ್ಸ್) 1000 ರನ್ ಗಳಿಸಿದ ಭಾರತೀಯ ಆಟಗಾರ ಎಂಬ ದಾಖಲೆಯನ್ನೂ ಬರೆದಿದ್ದರು. ಏಕದಿನ ಪಂದ್ಯದಲ್ಲಿ ತಮ್ಮ ಜನ್ಮದಿನದಂದೇ ಶತಕ ಬಾರಿಸಿ ಸಂಭ್ರಮಿಸಿದ್ದರು. ಎಲ್ಲವೂ ಸುಗಮವಾಗಿ ಸಾಗಿದ್ದರೆ ಕಾಂಬ್ಳಿ, ಸಚಿನ್ ಎಂಬ ಸ್ಟಾರ್ ಆಟಗಾರನ ಜತೆಯಲ್ಲಿಯೇ ಸಾಗಬೇಕಿತ್ತು. ಆದರೆ ಬಡ ಕುಟುಂಬದ ಹಿನ್ನೆಲೆಯಿಂದ ಬಂದ ಕಾಂಬ್ಳಿಗೆ ಸಣ್ಣ ವಯಸ್ಸಿನಲ್ಲಿಯೇ ಸಿಕ್ಕ ಯಶಸ್ಸನ್ನು ಸಂಭಾಳಿಸಲು ಆಗಲಿಲ್ಲ. ದುಡ್ಡು ಬರುತ್ತಿದ್ದಂತೆಯೇ ಕುಡಿತ, ಮೋಜು, ಮಸ್ತಿಗಳಲ್ಲಿ ಕಳೆದ ಆಟಗಾರ, ಭವಿಷ್ಯದ ಬಗ್ಗೆ ಯೋಚಿಸಲೇ ಇಲ್ಲ. 23ನೇ ವಯಸ್ಸಿಗೆ ಕಾಂಬ್ಳಿ ಟೆಸ್ಟ್ ಕೆರಿಯರ್ ಕೊನೆಗೊಂಡರೆ ನಂತರ ಏಕದಿನ ಪಂದ್ಯಗಳಲ್ಲೂ ಹೆಚ್ಚು ಯಶಸ್ಸು ಕಾಣಲಿಲ್ಲ. ನಂತರ ಸಿನಿಮಾ, ಕೋಚ್, ರಿಯಾಲಿಟಿ ಶೋ ಹೀಗೆ ನಾನಾ ಪಾತ್ರಗಳಲ್ಲಿ ಜೀವನ ಕಂಡುಕೊಳ್ಳುವ ಪ್ರಯತ್ನ ಮಾಡಿದರೂ ಶಿಸ್ತಿನ ಕೊರತೆಯಿಂದ ಇದಾವುದೂ ಕೈಗೂಡಲಿಲ್ಲ. ಸಾಲದೆಂಬಂತೆ 41ನೇ ವಯಸ್ಸಿನಲ್ಲಿಯೇ ಹೃದಯಾಘಾತಕ್ಕೊಳಗಾದ ಕಾಂಬ್ಳಿ ಬೇರೆಯವರ ಆಸರೆ ಪಡೆಯಬೇಕಾದ ಅನಿವಾರ್ಯತೆಗೆ ಸಿಲುಕಿದರು. ಸಮಾಜ ವ್ಯಕ್ತಿಯ ಯಶಸ್ಸನ್ನು ಮಾತ್ರ ಗುರುತಿಸುತ್ತದೆ. ಸಚಿನ್ ಪರಿಶ್ರಮ ಮತ್ತು ಯಶಸ್ಸಿನ ಸಂಕೇತವಾದರೆ, ಕಾಂಬ್ಳಿ ಸೋಲಿನ ಪ್ರತೀಕವಾದರು. ಇವರಿಬ್ಬರ ಬದುಕು ನಮಗೂ ಪಾಠವಾಗಬಹುದು.

ಸೊಂಪಾದಕೀಯ

ಈ ದೇಶ ಗಂಡಸರಿಗಲ್ಲ

ನಮ್ಮಲ್ಲಿ ಆಗಾಗ ಕೇಳಿಬರುವ ಪದಪುಂಜ ಅಂದ್ರೆ, 'ಇದು ಪುರುಷ ಪ್ರಧಾನ ಸಮಾಜ' ಅನ್ನೋದು. ಆದರೆ ನಿಜವಾಗಿಯೂ ಸಮಾಜದಲ್ಲಿನ ಕೆಲವು ಕಟ್ಟಳೆ, ಕಾನೂನು, ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದು ಎಂಬಂತೆ ಸರಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ಉಚಿತ ಬಸ್ ಪ್ರಯಾಣದ ಸೌಲಭ್ಯ, ಗೃಹಲಕ್ಷ್ಮಿ ಯೋಜನೆ ಇದಕ್ಕೆ ಸಾಕ್ಷಿ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋ ಬದಲು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಹಾಗಾಗಿ ಇಲ್ಲೂ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಇದನ್ನೆಲ್ಲಾ ನೋಡಿದ ಮೇಲೆ ಈ ದೇಶ ಗಂಡಸರಿಗಲ್ಲ ಬಿಡಿ ಅನ್ನೋ 'ಎದ್ದೇಳು ಮಂಜುನಾಥ'ನ ಶೈಲಿಯಲ್ಲಿ ಗಂಡಸರು ನಿಟ್ಟುಸಿರು ಬಿಡುತ್ತಿದ್ದಾರೆ. ಒಟ್ಟಿನಲ್ಲಿ ದುಡಿದು, ಕಡಿದು ಗುಡ್ಡೆ ಹಾಕಿ ಸಂಸಾರವನ್ನು ಸಾಕೋ ಜವಾಬ್ದಾರಿ ಮಾತ್ರ ಪುರುಷನ ಪಾಲಿಗೆ. ಆದರೆ ಸೌಕರ್ಯಗಳ ವಿಷಯದಲ್ಲಿ ಮಾತ್ರ ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಜಪಾನಿನ ಕಿಟ್ ಕ್ಯಾಟ್ ಚಾಕೊಲೇಟ್

ಜಪಾನಿನ ಕನ್ಸೈ ವಿಮಾನ ನಿಲ್ದಾಣದಲ್ಲಿ ಇಳಿದು ಡ್ಯೂಟಿ ಫ್ರೀ ಶಾಪ್ ಮುಂದೆ ನಿಂತಾಗ ಕಣ್ಣಿಗೆ ರಾಚಿದ್ದು 'ಕಿಟ್ ಕ್ಯಾಟ್' ಚಾಕೊಲೇಟ್‌ಗಳ ದೊಡ್ಡ ಮಳಿಗೆ. ನನಗೆ ಅದರಲ್ಲಿ ಯಾವ ವಿಶೇಷವೂ ಕಾಣಲಿಲ್ಲ. ನಂತರ ಯಾವುದೇ ಊರಿಗೆ ಹೋದಾಗಲೂ, 'ಕಿಟ್ ಕ್ಯಾಟ್' ದೃಶ್ಯವನ್ನು ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಅಲ್ಲಿಂದ ವಾಪಸ್ ಬರುವಾಗ, ಟೋಕಿಯೋದ ನರಿಟಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಂತೂ ಕಿಟ್ ಕ್ಯಾಟ್ ಚಾಕೊಲೇಟಿನ ಬಹುದೊಡ್ಡ ಮಳಿಗೆಯೇ ಕಂಡಿತು. ಅಲ್ಲಿನ ಡ್ಯೂಟಿ ಫ್ರೀ ಶಾಪ್‌ನಲ್ಲಿ ಏನಿಲ್ಲವೆಂದರೂ 50 ಬಗೆಯ ಕಿಟ್ ಕ್ಯಾಟ್ ಚಾಕೊಲೇಟ್‌ಗಳಿದ್ದವು. ಅಲ್ಲಿಯೇ ನಿಂತಿದ್ದ ಮಾರಾಟ ಪ್ರತಿನಿಧಿಯನ್ನು, 'ನಮ್ಮ ದೇಶದಲ್ಲೂ ಕಿಟ್ ಕ್ಯಾಟ್ ಚಾಕೊಲೇಟ್‌ಗಳಿವೆ. ನಾನು ಬಹಳ ವರ್ಷಗಳಿಂದ ಅದನ್ನು ಸೇವಿಸುತ್ತಾ ಬಂದಿದ್ದೇನೆ. ಆದರೆ ನಿಮ್ಮ ದೇಶದಲ್ಲಿನ ಕಿಟ್ ಕ್ಯಾಟ್ ಚಾಕೊಲೇಟಿನ ವೈಶಿಷ್ಟ್ಯವೇನು?' ಎಂದು ಕೇಳಿದೆ. ಅದಕ್ಕೆ ಆತ, 'ನೀವು ಎಷ್ಟು ಸ್ವಾದದ, ಬಗೆಯ ಕಿಟ್ ಕ್ಯಾಟ್ ಚಾಕೊಲೇಟ್ ಸೇವಿಸಿದ್ದೀರಿ? ನೆನಪಿಸಿಕೊಳ್ಳಿ' ಎಂದು ನನಗೇ ಮರುಪ್ರಶ್ನೆ ಹಾಕಿದ. ನಾನು 'ಒಂದೋ, ಎರಡೋ ಬಗೆಯ ಚಾಕೊಲೇಟ್ ಸೇವಿಸಿರಬಹುದು' ಎಂದೆ. ಅದಕ್ಕೆ ಆತ, 'ಜಪಾನಿನಲ್ಲಿ ಏನಿಲ್ಲವೆಂದರೂ ಸುಮಾರು 300 ಸ್ವಾದದ ಕಿಟ್ ಕ್ಯಾಟ್ ಚಾಕೊಲೇಟುಗಳಿರಬಹುದು' ಎಂದ. ನನಗೆ ನಂಬಲಾಗಲಿಲ್ಲ. ಆದರೆ ಆತ ಪಕ್ಕದಲ್ಲಿಯೇ ಇದ್ದ ಕ್ಯಾಟಲಾಗ್ ತೋರಿಸಿದ. ಪ್ರಾಯಶಃ ಒಂದು ಚಾಕೊಲೇಟ್ ಕಂಪನಿ ಇಷ್ಟೊಂದು ಬಗೆಯ ಚಾಕೊಲೇಟುಗಳನ್ನು ತಯಾರಿಸಿದ ನಿದರ್ಶನ ಮತ್ತೆಲ್ಲೂ ಸಿಗಲು ಸಾಧ್ಯವಿಲ್ಲ. ಕಿಟ್ ಕ್ಯಾಟ್ ಚಾಕೊಲೇಟ್ ತಯಾರಿಸುವ ನೆಸ್ಲೆ ಕಂಪನಿಯು ಜಪಾನಿನ ಅಂಚೆ ವಿಭಾಗದೊಂದಿಗೆ ಒಡಂಬಡಿಕೆ ಮಾಡಿಕೊಂಡು, ಆ ದೇಶದ 20,000 ಪೋಸ್ಟಾಫೀಸುಗಳಲ್ಲಿ ಕಿಟ್ ಕ್ಯಾಟ್ ದೊರಕುವ ವ್ಯವಸ್ಥೆ ಮಾಡಿತು. ಆ ಮಾರ್ಕೆಟಿಂಗ್ ಕ್ಯಾಂಪೇನ್ ಅದೆಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಜಪಾನಿನ ಯಾವುದೇ ಊರಿಗೆ ಹೋದರೂ, ಕಿಟ್ ಕ್ಯಾಟ್ ಲಭಿಸುವಂತಾಯಿತು. ಅಷ್ಟೇ ಅಲ್ಲ, ಕಿಟ್ ಕ್ಯಾಟ್ ಜಪಾನಿನ ಮನೆಮಾತಾಯಿತು. 2010ರಲ್ಲಿ ಆ ಕ್ಯಾಂಪೇನ್‌ಗೆ ಅತ್ಯುತ್ತಮ ಮಾರ್ಕೆಟಿಂಗ್ ತಂತ್ರಗಾರಿಕೆ ಎಂಬ ಪ್ರಶಸ್ತಿಯೂ ಲಭಿಸಿತು. ಆ ದೇಶದಲ್ಲಿ ಆ ಚಾಕೊಲೇಟ್ ಅಷ್ಟು ಜನಪ್ರಿಯವಾಗಲು ಬೇರೆ ಕಾರಣವಿದೆಯಾ? ಜಪಾನಿ ಭಾಷೆಯಲ್ಲಿ ಕಿಟ್ ಕ್ಯಾಟ್ ಪದ ಅವರಿಗೆ 'ಕಿಟೋ ಕಥ್ಸು' ಅಂತ (ಕಿಟ್ ಕಾಟ್ಸ್ ಅಥವಾ ಕಿಟೋ ಕಾಟೊ ಅಥವಾ ಕಿಟೋ ಕತ್ಸುಟೊ) ಕೇಳಿಸುತ್ತದೆ. 'ಕಿಟೋ ಕಥ್ಸು' ಅಂದರೆ You will surely win ಎಂದರ್ಥ. ಪರೀಕ್ಷೆಗಿಂತ ಮುನ್ನ ನೆಸ್ಲೆ ಕಂಪನಿಯು ಜಪಾನಿ ವಿದ್ಯಾರ್ಥಿಗಳಿಗೆ You will surely win ಎಂಬ ಗುಡ್‌ಲಕ್ ಮೆಸೇಜುಗಳನ್ನು ಪೋಸ್ಟಿನಲ್ಲಿ ಕಳಿಸುತ್ತಿತ್ತು. ಇದನ್ನು ಸ್ವೀಕರಿಸಿದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆ ಕಂಪನಿ ಮತ್ತು ಕಿಟ್ ಕ್ಯಾಟ್ ಬಗ್ಗೆ ಪ್ರೀತಿ ಬೆಳೆಯುವಂತಾಯಿತು. ಆ ಮೂಲಕ ಕಿಟ್ ಕ್ಯಾಟ್ ಜಪಾನಿನ ವಿದ್ಯಾರ್ಥಿಗಳ ಮನೆ-ಮನ ಗೆದ್ದಿತು. ಕಿಟ್ ಕ್ಯಾಟ್ ಜಾಗತಿಕ ಬ್ರ್ಯಾಂಡ್ ಆದರೂ, ಜಪಾನಿನಲ್ಲಿ ಅದು ವ್ಯಾಪಿಸಿರುವ ಬಗೆ ಅನನ್ಯ. ಚಾಕೊಲೇಟ್‌ಗಳನ್ನು ಇಷ್ಟಪಡುವ ದೇಶಗಳಲ್ಲೂ ಕಿಟ್ ಕ್ಯಾಟ್ ಹೆಸರಿನಲ್ಲಿ ಅತಿ ಹೆಚ್ಚೆಂದರೆ 10-20 ಸ್ವಾದಗಳ ಚಾಕೊಲೇಟ್‌ಗಳಿರಬಹುದು. ಆದರೆ ಜಪಾನಿನಲ್ಲಿ ಆಯಾ ಪ್ರದೇಶ ಮತ್ತು ರುಚಿಗೆ ಅನುಗುಣವಾಗಿ 300 ವಿವಿಧ ಸ್ವಾದಗಳ ಚಾಕೊಲೇಟ್‌ಗಳನ್ನು ನೆಸ್ಲೆ ಬಿಡುಗಡೆ ಮಾಡಿದೆ. ಜಪಾನಿನಲ್ಲಿ ವಿಶೇಷ ಉಡುಗೊರೆಯಾಗಿ ಚಾಕೊಲೇಟುಗಳನ್ನು ಕೊಡುವುದು ಸಂಪ್ರದಾಯ. ಅಷ್ಟೊಂದು ಬಗೆಯ ಚಾಕೊಲೇಟುಗಳಿರಲು ಇದೂ ಕಾರಣವಾಗಿರಬಹುದು. ನೆಸ್ಲೆ ಕಂಪನಿಯು ಇಷ್ಟೊಂದು ಬಗೆಯ ಚಾಕೊಲೇಟುಗಳನ್ನು ಜಗತ್ತಿನ ಬೇರೆ ಯಾವ ದೇಶದಲ್ಲೂ ತಯಾರಿಸುತ್ತಿಲ್ಲ. ಬೇರೆ ಕಂಪನಿಗಳೂ ಇಷ್ಟೊಂದು ಸ್ವಾದಗಳ ಚಾಕೊಲೇಟುಗಳನ್ನು ತಯಾರಿಸುತ್ತಿಲ್ಲ. ಟೋಕಿಯೋದ ಜನನಿಬಿಡ ಶಿಬುಯ ಪ್ರದೇಶದಲ್ಲಿ 'ಮೈ ಕಿಟ್ ಕ್ಯಾಟ್' ಎಂಬ ಬೃಹತ್ ಶೋರೂಮ್ ಇದೆ. ಅಲ್ಲಿ ಯಾರು ಬೇಕಾದರೂ ತಮಗೆ ಬೇಕಾದ ಸ್ವಾದದ ಚಾಕೊಲೇಟುಗಳನ್ನು ಕೈಯಾರೆ ಮಾಡಿ ಸೇವಿಸಬಹುದು. ಅಲ್ಲಿಗೆ ಹೋಗಿ ಕಿಟ್ ಕ್ಯಾಟ್ ಚಾಕೊಲೇಟ್ ಸೇವಿಸದೇ ಬಂದರೆ, ಅಷ್ಟರಮಟ್ಟಿಗೆ ಜಪಾನ್ ಪ್ರವಾಸ ಅಪೂರ್ಣ.

ವಿಮಾನ ಅಪಘಾತವೂ, ಜಪಾನಿಯರ ವರ್ತನೆಯೂ!

ಜಪಾನಿಯರ ಸಾರ್ವಜನಿಕ ವರ್ತನೆ ವಿಶಿಷ್ಟವಾದುದು. ಎಂಥ ತುರ್ತು ಪರಿಸ್ಥಿತಿಯಲ್ಲೂ ಶಿಸ್ತನ್ನು ಉಲ್ಲಂಘಿಸದೇ ಇರುವುದು ಅವರ ರಕ್ತದಲ್ಲಿ ಅಂತರ್ಗತವಾಗಿದೆ. ಒಂದು ನಿರ್ದಿಷ್ಟ ನಿಯಮ, ಸೂಚನೆಯನ್ನು ಪಾಲಿಸುವುದು ಅದೆಷ್ಟು ಮುಖ್ಯ ಎಂಬುದನ್ನು ಜಪಾನಿಯರನ್ನು ನೋಡಿ ಕಲಿಯಬೇಕು. ತುರ್ತು ಸನ್ನಿವೇಶದಲ್ಲೂ ಸಂಯಮದಿಂದ ವರ್ತಿಸುವುದು ಜಪಾನಿಯರ ಸಮೂಹ ಶಿಸ್ತಿನ ನಡತೆಗೆ ಹಿಡಿದ ಕೈಗನ್ನಡಿ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ನಾನು ಈ ಲೇಖನವನ್ನು ಸುಮಾರು ಹನ್ನೊಂದು ತಿಂಗಳ ಹಿಂದೆ ಅಂದರೆ ಈ ವರ್ಷದ ಜನವರಿಯಲ್ಲಿ ಬರೆದಿದ್ದು. ಇದು ಹಳೆಯದಾದರೂ, ನಾನು ಮೊನ್ನೆ ಜಪಾನ್‌ಗೆ ಹೋದಾಗ, ನನಗೆ ಇದು ಪದೇ ಪದೆ ನೆನಪಾಯಿತು. ಈ ಲೇಖನವನ್ನು ನೀವೂ ಓದಿರಬಹುದು. ಓದದವರಿಗೆ ಇದು ಹೊಸತಾಗಿ ಕಾಣಬಹುದು. ಓದಿದವರು ಇದನ್ನು 'ಮರು ಓದು' ಎಂದು ಪರಿಗಣಿಸಬಹುದು. ಜಪಾನಿನಿಂದ ಬಂದ ಬಳಿಕ, ನನಗೆ ಈ ಅಂಕಣ ವಿಭಿನ್ನವಾಗಿ ಕಂಡಿತು. ಜಪಾನ್ ಮತ್ತು ಜಪಾನಿಯರನ್ನು ಮತ್ತಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಈ ಅಂಕಣ ಮತ್ತು ಅದರಲ್ಲಿ ಪ್ರಸ್ತಾಪಿಸಿದ ಸಂಗತಿಗಳು ಸಹಾಯಕವಾದವು. ಈ ಕಾರಣದಿಂದ ಅದನ್ನು ಇಲ್ಲಿ ನೀಡುತ್ತಿದ್ದೇನೆ.

***

ಹೊಸ ವರ್ಷದ ಮಾರನೇ ದಿನ (ಜನವರಿ 2 ರಂದು) ಇಡೀ ವಿಶ್ವವೇ ಒಂದು ಕ್ಷಣ ಸ್ತಂಭೀಭೂತವಾಗುವ, ಪವಾಡ ಸದೃಶ ಘಟನೆಯೊಂದು ನಡೆದುಹೋಯಿತು. ಅದು ನಡೆದಿದ್ದು ಜಪಾನಿನಲ್ಲಾದರೂ, ಘಟನೆಯ ಸ್ವರೂಪ ಮತ್ತು ಅದು ಬಿಚ್ಚಿಕೊಂಡ ರೀತಿ ಎಂಥವರನ್ನಾದರೂ ಕಂಗಾಲು ಮಾಡುವಂತಿತ್ತು. ಜಪಾನ್ ಏರ್‌ಲೈನ್ಸ್‌ನ ಏರ್‌ಬಸ್ ಎ-350 ವಿಮಾನ ಟೋಕಿಯೋದ ಹನೆಡಾ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಹಠಾತ್ ರನ್ ವೇಗೆ ಬಂದ ಜಪಾನ್ ಕೋಸ್ಟ್ ಗಾರ್ಡ್‌ನ ಬೊಂಬಾರ್ಡಿಯರ್ ಡ್ಯಾಶ್ 8 ವಿಮಾನಕ್ಕೆ ಡಿಕ್ಕಿ ಹೊಡೆಯಿತು. ಯಾವತ್ತೂ ಲ್ಯಾಂಡ್ ಆಗುವ ವಿಮಾನಕ್ಕೆ ಮೊದಲ ಆದ್ಯತೆ. ಹೀಗಾಗಿ ಕೋಸ್ಟ್ ಗಾರ್ಡ್‌ನ ವಿಮಾನಕ್ಕೆ ರನ್ ವೇಗೆ ಬರದಂತೆ ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ)ನಿಂದ ಸ್ಪಷ್ಟ ಸೂಚನೆ ಇತ್ತು. ಈ ಸೂಚನೆಯನ್ನು ಖಾತ್ರಿಪಡಿಸಿಕೊಂಡ ನಂತರವೇ ಏರ್ ಬಸ್ ಎ-350 ವಿಮಾನದ ಪೈಲಟ್ ಲ್ಯಾಂಡ್ ಮಾಡಲು ನಿರ್ಧರಿಸಿದ್ದ.

ಆದರೆ ಕೋಸ್ಟ್ ಗಾರ್ಡ್‌ನ ವಿಮಾನದ ಪೈಲಟ್ ಏನೆಂದು ಗ್ರಹಿಸಿಕೊಂಡನೋ, ಏರ್ ಟ್ರಾಫಿಕ್ ಕಂಟ್ರೋಲ್ ಎರಡೂ ವಿಮಾನಗಳ ಪೈಲಟ್‌ಗಳಿಗೆ ತಪ್ಪು ಸೂಚನೆ ನೀಡಿತೋ, ಗೊತ್ತಿಲ್ಲ... ಜಪಾನ್ ಏರ್‌ಲೈನ್ಸ್‌ನ ಏರ್‌ಬಸ್ ಎ-350 ವಿಮಾನ, ರನ್ ವೇಗೆ ಬಂದ ಕೋಸ್ಟ್ ಗಾರ್ಡ್‌ನ ವಿಮಾನಕ್ಕೆ ಅಪ್ಪಳಿಸಿತು. ಆ ರಭಸಕ್ಕೆ ರನ್ ವೇಗೆ ಬಂದ ಕೋಸ್ಟ್ ಗಾರ್ಡ್ ವಿಮಾನದಲ್ಲಿದ್ದ ಐವರು ಕರ್ಮಚಾರಿಗಳು ಸತ್ತು ಹೋದರು. ಡಿಕ್ಕಿ ಹೊಡೆದ ತಕ್ಷಣ ಲ್ಯಾಂಡ್ ಆದ ಏರ್‌ಬಸ್ ಎ-350 ವಿಮಾನಕ್ಕೆ ಬೆಂಕಿ ತಗುಲಿಕೊಂಡಿತು. ನೋಡನೋಡುತ್ತಿದ್ದಂತೆ, ಇಡೀ ವಿಮಾನ ಬೆಂಕಿಯ ಬೋಗಿಯಂತಾಗಿಹೋಯಿತು. ಇಳಿ ಸಾಯಂಕಾಲದ ಸಮಯವಾಗಿದ್ದರಿಂದ ಆ ಬೆಂಕಿ ಐದಾರು ಕಿ.ಮೀ. ದೂರದವರೆಗೆ ಕಾಣಿಸುತ್ತಿತ್ತು. ಇಡೀ ವಿಮಾನ ನಿಲ್ದಾಣದಲ್ಲಿ ಅಯೋಮಯ ವಾತಾವರಣ!

ಜಪಾನ್ ಏರ್‌ಲೈನ್ಸ್‌ನ ಏರ್‌ಬಸ್ ಎ-350 ವಿಮಾನದಲ್ಲಿ 379 ಪ್ರಯಾಣಿಕರಿದ್ದರು. ದುರಂತದ ಪರಿಣಾಮ ಅದೆಷ್ಟು ಘೋರವಾಗಿತ್ತೆಂದರೆ, ಧಗಧಗವೆಂದು ಹೊತ್ತಿ ಉರಿಯುತ್ತಿದ್ದ ಇಡೀ ವಿಮಾನದಲ್ಲಿದ್ದ ಒಬ್ಬನೇ ಒಬ್ಬ ಪ್ರಯಾಣಿಕ ಜೀವ ಸಹಿತ ಬಚಾವ್ ಆಗುವುದು ಸಾಧ್ಯವೇ ಇರಲಿಲ್ಲ. ಹಾಗೆಂದೇ ಎಲ್ಲರೂ ಭಾವಿಸಿದ್ದರು. ಆದರೆ ವಿಮಾನ ಲ್ಯಾಂಡ್ ಆದ ಕೇವಲ ಹದಿನೆಂಟು ನಿಮಿಷಗಳಲ್ಲಿ ಎಲ್ಲ 379 ಪ್ರಯಾಣಿಕರು ಪವಾಡ ಸದೃಶ ರೀತಿಯಲ್ಲಿ, ನಂಬಲೂ ಸಾಧ್ಯವಾಗದ ಬಗೆಯಲ್ಲಿ ಪಾರಾಗಿದ್ದರು. ಇದು ವೈಮಾನಿಕ ಇತಿಹಾಸದಲ್ಲಿಯೇ ಒಂದು ಅದ್ಭುತ ಪವಾಡ ಎಂದು ಭಾವಿಸಲಾಗಿದೆ.

ಏರ್‌ಬಸ್ ಎ-350 ವಿಮಾನ ಬೆಂಕಿಯ ಉಂಡೆಯಂತಾಗಿ ಹೋದಾಗ, ವಿಮಾನದಲ್ಲಿದ್ದ ಪ್ರಯಾಣಿಕರು ಕಂಗಾಲಾಗಿ ಹೋದರು. ನೆಲದ ಮೇಲಿದ್ದ ಕೋಸ್ಟ್ ಗಾರ್ಡ್ ವಿಮಾನದಲ್ಲಿದ್ದ ಐವರು ಸ್ಥಳದಲ್ಲೇ ಅಸು ನೀಗಿದರೆಂದರೆ ಆ ರಭಸ ಅದೆಷ್ಟು ಭೀಕರವಾಗಿದ್ದಿರಬಹುದು ಎಂಬುದನ್ನು ಊಹಿಸಬಹುದು. ಡಿಕ್ಕಿ ಹೊಡೆದ ಕ್ಷಣವೇ ಬೆಂಕಿ ಹೊತ್ತಿಕೊಂಡಿತಲ್ಲ, ಆ ಹೊಡೆತಕ್ಕೆ ವಿಮಾನದೊಳಗಿದ್ದ ಪ್ರಯಾಣಿಕರೆಲ್ಲ ಹೌಹಾರಿಹೋದರು. ವಿಮಾನ ಒಂದು ಕಿ.ಮೀ. ಕ್ರಮಿಸಿ ನಿಲ್ಲುವ ಹೊತ್ತಿಗೆ ಬೆಂಕಿ ಸಂಪೂರ್ಣ ಆವರಿಸಿತ್ತು. ಬೆಂಕಿಯ ಝಳ ವಿಮಾನದೊಳಗೆ ಅನುಭವಕ್ಕೆ ಬರಲಾರಂಭಿಸಿತ್ತು. ವಿಮಾನದ ಬಾಗಿಲನ್ನು ತೆರೆಯುತ್ತಿದ್ದಂತೆ, ಹೊಗೆ ವಿಮಾನದೊಳಕ್ಕೆ ನುಗ್ಗಿ ಪ್ರಯಾಣಿಕರು ಮತ್ತಷ್ಟು ಗಾಬರಿಪಡುವಂತಾಯಿತು. ಇಂಥ ಸ್ಥಿತಿಯಲ್ಲಿ ಯೋಚಿಸುತ್ತಾ ಕುಳಿತುಕೊಳ್ಳಲು ಸಮಯವೇ ಇರಲಿಲ್ಲ. ತಕ್ಷಣ ರಕ್ಷಣಾ ಕಾರ್ಯಾಚರಣೆಗೆ ಅಣಿಯಾಗಬೇಕಿತ್ತು.

ಮುಂದಿನ ಹತ್ತು ನಿಮಿಷಗಳಲ್ಲಿ ನಡೆದಿದ್ದು ಪವಾಡವಾದರೂ, ಜಪಾನ್ ಏರ್‌ಲೈನ್ಸ್ ಪೈಲಟ್ ಮತ್ತು ಕ್ಯಾಬಿನ್ ಸಹಚರರ ಸಮಯಪ್ರಜ್ಞೆ, ಕಾರ್ಯದಕ್ಷತೆ ಮತ್ತು ತುರ್ತುಸ್ಥಿತಿಯಲ್ಲಿ ಅತ್ಯಂತ ಸಮರ್ಪಕ ನಿರ್ಧಾರ ತೆಗೆದುಕೊಳ್ಳುವ ಚಾಣಾಕ್ಷತೆ, ಇಡೀ ವಿಶ್ವಕ್ಕೇ ಬಹುದೊಡ್ಡ ಪಾಠವಾಯಿತು. ವಿಮಾನ ಡಿಕ್ಕಿ ಹೊಡೆಯುತ್ತಿದ್ದಂತೆ, ಪೈಲಟ್ ತಕ್ಷಣ ಕಾರ್ಯಪ್ರವೃತ್ತನಾದ. ಧ್ವನಿವರ್ಧಕದಲ್ಲಿ ಪ್ರಯಾಣಿಕರನ್ನುದ್ದೇಶಿಸಿ ಸ್ವಲ್ಪವೂ ಉದ್ವೇಗಕ್ಕೊಳಗಾಗದೇ, "ನಿಂತ ವಿಮಾನಕ್ಕೆ ನಮ್ಮ ವಿಮಾನ ಡಿಕ್ಕಿ ಹೊಡೆದಿದೆ. ನಮ್ಮ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದೆ. ಯಾರೂ ಗಾಬರಿಯಾಗಬೇಕಿಲ್ಲ. ನೀವು ಕಂಗಾಲಾದರೆ ನಿಮಗೇ ನಷ್ಟ. ಯಾರೂ ಭಯಭೀತರಾಗಬೇಡಿ. ನಾನು ಮುಂದೆ ನೀಡುವ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನನ್ನ ಸೂಚನೆಯನ್ನು ಪಾಲಿಸಿದರೆ, ನೀವೂ ಬಚಾವ್ ಆಗುತ್ತೀರಿ, ಉಳಿದವರನ್ನೂ ಬಚಾವ್ ಮಾಡುತ್ತೀರಿ" ಎಂದು ಘೋಷಿಸಿದ. ಪ್ರಯಾಣಿಕರಿಗೆ ಅಪಘಾತ ಸ್ವರೂಪ ಮತ್ತು ಪರಿಣಾಮ ಅರಿವಿಗೆ ಬಂದಿತ್ತು.

ಅಷ್ಟರೊಳಗೆ ಬೆಂಕಿ ನಿಧಾನವಾಗಿ ಆವರಿಸಿಕೊಳ್ಳಲಾರಂಭಿಸಿತ್ತು. ವಿಮಾನ ನಿಲ್ದಾಣದಲ್ಲಿ ತುರ್ತುಸ್ಥಿತಿ ಘೋಷಿಸಲಾಗಿತ್ತು. ಅಗ್ನಿಶಾಮಕ ದಳಕ್ಕೆ ಸೂಚನೆ ಹೋಗಿತ್ತು. ಆದರೆ ರನ್ ವೇಯಲ್ಲಿ ಗಾಳಿ ಜೋರಾಗಿ ಬೀಸುತ್ತಿದ್ದುದರಿಂದ ಬೆಂಕಿಯ ಕೆನ್ನಾಲಿಗೆ ಬಹುಬೇಗ ವಿಮಾನವನ್ನು ಆವರಿಸಿಕೊಳ್ಳುವ ಸೂಚನೆ ಪೈಲಟ್‌ಗೆ ಸಿಕ್ಕಿತು. ಆತ ವಿಮಾನದೊಳಗಿದ್ದ ಸಹಚರರನ್ನು ಮುಂದಿನ ಕಾರ್ಯಾಚರಣೆಗೆ ಅಣಿಗೊಳ್ಳುವಂತೆ ಹೇಳಿದ. ವಿಮಾನದಲ್ಲಿ ಎಂಟು ತುರ್ತು ನಿರ್ಗಮನ ದ್ವಾರಗಳಿದ್ದರೂ, ಐದು ದ್ವಾರಗಳಲ್ಲಿ ಬೆಂಕಿ ಪಸರಿಸಿದ್ದರಿಂದ, ಎಲ್ಲವನ್ನೂ ಬಳಸುವಂತಿರಲಿಲ್ಲ. ಪ್ರಯಾಣಿಕರನ್ನು ಹೊರಗೆ ಕಳಿಸಲು ಕೇವಲ ಮೂರು ದ್ವಾರಗಳನ್ನು ಬಳಸಬಹುದಿತ್ತು. ಎಂಟು ದ್ವಾರಗಳ ಪೈಕಿ ಮೂರು ಮಾತ್ರ ಬಳಕೆಗೆ ಸುರಕ್ಷಿತವಾಗಿದ್ದರಿಂದ, ಅಲ್ಲಿ ನೂಕುನುಗ್ಗಲಾಗುವ ಸಾಧ್ಯತೆ ಇತ್ತು.

ಆಗ ಪೈಲಟ್ ಧ್ವನಿವರ್ಧಕದ ಮೂಲಕ, "ಯಾರೂ ಕ್ಯಾಬಿನ್‌ನಲ್ಲಿರುವ ನಿಮ್ಮ ಬ್ಯಾಗ್ ಮತ್ತು ಸೂಟ್‌ಕೇಸ್‌ಗಳನ್ನು ತೆಗೆಯಕೂಡದು. ನಿಮ್ಮ ಜೀವಕ್ಕಿಂತ ನಿಮ್ಮ ಬ್ಯಾಗ್, ಸೂಟ್‌ಕೇಸ್ ಮುಖ್ಯವಲ್ಲ. ಅವುಗಳನ್ನು ಹೊತ್ತೊಯ್ಯುವ ಭರದಲ್ಲಿ ನಿಮ್ಮ ಜೀವವನ್ನು ಬಲಿಕೊಡಬೇಡಿ. ಇದರಿಂದ ಇತರರಿಗೂ ಅನಾನುಕೂಲವಾಗುವುದು. ಬ್ಯಾಗಿನೊಳಗೆ ಎಷ್ಟೇ ಅಮೂಲ್ಯ ವಸ್ತುಗಳಿದ್ದರೂ ನಿಮ್ಮ ಪ್ರಾಣಕ್ಕಿಂತ ಅಮೂಲ್ಯವೇನಲ್ಲ. ಈಗ ನೀವೆಲ್ಲ ತುರ್ತು ನಿರ್ಗಮನ ದ್ವಾರದತ್ತ ಹೊರಡಲು ಸಜ್ಜಾಗಿ. ಜಾರು ಬಂಡೆಯಂಥ ಇಳುಕಲು ತೆರೆದುಕೊಂಡಿದೆ. ಅದು ಸುರಕ್ಷಿತ. ಅದರಲ್ಲಿ ಜಾರುವ ಮೂಲಕ ಇಳಿಯಿರಿ. ಬ್ಯಾಗ್ ಹೊತ್ತು ಜಾರುವುದು ಅಸಾಧ್ಯ. ಹೀಗಾಗಿ ನೀವೊಬ್ಬರೇ ಇಳಿಯಿರಿ. ಮೊದಲು ನೀವು ಬಚಾವ್ ಆಗಿ" ಎಂದು ಕಟ್ಟುನಿಟ್ಟಾಗಿ ಹೇಳಿದ.

ಅಂದಿನ ಚಿತ್ರಣವನ್ನು ಮನದಲ್ಲೊಮ್ಮೆ ಕಲ್ಪಿಸಿಕೊಳ್ಳಿ.. ಒಂದೆಡೆ ಡಿಕ್ಕಿ ಹೊಡೆದ ರಭಸಕ್ಕೆ ಕಲ್ಪವಿಲವಾದ ಪ್ರಯಾಣಿಕರು, ಇನ್ನೊಂದೆಡೆ ಬೆಂಕಿ ಹೊತ್ತಿಕೊಂಡ ವಿಮಾನ. ಹೊಗೆ ನುಗ್ಗಿ ಉಸಿರುಗಟ್ಟುವ ಪರಿಸ್ಥಿತಿ. ಆದರೆ ವಿಮಾನದೊಳಗೆ ಪ್ರಯಾಣಿಕರು ಕಂಗಾಲುಪೆಟ್ಟಿಗೆಯಾಗಿರಲಿಲ್ಲ. ತಳ್ಳಾಟ, ನೂಕಾಟ, ಕಿರುಚಾಟಗಳಿಗೆ ಆಸ್ಪದವಿರಲಿಲ್ಲ. ಒಬ್ಬರನ್ನು ಹಿಂದಿಕ್ಕಿ ಮುಂದಕ್ಕೆ ನುಗ್ಗುವ ಹಾಕ್ಯಾಟಗಳೂ ಇರಲಿಲ್ಲ. ಆದರೆ ಸಮಯ ಯಾರಿಗೂ ಕಾಯುವುದಿಲ್ಲ. ಪ್ರತಿ ಕ್ಷಣವನ್ನೂ ಫಾಸ್ಟ್ ಫಾರ್ವರ್ಡ್ ಮಾಡಿದಂಥ ಸ್ಥಿತಿ. ಅಷ್ಟೊತ್ತಿಗೆ ವಿಮಾನದೊಳಗಿನ ಸಂಪರ್ಕ ವ್ಯವಸ್ಥೆ ಸ್ಥಗಿತವಾಗಿಬಿಟ್ಟಿತು. ಪೈಲಟ್ ಮತ್ತು ಸಹಚರರು ಜೋರಾಗಿ ಕಿರುಚಿಕೊಳ್ಳುವುದರ ಹೊರತಾಗಿ ಬೇರೆ ಸಂಪರ್ಕ ವ್ಯವಸ್ಥೆಯಿರಲಿಲ್ಲ.

ಆ ಸಂದರ್ಭದಲ್ಲೂ ವಿಮಾನದ ಸಹಚರರು ತಮ್ಮ ತಮ್ಮ ಜೀವಗಳನ್ನು ಬಚಾವ್ ಮಾಡಿಕೊಳ್ಳಲು ಪ್ರಯಾಣಿಕರಿಗಿಂತ ಮೊದಲೇ ಜಾರಿ ಹೋಗಲಿಲ್ಲ. ಮೂರು ದ್ವಾರಗಳ ಸನಿಹ ನಿಂತು ಪ್ರತಿಯೊಬ್ಬ ಪ್ರಯಾಣಿಕರನ್ನೂ ರಕ್ಷಿಸಲು ಹೆಣಗುತ್ತಿದ್ದರು. ಈ ಮಧ್ಯೆ, ವಿಮಾನದಲ್ಲಿ ಸ್ಫೋಟವಾದ ಸದ್ದುಗಳು ಕೇಳಿಬರುತ್ತಿದ್ದವು. ಬೆಂಕಿಯ ತೀವ್ರತೆ ಹೆಚ್ಚುತ್ತಿತ್ತು. ಸಮಯ ಕ್ಷಿಪ್ರಗತಿಯಲ್ಲಿ ಜಾರುತ್ತಿತ್ತು. ಪೈಲಟ್ ಮತ್ತು ಸಹಚರರ ಉದ್ವೇಗ ಜಾಸ್ತಿಯಾಗಲಾರಂಭಿಸಿತು. ಸಾಮಾನ್ಯ ಸಂದರ್ಭದಲ್ಲಾಗಿದ್ದರೆ, 379 ಮಂದಿ ಪ್ರಯಾಣಿಕರನ್ನು ವಿಮಾನದಿಂದ ಖಾಲಿ ಮಾಡಿಸಲು ಕನಿಷ್ಠ ಇಪ್ಪತ್ತು-ಮೂವತ್ತು ನಿಮಿಷಗಳು ಬೇಕು. ಆದರೆ ಅಂದು ಇದ್ದ ಸಮಯ ಕೇವಲ ಒಂದು-ಒಂದೂವರೆ ನಿಮಿಷ!

ಕ್ಯಾಪ್ಟನ್ ದ್ವಾರದ ಬಳಿ ನಿಂತು ತನ್ನ ಸಹಚರರಿಗೆ ಮತ್ತು ಪ್ರಯಾಣಿಕರಿಗೆ ಸ್ಪಷ್ಟ ಮತ್ತು ನಿರ್ದಿಷ್ಟ ಸೂಚನೆಗಳನ್ನು ನೀಡುತ್ತಿದ್ದ. 440 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿರುವ ಎ-350-900 ವಿಮಾನ, ಎಂಟು ನಿರ್ಗಮನ ದ್ವಾರಗಳ ಮೂಲಕ ತೊಂಬತ್ತು ಸೆಕೆಂಡುಗಳಲ್ಲಿ ಎಲ್ಲರನ್ನೂ ಖಾಲಿ ಮಾಡುವ ವ್ಯವಸ್ಥೆಯನ್ನು ಹೊಂದಿದೆ. ಆದರೆ ಅಂದು ಐದು ನಿರ್ಗಮನ ದ್ವಾರಗಳಲ್ಲಿ ಬೆಂಕಿಯ ತೀವ್ರತೆ ಹೆಚ್ಚಿದ್ದರಿಂದ ಆ ಮಾರ್ಗವನ್ನು ಬಳಸುವಂತಿರಲಿಲ್ಲ. ಮೂರು ದ್ವಾರಗಳ ಮೂಲಕ 379 ಮಂದಿ ಪ್ರಯಾಣಿಕರನ್ನು ಬಚಾವ್ ಮಾಡುವುದು ನಿಜಕ್ಕೂ ಅಸಾಧ್ಯ ಎಂದೇ ಪರಿಗಣಿತವಾದ ಸನ್ನಿವೇಶದಲ್ಲಿ ಅವರೆಲ್ಲರನ್ನೂ ಸುರಕ್ಷಿತವಾಗಿ ಹೊರಕ್ಕೆ ಕಳಿಸಿದ್ದು, ಯಾರೂ ಪ್ರಾಣಾಪಾಯಕ್ಕೆ ತುತ್ತಾಗದಂತೆ ಎಚ್ಚರವಹಿಸಿದ್ದು ಕಲ್ಪನೆಗೂ ನಿಲುಕದ್ದು.

ಅಂದು ವಿಮಾನದ ಪೈಲಟ್ ಮತ್ತು ಸಿಬ್ಬಂದಿ ಮಾತ್ರ ಅಲ್ಲ, ಪ್ರಯಾಣಿಕರು ವರ್ತಿಸಿದ ರೀತಿಯೂ ಸಿಂಪ್ಲಿ ಗ್ರೇಟ್. ಯಾರೂ ಕಕ್ಕಾಬಿಕ್ಕಿಯಾಗಿ, ತಲ್ಲಣಗೊಂಡು ಅನಗತ್ಯ ನೂಕುನುಗ್ಗಲು, ತಳ್ಳಾಟಕ್ಕೆ ಆಸ್ಪದ ನೀಡದೇ, ಆ ತುರ್ತು ಸನ್ನಿವೇಶದಲ್ಲಿ ಸಂಯಮದಿಂದ ವರ್ತಿಸಿದ್ದು ಸಮೂಹ ಶಿಸ್ತಿನ ನಡತೆಗೆ ಹಿಡಿದ ಕೈಗನ್ನಡಿ. ಆ ಪೈಕಿ ಒಂದಿಬ್ಬರ ದುರ್ವರ್ತನೆ ಅಲ್ಲಿದ್ದ ಎಲ್ಲರ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿತ್ತು. ಆದರೆ ಯಾರೂ ಅಂಥದಕ್ಕೆ ಅವಕಾಶವನ್ನೇ ನೀಡಲಿಲ್ಲ. ಬೇರೆಯವರು ಹಾಳಾಗಿ ಹೋಗಲಿ, ನಾನು ಮೊದಲು ಬಚಾವ್ ಆಗಬೇಕು, ಪೈಲಟ್‌ಗೇನು ಗೊತ್ತು ನನ್ನ ಬ್ಯಾಗಿನಲ್ಲಿ ಅವೆಷ್ಟು ಅಮೂಲ್ಯ ಸಾಮಾನುಗಳಿವೆ, ಕಾಗದ ಪತ್ರಗಳಿವೆ, ಹಣವಿದೆ, ಹೀಗಾಗಿ ಹ್ಯಾಂಡ್‌ಬ್ಯಾಗ್ ಎತ್ತಿಕೊಳ್ಳೋಣ ಎಂದು ಯಾರೂ ಕ್ಯಾಬಿನ್‌ಗೆ ಕೈ ಹಾಕಲಿಲ್ಲ. ಯಾರಾದರೂ ಒಬ್ಬ ಹಾಗೆ ಮಾಡಿದ್ದರೆ, ಉಳಿದವರೂ ಹಾಗೆ ಮಾಡುತ್ತಿದ್ದರು. ಆಗ ವಿಮಾನದ ಇಕ್ಕಟ್ಟಾದ ಜಾಗದಲ್ಲಿ ಬೇಗ ಬೇಗ ನಡೆಯಲು ಸಾಧ್ಯವಾಗದೇ, ಪ್ರಯಾಣಿಕರನ್ನು ಖಾಲಿ ಮಾಡುವ ಕಾರ್ಯಾಚರಣೆ ವಿಳಂಬವಾಗುತ್ತಿತ್ತು. ಆದರೆ ಯಾರೂ ಕ್ಯಾಬಿನ್‌ಗೆ ಕೈಹಾಕಲು ಹೋಗಲಿಲ್ಲ. ಅದಕ್ಕಿಂತ ಹೆಚ್ಚಾಗಿ ಪೈಲಟ್ ಮತ್ತು ಸಿಬ್ಬಂದಿ ನೀಡುತ್ತಿದ್ದ ಸುರಕ್ಷತಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.

ಇದಕ್ಕೆ ಜಪಾನ್ ದೇಶದ ಜನರ ಸಾರ್ವಜನಿಕ ವರ್ತನೆ ಕಾರಣ. ಎಂಥ ತುರ್ತು ಪರಿಸ್ಥಿತಿಯಲ್ಲೂ ಶಿಸ್ತನ್ನು ಉಲ್ಲಂಘಿಸದೇ ಇರುವುದು ಅವರ ರಕ್ತದಲ್ಲಿ ಅಂತರ್ಗತವಾಗಿದೆ. ಒಂದು ನಿರ್ದಿಷ್ಟ ನಿಯಮ, ಸೂಚನೆಯನ್ನು ಪಾಲಿಸುವುದು ಅದೆಷ್ಟು ಮುಖ್ಯ ಎಂಬುದನ್ನು ಜಪಾನಿಯರನ್ನು ನೋಡಿ ಕಲಿಯಬೇಕು ಎಂಬುದು ಇನ್ನೊಮ್ಮೆ ಸಾಬೀತಾದಂತಾಗಿದೆ. 2016ರ ಆಗಸ್ಟ್ 3 ರಂದು ತಿರುವನಂತಪುರದಿಂದ ದುಬೈಗೆ ಹೋಗುವ ಎಮಿರೇಟ್ಸ್ ವಿಮಾನ, ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗುವಾಗ ಅಪಘಾತಕ್ಕೀಡಾಯಿತು. ವಿಮಾನದಲ್ಲಿ 282 ಪ್ರಯಾಣಿಕರು ಸೇರಿದಂತೆ ಮುನ್ನೂರು (18 ವಿಮಾನ ಸಿಬ್ಬಂದಿ) ಜನರಿದ್ದರು. ಅದೃಷ್ಟವಶಾತ್ ಎಲ್ಲರೂ ಬಚಾವ್ ಆದರು.

ಆದರೆ ಅಂದು ವಿಮಾನದೊಳಗೆ ಪ್ರಯಾಣಿಕರು ವರ್ತಿಸಿದ ರೀತಿ ಅತ್ಯಂತ ಕೆಟ್ಟದಾಗಿತ್ತು. ಅವರದು ನಾಗರಿಕ ಸಮಾಜದ ವರ್ತನೆಯಾಗಿರಲಿಲ್ಲ. ಒಬ್ಬರನ್ನು ಇನ್ನೊಬ್ಬರು ನೂಕಿದರು, ಕೆಳಕ್ಕೆ ಕೆಡವಿದರು, ಕಾಲಿನಲ್ಲಿ ತುಳಿದರು, ಜೀವ ರಕ್ಷಿಸಿಕೊಳ್ಳುವ ಭರದಲ್ಲಿ ಹೆಂಗಸರು-ಮಕ್ಕಳು-ವೃದ್ಧರು ಎಂಬುದನ್ನು ನೋಡದೇ ತಳ್ಳಾಡಿದರು.. ಅದಕ್ಕಿಂತ ಹೆಚ್ಚಾಗಿ, ಯಾರೂ ಹ್ಯಾಂಡ್‌ಬ್ಯಾಗ್ ತೆಗೆದುಕೊಂಡು ಹೋಗಬಾರದು ಎಂದು ಪೈಲಟ್ ಮತ್ತು ಸಿಬ್ಬಂದಿ ಪದೇ ಪದೆ ಹೇಳಿದರೂ ಅವರ ಮಾತನ್ನು ಯಾರೂ ಲಕ್ಷಿಸಲಿಲ್ಲ. ವಿಮಾನದಿಂದ ಹೊರಗೆ ದೌಡಾಯಿಸುವಾಗ ಬಹುತೇಕ ಎಲ್ಲರ ಕೈಗಳಲ್ಲೂ ಬ್ಯಾಗುಗಳಿದ್ದವು. 1990ರ ಫೆಬ್ರವರಿ 14ರಂದು ಬೆಂಗಳೂರಿನಲ್ಲಿ ಇಂಡಿಯನ್ ಏರ್‌ಲೈನ್ಸ್‌ನ ಏರ್‌ಬಸ್ ಅಪಘಾತಕ್ಕೀಡಾದಾಗ 92 ಜನ ಸತ್ತರು. ಬದುಕುಳಿದವರ ಕೈಯಲ್ಲಿ ಹ್ಯಾಂಡ್‌ಬ್ಯಾಗುಗಳಿದ್ದವು!

ವಿಮಾನ ಹಾರುವ ಮುನ್ನ ಪ್ರಯಾಣಿಕರು ಪಾಲಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಗಗನಸಖಿಯರು ಖುದ್ದಾಗಿ ಆಂಗಿಕ ಸೂಚನೆ ನೀಡುತ್ತಾರೆ. ಆದರೆ ಬಹುತೇಕ ಪ್ರಯಾಣಿಕರು ಗಮನಿಸುವುದಿಲ್ಲ. ಒಮ್ಮೆ ಗಮನಿಸಿದರೂ ಪಾಲಿಸುವುದಿಲ್ಲ. ವಿಮಾನ ಹಾರುವಾಗ ಮತ್ತು ಇಳಿಯುವಾಗ ಸೀಟ್ ಬೆಲ್ಟ್ ಕಟ್ಟಿಕೊಳ್ಳಬೇಕು ಎಂಬುದು ಸಾಮಾನ್ಯ ನಿಯಮವಾದರೂ ಎಲ್ಲರೂ ಅದನ್ನು ಪಾಲಿಸುವುದಿಲ್ಲ. ವಿಮಾನ ಇಳಿಯುವಾಗ 32 ಸುರಕ್ಷತಾ ಕ್ರಮಗಳನ್ನು ಪೈಲಟ್ ಪಾಲಿಸಬೇಕಾಗುತ್ತದೆ. ಆ ಪೈಕಿ ಪ್ರಯಾಣಿಕರು ಸೀಟ್ ಬೆಲ್ಟ್ ಕಟ್ಟಿಕೊಳ್ಳುವುದೂ ಒಂದು. ಇವುಗಳ ಪೈಕಿ ಒಂದೆರಡು ಕ್ರಮಗಳನ್ನು ಪಾಲಿಸದಿದ್ದರೂ ಸಣ್ಣ ಜರ್ಕ್ ಉಂಟಾಗುತ್ತದೆ ಎಂಬ ಎಚ್ಚರ ಪ್ರಯಾಣಿಕರಿಗೆ ಇರುವುದಿಲ್ಲ. ವಿಮಾನದೊಳಗಿನ ಒಬ್ಬನ ವರ್ತನೆ ಇಡೀ ವಿಮಾನದ ಸುರಕ್ಷತೆಯನ್ನು ಆಧರಿಸಿರುತ್ತದೆ. ಟಾಯ್ಲೆಟ್‌ಗೆ ಹೋಗಿ ಒಬ್ಬ ಸಿಗರೇಟು ಹಚ್ಚಿದರೆ ಏನಾಗಬಹುದು, ಯೋಚಿಸಿ.

ಅಂದು ಜಪಾನ್ ಏರ್‌ಲೈನ್ಸ್‌ನಲ್ಲಿ ಪ್ರಾಣ ಬದುಕಿಸಿಕೊಂಡ ಎಲ್ಲ 379 ಮಂದಿಯ ವರ್ತನೆಯನ್ನು ಆ ದೇಶವೊಂದೇ ಅಲ್ಲ, ಇಡೀ ಜಗತ್ತು ಪ್ರಶಂಸಿಸುತ್ತಿದೆ. ವಿಮಾನ ಪ್ರಯಾಣಿಕರಿಗೆ ಇವರು ಯಾವಜ್ಜೀವ ಆದರ್ಶ ಎಂದು ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಪ್ರಯಾಣಿಕರಾಗಿ ವಿಮಾನದಲ್ಲಿ ನಮ್ಮ ವರ್ತನೆ ಹೇಗಿರಬೇಕು ಎಂಬುದಕ್ಕೆ ಇವರು ರೋಲ್ ಮಾಡೆಲ್‌ಗಳಾಗಿದ್ದಾರೆ. ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗುತ್ತಿರುವ ಈ ದಿನಗಳಲ್ಲಿ, ಟೋಕಿಯೋದ ಹನೆಡಾ ವಿಮಾನ ನಿಲ್ದಾಣದಲ್ಲಿ ನಡೆದ ಈ ಪ್ರಸಂಗ ಎಲ್ಲರಿಗೂ ಪಾಠವಾಗಬೇಕು.

ಮಹತ್ವಾಕಾಂಕ್ಷೆಗೆ ಹೊಸ ಹೆಸರು 'ದೇವ ಭಾವು'!

ಹಿಂದಿನ ಅವಧಿಯಲ್ಲಿ ಮಾಡದೆ ಉಳಿಸಿದ ಕೆಲಸಗಳನ್ನು ಮಾಡಿ ಮುಗಿಸಲು, ಹೊಸ ಕನಸುಗಳನ್ನು ಸಾಕಾರಗೊಳಿಸಲು ಇನ್ನೊಂದು ಅವಧಿಗೆ ದೇವೇಂದ್ರ ಫಡ್ನವೀಸ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗುತ್ತಿದ್ದಾರೆ. ಇಡೀ ಮಹಾರಾಷ್ಟ್ರ ರಾಜ್ಯವು ಅವರ ಮೇಲೆ ಬಹಳ ನಿರೀಕ್ಷೆಗಳನ್ನಿಟ್ಟುಕೊಂಡಿದೆ. ಅವರಿಗೆ ಸಾಮಾನ್ಯ ಜನರ ಅಗತ್ಯಗಳ ಬಗ್ಗೆ ಗೊತ್ತಿದೆ, ಅವನ್ನು ಈಡೇರಿಸುವುದು ಹೇಗೆಂಬುದೂ ತಿಳಿದಿದೆ.

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಈ ಸಲವೂ ಮಹಾರಾಷ್ಟ್ರದಲ್ಲಿ ಖಂಡಿತ 'ಮಹಾಯುತಿ' ಮೈತ್ರಿಕೂಟದ ಸರಕಾರವೇ ಅಧಿಕಾರಕ್ಕೆ ಬರುತ್ತದೆ ಎಂಬುದು ರಾಜ್ಯದ ಜನರಿಗೆ ಗೊತ್ತಿತ್ತು. ಆದರೆ, ಮಹಾಯುತಿ ಮೈತ್ರಿಕೂಟ ಇಷ್ಟೊಂದು ದೊಡ್ಡ ಬಹುಮತ ಗಳಿಸಿ ಅಧಿಕಾರಕ್ಕೆ ಮರಳಿ ಬರುತ್ತದೆ ಎಂದು ನುರಿತ ರಾಜಕೀಯ ಪಂಡಿತರೂ ಊಹೆ ಮಾಡಿರಲಿಲ್ಲ. ಅದರಲ್ಲೂ ಈ ಚುನಾವಣೆಯಲ್ಲಿ ಬಿಜೆಪಿ ಮಾಡಿದ ಸಾಧನೆಯಿದೆಯಲ್ಲ, ಅದು ಅದ್ಭುತ. 149 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 132 ಸೀಟು ಗಳಿಸುವುದು ಸಾಮಾನ್ಯವೇ? ನಿಸ್ಸಂಶಯವಾಗಿ ಬಿಜೆಪಿಯ ಈ ಜಯದ ಹಿಂದಿರುವ ಸೂತ್ರಧಾರ ದೇವೇಂದ್ರ ಫಡ್ನವೀಸ್. ಸರಳ ಮತ್ತು ವಿನಯವಂತ ಮುಖ್ಯಮಂತ್ರಿಯಾಗಿದ್ದ ಏಕನಾಥ್ ಶಿಂದೆಯವರ ನಾಯಕತ್ವದಲ್ಲಿ ಮಹಾಯುತಿ ಸರಕಾರದ 'ಲಡ್ಕಿ ಬಹಿನ್ ಯೋಜನೆ' ಮಹಿಳಾ ಮತದಾರರ ಮೇಲೆ ಮ್ಯಾಜಿಕ್ ಮಾಡಿತು. ಅದು ವಿಪಕ್ಷಗಳಿಗೆ ನೀಡಿದ ಮಾಸ್ಟರ್ ಸ್ಟ್ರೋಕ್ ಆಗಿತ್ತು. ಮಹಾಯುತಿ ಗೆಲುವಿನಲ್ಲಿ ಈ ಯೋಜನೆಯ ಪಾತ್ರ ಬಹಳ ದೊಡ್ಡದಿದೆ. ಈ ಯಶಸ್ಸು ಬಿಜೆಪಿ ಮೈತ್ರಿಕೂಟಕ್ಕೆ ಕೇವಲ ಚುನಾವಣೆಯಲ್ಲಿ ಮಾತ್ರ ಜಯ ತಂದುಕೊಟ್ಟಿಲ್ಲ. ಅದರ ಜತೆಗೇ ದೇವೇಂದ್ರ ಫಡ್ನವೀಸ್‌ಗೆ ಹೊಸ ವಿಶೇಷಣವನ್ನೂ ಗಳಿಸಿಕೊಟ್ಟಿದೆ. ಅದುವೇ- 'ದೇವ ಭಾವು'.

ಮರಾಠಿಯಲ್ಲಿ 'ದೇವ ಭಾವು' ಅಂದರೆ 'ದೇವೇಂದ್ರ ಭಾಯಿ' ಎಂದು ಅರ್ಥ ಹೇಳಬಹುದು. ಆದರೆ ಕೆಲ ಮಹಿಳೆಯರು ಫಡ್ನವೀಸ್‌ರನ್ನು 'ದೈವಿಕ ಭಾಯಿ' ಅಥವಾ ದೇವರಂಥ ಹಿರಿಯಣ್ಣ ಎಂದು ಕರೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದೊಂದು ಅಚ್ಚರಿಯ ಬದಲಾವಣೆ. ಒಬ್ಬ ವ್ಯಕ್ತಿಗೆ ಇಷ್ಟು ದೊಡ್ಡ ಗೌರವ ಮತ್ತು ಪ್ರೀತಿ ಸಿಗತೊಡಗಿದೆ ಅಂದರೆ ಅದರ ಹಿಂದೆ ನಿಸ್ಸಂಶಯವಾಗಿ ಪ್ರಬಲವಾದ ಕಾರಣವೇ ಇರುತ್ತದೆ. ದೇವ ಭಾವು ಎಂಬುದಕ್ಕೆ ದೇವೇಂದ್ರ ಭಾಯಿ ಎಂದು ಅರ್ಥ ಕಲ್ಪಿಸಿದರೂ ಸರಿ ಅಥವಾ ದೇವರಂಥ ಅಣ್ಣ ಎಂದು ಹೇಳಿದರೂ ಸರಿ, ಅವೆರಡೂ ಬಹಳ ದೊಡ್ಡ ಗೌರವವೇ ಆಗಿವೆ. ಅಂಥ ಗೌರವ ಯಾರಿಗೂ ಸುಲಭವಾಗಿ ಸಿಗುವುದಿಲ್ಲ, ಅದನ್ನು ಕಷ್ಟಪಟ್ಟು ಗಳಿಸಬೇಕಾಗುತ್ತದೆ.

ನಾನು ದೇವೇಂದ್ರ ಫಡ್ನವೀಸ್‌ರನ್ನು ಬಹಳ ವರ್ಷಗಳಿಂದ ನೋಡುತ್ತಿದ್ದೇನೆ. ಅವರು ಕಾರ್ಪೊರೇಟರ್ ಆಗಿ, ಮೇಯರ್ ಆಗಿ, ಹಂತಹಂತವಾಗಿ ಮೇಲಕ್ಕೇರಿ, ಕೊನೆಗೆ ಮುಖ್ಯಮಂತ್ರಿಯಾಗಿದ್ದಕ್ಕೆ ಸಾಕ್ಷಿಯಾಗಿದ್ದೇನೆ. ಉಪಮುಖ್ಯಮಂತ್ರಿಯಾಗಿದ್ದಾಗ ಅವರು ಆಡಳಿತದ ಕಲೆಯನ್ನು ಕರಗತ ಮಾಡಿಕೊಂಡರು. ಕೆಲಸ ಮಾಡಿಸುವುದು ಹೇಗೆ, ಪರಿಣಾಮಕಾರಿಯಾಗಿ ಆಡಳಿತ ನಡೆಸುವುದು ಹೇಗೆ ಹಾಗೂ ಎಲ್ಲರ ನಡುವೆ ಎದ್ದು ಕಾಣಿಸುವಂತೆ ಬೆಳೆಯುವುದು ಹೇಗೆ ಎಂಬುದನ್ನು ಬಹಳ ಚಾಣಾಕ್ಷತೆಯಿಂದ ಮೈಗೂಡಿಸಿಕೊಂಡರು. ಈಗ ಮತ್ತೆ ಮುಖ್ಯಮಂತ್ರಿಯಾಗಿ ಬರುತ್ತಿದ್ದಾರೆ. ಹೀಗಾಗಿ ಇಡೀ ಮಹಾರಾಷ್ಟ್ರ ರಾಜ್ಯವು ಅವರ ಮೇಲೆ ಬಹಳ ನಿರೀಕ್ಷೆಗಳನ್ನಿಟ್ಟುಕೊಂಡಿದೆ. ನಾನೊಬ್ಬ ಪತ್ರಕರ್ತನಾಗಿ ಮತ್ತು ಸಂಸದೀಯ ರಾಜಕಾರಣದಲ್ಲಿ ಅನುಭವ ಹೊಂದಿರುವ ವ್ಯಕ್ತಿಯಾಗಿ ತುಂಬಾ ಆತ್ಮವಿಶ್ವಾಸದಿಂದ ಹೇಳುವುದಾದರೆ, ದೇವೇಂದ್ರ ಫಡ್ನವೀಸ್‌ರಂಥ ನೇರ ನಡೆ-ನುಡಿಯ, ಜನಸಾಮಾನ್ಯರ ಏಳ್ಗೆಗಾಗಿ ಮನಸಾರೆ ಕೆಲಸ ಮಾಡುವ ಹಾಗೂ ಬದ್ಧತೆಯೊಂದಿಗೆ ರಾಜಕಾರಣ ಮಾಡುವ ನಾಯಕರು ತುಂಬಾ ಅಪರೂಪ. ಅವರಿಗೆ ಸಾಮಾನ್ಯ ಜನರ ಅಗತ್ಯಗಳ ಬಗ್ಗೆ ಗೊತ್ತಿದೆ ಮತ್ತು ಅವುಗಳನ್ನು ಈಡೇರಿಸುವುದು ಹೇಗೆಂಬುದೂ ತಿಳಿದಿದೆ.

ಈಗ ಅವರಿಗೆ ಜನರೇ ಮುಂದಾಗಿ ದೇವ ಭಾವು ಎಂಬ ಪದವಿಯನ್ನು ದಯಪಾಲಿಸಿದ್ದಾರೆ. ರಾಜಕೀಯವಾಗಿ ಅವರನ್ನು ತಮ್ಮ ನಾಯಕನೆಂದು ಒಪ್ಪಿಕೊಂಡಿದ್ದಾರೆ. ಮಹಾರಾಷ್ಟ್ರವನ್ನು ಇನ್ನೈದು ವರ್ಷ ನೀವೇ ಆಳಬೇಕು ಎಂದು ಆಶೀರ್ವಾದ ಮಾಡಿದ್ದಾರೆ. ಅದಕ್ಕಾಗಿಯೇ ಮಹಾಯುತಿಗೆ ಇಷ್ಟು ದೊಡ್ಡ ಜಯ ನೀಡಿದ್ದಾರೆ. ಇವೆಲ್ಲದರಿಂದ ಸಹಜವಾಗಿಯೇ ದೇವ ಭಾವು ಅವರಿಗೆ ಕೂಡ ಸಂತೋಷವಾಗಿದೆ. ಜನರು ತಮ್ಮ ಪ್ರೀತಿಯನ್ನು ಅವರ ಮೇಲೆ ಮಳೆಗರೆದಂತೆ ಸುರಿಸಿದ ಮೇಲೆ ಅದನ್ನು ಉಳಿಸಿಕೊಳ್ಳುವುದು ಹಾಗೂ ಅದಕ್ಕೆ ಪ್ರತಿಯಾಗಿ ಜನರಿಗೂ ಒಳಿತು ಮಾಡುವುದು ಈಗ ಅವರ ಜವಾಬ್ದಾರಿಯಾಗಿದೆ. ಜನರ ಪಾಲಿಗೆ ಅವರು ದೇವನೂ ಹೌದು, ಅಣ್ಣನೂ (ಭಾವು) ಹೌದು. ದೇವರಿಗೆ ಅಸಾಧ್ಯವಾದದ್ದು ಏನಿದೆ? ಹಾಗೆಯೇ, ಒಬ್ಬ ಅಣ್ಣ ಮನಸ್ಸು ಮಾಡಿದರೆ ತನ್ನ ತಮ್ಮಂದಿರು ಹಾಗೂ ಅಕ್ಕ-ತಂಗಿಯರಿಗೆ ಏನು ಬೇಕಾದರೂ ಮಾಡಬಲ್ಲ ಅಲ್ಲವೇ? ಅಣ್ಣನ ಪ್ರೀತಿಗೆ ಅಸಾಧ್ಯವಾದದ್ದು ಏನೂ ಇಲ್ಲ. ಅತ್ಯಂತ ಹಿಂದುಳಿದ ಹಾಗೂ ಸಂಕಷ್ಟದಲ್ಲಿರುವ ವಿದರ್ಭ ಪ್ರಾಂತವೂ ಸೇರಿದಂತೆ ಕಷ್ಟಕಾರ್ಪಣ್ಯಗಳು ಹೆಚ್ಚಿರುವ ಪ್ರದೇಶಗಳಲ್ಲಿ ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವುದು ಅವರ ಆದ್ಯತೆಯಾಗಬೇಕಿದೆ.

ದೇವೇಂದ್ರ ಫಡ್ನವೀಸ್‌ರ ರಾಜಕೀಯ ಪ್ರಯಾಣ ಶುರುವಾಗಿದ್ದೇ ವಿದರ್ಭದಿಂದ. ಆ ಕಾರಣದಿಂದಲೇ ನಾನು ಉದಾಹರಣೆ ನೀಡಲು ಅದೇ ಹೆಸರನ್ನು ಬಳಸಿಕೊಂಡೆ. 2014ರ ಬಳಿಕ ವಿದರ್ಭದಲ್ಲಿ ಸಾಕಷ್ಟು ಅಭಿವೃದ್ಧಿ ಆಗಿದೆ. ಹೀಗಾಗಿ ಅಲ್ಲಿ ಆಗಬೇಕಾದ ಕೆಲಸಗಳು ಈಗ ಮೊದಲಿನಷ್ಟಿಲ್ಲ. ಹಾಗಂತ ಹಿಂದುಳಿದ ಹಣೆಪಟ್ಟಿಯಿಂದ ಈಗಲೂ ಆ ಪ್ರದೇಶ ಸಂಪೂರ್ಣ ಹೊರಬಂದಿಲ್ಲ. ವಿದ್ಯುತ್ ಸಂಪರ್ಕ, ನೀರಿನ ಪೂರೈಕೆ, ಉದ್ದಿಮೆಗಳು, ವಸತಿ, ಶಿಕ್ಷಣ ಹಾಗೂ ರಸ್ತೆ ಮೂಲಸೌಕರ್ಯಗಳ ಕೊರತೆ ವಿದರ್ಭದ ಕೆಲ ಪ್ರದೇಶಗಳಲ್ಲಿ ಇವತ್ತಿಗೂ ಇದೆ. ಈ ಸಮಸ್ಯೆಗಳನ್ನು ಬಗೆಹರಿಸಲು ದೇವೇಂದ್ರ ಫಡ್ನವೀಸ್ ಈಗಾಗಲೇ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಅವರು ತಮ್ಮ ಪ್ರದೇಶದ ಜನರ ಏಳ್ಗೆಗಾಗಿ ಪ್ರಾಮಾಣಿಕವಾಗಿ ಮಾಡಿದ ಕಾರ್ಯಗಳು ಸಾಕಷ್ಟು ಫಲವನ್ನೂ ನೀಡಿವೆ. 'ಜಲ ಶಿವರ್' ಯೋಜನೆಯ ಮೂಲಕ ಮಹಾಯುತಿ ಸರಕಾರ ಸಾವಿರಾರು ಒಣ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಅದರಿಂದಾಗಿ ಅನೇಕ ಕಡೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿದೆ. ಈಗಲೂ ಕೆಲ ಪ್ರದೇಶಗಳಲ್ಲಿ ಸಮಸ್ಯೆಗಳಿವೆ ಅಂತಾದರೆ ಅದಕ್ಕೆ ಕಾರಣ ಆಡಳಿತಾತ್ಮಕ ನಿಷ್ಕ್ರಿಯತೆಯಷ್ಟೇ. ಸಮೃದ್ಧಿ ಎಕ್ಸ್‌ಪ್ರೆಸ್ ವೇಯಂಥ ಯೋಜನೆಗಳು ದೇವೇಂದ್ರ ಫಡ್ನವೀಸ್‌ರ ಅದ್ಭುತ ದೂರದೃಷ್ಟಿ ಮತ್ತು ಪಟ್ಟಾಗಿ ಕುಳಿತು ಕೆಲಸ ಮಾಡುವ ಬದ್ಧತೆಯ ಫಲವಾಗಿ ಹೇಗೆ ಮೂಡಿಬಂದವು ಎಂಬುದನ್ನು ನಾನು ಈ ಹಿಂದಿನ ಅಂಕಣಗಳಲ್ಲಿ ಹೇಳಿದ್ದೇನೆ. ಈಗ ಜನರು ಅಂಥದೇ ಇನ್ನಷ್ಟು ಉತ್ತಮ ಯೋಜನೆಗಳನ್ನು ದೇವ ಭಾವು ತರಲಿ ಎಂದು ನಿರೀಕ್ಷಿಸುತ್ತಿದ್ದಾರೆ. ಇಡೀ ದೇಶದಲ್ಲೇ ಮಹಾರಾಷ್ಟ್ರದ ಸ್ಥಾನವನ್ನು ಇನ್ನಷ್ಟು ಎತ್ತರಕ್ಕೇರಿಸುವ ನಿಟ್ಟಿನಲ್ಲಿ ಫಡ್ನವೀಸ್ ಯಶಸ್ವಿಯಾಗಬೇಕು ಎಂದು ಅವರು ಬಯಸುತ್ತಾರೆ. ನಿಜ, ಸಮೃದ್ಧಿ ಎಕ್ಸ್‌ಪ್ರೆಸ್‌ವೇ ರೀತಿಯ ರಸ್ತೆಯನ್ನು ಎಲ್ಲಾ ಹಳ್ಳಿಗಳಿಗೂ ನಿರ್ಮಿಸಲು ಸಾಧ್ಯವಿಲ್ಲ, ಆದರೆ, ಕೊನೆಯ ಪಕ್ಷ ಹಳ್ಳಿಯ ಜನರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಗೆ ಸುಲಭವಾಗಿ ಸಾಗಿಸಲು ಸಾಧ್ಯವಾಗುವಂತೆ ನೆರವಾಗಲು ಸಾಮಾನ್ಯ ಟಾರು ರಸ್ತೆಯನ್ನಾದರೂ ನಿರ್ಮಿಸಬಹುದಲ್ಲವೇ? ಸ್ಥಳೀಯ ಮಾರುಕಟ್ಟೆಯಿಂದ ದೊಡ್ಡ ದೊಡ್ಡ ನಗರಗಳ ಮಾರುಕಟ್ಟೆಗೆ ರೈತರ ಉತ್ಪನ್ನಗಳು ತಲುಪಿದರೆ ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಒಳ್ಳೆಯ ದರ ಸಿಗುತ್ತದೆ.

ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಬರೆದಿರುವ 'ವಿಷನ್ 2020' ಕೃತಿಯಲ್ಲಿ ಇಂಥದೇ ಕನಸುಗಳಿವೆ. ನಾವೀಗ 2024ರ ಕೊನೆಯ ತಿಂಗಳಿನಲ್ಲಿದ್ದೇವೆ. ದೇವ ಭಾವು ಅವರು ಡಾ.ಕಲಾಂ ಕಂಡ ಕನಸನ್ನು ಮಹಾರಾಷ್ಟ್ರದಲ್ಲಿ ನಿಜವಾಗಿಸುವ ಅವಕಾಶ ಪಡೆದಿದ್ದಾರೆ. ಈಗಲೂ ರೈತರು ಬೆವರು ಸುರಿಸಿ ಬೆಳೆದ ಬೆಳೆಯನ್ನು ಮಾರುಕಟ್ಟೆಯಲ್ಲಿ ಬೆಲೆಯಿಲ್ಲ ಎಂಬ ಕಾರಣಕ್ಕೆ ರಸ್ತೆಗೆ ಸುರಿಯುವುದನ್ನು ನೋಡಿದರೆ ಎದೆ ಒಡೆಯುವಂತಾಗುತ್ತದೆ. ಹೀಗಾಗಿ, ಓ ದೇವಾ, ಈ ಪರಿಸ್ಥಿತಿಯನ್ನು ಬದಲಿಸು! ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ ಬೇರೆ ಬೇರೆ ಸಿದ್ಧ ಉತ್ಪನ್ನಗಳನ್ನು ತಯಾರಿಸಲು ರೈತರಿಗೆ ಅನುಕೂಲ ಒದಗಿಸು. ಫಡ್ನವೀಸ್‌ರಂಥ ದೂರದೃಷ್ಟಿ ಮತ್ತು ಬದ್ಧತೆಯುಳ್ಳ ನಾಯಕನಿಗೆ ಇದಾವುದೂ ಅಸಾಧ್ಯವಲ್ಲ.

ಒಂದು ರಾಜ್ಯ ಅಥವಾ ಒಂದು ದೇಶ ಅಭಿವೃದ್ಧಿಯ ದೃಷ್ಟಿಯಲ್ಲಿ ಹೊಸ ಮೈಲುಗಲ್ಲನ್ನು ಸಾಧಿಸಿದ ಬಳಿಕ ಮಾಡಬೇಕಾದ ಕೆಲಸವೇನು ಗೊತ್ತೇ? ಪ್ರದೇಶವಾರು ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವುದು. ಒಂದೇ ಪ್ರದೇಶದ ಮೇಲೆ ಅತಿಯಾಗಿ ಗಮನ ಹರಿಸಿದರೆ ಅಸಮತೋಲನ ಉಂಟಾಗುತ್ತದೆ. ಹೇಗೆ ಅತಿಯಾಗಿ ತಿಂದರೆ ಅಜೀರ್ಣವಾಗುತ್ತದೆಯೋ ಹಾಗೆ ಅಭಿವೃದ್ಧಿ ಅತಿಯಾದರೂ ಸಮಸ್ಯೆಯಾಗುತ್ತದೆ. ಒಂದೇ ಪ್ರದೇಶದಲ್ಲಿ ಆಧುನಿಕ ವ್ಯವಸ್ಥೆಗಳನ್ನೂ ಮೂಲಸೌಕರ್ಯಗಳನ್ನೂ ವಿಪರೀತವಾಗಿ ಬೆಳೆಸಲು ಹೋದರೆ ಪರಿಸರ ಸಂಬಂಧಿ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಹೀಗಾಗಿ ರಾಜ್ಯಾದ್ಯಂತ ಅಭಿವೃದ್ಧಿಯ ಯೋಜನೆಗಳನ್ನು ಹಂಚಿಕೆ ಮಾಡುವುದು ಹಾಗೂ ತನ್ಮೂಲಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಹೀಗಾಗಿ, ಓ ದೇವಾ... ಇದರ ಬಗ್ಗೆ ದಯವಿಟ್ಟು ಗಮನ ನೀಡು!

ಅಭಿವೃದ್ಧಿಯ ಹರಿವು ಹಳ್ಳಿಗಳಿಗೆ ತಲುಪಬೇಕು. ಏಕೆಂದರೆ ಭಾರತದ ವಿಶಿಷ್ಟ ಭೌಗೋಳಿಕ ವ್ಯವಸ್ಥೆಯಲ್ಲಿ ನಗರ ಪ್ರದೇಶಗಳ ಸಮಸ್ಯೆಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಪರಿಹಾರಗಳಿವೆ. ಹಳ್ಳಿಗಳಲ್ಲಿ ಸಣ್ಣ ಸಣ್ಣ ಉದ್ದಿಮೆಗಳು ತಲೆಯೆತ್ತಿದರೆ ಅಲ್ಲಿನ ಯುವಕರು ಏಕೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ? ಚೀನಾದಲ್ಲಿ ಇದಕ್ಕೆ ಒಳ್ಳೆಯ ಉದಾಹರಣೆಯಿದೆ. ಆ ದೇಶದವರು ಒಂದೊಂದು ಹಳ್ಳಿಯನ್ನು ಒಂದೊಂದು ಸರಕಿನ ಉತ್ಪಾದನಾ ಹಬ್ ಆಗಿ ರೂಪಿಸಿದ್ದಾರೆ. ಭಾರತಕ್ಕೂ ಅಂಥ ಶಕ್ತಿಯಿದೆ. ಇಲ್ಲೂ ಅಂಥ ಎಲ್ಲಾ ಅವಕಾಶಗಳಿವೆ. ಬೇಕಿರುವುದು ಏನೆಂದರೆ ಸಮಗ್ರ ದೃಷ್ಟಿಕೋನ ಮತ್ತು ಅದನ್ನು ಸಾಧಿಸಿಯೇ ತೀರುವ ಛಲ. ಅದು ದೇವೇಂದ್ರ ಫಡ್ನವೀಸ್‌ಗೆ ಇದೆ. ಆದರೆ ಒಂದು ಮಾತು, ಲಡ್ಕಿ ಬಹಿನ್ ಯೋಜನೆಯ ಮೂಲಕ ರಾಜ್ಯದ ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸುವಾಗ ಅವರ ಸುರಕ್ಷತೆಯನ್ನೂ ಗಮನದಲ್ಲಿಟ್ಟುಕೊಳ್ಳಿ, ದೇವ ಭಾವು!

ಇಲ್ಲಿ ಏಕನಾಥ್ ಶಿಂದೆಯವರ ವ್ಯಕ್ತಿತ್ವವನ್ನೂ ಮೆಚ್ಚಿಕೊಳ್ಳಬೇಕು. ಅವರು ಜನಸಾಮಾನ್ಯರ ಮುಖ್ಯಮಂತ್ರಿ ಎಂದು ಯಾವಾಗಲೂ ಮರಾಠಿಗರ ನೆನಪಿನಲ್ಲಿ ಉಳಿಯಲಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ ನಿರಂತರವಾಗಿ ಹಣಕಾಸಿನ ಲಭ್ಯತೆ ಇರುವಂತೆ ಅವರು ನೋಡಿಕೊಂಡರು. ಅವರ ಕೆಲಸದ ಶೈಲಿ ಕೆಲ ಅಧಿಕಾರಿಗಳಿಗೆ ಸರಿಕಾಣದೆ ಇದ್ದಿರಬಹುದು, ಆದರೆ ಅವರು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಹೆಚ್ಚು ಲಾಭ ಸಿಗುವಂತೆಯೇ ಸರಕಾರಿ ಯೋಜನೆಗಳನ್ನು ರೂಪಿಸಿದರು ಮತ್ತು ಜಾರಿಗೊಳಿಸಿದರು. ದುರ್ಬಲ ವರ್ಗದವರಿಗಾಗಿ ಅವರು ಮಾಡಿದ ಕೆಲಸಗಳು, ಅದರಲ್ಲೂ ಬಡವರಿಗಾಗಿ ತಂದ ಆರೋಗ್ಯ ಯೋಜನೆಗಳು ನಿಜಕ್ಕೂ ಅದ್ಭುತವಾಗಿವೆ. ಸರಕಾರವೆಂದರೆ ಯಾವತ್ತೂ ಅದು ಜನಸಾಮಾನ್ಯರನ್ನು ಪ್ರತಿನಿಧಿಸಬೇಕು ಮತ್ತು ಜನಸಾಮಾನ್ಯರಿಗಾಗಿ ಕೆಲಸ ಮಾಡಬೇಕು!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ಉಮೇಶ್ ಎಂ. ಶಿರಾ, ರಾಮನಗರ**
ಭಟ್ರೇ, ಜಪಾನಲ್ಲಿ ಗೂಬೇನ ಪೂಜೆ ಮಾಡ್ತಾರಂತೆ, ನಿಜಾನಾ?
- **ಅವರು ಅದನ್ನು ನಮ್ಮಿಂದ ಕಲಿತಿರಬಹುದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಬಡತನಕ್ಕೆ ಜಾತಿ ಇದೆಯಾ?
- **ನಮ್ಮಲ್ಲಿ ಜಾತಿಗೂ ಬಡತನವಿಲ್ಲ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ಸಿಕ್ಕಿಹಾಕಿಕೊಂಡ್ರೆ ಮಾತ್ರ ಕಳ್ಳನಾ?
- **ಸಿಕ್ಕಿಹಾಕಿಕೊಂಡ ಎಷ್ಟು ಜನರನ್ನು ಕಳ್ಳ ಎಂದು ಒಪ್ಪಿಕೊಂಡಿದ್ದೇವೆ, ಮೊದಲು ಹೇಳು!**

- **ವೀರೇಶ ಮಂಗಸೂಳಿ, ಖಾನಾಪುರ**
ಭಟ್ಟರು ಊರಲ್ಲಿದ್ದರೆ ಉಪಸ್ಥಿತಿ, ಹೊರಗೆ ಹೋದರೆ ಅನುಪಸ್ಥಿತಿ. ಆಫೀಸ್‌ನ ಸ್ಥಿತಿ?
- **ಯಥಾಸ್ಥಿತಿ!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ಟರು ಮಸ್ಕತ್‌ಗೆ ಹೋಗಿದ್ದು ಮಾತ್ರ ಸುದ್ದಿಯಾಯ್ತು. ಅಲ್ಲಿ ಅವರು ಏನು ಹೇಳಿದ್ರು ಅನ್ನುವುದು ಯಾಕೆ ಸುದ್ದಿಯಾಗಲಿಲ್ಲ?
- **ಹೇಳಿದ್ದು ಸುದ್ದಿಯಲ್ಲ, ಮಾಡಿದ್ದಷ್ಟೇ!**

- **ಸತೀಶ ಕಮ್ಮನಹಳ್ಳಿ, (ಇಮೇಲ್ ಮೂಲಕ)**
ಭಟ್ರೇ, ಬಿಗ್ ಬಾಸ್‌ನಿಂದ ಚೈತ್ರಾ ಕುಂದಾಪುರ ಹೊರಬಂದರಂತೆ?
- **ಹೊರಬರಲಿ, ಒಳಗಿರಲಿ ಅದರಿಂದ ಕರ್ನಾಟಕಕ್ಕೆ ಏನಾಗುತ್ತದೆ ಅದನ್ನು ಮೊದಲು ಹೇಳು!**

- **ಸರಿತಾ ರವಿ, ಬೆಂಗಳೂರು**
ಭಟ್ರೇ, ಹೆಂಗಸರ ಜೀವನ ಅಡುಗೆಮನೆಯಲ್ಲಿ ಕಳೆದು ಹೋಗುತ್ತದಲ್ಲ?
- **ಅದು ನಿಜವಾದರೆ, ಗಂಡಸರ ಜೀವನ ಅಲ್ಲಿ ಉಂಡೇ ಕಳೆದುಹೋಗುತ್ತದೆ!**

- **ರವಿ ಸಿರವಾರ, ದಾವಣಗೆರೆ**
ಭಟ್ರೇ, ಡಾ.ಭೈರಪ್ಪನವರಿಗೆ ಜ್ಞಾನಪೀಠ ಪ್ರಶಸ್ತಿ ಸಿಗಬಹುದಾ?
- **ಮೊಯಿಲಿ ಲಾಬಿ ಮಾಡಿ ಹೊಡೆದು ಕೊಳ್ಳದಿದ್ದರೆ ಸಿಗಬಹುದು!**

- **ಸಚ್ಚಿದಾನಂದ ಭಾಗವತ, ಶಿರಸಿ**
ಭಟ್ರೇ, ಹಾಸನದಲ್ಲಿಯೇ ಸಮಾವೇಶ ಮಾಡಲು ನಿರ್ಧರಿಸಿರುವುದೇಕೆ?
- **ಇಷ್ಟೂ ಸಾಲದು ಎಂಬಂತೆ ಗೌಡರ ಹೊಟ್ಟೆಯನ್ನು ಮತ್ತಷ್ಟು ಉರಿಸಲು!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ನೀವು ಆಗಾಗ ವಿದೇಶ ಸುತ್ತುತ್ತಾ ಇರುತ್ತೀರಲ್ಲ?
- **ಸುಳ್ಳು.. ನಾನು ಆಗಾಗ ಭಾರತಕ್ಕೆ ಬರುತ್ತಿರುತ್ತೇನೆ!**

ಅಮೆರಿಕದಿಂದ ಭಾರತಕ್ಕೆ ಬಂದ ಯಯಾತಿ

ಕಾಡುದಾರಿ

ಹರೀಶ್ ಕೇರ
vveditoped@gmail.com

ಮಹಾಭಾರತದ ಯಯಾತಿಯ ಕತೆ ನಿಮಗೆ ಗೊತ್ತಿರಬಹುದು. ಚಕ್ರವರ್ತಿ ಯಯಾತಿಗೆ ಅಕಾಲ ವೃದ್ಧಾಪ್ಯ ಅಡರುತ್ತದೆ. ಅವನಿಗೆ ಈ ಶಾಪ ನೀಡಿದ ಶುಕ್ರಾಚಾರ್ಯರೇ 'ಈ ವೃದ್ಧಾಪ್ಯವನ್ನು ಯಾರ ಜತೆಗಾದರೂ ವಿನಿಮಯ ಮಾಡಿಕೋ' ಎನ್ನುವ ಪರಿಹಾರವನ್ನೂ ಕೊಡುತ್ತಾರೆ. ಆದರೆ ಅವನ ಅಷ್ಟೂ ಮಕ್ಕಳಲ್ಲಿ ಪುರು ಒಬ್ಬನೇ ತನ್ನ ಯೌವನವನ್ನು ತಂದೆಯೊಂದಿಗೆ ವಿನಿಮಯ ಮಾಡಿಕೊಳ್ಳಲು ಒಪ್ಪುತ್ತಾನೆ. ಹೀಗೆ ಯಯಾತಿ ತನ್ನ ಯೌವನವನ್ನು ಮರಳಿ ಪಡೆಯುತ್ತಾನೆ. ಈ ಕತೆಯ ಅಂತ್ಯವನ್ನು ಈ ಅಂಕಣದ ಕೊನೆಯಲ್ಲಿ ಮತ್ತೆ ನೋಡೋಣ. ಯಯಾತಿಯನ್ನು ಮತ್ತೆ ಅಮರಗೊಳಿಸಿದ ಗಿರೀಶ ಕಾರ್ನಾಡರ ನಾಟಕವೂ ನಿಮಗೆ ತಿಳಿದದ್ದೇ.

ಸದ್ಯ ಯಯಾತಿಯನ್ನು ನೆನೆಯಲು ಕಾರಣವಿದೆ. ಆಧುನಿಕ ಯಯಾತಿಯೊಬ್ಬ ಇಂದು (ಡಿ.5) ಬೆಂಗಳೂರಿಗೆ ಕಾಲಿಟ್ಟಿದ್ದಾನೆ. ಇವನ ಹೆಸರು ಬ್ರ್ಯಾನ್ ಜಾನ್ಸನ್ (Bryan Johnson)* ಅಮೆರಿಕ ಮೂಲದ ಶ್ರೀಮಂತ ಉದ್ಯಮಿ. 'ಡೋಂಟ್ ಡೈ' (Don't Die) ಎಂಬುದು ಇವನು ಆರಂಭಿಸಿರುವ ವಿಶಿಷ್ಟ ಅಭಿಯಾನದ ಹೆಸರು. ಹೆಸರೇ ಹೇಳುವಂತೆ ಇದು ಸುದೀರ್ಘ ಬದುಕುವ, ಸಾಧ್ಯವಾದರೆ ಅಮರವಾಗುವ ಇಚ್ಛೆಯನ್ನು ಈಡೇರಿಸಿಕೊಳ್ಳುವ ಗುರಿ ಹೊಂದಿರುವ ಸಂಸ್ಥೆ. 'ಹುಟ್ಟಿದವನಿಗೆ ಸಾವು ತಪ್ಪದು' ಎಂಬ ಸಾಮಾನ್ಯ ಜ್ಞಾನವನ್ನು ಪ್ರಶ್ನಿಸಿ, ಸಾವನ್ನು ಸುದೀರ್ಘಕಾಲ ಮುಂದೂಡಿ ಆರೋಗ್ಯಕರವಾಗಿ ಬದುಕಲು ಸಾಧ್ಯವಿದೆ ಎಂದೂ ಹೇಳುವ ಇವನ ಈ ಉಪಕ್ರಮ ತುಸುತುಸುವೇ ಜನರ ಗಮನ ಸೆಳೆಯುತ್ತಿದೆ. ಸದ್ಯ ಭಾರತ ಪ್ರವಾಸದಲ್ಲಿರುವ ಇವನ ಇವೆಂಟ್‌ಗಳಿಗೆ ಜನ ಸೇರುತ್ತಿದ್ದಾರೆ.

ಏನಿದು ಡೋಂಟ್ ಡೈ? ಜನಿಸಿದವನಿಗೆ ಸಾವು ಶತಸ್ಸಿದ್ಧ ಎಂಬುದು ಇವನಿಗೆ ಗೊತ್ತಿಲ್ಲವೆ? ಗೊತ್ತಿದೆ. ಬ್ರ್ಯಾನ್ ಪ್ರಕಾರ 'ಸಾಯಬೇಡಿ' ಎಂಬುದನ್ನು ಅಕ್ಷರಾರ್ಥದಲ್ಲಿ ತೆಗೆದುಕೊಳ್ಳಕೂಡದು. ಅಂದರೆ ಆತನ ಯೋಜನೆಯ ಗುರಿ ಮನುಷ್ಯನನ್ನು ಅಮರನಾಗಿಸುವುದಲ್ಲ. ಬದಲು ಸಾವನ್ನು ಎಷ್ಟು ಸಾಧ್ಯವೋ ಅಷ್ಟು ಮುಂದೂಡುವುದು. ಕನಿಷ್ಠ 150-200 ವರ್ಷಗಳಾದರೂ ಬದುಕುವುದು ಅಥವಾ ಸುದೀರ್ಘ ಕಾಲ ಆರೋಗ್ಯಯುತವಾಗಿ ಬದುಕುವುದು. ಇದು ಸಾಧ್ಯ ಎಂಬುದು ಬ್ರ್ಯಾನ್‌ನ ಥಿಯರಿ. ಸದ್ಯ ಈತ ತನ್ನನ್ನು ಭೂಮಂಡಲದ 'ಮೋಸ್ಟ್ ಮೆಶರ್ಡ್ ಹ್ಯೂಮನ್' ಎಂದು ಹೇಳಿಕೊಳ್ಳುತ್ತಾನೆ. ಅಂದರೆ ಅವನ ದೇಹದ ಆರೋಗ್ಯದ ಪ್ರತಿಯೊಂದು ಚಹರೆಯೂ, ಬದಲಾವಣೆಯೂ ದಾಖಲುಗೊಂಡಿದೆ, ಇನ್ನೂ ದಾಖಲಾಗುತ್ತಿರುತ್ತದೆ. ಆತ ತನ್ನನ್ನೇ ಈ ಪ್ರಯೋಗಕ್ಕೆ ಒಡ್ಡಿಕೊಂಡಿದ್ದಾನೆ.

ಸುಮ್ಮನೇ ಇವನನ್ನು ಯಯಾತಿ ಎಂದದ್ದಲ್ಲ. ನಿರೋಗಿಯಾಗುವ, ಯುವಕನಾಗಿಯೇ ಉಳಿಯುವ ಇವನ ಹುಚ್ಚು ಎಷ್ಟೆಂದರೆ, ತನ್ನ ಮಗನ ರಕ್ತವನ್ನೇ (ಪ್ಲಾಸ್ಮಾ) ತೆಗೆದು ತನಗೇ ಇಂಜೆಕ್ಟ್ ಮಾಡಿಕೊಂಡಿದ್ದಾನೆ! ಜೀನ್ ಥೆರಪಿ ಇಂಜೆಕ್ಷನ್ ತೆಗೆದುಕೊಳ್ಳುತ್ತಾನೆ. ಇವನಿಗೀಗ 47 ವರ್ಷ. ಆದರೆ ತನ್ನ ಹೃದಯಕ್ಕೀಗ 37 ವರ್ಷ, ಚರ್ಮಕ್ಕೆ ಇಪ್ಪತ್ತೆಂಟೇ ವರ್ಷ ಎಂಬುದು ಅವನ ಕ್ಲೇಮು. ಒಂದು ಹಂತದ ನಂತರ ಇವನ ವಯಸ್ಸು ರಿವರ್ಸ್ ಗೇರ್ ಹಾಕಿದೆ. ಅದಕ್ಕೆ ಉದಾಹರಣೆ, ಬಿಳಿಯಾಗಿದ್ದ ಇವನ ತಲೆಕೂದಲು ಕಪ್ಪುಬಣ್ಣಕ್ಕೆ ಮರಳಿರುವುದು. 'ಜಾನ್ಸನ್ ಬ್ಲೂಪ್ರಿಂಟ್' ಎಂಬ ಹೆಸರಿನ ದಿನಚರಿ ರೂಪಿಸಿಕೊಂಡಿದ್ದಾನೆ. ಪ್ರತಿದಿನ ಹೀಗೇ ಮಾಡಿದರೆ ನಿತ್ಯಯೌವನ, ನಿರೋಗ, ದೀರ್ಘಾಯಸ್ಸು ಖಚಿತ ಎಂಬುದು ಇವನ ಭರತವಾಕ್ಯ. ಆ ಬ್ಲೂಪ್ರಿಂಟ್ ಹೇಗಿದೆ?

ಮುಂಜಾನೆ 5 ಗಂಟೆಗೆ ಅಲಾರಂ ಇಲ್ಲದೆ ಏಳುತ್ತಾನೆ. ನಂತರ ಕಿವಿಯ ಒಳಭಾಗದ ತಾಪಮಾನ ಅಳೆಯುವ ಒಂದು ಥರ್ಮಲ್ ಸ್ಕ್ಯಾನ್ ಚೆಕ್. ದೇಹದ ಸಿರ್ಕಾಡಿಯನ್ ಲಯವನ್ನು ನಿಗಾದಲ್ಲಿಡಲು ಒಂದು ಥರ್ಮಲ್ ಲ್ಯಾಂಪ್ ಬಳಕೆ. ದಿನದಲ್ಲಿ 3 ಬಾರಿ ಆಹಾರ, ಅದೂ ಬೆಳಗ್ಗೆ 6ರಿಂದ ಮಧ್ಯಾಹ್ನ 11ರ ಒಳಗೆ. ನಂತರ ಏನೇನೂ ಇಲ್ಲ. ಅದೂ ಲೆಕ್ಕ ಮಾಡಿ 100 ಸಪ್ಲಿಮೆಂಟ್‌ಗಳನ್ನು ಒಳಗೊಂಡು 1977 ಕ್ಯಾಲೊರಿ ಮಾತ್ರ. ಪ್ರತಿದಿನ ದೇಹದ ತೂಕ, ಬಿಎಂಐ, ಫ್ಯಾಟ್, ಸ್ನಾಯುಸಾಂದ್ರತೆ, ನೀರಿನಂಶ, ಮೂಳೆ, ಹೃದಯಬಡಿತ, ರೂಮಿನ ಗಾಳಿಯ ಗುಣಮಟ್ಟ ಇತ್ಯಾದಿಗಳ ಅಳತೆ. ಚರ್ಮದ ಕಾಂಪ್ಲೆಕ್ಷನ್‌ಗಾಗಿ 5 ನಿಮಿಷದ ಬ್ಲೂ ಲೈಟ್ ಥೆರಪಿ. 10 ನಿಮಿಷ ಧ್ಯಾನ. ಕಣ್ಣು ಒಣಗುವುದು ತಡೆಯಲು ಅಶ್ರುಗ್ರಂಥಿಗಳ ಚೋದನೆಗಾಗಿ ಒಂದು ಸಾಧನ. ತಲೆಕೂದಲು ಉದುರುವಿಕೆ ತಡೆಯಲು ರೆಡ್ ಲೈಟ್ ಕ್ಯಾಪ್ ಬಳಕೆ. 30-60 ನಿಮಿಷ ವ್ಯಾಯಾಮ. 30 ನಿಮಿಷಗಳ ಹೃದಯ ಬಡಿತ ಏರುಪೇರು ಥೆರಪಿ ಸೆಷನ್. ಇನ್ನೂ ಹಲವೊಮ್ಮೆ ವಿಶೇಷ, ಹೇಳಹೆಸರಿಲ್ಲದ ಥೆರಪಿ, ಪ್ರಯೋಗ, ಚೆಕಪ್‌ಗಳು. ರಾತ್ರಿ 8.30ಕ್ಕೆ ಸರಿಯಾಗಿ ತಾಪಮಾನ ನಿಯಂತ್ರಿತವಾದ ಬೆಡ್ ಸೇರಿ ಮೂರೇ ನಿಮಿಷದಲ್ಲಿ ಗಾಢನಿದ್ರೆ.

ಇಷ್ಟೆಲ್ಲ ಮಾಡಿಕೊಳ್ಳುತ್ತಾ ಬದುಕಬೇಕೇ ಎಂದು ನಾವು ಕೇಳಬಹುದು. ಇದು ಬ್ರ್ಯಾನ್‌ನಂಥ ಕುಬೇರರಿಗೆ, ಹೆಲ್ತ್ ಫ್ರೀಕ್‌ಗಳಿಗೆ ಮಾತ್ರ ಸಾಧ್ಯ ಎಂಬುದರಲ್ಲಿ ಅನುಮಾನವಿಲ್ಲ. ತನ್ನ ಬದುಕೇ ಒಂದು ಪ್ರಯೋಗ ಎಂಬುದೇ ಅವನ ಮಾತು. ಇದಕ್ಕೆ ಅವನಲ್ಲಿ ತಾತ್ವಿಕ, ವೈಜ್ಞಾನಿಕ ಸಮರ್ಥನೆಗಳೂ ಇವೆ.

ಇವನ ಪ್ರಯೋಗಗಳ ಆಶಯವನ್ನು ವಿಜ್ಞಾನಿಗಳಲ್ಲಿ ಹೆಚ್ಚಿನವರು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಮನುಷ್ಯ ಇಂಥದೊಂದು ಕನಸು ಕಾಣುವುದು ಸದ್ಯಭವಿಷ್ಯದಲ್ಲಿ ಅಸಾಧ್ಯ ಎಂಬುದವರ ನಿಲುವು. ಆದರೆ ಯೋಚಿಸಿ. ಈಗ ನಾವು ನೀವು ಕೃತಕ ಬುದ್ಧಿಮತ್ತೆಯ ಬಳಕೆ ಮಾಡುತ್ತಿದ್ದೇವೆ. 20 ವರ್ಷದ ಹಿಂದೆ ಇದರ ಬಗ್ಗೆ ನಮಗೆ ಗೊತ್ತಿತ್ತೆ? ಹೋಗಲಿ, ನಾವೀಗ ಪಡೆಯುತ್ತಿರುವ ಇಂಟರ್ನೆಟ್‌ನ ಅಗಾಧ ಪ್ರಯೋಜನಗಳನ್ನು 50 ವರ್ಷದ ಹಿಂದೆ ಊಹಿಸಿಕೊಳ್ಳಲಾದರೂ ಸಾಧ್ಯವಿತ್ತೆ? ಅದೂ ಹೋಗಲಿ,

ಸಾವಿರ ಮೈಲು ದೂರದಲ್ಲಿದ್ದವರ ಜತೆಗೆ ನಾವು ಇಲ್ಲಿಂದಲೇ ಈ ಕ್ಷಣದಲ್ಲಿ ಮಾತನಾಡಬಹುದು ಎಂದು 170 ವರ್ಷದ ಹಿಂದೆ ಯಾರಾದರೂ ಊಹಿಸಿದ್ದರೆ? ಪ್ರತಿಯೊಂದು ವಿಶಿಷ್ಟ ಆವಿಷ್ಕಾರವೂ ಮೊದಲಿಗೆ ಈ ಸಮಾಜದ, ವಿಜ್ಞಾನಿಗಳ ತಿರಸ್ಕಾರವನ್ನೇ ಪಡೆಯುತ್ತದೆ. ಕ್ರೇಜಿ ಅನಿಸುವ ಯೋಚನೆಯೊಂದು ಯಾರೋ ಒಬ್ಬನಲ್ಲಿ ಮೊದಲಿಗೆ ಹುಟ್ಟಿಕೊಳ್ಳುತ್ತದೆ. ಅದು ನಿಧಾನವಾಗಿ ಮೂರ್ತರೂಪ ಪಡೆಯುತ್ತದೆ. ದೀರ್ಘಾಯುಷ್ಯ ಅಥವಾ ಅಮರತ್ವವೂ ಹೀಗೇ ಒಂದು ದಿನ ನಿಜವಾಗಬಾರದೇಕೆ? ಇದು ಬ್ರ್ಯಾನ್ ವಾದ.

ಇಷ್ಟೆಲ್ಲ ಮಾಡುವ ಜಾನ್ಸನ್ ವಿಜ್ಞಾನಿಯಲ್ಲ. ಅವನು ಎಂಬಿಎ ಮಾಡಿದ, ಇ-ಕಾಮರ್ಸ್ ಕಂಪನಿ ಸ್ಥಾಪಿಸಿ ಮಿಲಿಯನ್‌ಗಟ್ಟಲೆ ಹಣ ದುಡಿದ ಶ್ರೀಮಂತ. ಆದರೆ ತನ್ನ ಚಿಂತನೆಗೆ ಅನುಗುಣವಾಗಿ ದುಡಿಯಬಲ್ಲ ತಜ್ಞರನ್ನು ಕೆಲಸಕ್ಕಿಟ್ಟುಕೊಂಡಿದ್ದಾನೆ. ನಮ್ಮ ಕಾಲದ ವ್ಯಂಗ್ಯವೇ ಇದು. ಒಂದು ಕಾಲದಲ್ಲಿ ನ್ಯೂಟನ್, ಐನ್‌ಸ್ಟೀನ್‌ರಂಥ ಸ್ವತಂತ್ರ ಚಿಂತನೆಯ ವಿಜ್ಞಾನಿಗಳು ಕ್ರಾಂತಿಕಾರಿ ಸಂಶೋಧನೆಗಳನ್ನು ಮಾಡಿದರು. ಇಂದು ಎಲಾನ್ ಮಸ್ಕ್, ಬ್ರ್ಯಾನ್ ಜಾನ್ಸನ್ ಥರದ ಬಿಲಿಯನೇರ್‌ಗಳು ಈ ಸಂಶೋಧನೆಗಳನ್ನು ರೂಪಿಸುತ್ತಾರೆ. ಜಾನ್ಸನ್ ಹೆಲ್ತ್‌ಕೇರ್‌ನಲ್ಲಿ ಸಾಕಷ್ಟು ಹಣ ಹೂಡಿದ್ದಾನೆ. ಮಿದುಳಿನ ಚಟುವಟಿಕೆ ಅಳೆಯುವ ಗ್ಯಾಜೆಟ್‌ಗಳು, ಆಲ್ಝೈಮರ್ ಮತ್ತು ಪಾರ್ಶ್ವವಾಯುವಿಗೆ ಚಿಕಿತ್ಸೆ ನೀಡುವ ಸಾಧನಗಳನ್ನೆಲ್ಲ ಅಭಿವೃದ್ಧಿಪಡಿಸಲು ಹೂಡಿಕೆ ಮಾಡಿದ್ದಾನೆ. 2030ರ ಹೊತ್ತಿಗೆ ಜಗತ್ತೆಲ್ಲಾ 'ಡೋಂಟ್ ಡೈ' ಅನ್ನುತ್ತಿರುತ್ತದೆ ಅನ್ನುವುದು ಅವನ ಆತ್ಮವಿಶ್ವಾಸ. ಅಪಘಾತ ಏನೂ ಆಗದೆ ಇದ್ದರೆ, 200 ವರ್ಷ ಬದುಕುತ್ತೇನೆ ಎಂಬುದು ಅವನ ಭರವಸೆ.

ಅಂದಹಾಗೆ, ಅವನು ಮಗನ ಪ್ಲಾಸ್ಮಾ ತೆಗೆದು ತನ್ನ ಬಾಡಿಗೆ ತುಂಬಿಸಿಕೊಂಡಿದ್ದಾನೆ ಅಂದೆನಲ್ಲಾ, ಇದು ವಯಸ್ಸಾಗುವ ಪ್ರಕ್ರಿಯೆಯನ್ನು ರಿವರ್ಸ್ ಮಾಡುತ್ತದೆ ಎಂದು ವಿಜ್ಞಾನಿಗಳೇನೂ ಭರವಸೆ ಕೊಟ್ಟಿಲ್ಲ. ಇದು ಎಫ್‌ಡಿಎಯಿಂದ (ಅಮೆರಿಕದ ಆಹಾರ ಮತ್ತು ಔಷಧ ಪ್ರಾಧಿಕಾರ) ಅನುಮೋದನೆ ಪಡೆದ ವಿಧಾನವೂ ಅಲ್ಲ. ಆದರೂ ಕೆಲವು ಶ್ರೀಮಂತರು ತಮ್ಮ ವಯಸ್ಸಾಗುವಿಕೆ ತಡೆಯಲು ಈ ವಿಧಾನದ ಮೊರೆಹೋಗುತ್ತಿದ್ದಾರೆ ಎಂಬುದು ಅದರ ಅರಿವಿಗೆ ಬಂದಿದೆ. ಇದರಿಂದ ವಯಸ್ಸಾಗುವಿಕೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.

ಸರಿ, ಈಗ ಬ್ರ್ಯಾನ್ ಅಥವಾ ಅವನಂಥ ಒಂದಷ್ಟು ಮಂದಿ ಏನೇನೋ ಮಾಡಿ ಇನ್ನೂರೋ ಮುನ್ನೂರೋ ವರ್ಷ ಬದುಕಿದರು ಎಂದಿಟ್ಟುಕೊಳ್ಳೋಣ. ಆಗ ಅವರು ಏನು ಮಾಡುತ್ತಿರಬಹುದು? ಮಹಾಭಾರತದಲ್ಲಿ 800 ವರ್ಷ ಬದುಕಿದರೆಂದು ಹೇಳಲಾದ ಭೀಷ್ಮಾಚಾರ್ಯರು ಏನು ಮಾಡುತ್ತಿದ್ದರು. ತಮ್ಮ ನಂತರದ ತಲೆಮಾರುಗಳಿಗೆ ಕನೆಕ್ಟ್ ಆಗಲಿಕ್ಕೆ ಸಾಧ್ಯವಾಗದೆ ಹೇಗೋ ಬದುಕಿದ್ದರು. ಇದು ಎಲ್ಲ ತಲೆಮಾರುಗಳಿಗೆ ಕಟ್ಟಿಟ್ಟ ಗಂಟು. ತಮ್ಮ ಮೊಮ್ಮಕ್ಕಳು ಹೋರಾಡಿ ನಾಶವಾಗುವುದನ್ನು ನೋಡಿದರು. 200 ವರ್ಷ ಬದುಕುವವರು ತಮ್ಮ ಮಕ್ಕಳ-ಮೊಮ್ಮಕ್ಕಳ ಸಾವನ್ನೂ ನೋಡಬೇಕಾಗುತ್ತದೆ. ಕೊನೆಗಾಲದಲ್ಲಿ ಭೀಷ್ಮರು ಬಾಣಗಳ ಮಂಚದಲ್ಲಿ ನರಳುತ್ತ ಮಲಗಿದ್ದರು. ಲೋಕ ಅದರದೇ ತೊಳಲಾಟಗಳಲ್ಲಿ ವ್ಯಸ್ತವಾಗಿತ್ತು. ವರ್ತಮಾನದ ಜತೆಗೆ ಸ್ಪಂದಿಸಲು ಅವರು ಮಾಡಿದ ಎಲ್ಲ ಪ್ರಯತ್ನಗಳು ವ್ಯರ್ಥವಾಗಿದ್ದವು.

ಹಾಗೆಂದು ನಿರೋಗಿಯಾಗಿ ಬದುಕಲು ಮಾಡುವ ಪ್ರಯತ್ನಗಳು ವ್ಯರ್ಥವೇನಲ್ಲ. ದುಶ್ಚಟಗಳಿಲ್ಲದಿರುವುದು, ಒತ್ತಡವಿಲ್ಲದ ನೆಮ್ಮದಿಯ ದುಡಿಮೆಗಳು, ಸರಿಯಾದ ಆಹಾರ, ನಿದ್ರೆ, ವ್ಯಾಯಾಮ ಇವು ಮನುಷ್ಯನನ್ನು ದೀರ್ಘಕಾಲ ಕಾಪಾಡುತ್ತವೆ. ನಮ್ಮ ಆಯುರ್ವೇದದ ಕಾಣ್ಕೆಯೂ ಇದೇ. ಇದು ರೋಗದಿಂದ ಪಾರಾಗುವ ಮಾತಾಯಿತು. ಆದರೆ ಜೀನ್‌ಗಳ ಬಗ್ಗೆ ಯಾರೂ ಏನೂ ಹೇಳಲಾಗದು. ಕ್ಯಾನ್ಸರ್ ಜೀನ್‌ಗಳು ನಮ್ಮಲ್ಲಿಯೇ ಅಡಗಿರುತ್ತವೆ. ಇಂಥದ್ದರಿಂದ ಪಾರಾಗುವ ಬಗೆ ಇನ್ನೂ ಯಾರಿಗೂ ಗೊತ್ತಿಲ್ಲ.

ಬ್ರ್ಯಾನ್ ಜಾನ್ಸನ್, "ನನ್ನ ಆವಿಷ್ಕಾರಗಳಿಗೆ ಸ್ಪಂದಿಸಲು ಭಾರತ ಸೂಕ್ತ ನೆಲ. ಇಲ್ಲಿನ ಯೋಗಿಗಳು ಅಮರತ್ವದ ಬಗ್ಗೆ ಅಂದೇ ಚಿಂತನೆ ನಡೆಸಿದ್ದಾರೆ" ಎಂದು ಜಾಣತನದ ಮಾತಾಡಿದ್ದಾನೆ. ಅದೇನೋ ನಿಜ. ಆದರೆ ಅವನಿಗೆ ಗೊತ್ತಿಲ್ಲದ ಇನ್ನೂ ಒಂದು ಸಂಗತಿ ಇದೆ. ಅದೇನೆಂದರೆ ಇಲ್ಲಿ ಜೀವದ ಚಕ್ರಗತಿಯ ಚಿಂತನೆಯೂ ಇದೆ. ಅಂದರೆ ಒಂದು ಜೀವ ಸತ್ತು ಮಣ್ಣು ಸೇರಿದರೆ ಮಾತ್ರ ಅದು ಹೊಸ ಜೀವವಾಗಲು ಸಾಧ್ಯ. ಇಲ್ಲಿ ಪಂಚಭೂತದ ಚಿಂತನೆಯೂ ಇದೆ. ದೇಹವಾಗಿ ರೂಪು ಪಡೆಯುವ ಪಂಚಭೂತಗಳು ಒಂದು ಹಂತದ ನಂತರ ವಿಚ್ಛೇದಗೊಂಡು ಮತ್ತೆ ಪಂಚಭೂತಗಳಲ್ಲಿ ಕರಗಬೇಕು. ವಿಶ್ವ ಹೊಸದಾಗುವುದು ಹೀಗೆ.

ಈಗ ಯಯಾತಿಯ ಕತೆಗೆ ಮತ್ತೆ ಬರೋಣ. ಮಗನಿಂದ ಯೌವನವನ್ನು ಪಡೆದ ಯಯಾತಿಗೆ ಒಂದು ಹಂತದಲ್ಲಿ ಇದೆಲ್ಲ ಸಾಕೆನಿಸಿಬಿಡುತ್ತದೆ. ಆಗ ಮಗನಿಗೇ ಯೌವನವನ್ನು ಮರಳಿಸಿ ವೃದ್ಧಾಪ್ಯವನ್ನು ಮತ್ತೆ ಪಡೆದು ಕಾಡಿಗೆ ಹೋಗುತ್ತಾನೆ. ಬ್ರ್ಯಾನ್ ಜಾನ್ಸನ್‌ಗೆ ಅಂಥ ವೈರಾಗ್ಯ ಕಾಡದಿರಲಿ, ಅವನು ಜನರ ಆರೋಗ್ಯವರ್ಧನೆಯ ಕಡೆಗೆ ಹೆಚ್ಚಿನ ಗಮನಹರಿಸಲಿ ಅಂತ ಹಾರೈಸೋಣ.

ನೆನಪಿರಲಿ... ಒಳಸಂಚಿಗೆ ಸಿದ್ದರಾಮಯ್ಯ ಸೋಲುವುದಿಲ್ಲ

ಚನ್ನಪಟ್ಟಣ ಉಪಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಸೋಲಿನ ಹತಾಶೆಗೆ ಒಳಗಾಗಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ಸರಕಾರವನ್ನು ಬೀಳಿಸುವ ಮಾತನಾಡಿದ್ದಾರೆ. 'ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬಂತೆ, ಕಳೆದ ವಿಧಾನಸಭಾ ಚುನಾವಣೆಯ ಬಳಿಕ ಅಸ್ತಿತ್ವದ ಅಡಿಗಲ್ಲನ್ನೇ ಕಳಚಿಕೊಳ್ಳುತ್ತಿರುವ ಜೆಡಿಎಸ್ ನಾಯಕರಿಗೆ ಇನ್ನೂ ವಾಸ್ತವದ ಅರಿವು ಮೂಡದೇ, ವಾಮಮಾರ್ಗದಲ್ಲಿ ಅಧಿಕಾರ ಕಬಳಿಸುವ ಮಂಕು ಕವಿದಿರುವುದು ಚೋದ್ಯವೇ ಸರಿ.

ಅಭಿಮತ

ಬಿ.ಎಸ್.ಶಿವಣ್ಣ
vveditoped@gmail.com

ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಅತ್ಯಂತ ಅಗತ್ಯವಾಗಿತ್ತು. ಜತೆಗೆ ರಾಷ್ಟ್ರದ ಜನತೆಗೆ ಒಂದು ಸ್ಪಷ್ಟ ಸಂದೇಶ ರವಾನಿಸಲು ಅಪೇಕ್ಷಿತವೂ ಆಗಿತ್ತು. ಅದಕ್ಕೆ ಕ್ಷೇತ್ರದ ಪ್ರಜ್ಞಾವಂತ ಮತದಾರರು ಸ್ಪಂದಿಸುವ ಮೂಲಕ, 'ಒಕ್ಕಲಿಗ ಪ್ರಾಬಲ್ಯದ ಜಿಲ್ಲೆಯಲ್ಲಿ ನಾವು ಅನಭಿಷಿಕ್ತ ದೊರೆಗಳು' ಎಂಬ ದೇವೇಗೌಡರ ಕುಟುಂಬದ ಭ್ರಮೆಯನ್ನು ನುಚ್ಚುನೂರು ಮಾಡಿದ್ದಾರೆ.

ಚನ್ನಪಟ್ಟಣಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಯೋಗೇಶ್ವರರ ಆಯ್ಕೆಯಾಗಿದ್ದೇ ಒಂದು ವಿಶೇಷ ಸಂದರ್ಭದಲ್ಲಿ. ಕುಮಾರಸ್ವಾಮಿಯವರ ಸ್ವಾರ್ಥ ರಾಜಕಾರಣದ ದೆಸೆಯಿಂದಾಗಿ ಇದೇ ಕ್ಷೇತ್ರದಲ್ಲಿ 2 ಬಾರಿ ಸೋತಿದ್ದ ಅವರಿಗೆ ಗೆಲುವು ತೀರಾ ಅಗತ್ಯವಾಗಿತ್ತು. ಮೂಲತಃ ಕಾಂಗ್ರೆಸ್ಸಿಗರೇ ಆದ ಅವರಿಗೆ ಸಿದ್ದರಾಮಯ್ಯನವರ ನಾಯಕತ್ವ ಆಪ್ಯಾಯಮಾನವಾಗಿ ಕಂಡಿದ್ದರಲ್ಲಿ ವಿಶೇಷವೇನಿಲ್ಲ. ಹೀಗಾಗಿ ನಾಮಪತ್ರ ಸಲ್ಲಿಸುವುದಕ್ಕೆ 2 ದಿನ ಬಾಕಿಯಿರುವಾಗ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಆ ಬಳಿಕ ನಡೆದ ರಾಜಕೀಯ ಕದನ ಎಲ್ಲರಿಗೂ ಗೊತ್ತೇ ಇದೆ. ಆದರೆ ಈ ಹಂತದಲ್ಲಿ 6 ದಿನಗಳ ಕಾಲ ಚನ್ನಪಟ್ಟಣದಲ್ಲಿ ಠಿಕಾಣಿ ಹೂಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ತಮ್ಮ ಘನತೆಗೆ ಹಾಗೂ ರಾಜಕಾರಣದ ಅಪಾರ ಅನುಭವಕ್ಕೆ ಹೊಂದದ ಮಾತನಾಡಿ ಇಡೀ ರಾಜ್ಯದ ಮುಂದೆ ಸಣ್ಣವರಾಗಿಬಿಟ್ಟರು!

ಚನ್ನಪಟ್ಟಣದಲ್ಲಿ ನಡೆದ ಸಮಾವೇಶವೊಂದರಲ್ಲಿ, ಸಿದ್ದರಾಮಯ್ಯರ ವಿರುದ್ಧ ತಮ್ಮ ಉದರದಲ್ಲಿ ಸಂಗ್ರಹವಾಗಿದ್ದ ಎಲ್ಲ ದ್ವೇಷಗಳನ್ನೂ ವಿಷದಂತೆ ಕಕ್ಕಿಬಿಟ್ಟರು. "ಈ ಸರಕಾರವನ್ನು ಕಿತ್ತುಹಾಕದೇ ನಾನು ವಿರಮಿಸುವುದಿಲ್ಲ. ನಾನು ಸಿದ್ದರಾಮಯ್ಯ ಅವರ ಗರ್ವಭಂಗ ಮಾಡುತ್ತೇನೆ" ಎಂದು ಚೀರಿದರು. ಆದರೆ ಪರಿಣಾಮವೇನಾಯ್ತು? ಅವರ ಪುತ್ರ ಕುಮಾರಸ್ವಾಮಿಯವರನ್ನು 2 ಬಾರಿ ಕೈಹಿಡಿದಿದ್ದ ಅದೇ ಮತದಾರರೇ ಮೊಮ್ಮಗ ನಿಖಿಲ್‌ರನ್ನು ಹೀನಾಯವಾಗಿ ಸೋಲಿಸಿಬಿಟ್ಟರು. ಇದಕ್ಕೆ ಪ್ರಮುಖ ಕಾರಣ ದೇವೇಗೌಡರು ಬಿತ್ತಿದ ದ್ವೇಷವಲ್ಲದೆ ಮತ್ತೇನೂ ಅಲ್ಲ. ಅಹಿಂದ ವರ್ಗದ ಜತೆಗೆ ಒಕ್ಕಲಿಗರೂ ದೇವೇಗೌಡರ ಸ್ವಾರ್ಥದ ರಾಜಕಾರಣದಿಂದ ಬೇಸತ್ತು ಕಾಂಗ್ರೆಸ್ ಕಡೆಗೆ ವಾಲಿದ್ದು ಮಾತ್ರ ವಾಸ್ತವ. ಈ ಚುನಾವಣೆಯ ಪ್ರಚಾರದುದ್ದಕ್ಕೂ ಕಣ್ಣೀರ ಕೋಡಿಯನ್ನೇ ಹರಿಸಿದ ದೇವೇಗೌಡರು, "ನನ್ನ ಹೃದಯ ಛಿದ್ರವಾಗಿದೆ" ಎಂದರು. ಆದರೆ ಅವರದ್ದೇ ಕುಟುಂಬದ ಕುಡಿ ಪ್ರಜ್ವಲ್ ರೇವಣ್ಣ ಹಾಸನದಲ್ಲಿ ಅಸಂಖ್ಯಾತ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವನ್ನು ನಡೆಸಿದಾಗ ಈ ಕಣ್ಣೀರು ಎಲ್ಲಿ ಹೋಗಿತ್ತು? ಆಗ ದೇವೇಗೌಡರ ಉದಾರ ಹೃದಯ ಬತ್ತಿಹೋಗಿತ್ತೇ? ಶೋಷಣೆಗೆ ಒಳಗಾದ ಒಂದೇ ಒಂದು ಹೆಣ್ಣು ಜೀವದ ಪರ ಇವರ ಅಂತಃಕರಣ ಏಕೆ ತುಡಿಯಲಿಲ್ಲ? ಎಂಬುದಕ್ಕೂ ಇವರು ಉತ್ತರಿಸಬೇಕಲ್ಲವೇ?

ವಾಸ್ತವದ ಬದಲು ಇತಿಹಾಸಕ್ಕೆ ಜೋತುಬಿದ್ದು ಅರ್ಧಸತ್ಯವನ್ನೇ ಸತ್ಯ ಎಂದು ಬಿಂಬಿಸುವುದು ರಾಜಕಾರಣದ ಬಹುರೂಪಿಯಾಗಿರುವ ದೇವೇಗೌಡರ ಹಳೆಯ ಖಯಾಲಿ. ಈ ಹಿಂದೆ ಅವರು ಕಡೂರಿನ ಕೆ.ಎಂ.ಕೃಷ್ಣಮೂರ್ತಿ ಅವರ ಸಹೋದರನ ಪುತ್ರನ ಮನೆಗೆ ಭೇಟಿನೀಡಿದ ಸಂದರ್ಭದಲ್ಲೂ, ಚನ್ನಪಟ್ಟಣ ಚುನಾವಣೆಯ ಪ್ರಚಾರಸಭೆಯ ರೀತಿ ಸುಳ್ಳಿನ ಸರಮಾಲೆಯನ್ನೇ ಕಟ್ಟಿದ್ದರು. "ಸಿದ್ದರಾಮಯ್ಯನವರನ್ನು ನಂಬಿ ನಾನು ಮೋಸಹೋದೆ" ಎಂದು ಅನುಕಂಪ ಗಿಟ್ಟಿಸುವ ಮಾತನಾಡಿದ್ದರು. ಆದರೆ ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಹಾಗೂ ಜೆ.ಎಚ್.ಪಟೇಲರಿಗೆ ದ್ರೋಹ ಬಗೆದಿದ್ದು ಯಾರು? ಎಂಬ ಪ್ರಶ್ನೆಗೆ ಮಾತ್ರ ಅವರು ಯಾವ ಕಾಲಕ್ಕೂ ಉತ್ತರ ನೀಡುವುದಿಲ್ಲ. ಏಕೆಂದರೆ ಜನತಾ ಪರಿವಾರ ಕುಸಿದು ಸಮಾಧಿಯಾಗಿದ್ದೇ ದೇವೇಗೌಡರ ಕುಟುಂಬಪ್ರೇಮದಿಂದ.

ಜನತಾದಳವನ್ನು ಬಿಟ್ಟು ಸಮಾಜವಾದಿ ಜನತಾಪಕ್ಷವನ್ನು (ಎಸ್‌ಜೆಪಿ) ಕಟ್ಟಿದ ದೇವೇಗೌಡರು ಸೋತು ಧರಾಶಾಯಿಯಾಗಿ, ರಾಮಕೃಷ್ಣ ಹೆಗಡೆ ಹಾಗೂ ಪಟೇಲರ ಕೈಕಾಲು ಕಟ್ಟಿ ಮರಳಿ ಪಕ್ಷಕ್ಕೆ ಸೇರ್ಪಡೆಯಾದರು. ಆದರೆ ಉಂಡಮನೆಯ ಗಳ ಎಣಿಸುವುದು ಜನ್ಮಜಾತ ಗುಣವಾಗಿದ್ದ ಅವರು, ಮುಖ್ಯಮಂತ್ರಿ ಸ್ಥಾನ ಪಡೆಯುವುದಕ್ಕಾಗಿ ಹೆಗಡೆ ಮತ್ತು ಪಟೇಲರ ಮೇಲೆ ಬಾಡಿಗೆ ಗೂಂಡಾಗಳಿಂದ ಹಲ್ಲೆ ಮಾಡಿಸಿದರು. ಅಂದು ದೇವೇಗೌಡರ ಜತೆಗೆ ಸಿದ್ದರಾಮಯ್ಯ ಹಾಗೂ ಜಾಲಪ್ಪ ಅವರುಗಳು ಗಟ್ಟಿಯಾಗಿ ನಿಲ್ಲದಿದ್ದಿದ್ದರೆ, ಅವರು ಮುಖ್ಯಮಂತ್ರಿಯಾಗುವುದಕ್ಕೆ ಸಾಧ್ಯವೇ ಇರಲಿಲ್ಲ. ಆದರೆ ಈ ಸತ್ಯವನ್ನು ಒಪ್ಪಿಕೊಳ್ಳುವುದಕ್ಕೆ ದೇವೇಗೌಡರು ಎಂದೂ ಸಿದ್ಧರಿಲ್ಲ. ಈ ವಿಚಾರದಲ್ಲಿ ಅವರಿಗೆ ಶಾಶ್ವತ ಮರೆವು ಎನ್ನದೇ ವಿಧಿಯಿಲ್ಲ. ಮುಂದೆ ಜೆಡಿಎಸ್ ಪಕ್ಷವನ್ನು ಕಟ್ಟಿದಾಗ ಅದು ಅತಿಹೆಚ್ಚು ಸಾಧನೆ ಮಾಡಿದ್ದು ಸಿದ್ದರಾಮಯ್ಯರು ರಾಜ್ಯಾಧ್ಯಕ್ಷರಾಗಿದ್ದಾಗ. ಆ ಬಳಿಕ ಈಗ 18ಕ್ಕೆ ಕುಸಿದು ಅಳಿವಿನಂಚಿನಲ್ಲಿದೆ.

ದೇವೇಗೌಡರು ತಮ್ಮ ರಾಜಕೀಯ ಜೀವನದಲ್ಲಿ ಒಮ್ಮೆಯೂ ಸತ್ಯ ಹೇಳಿದವರೂ ಅಲ್ಲ, ಸತ್ಯ ಪಾಲಿಸಿದವರೂ ಅಲ್ಲ. ಈ ಹಿಂದೆ, "ಮೋದಿ ಪ್ರಧಾನಿಯಾದರೆ ದೇಶ ಬಿಡುತ್ತೇನೆ" ಎಂದವರು ಈಗ ಮೋದಿಯನ್ನು "ವಿಶ್ವಗುರು, ಅವತಾರಪುರುಷ" ಎಂದು ಕೊಂಡಾಡುತ್ತಿದ್ದಾರೆ. ಮಕ್ಕಳ ಕಲ್ಯಾಣಕ್ಕಾಗಿ ಎಂಥ ವೇಷವನ್ನಾದರೂ ಹಾಕುವ ಬಹುರೂಪಿ ಕಲಾವಿದರು ಯಾರಾದರೂ ಇದ್ದರೆ ಅದು ದೇವೇಗೌಡರು ಮಾತ್ರ!

ಅಂದಹಾಗೆ, ಲೋಕಸಭಾ ಚುನಾವಣೆ ಬಳಿಕ ರಾಜ್ಯ ಸರಕಾರ ಪತನವಾಗುತ್ತದೆ ಎಂದು ದೇವೇಗೌಡರು ಪದೇ ಪದೆ ಪ್ರಸ್ತಾಪಿಸುತ್ತಿದ್ದರು. ಇದು ಧೃತರಾಷ್ಟ್ರನ ಅಂಧಪ್ರೇಮದ ಹತಾಶ ಸ್ಥಿತಿ ಎಂದು ಸುಮ್ಮನಾಗಬಹುದಿತ್ತು. ಬಿಜೆಪಿ ಜತೆಗಿನ ಮೈತ್ರಿಯಿಂದ ತಮಗೆ ಆನೆಬಲ ಬಂದಿದೆ ಎಂಬ ಭ್ರಮೆಯಿಂದ ಅವರು ಹೀಗೆ ವರ್ತಿಸುತ್ತಿದ್ದಾರೆ ಎಂದು ಸುಮ್ಮನಾಗಬಹುದಿತ್ತು. ಸಿದ್ದರಾಮಯ್ಯನವರ ಗರ್ವಭಂಗ ಮಾಡುತ್ತೇನೆ ಎಂದು ಹೇಳಿದ್ದನ್ನೂ ಕ್ಷಮಿಸಬಹುದಿತ್ತು. ಆದರೆ, ಆ ಬಳಿಕ ಕುಮಾರಸ್ವಾಮಿಯವರು ಮತ್ತೆ ಸರಕಾರ ಬೀಳಿಸುವ ಮಾತನಾಡಿದ್ದನ್ನು ಖಂಡಿತ ನಿರ್ಲಕ್ಷಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಚುನಾಯಿತ ಸರಕಾರವನ್ನು ಬೀಳಿಸುವ ಕೆಟ್ಟಚಟ ದೇವೇಗೌಡರಿಗೆ ಮೊದಲಿನಿಂದಲೂ ಇದೆ. ಈ ಹಿಂದೆ ರಾಮಕೃಷ್ಣ ಹೆಗಡೆ, ಬೊಮ್ಮಾಯಿ, ಜೆ.ಎಚ್.ಪಟೇಲ್, ಧರ್ಮಸಿಂಗ್ ಸರಕಾರಕ್ಕೆ ಇವರು ಯಾವ ರೀತಿ ಕಾಟ ಕೊಟ್ಟಿದ್ದಾರೆಂಬುದು ನಾಡಿಗೇ ಗೊತ್ತು. ಅದೇ ಗುಣ ಈಗ ಅವರ ಮಗನ ಮಾತಿನಲ್ಲಿ ವ್ಯಕ್ತವಾಗಿದೆ. ಇದಕ್ಕೆ ಸೆಡ್ಡು ಹೊಡೆಯುವುದೇ ಈ ಸಮಾವೇಶದ ಉದ್ದೇಶ. ದೇವೇಗೌಡರ ತವರುಜಿಲ್ಲೆಯಲ್ಲಿ ನಡೆಯುತ್ತಿರುವ ಈ ಶಕ್ತಿ ಪ್ರದರ್ಶನವು ಕಾಂಗ್ರೆಸ್‌ನ ಒಗ್ಗಟ್ಟನ್ನು ತೋರಿಸುವ ವೇದಿಕೆಯಾಗಿದೆ. ಇದು ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಇಡೀ ರಾಜ್ಯದ ಎಲ್ಲಾ ವರ್ಗದ ಬಡಜನರ ಬದುಕನ್ನು ಸಂತೃಪ್ತಗೊಳಿಸಿರುವ ಸರ್ವಜನಾಂಗದ ಹೆಮ್ಮೆಯ ನಾಯಕ ಸಿದ್ದರಾಮಯ್ಯನವರ ಕೈಬಲಪಡಿಸುವ ಕ್ಷಣವೂ ಆಗಿದೆ. ಈ ವೇದಿಕೆಯ ಮೂಲಕ ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ಜೆಡಿಎಸ್‌ನ ಷಡ್ಯಂತ್ರಕ್ಕೆ ನೀಡುವ ಸ್ಪಷ್ಟ ಸಂದೇಶ ಏನು ಗೊತ್ತೇ? ಸಿದ್ದರಾಮಯ್ಯರು ನಿಮ್ಮ ಸಂಚಿಗೆ ಸೋಲುವಷ್ಟು ದುರ್ಬಲರಲ್ಲ. ಸಿದ್ದರಾಮಯ್ಯರ ಬೆಂಬಲಕ್ಕೆ ಕಾಂಗ್ರೆಸ್‌ನ 138 ಶಾಸಕರು ಹಾಗೂ ಸಮಸ್ತ ಅಹಿಂದ ವರ್ಗ ಇವೆ ಎಂಬುದು ಶಾಶ್ವತ ಸತ್ಯ. ಇದನ್ನು ಮರೆಯದಿರಿ.

(ಲೇಖಕರು ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷರು)

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

'ಕಮಲ' ಪಕ್ಷದಲ್ಲಿ ಕಿತ್ತಾಟ, ಬಣ ಬಡಿದಾಟ: ಸುದ್ದಿ



ಹಿಂಗೇ ಕಿತ್ತಾಡ್ತಾ ಇದ್ರೆ, ಕಮಲದ ದಳಗಳೆಲ್ಲಾ ಕಿತ್ಕೊಂಡು ಹೋಗಿ, ಬರೀ ಅದರ ದಂಟು ಮಾತ್ರ ಉಳ್ಕೊಳ್ಳುತ್ತೆ, ಅಷ್ಟೇ...!

ಕೆರೆಗಳ ಪುನಶ್ಚೇತನವು ದೇವರ ಸೇವೆ ಇದ್ದಂತೆ!

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ನದಿಗಳಿರುವಂತೆ ಸಣ್ಣ-ದೊಡ್ಡ ಕೆರೆಗಳೂ ಹೆಚ್ಚಿವೆ. ಕೃಷಿ ಪಂಪ್‌ಸೆಟ್‌ಗಳನ್ನು ಇಡಲಾಗದಷ್ಟು ಸ್ಥಿತಿಗೆ ಕೆಲವು ಕೆರೆಗಳು ತಲುಪಿದ್ದು, ಅಷ್ಟು ಹೂಳು ತುಂಬಿಕೊಂಡಿದೆ. ಕೆಲವೆಡೆ ಕೃಷಿಕರು, ಸ್ಥಳೀಯರೇ ಕೆರೆಯನ್ನು ಸ್ವಚ್ಛಗೊಳಿಸುವುದುಂಟು; ಆದರೆ ನಿರ್ವಹಣೆಯ ಕೊರತೆ. ನಿರ್ವಹಣಾ ಸಮಿತಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ನದಿ, ಸರೋವರ ಹಾಗೂ ಕೆರೆಗಳು ಮನುಷ್ಯನ ನಿತ್ಯದ ಬದುಕು, ಕೃಷಿ, ತೋಟಗಾರಿಕೆಯ ಜೀವಸೆಲೆಗಳು. ನೀರಿನ ಮೂಲಗಳನ್ನು ಉಳಿಸಿಕೊಳ್ಳದಿದ್ದರೆ ಭವಿಷ್ಯದ ಪೀಳಿಗೆಗೆ ನಾವೇನೇ ನೀಡಿದರೂ ಅದು ಅರ್ಥಹೀನವಾಗುತ್ತದೆ. ನೀರಿಲ್ಲದೆ ಯಾವ ಸಾಧನೆಯನ್ನೂ ಮಾಡಲಾಗದು. ನೀರಿನ ಮೂಲಗಳನ್ನು ಉಳಿಸುವ ಜತೆಗೆ ಸಮೃದ್ಧಗೊಳಿಸುವ ಕಾರ್ಯ ಆಗಲೇಬೇಕು. ಎಷ್ಟೋ ಕೆರೆಗಳು ಈಗ ಕುರುಹಿಲ್ಲದಂತೆ ಕಳೆದುಹೋಗಿವೆ. ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣವೂ ಹಿಂದೊಮ್ಮೆ ಕೆರೆಯೇ ಆಗಿತ್ತು. ಎಷ್ಟೋ ಕೆರೆಗಳು ಆಧುನಿಕ ಭರಾಟೆಯಲ್ಲಿ ಬಡಾವಣೆಗಳಾಗಿಬಿಟ್ಟಿವೆ. ಈಗ ಇರುವ ಕೆರೆಗಳನ್ನಾದರೂ ಉಳಿಸುವ ಸಂಕಲ್ಪದ ಜತೆಗೆ ಕಾರ್ಯಸಾಧನೆಯೂ ಆಗಬೇಕು.

ಕರ್ನಾಟಕದಲ್ಲಿ ಸರೋವರಗಳ ಸಂಖ್ಯೆ ತೀರಾ ಕಡಿಮೆ. ನದಿ ಮತ್ತು ಕೆರೆಗಳು ಹೇರಳವಾಗಿವೆ. ಜೀವನದಿ ಕಾವೇರಿ, ಶರಾವತಿ, ಕಾಳಿ, ಪಾಪನಾಶಿನಿ, ಸೌಪರ್ಣಿಕಾ, ಕಬಿನಿ, ಹೇಮಾವತಿ, ತುಂಗಭದ್ರಾ, ನೇತ್ರಾವತಿ, ಕುಮಾರಧಾರಾ, ವಾರಾಹಿ ಹೀಗೆ ಪಟ್ಟಿ ದೊಡ್ಡದಿದೆ. ನದಿಗಳ ಸಂರಕ್ಷಣೆಯ ಕೂಗು ಆಗಾಗ ಕೇಳಿಬರುತ್ತದೆ. ಸರಕಾರಿ ಹಂತದಲ್ಲಿ ವಾರ್ಷಿಕ, ಪಂಚವಾರ್ಷಿಕ ಯೋಜನೆಯ ನೆಲೆಯಲ್ಲಿ, ಅನುದಾನದ ಲಭ್ಯತೆಯ ಆಧಾರದಲ್ಲಿ ನದಿ ಸಂರಕ್ಷಣೆ, ಒಂದಿಷ್ಟು ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ. ಚಕ್ರವರ್ತಿ ಸೂಲಿಬೆಲೆಯವರ ಮುಂದಾಳತ್ವದ 'ಯುವ ಬ್ರಿಗೇಡ್'ನಂಥ ಸಂಘಟನೆಗಳು ಇದನ್ನೇ ಸಂಕಲ್ಪವಾಗಿ ಸ್ವೀಕರಿಸಿ ನದಿ ಸಂರಕ್ಷಣೆಯ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿವೆ. ಕಲ್ಯಾಣಿಗಳ ಸಂರಕ್ಷಣೆ/ಪುನರುಜ್ಜೀವನದಲ್ಲಿ ಯುವ ಬ್ರಿಗೇಡ್‌ನ ಕೊಡುಗೆ ದೊಡ್ಡದಿದೆ ಮತ್ತು ಪ್ರಧಾನಿ ಮೋದಿಯವರಿಂದ ರೇಡಿಯೋ ಕಾರ್ಯಕ್ರಮದಲ್ಲಿ ಪ್ರಶಂಸೆಗೊಳಗಾಗಿದೆ ಕೂಡ. ನದಿ ಮಾತ್ರವಲ್ಲದೆ ಕೆರೆ ಅಭಿವೃದ್ಧಿ ವಿಚಾರದಲ್ಲಿ ಸಿರಸಿಯ ಹೆಬ್ಬಾರರ ಸೇವೆಯೂ ಆಡಳಿತ ವ್ಯವಸ್ಥೆಗೇ ಮಾದರಿ.

ಸಣ್ಣ ನೀರಾವರಿ ಇಲಾಖೆಗಳು ಕೃಷಿಪೂರಕ ಕೆರೆಗಳನ್ನು ನಿರ್ವಹಣೆ ಮಾಡುತ್ತವೆ. ಮಿಕ್ಕಂತೆ ಎಲ್ಲ ಕೆರೆಗಳನ್ನು ಆಯಾ ಸ್ಥಳೀಯಾಡಳಿತವೇ ನಿರ್ವಹಣೆ ಮಾಡಬೇಕಾದರೂ ಅದು ಮಾತ್ರ ಸರಿಯಾಗಿ ನಡೆಯುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಬೃಹತ್ ಕೆರೆಗಳು 131 ಹೆಕ್ಟೇರ್ ಪ್ರದೇಶದಲ್ಲಿದ್ದರೆ, ಉಡುಪಿ ಜಿಲ್ಲೆಯಲ್ಲಿ 4 ಬೃಹತ್ ಕೆರೆಗಳು 283 ಹೆಕ್ಟೇರ್ ಪ್ರದೇಶದಲ್ಲಿವೆ. ಮಂಗಳೂರು ತಾಲೂಕಿನ ಕಾವೂರು ಕೆರೆ, ಬಂಟ್ವಾಳ ತಾಲೂಕಿನ ಕಾರಿಂಜೇಶ್ವರ ಕೆರೆ, ಕಾಪು ತಾಲೂಕಿನ ಎಲ್ಲೂರುದಾಳಂತ್ರ ಕೆರೆ, ಬ್ರಹ್ಮಾವರದ ಚಾಂತಾರು ಮದಗ, ಕುಂದಾಪುರ ಗ್ರಾಮದ ಕಂದಾವರಹೇರಿ ಕೆರೆ, ಕಾರ್ಕಳದ ಆನೇಕೆರೆ ಇವು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬೃಹತ್ ಕೆರೆಗಳು.

ಬಹುತೇಕ ಕೆರೆಗಳು ಸಣ್ಣ ಪ್ರಮಾಣದಲ್ಲಿರುವುದರಿಂದ ಆದಾಯ ಬರುವುದಿಲ್ಲ, ಹೀಗಾಗಿ ನಿರ್ವಹಣೆಯೂ ಇಲ್ಲ. ಅಭಿವೃದ್ಧಿಯ ವೇಳೆ ಹೂಳೆತ್ತಿ ಪಾಚಿ ತೆಗೆದ ಮೇಲೆ ಪುನಃ ಒಂದು ವರ್ಷದಲ್ಲಿ ಪಾಚಿ ಕಟ್ಟಿಕೊಳ್ಳುತ್ತದೆ, ಹೂಳು ತುಂಬಿಕೊಳ್ಳುತ್ತದೆ. ಅದನ್ನು ತೆಗೆಯುವವರೇ ಇರುವುದಿಲ್ಲ. ಸರಕಾರ, ಸ್ಥಳೀಯ ಆಡಳಿತವಂತೂ ಒಮ್ಮೆ ಅಭಿವೃದ್ಧಿಯಾದ ಕೆರೆಗಳ ಬಗ್ಗೆ ಮರುಗಮನ ಕೊಡುವ ಪದ್ಧತಿಯೇ ಇಲ್ಲ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ನದಿಗಳಿರುವಂತೆ ಸಣ್ಣ-ದೊಡ್ಡ ಕೆರೆಗಳೂ ಹೆಚ್ಚಿವೆ. ಕೃಷಿ ಪಂಪ್‌ಸೆಟ್‌ಗಳನ್ನು ಇಡಲಾಗದಷ್ಟು ಸ್ಥಿತಿಗೆ ಕೆಲವು ಕೆರೆಗಳು ತಲುಪಿದ್ದು, ಅಷ್ಟು ಹೂಳು ತುಂಬಿಕೊಂಡಿದೆ. ಕೆಲವೆಡೆ ಕೃಷಿಕರು, ಸ್ಥಳೀಯರೇ ಕೆರೆಯನ್ನು ಸ್ವಚ್ಛಗೊಳಿಸುವುದುಂಟು; ಆದರೆ ನಿರ್ವಹಣೆಯ ಕೊರತೆ. ನಿರ್ವಹಣಾ ಸಮಿತಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಜತೆಗೆ, ಕೆರೆಹೂಳು ಎತ್ತಲು ಬೇಸಗೆಯವರೆಗೂ ಕಾಯುತ್ತಾರೆ. ನೀರು ಪೂರ್ತಿ ಖಾಲಿಯಾದರೂ ಹೂಳನ್ನು ತೆಗೆಯುವುದೇ ಇಲ್ಲ. ಕೆರೆ ಸಂರಕ್ಷಣೆಗೆ ಸರಕಾರಿ ಮಾದರಿಗಿಂತ, ಕರಾವಳಿ ಭಾಗದ ಕಾರ್ಯವನ್ನು ಅನುಸರಿಸುವ ಮೂಲಕ ಸರಕಾರವು ಯಶಸ್ಸನ್ನು ಕಾಣಬಹುದು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳೂ ರಾಜ್ಯಸಭಾ ಸದಸ್ಯರೂ ಆಗಿರುವ ಡಾ. ಡಿ.ವೀರೇಂದ್ರ ಹೆಗ್ಗಡೆಯವರು, "ಜಲಮೂಲಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ" ಎನ್ನುತ್ತಾರೆ. 'ನಮ್ಮೂರು-ನಮ್ಮ ಕೆರೆ' ಎಂಬ ಗ್ರಾಮೀಣ ಕೆರೆ ಪುನಶ್ಚೇತನಾ ಕಾರ್ಯಕ್ರಮವನ್ನು ಇವರು ಪ್ರಾರಂಭಿಸಿದರು. ಹೂಳೆತ್ತುವಿಕೆ, ಒಳ ಮತ್ತು ಹೊರಹರಿವಿನ ದುರಸ್ತಿ, ಬಂಡಿಗಳ ನಿರ್ಮಾಣ, ರಾಜಕಾಲುವೆಗಳ ತೆರವು ಮುಂತಾದ ಕಾಮಗಾರಿಗಳನ್ನು ಶ್ರೀ ಕ್ಷೇತ್ರದ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಲಾಗಿದೆ. ಈ ಸಂದರ್ಭದಲ್ಲಿ, ಗ್ರಾಮೀಣರು ತಮ್ಮ ಕೃಷಿಭೂಮಿಗೆ ಫಲವತ್ತಾದ ಹೂಳನ್ನು ತೆಗೆದುಕೊಳ್ಳಲೂ ಅವಕಾಶವುಂಟು. ಹೂಳು ತೆಗೆಯುವ ಯಂತ್ರಗಳ ಬಾಡಿಗೆಯನ್ನು ಶ್ರೀಕ್ಷೇತ್ರವೇ ಭರಿಸುತ್ತದೆ. ಗ್ರಾಮ ಮಟ್ಟದಲ್ಲಿ ಕೆರೆ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದ್ದು, ಕೆರೆ ಪುನರುಜ್ಜೀವನ ಮತ್ತು ನಂತರದ ನಿರ್ವಹಣೆಯ ಹೊಣೆ ಈ ಸಮಿತಿಗಳದ್ದಾಗಿರುತ್ತದೆ. ಹೆಗ್ಗಡೆಯವರ ಮುಂದಾಳತ್ವದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯು 2024-25ರಲ್ಲಿ 58 ಕೆರೆಗಳನ್ನು ಯಶಸ್ವಿಯಾಗಿ ಪುನರುಜ್ಜೀವನಗೊಳಿಸಿದ್ದು ಇದುವರೆಗೆ ಒಟ್ಟು 792 ಕೆರೆಗಳಿಗೆ ಈ ಭಾಗ್ಯ ದಕ್ಕಿದೆ.

ಕಡಿಮೆ ಮಳೆ ಬೀಳುವ ರಾಜ್ಯದ ಗ್ರಾಮೀಣ ಬಯಲುಸೀಮೆ ಪ್ರದೇಶಗಳಲ್ಲಿ ಜನರು ದೈನಂದಿನ ಅಗತ್ಯಗಳಿಗಾಗಿ ಉಪಮೇಲ್ಮೈ ನೀರಿನ ಮೂಲವನ್ನು ಬಹುತೇಕ ಅವಲಂಬಿಸಿದ್ದಾರೆ. ಖನಿಜಾಂಶಗಳ ಕೊರತೆಯಿಂದಾಗಿ ಅಥವಾ ಆರ್ಸೆನಿಕ್, ಫ್ಲೋರಿನ್, ಕ್ಲೋರಿನ್, ಕಬ್ಬಿಣ ಇತ್ಯಾದಿ ಅನಗತ್ಯ ಕಣಗಳ ಮಾಲಿನ್ಯದಿಂದಾಗಿ ಇದು ಕುಡಿಯಲು ಯೋಗ್ಯವಾಗಿಲ್ಲ, ಇದರ ನಿಯತ ಸೇವನೆಯು ಅಪಾಯಕಾರಿ. ಇದನ್ನು ಮನಗಂಡ ಶ್ರೀಕ್ಷೇತ್ರವು ತನ್ನ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಶುದ್ಧ, ಆರೋಗ್ಯಕರ ನೀರಿನ ಪೂರೈಕೆಗೆ ಅಗತ್ಯವಿರುವ ಸ್ಥಳಗಳನ್ನು ಗುರುತಿಸಿ, ವಿಭಿನ್ನ ಸಾಮರ್ಥ್ಯದ 'ಶುದ್ಧ ಗಂಗಾ ಸ್ಥಾವರ'ಗಳೆಂಬ ನೀರಿನ ಶುದ್ಧೀಕರಣ ಘಟಕಗಳನ್ನು ಸ್ಥಳೀಯ ಪಂಚಾಯತ್ ಮತ್ತು ಇತರ ಸಮಾನಮನಸ್ಕ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸ್ಥಾಪಿಸುತ್ತಿದೆ. ಕಚ್ಚಾ ನೀರು, ಭೂಮಿ, ಕಟ್ಟಡ, ವಿದ್ಯುಚ್ಛಕ್ತಿ ಮುಂತಾದ ಮೂಲ ಅವಶ್ಯಕತೆಗಳನ್ನು ಸ್ಥಳೀಯ ಆಡಳಿತದಿಂದ ಒದಗಿಸಲಾಗಿದ್ದರೆ, ಯಂತ್ರೋಪಕರಣಗಳ ಪೂರೈಕೆ ಮತ್ತು ನಿರ್ವಹಣೆಗಾಗಿ ಹುಬ್ಬಳ್ಳಿಯ 'ಆಕ್ವಾಸಾಫಿ', ಬೆಂಗಳೂರಿನ 'ಆಕ್ವಾಶೈನ್', ಮೈಸೂರಿನ 'ಅಗ್ನಿತೀರ್ಥ ಟೆಕ್ನಾಲಜೀಸ್', ಬೆಂಗಳೂರಿನ 'ಸುರಕ್ಷಾ ಗ್ರೀನ್‌ಟೆಕ್ ಸಲ್ಯೂಷನ್ಸ್' ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಸ್ಥಾವರ ನಿರ್ವಹಣೆ, ಶುದ್ಧ ನೀರಿನ ಉತ್ಪಾದನೆ ಮತ್ತು ವಿತರಣೆಗಾಗಿ ಸ್ಥಳೀಯವಾಗಿ ಒಬ್ಬ ಉಸ್ತುವಾರಿಯನ್ನು ನೇಮಿಸಲಾಗಿದೆ. ರಿವರ್ಸ್ ಆಸ್ಮಾಸಿಸ್ ವಿಧಾನದಿಂದ ಉತ್ಪತ್ತಿಯಾಗುವ ಶುದ್ಧ ನೀರನ್ನು ಪ್ರತಿ ಲೀಟರ್‌ಗೆ 15 ಪೈಸೆ ದರದಲ್ಲಿ 20 ಲೀಟರ್ ಪ್ರಮಾಣದಲ್ಲಿ ಗ್ರಾಹಕರಿಗೆ ವಿತರಿಸಲಾಗುತ್ತದೆ. ಮಾಸಿಕ ಚಂದಾದಾರಿಕೆಯ ಸೌಲಭ್ಯವನ್ನು ಪರಿಚಯಿಸುವ ಮೂಲಕ ಈ ವ್ಯವಸ್ಥೆಯನ್ನು ಸರಳಗೊಳಿಸಲಾಗಿದೆ. ರಾಜ್ಯದ 31 ಜಿಲ್ಲೆಯ 86 ತಾಲೂಕುಗಳಲ್ಲಿ ಇಲ್ಲಿಯವರೆಗೆ ಇಂಥ ಒಟ್ಟು 459 ಘಟಕಗಳನ್ನು ಸ್ಥಾಪಿಸಲಾಗಿದ್ದು ಸುಮಾರು 5.18 ಲಕ್ಷ ಸದಸ್ಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇದೇ ರೀತಿಯಲ್ಲಿ ಶ್ರೀಕ್ಷೇತ್ರವು ಕೆರೆಗಳ ವಿಚಾರದಲ್ಲೂ ಒಂದು ದೊಡ್ಡ ಜವಾಬ್ದಾರಿಯನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸುತ್ತಿದೆ. ಅದು ಇಲ್ಲಿಯವರೆಗೆ ಕರಾವಳಿ ಭಾಗದ 600ಕ್ಕೂ ಅಧಿಕ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ ಮತ್ತು ಇವುಗಳ ಸಂರಕ್ಷಣೆಗೆ ಸ್ಥಳೀಯ ಸ್ವಸಹಾಯ ಗುಂಪಿನ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿದೆ. ಶ್ರೀಕ್ಷೇತ್ರದ ಯೋಜನೆಯ ಅಧಿಕಾರಿಗಳು ಇದರ ಮೇಲ್ವಿಚಾರಣೆ ಮಾಡುತ್ತಾರೆ. ಈ ಮಾದರಿಯನ್ನು ಸರಕಾರವೂ ಅನುಸರಿಸಬೇಕು. ಅದೆಷ್ಟೋ ಕೆರೆಗಳು ಅಭಿವೃದ್ಧಿಯಿಲ್ಲದೆ ಪಾಳುಬಿದ್ದಿವೆ, ಮತ್ತೆ ಕೆಲವು ಅಭಿವೃದ್ಧಿ ಕಂಡರೂ ನಿರ್ವಹಣೆಯಿಲ್ಲದೆ ಸೊರಗುತ್ತಿವೆ. ಕೆರೆಗಳ ಪುನರುಜ್ಜೀವನ ಆಗಲೇಬೇಕು, ನೀರಿನ ಮೂಲಗಳನ್ನು ಉಳಿಸಿಕೊಳ್ಳಲೇಬೇಕು. ಮಳೆನೀರು ಸಮುದ್ರ ಸೇರುವುದನ್ನು ಸಂಪೂರ್ಣ ತಡೆಯಲಾಗದಿದ್ದರೂ, ಅಲ್ಪವಾದರೂ ಕೆರೆಗಳ ಸಂರಕ್ಷಣೆಯ ಮೂಲಕ ಆಗಬೇಕು. ಕೆರೆಯು ಜೀವನಸೆಲೆಯಾಗಿ ಉಳಿಯಬೇಕು.

ಸರಕಾರ, ಆಡಳಿತಯಂತ್ರ, ಇಲಾಖೆಗಳಿಗಿಂತಲೂ ಖಾಸಗಿಯಾಗಿ, ವ್ಯಕ್ತಿಗತವಾಗಿ ಜಲಮೂಲಗಳನ್ನು ಸಂಪನ್ಮೂಲಗಳನ್ನಾಗಿ ಉಳಿಸಿ ಬೆಳೆಸುವವರ ಉತ್ಸಾಹ, ಪರಿಶ್ರಮ ನಿಜಕ್ಕೂ ಅಪರೂಪದ್ದು. ಇಂದಿನ ಸಮಾಜವೂ ಸರಕಾರಿ ಯೋಜನೆಗಳಿಗಾಗಿ ಕಾಯದೆ ಇಂಥವರನ್ನು ಬೆಂಬಲಿಸುತ್ತಿದೆ. ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಯೋಜನೆ ಈ ನಿಟ್ಟಿನಲ್ಲಿ ಸರಕಾರಕ್ಕೆ ಮಾದರಿಯಾಗಲಿ. ತನ್ಮೂಲಕ, ಅಂದುಕೊಂಡ ಯೋಜನೆಗಳನ್ನು ಕಾಲಮಿತಿಯಲ್ಲಿ ಮುಗಿಸಿಕೊಡುವ ಸ್ಫೂರ್ತಿಯು ನಮ್ಮ ಚುನಾಯಿತ ಸರಕಾರಕ್ಕೆ, ಆಡಳಿತ ವ್ಯವಸ್ಥೆಗೆ ದಕ್ಕುವಂತಾಗಲಿ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 210

ಸಮಾಚಾರ ಸಣ್ಣದಲ್ಲ

ತೆಲಂಗಾಣದಲ್ಲಿ 5.3 ತೀವ್ರತೆಯ ಭೂಕಂಪ

ವಿಜಯವಾಡ: ತೆಲಂಗಾಣ ರಾಜ್ಯದ ಮುಲುಗು ಎಂಬಲ್ಲಿ ಬುಧವಾರ ಬೆಳಗ್ಗೆ 7.27ರಲ್ಲಿ ಭೂಕಂಪವಾಗಿದೆ. ರಿಕ್ಟರ್ ಮಾಪಕದಲ್ಲಿ 5.3ರಷ್ಟು ತೀವ್ರತೆ ದಾಖಲಾಗಿದೆ. ಕಳೆದ 20 ವರ್ಷಗಳಲ್ಲಿ ಇಷ್ಟೊಂದು ತೀವ್ರತೆಯ ಭೂಕಂಪ ತೆಲಂಗಾಣದಲ್ಲಿ ಸಂಭವಿಸಿರಲಿಲ್ಲ ಎಂದು ಭೂಕಂಪ ಅಧ್ಯಯನ ರಾಷ್ಟ್ರೀಯ ಕೇಂದ್ರ ತಿಳಿಸಿದೆ. ಮುಲುಗು ಪಟ್ಟಣದಲ್ಲಿ ಭೂಕಂಪನದ ಕೇಂದ್ರಬಿಂದು ಇತ್ತು ಎಂದು ಗುರುತಿಸಲಾಗಿದೆ. ತೆಲಂಗಾಣ ರಾಜ್ಯದ ವಿವಿಧೆಡೆ ಮತ್ತು ಆಂಧ್ರಪ್ರದೇಶದ ಹಲವು ಸ್ಥಳಗಳಲ್ಲಿಯೂ ಭೂಮಿ ಕಂಪಿಸಿದ ಬಗ್ಗೆ ವರದಿಯಾಗಿದೆ. ಹೈದರಾಬಾದ್‌ನಲ್ಲಿ ಗೋದಾವರಿ ನದಿ ಸುತ್ತಲ ಪ್ರದೇಶದಲ್ಲಿಯೂ ಭೂಕಂಪವಾಗಿದೆ. ಪ್ರಾಣಹಾನಿ ಅಥವಾ ಆಸ್ತಿಹಾನಿ ಬಗ್ಗೆ ಈವರೆಗೆ ವರದಿಯಾಗಿಲ್ಲ. ಅಧಿಕಾರಿಗಳು ಪರಿಸ್ಥಿತಿ ನಿಗಾವಹಿಸುತ್ತಿದ್ದಾರೆ. ಭೂಮಿ ಕಂಪಿಸಿದ ಸಂದರ್ಭ ಚಿತ್ರೀಕರಣವಾಗಿರುವ ಸಿಸಿಟಿವಿ ಕ್ಯಾಮೆರಾದ ವಿಡಿಯೋಗಳು ಜಾಲತಾಣದಲ್ಲಿ ಹರಿದಾಡುತ್ತಿವೆ.

ಘಾಜಿಪುರ ಗಡಿ; ರಾಹುಲ್ ನಿಯೋಗ ತಡೆದ ಪೊಲೀಸ್

ಘಾಜಿಪುರ: ಉತ್ತರ ಪ್ರದೇಶದಲ್ಲಿ ಮಸೀದಿ ಸರ್ವೆ ವಿಚಾರವಾಗಿ ಹಿಂಸೆಗೆ ಸಾಕ್ಷಿಯಾಗಿರುವ ಸಂಭಾಲ್‌ನಲ್ಲಿ ಪೊಲೀಸರು ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಸ್ಥಳಕ್ಕೆ ಭೇಟಿ ನೀಡಲು ತೆರಳುತ್ತಿದ್ದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ವಯನಾಡು ಸಂಸದೆ ಪ್ರಿಯಾಂಕಾ ವಾದ್ರಾ ಮತ್ತು ಇತರೆ ಹಿರಿಯ ಕಾಂಗ್ರೆಸ್ ನಾಯಕರನ್ನು ಘಾಜಿಪುರ ಗಡಿಯಲ್ಲೇ ತಡೆದು ದೆಹಲಿಗೆ ವಾಪಸ್ ಕಳುಹಿಸಲಾಗಿದೆ. ಘಾಜಿಪುರ ಗಡಿಯಲ್ಲಿ ಭಾರೀ ಪೊಲೀಸ್ ಪಡೆ ನಿಯೋಜಿಸಲಾಗಿದೆ. ಜಿಲ್ಲೆಯ ಹೊರಗಿನವರಿಗೆ ಸಂಭಾಲ್ ಪ್ರವೇಶ ನಿಷೇಧಿಸಿದ್ದರಿಂದ ತಡೆಯೊಡ್ಡಲು ಗಡಿ ಭಾಗದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸಂಭಾಲ್‌ನಲ್ಲಿ ಬಿಎನ್‌ಎಸ್‌ಎಸ್ ಸೆಕ್ಷನ್ 163ರಡಿ ವಿಧಿಸಿದ್ದ ನಿರ್ಬಂಧಗಳನ್ನು ಡಿ.31ರವರೆಗೂ ವಿಸ್ತರಿಸಲಾಗಿದೆ.ಸಂಭಾಲ್ ಭೇಟಿಗೆ ಬುಧವಾರ ಬೆಳಗ್ಗೆ ಹೊರಟ ರಾಹುಲ್ ನೇತೃತ್ವದ ತಂಡ, ಪೊಲೀಸರು ಅವಕಾಶ ನಿರಾಕರಿಸಿದ್ದರಿಂದ ಘಾಜಿಪುರ ಗಡಿಯಿಂದಲೇ ದೆಹಲಿಗೆ ವಾಪಸಾಯಿತು. ಮಸೀದಿ ಸರ್ವೆಗೆ ಸರ್ವೆಯರ್‌ಗಳ ತಂಡ ತೆರಳಿದ್ದರಿಂದ ನ.19ರಿಂದ ಸಂಭಾಲ್‌ನಲ್ಲಿ ಉದ್ವಿಗ್ನತೆ ಉಂಟಾಗಿತ್ತು. ನ.24ರಂದು 2ನೇ ಸಮೀಕ್ಷೆ ವೇಳೆ ಹಿಂಸಾಚಾರ ಭುಗಿಲೆದ್ದಿತ್ತು. ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ನಿವೃತ್ತಿ ವಯಸ್ಸಲ್ಲಿ ಬದಲಾವಣೆ ಇಲ್ಲ

ದೆಹಲಿ: ಕೇಂದ್ರ ಸರಕಾರದ ನೌಕರರ ನಿವೃತ್ತಿ ವಯಸ್ಸಿನ ವಿಚಾರದಲ್ಲಿ ಸದ್ಯ ಯಾವುದೇ ಬದಲಾವಣೆ ಇಲ್ಲ. ಸರಕಾರದೆದುರು ಅಂತಹ ಯಾವುದೇ ಪ್ರಸ್ತಾಪವೂ ಇಲ್ಲ ಎಂದು ಕೇಂದ್ರದ ಸಿಬ್ಬಂದಿ ಸಚಿವಾಲಯ ಸಹಾಯಕ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಗೆ ಬುಧವಾರ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಸದ್ಯ ಕೇಂದ್ರ ಸರಕಾರಿ ನೌಕರರ ನಿವೃತ್ತಿ ವಯಸ್ಸು 60 ವರ್ಷ ಇದೆ.

ದ.ಕೊರಿಯ ಮಾರ್ಷಲ್ ಲಾ ಆದೇಶ ವಾಪಸ್

ಸಿಯೋಲ್: ದಕ್ಷಿಣ ಕೊರಿಯ ಅಧ್ಯಕ್ಷ ಯುನ್‌ಸುಕ್ ಯೋಲ್ ದೇಶದಲ್ಲಿ ಜಾರಿಗೊಳಿಸಿದ್ದ ಮಾರ್ಷಲ್ ಲಾ(ತುರ್ತು ಸೇನಾಡಳಿತ ಕಾನೂನು) ಕ್ರಮ ಜಾರಿಗೊಳಿಸಿದ ಬೆನ್ನಲ್ಲೇ ಆದೇಶವನ್ನು ಬುಧವಾರ ವಾಪಸ್ ತೆಗೆದುಕೊಂಡರು. ಅಧ್ಯಕ್ಷರ ಆದೇಶದ ಮೇರೆಗೆ ಮಂಗಳವಾರದಿಂದಲೇ ದೇಶದಲ್ಲಿ ತುರ್ತು ಸೇನಾಡಳಿತ ಜಾರಿಗೊಂಡಿತ್ತು. ಮಾರ್ಷಲ್ ಲಾ ಜಾರಿ ವಿರೋಧಿಸಿ ಸಂಸದರು ಸಂಸತ್ತಿನಲ್ಲಿ ಘೋಷಣೆ ಕೂಗಿದರು. ಕಾಯಿದೆ ಜಾರಿಗೆ ವಿರುದ್ಧವಾಗಿ ಮತ ಚಲಾಯಿಸಿದರು. ಇನ್ನೊಂದೆಡೆ ಸಾವಿರಾರು ಜನರೂ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಆ ಬಳಿಕ ಅಧ್ಯಕ್ಷರು ತಮ್ಮ ಆದೇಶವನ್ನು ಕೆಲವೇ ಗಂಟೆಗಳಲ್ಲಿ ವಾಪಸ್ ತೆಗೆದುಕೊಂಡರು. ಬಳಿಕ, ವಿರೋಧ ಪಕ್ಷಗಳು ಸಂಸತ್ತನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿವೆ ಎಂದು ಯುನ್ ಸುಕ್ ಯೋಲ್ ಕಿಡಿಕಾರಿದರು. ದೇಶ ವಿರೋಧಿ ಕೃತ್ಯದ ಮೂಲಕ ಸರಕಾರ ಅಸ್ಥಿರಗೊಳಿಸಲು ಉತ್ತರ ಕೊರಿಯ ಯತ್ನಿಸುತ್ತಿದೆ ಎಂದೂ ಯೋಲ್ ಆರೋಪಿಸಿದ್ದರು.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಸಂಭಾಲ್ ಹಿಂಸಾಚಾರ ಸಂತ್ರಸ್ತರ ಭೇಟಿಗೆ ತೆರಳಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿಗೆ ತಡೆಯೊಡ್ಡುವ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂವಿಧಾನದ ಆಶಯವನ್ನೇ ಛಿದ್ರಗೊಳಿಸಿವೆ. ಬಿಜೆಪಿ-ಆರ್‌ಎಸ್‌ಎಸ್‌ನದು ವಿಭಜಕ ಕಾರ್ಯಸೂಚಿ. ಸಮುದಾಯಗಳ ನಡುವೆ ದ್ವೇಷ ಮೂಡಿಸುವುದೇ ಇವರ ಸಿದ್ಧಾಂತ.



3ನೇ ಬಾರಿ ಮುಖ್ಯಮಂತ್ರಿಯಾಗಿ ಫಡ್ನವಿಸ್

ಮಹಾರಾಷ್ಟ್ರ: ಬಿಜೆಪಿ ಶಾಸಕಾಂಗ ಪಕ್ಷ ನಾಯಕ ಫಡ್ನವಿಸ್ | ಇಂದು ಸಂಜೆ ಪ್ರಧಾನಿ ಮೋದಿ, ಬಿಜೆಪಿ ನಾಯಕರ ಸಮ್ಮುಖ ಪ್ರತಿಜ್ಞಾವಿಧಿ | ನೂರಾರು ಸಂತರು, 22 ರಾಜ್ಯಗಳ ಸಿಎಂ ಹಾಜರಿ

ಮಹಾರಾಷ್ಟ್ರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಮಾಜಿ ಸಿಎಂ ದೇವೇಂದ್ರ ಫಡ್ನವಿಸ್ ಮುಂಬೈಯಲ್ಲಿ ಬುಧವಾರ ಅವಿರೋಧ ಆಯ್ಕೆಯಾದರು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅಭಿನಂದಿಸಿದರು. ಗುಜರಾತ್ ಮಾಜಿ ಸಿಎಂ ವಿಜಯ್ ರೂಪಾನಿ ಉಪಸ್ಥಿತರಿದ್ದರು.

ಮುಂಬೈ: ಮಹಾರಾಷ್ಟ್ರದಲ್ಲಿ ಮಹಾಯುತಿ 2.0 ಸರಕಾರ ರಚನೆಗೆ 12 ದಿನಗಳ ನಂತರ ಮುಹೂರ್ತ ಕೂಡಿಬಂದಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ(ಆರ್‌ಎಸ್‌ಎಸ್) ಕಟ್ಟಾಭಿಮಾನಿ, ಸ್ವಯಂಸೇವಕ, 54 ವರ್ಷದ ದೇವೇಂದ್ರ ಫಡ್ನವೀಸ್ ಮತ್ತೊಮ್ಮೆ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಲಿದ್ದಾರೆ.

ಮುಂಬೈಯಲ್ಲಿ ಬುಧವಾರ ನಡೆದ ಮಹತ್ವದ ಸಭೆಯಲ್ಲಿ ಮಹಾರಾಷ್ಟ್ರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ದೇವೇಂದ್ರ ಫಡ್ನವಿಸ್ ಅವರನ್ನು ಅವಿರೋಧ ಆಯ್ಕೆ ಮಾಡಲಾಗಿದೆ. ಮಹಾಯುತಿ 2.0 ಸರಕಾರದ ಮುಖ್ಯಮಂತ್ರಿ ಹುದ್ದೆಗೇರುವುದಕ್ಕೆ ಇದ್ದ ಅಡ್ಡಿಗಳೆಲ್ಲಾ ನಿವಾರಣೆಗೊಂಡು ಫಡ್ನವಿಸ್ ಹಾದಿ ಸುಗಮವಾಗಿದೆ.

ಶಾಸಕಾಂಗ ಪಕ್ಷದ ಸಭೆಗೂ ಮುನ್ನ ಮುಂಬೈನಲ್ಲಿ ನಡೆದ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಫಡ್ನವೀಸ್ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಅಂತಿಮಗೊಳಿಸಲಾಗಿತ್ತು. ಬಳಿಕ ಬುಧವಾರ ಮುಂಬೈನ ವಿಧಾನ ಭವನದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರದ ವೀಕ್ಷಕರಾಗಿ ಆಗಮಿಸಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಉಪಸ್ಥಿತಿಯಲ್ಲಿ ಆಯ್ಕೆ ಅಂತಿಮಗೊಳಿಸಲಾಯಿತು. ಬಿಜೆಪಿ ಹಿರಿಯ ನಾಯಕರಾದ ಚಂದ್ರಕಾಂತ್ ಪಾಟೀಲ್ ಮತ್ತು ಸುಧೀರ್ ಮುಂಗಂತಿವಾರ್ ಅವರು ದೇವೇಂದ್ರ ಫಡ್ನವಿಸ್ ಹೆಸರು ಪ್ರಸ್ತಾಪಿಸಿದರೆ, ಪಂಕಜಾ ಮುಂಡೆ ಮತ್ತು ಪ್ರವೀಣ್ ದಾರೆಕರ್ ಅನುಮೋದಿಸಿದರು.

ಮಹಾಯುತಿ ಮೈತ್ರಿಕೂಟದ ಮೂರೂ ಪಕ್ಷಗಳ ನಾಯಕರು ಬುಧವಾರ ಮಧ್ಯಾಹ್ನ 3.30ಕ್ಕೆ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ನೂತನ ಸರಕಾರ ರಚನೆಗೆ ಹಕ್ಕು ಮಂಡಿಸಿದರು ಎಂದು ಬಿಜೆಪಿ ನಾಯಕ ಸುಧೀರ್ ಮುಂಗಂತಿವಾರ್ ಸುದ್ದಿಸಂಸ್ಥೆಗೆ ತಿಳಿಸಿದರು.

ನ.20ರಂದು ನಡೆದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 288 ಕ್ಷೇತ್ರಗಳಲ್ಲಿ 132 ಸ್ಥಾನ ಬಿಜೆಪಿ ಗೆದ್ದಿದೆ. ಶಿವಸೇನೆ 57, ಎನ್‌ಸಿಪಿ 41 ಕ್ಷೇತ್ರಗಳನ್ನು ಗೆದ್ದಿವೆ.

ಸಂಪುಟ ಸೇರುವಂತೆ ಶಿಂಧೆಗೆ ಮನವಿ

ಬಿಜೆಪಿ ನೇತೃತ್ವದ ಹೊಸ ಮಹಾಯುತಿ 2.0 ಸರಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಮಿತ್ರಪಕ್ಷ ಶಿವಸೇನೆಯ ಏಕನಾಥ್ ಶಿಂಧೆ ವಹಿಸಿಕೊಳ್ಳುವರೇ? ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಇನ್ನೂ ಲಭ್ಯವಾಗಿಲ್ಲ. ಎನ್‌ಸಿಪಿ ನಾಯಕ ಅಜಿತ್ ಪವಾರ್ ವಿಚಾರವಾಗಿಯೂ ಬಿಜೆಪಿ ನಾಯಕರು ಬುಧವಾರ ಮಾಹಿತಿ ನೀಡಿಲ್ಲ.ಶಿಂಧೆ ಮತ್ತು ಫಡ್ನವಿಸ್ ನಡುವೆ ಮಂಗಳವಾರ ಒಂದು ಗಂಟೆ ಸಭೆ ನಡೆದಿದೆ. ಅಸಮಾಧಾನದಲ್ಲಿದ್ದ ಶಿವಸೇನೆ ನಾಯಕರನ್ನು ಸಮಾಧಾನಪಡಿಸುವ ಪ್ರಯತ್ನವನ್ನು ಫಡ್ನವಿಸ್ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಗುರುವಾರ ಶಾಸಕಾಂಗ ಸಭೆ ಬಳಿಕ ಫಡ್ನವಿಸ್ ಅವರು, 'ಶಿಂಧೆ ಅವರನ್ನು ಸಂಪುಟ ಸೇರುವಂತೆ ಆಹ್ವಾನಿಸುವೆ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ.

ಅದ್ದೂರಿ ಪ್ರಮಾಣ ವಚನ ಸಮಾರಂಭ

ದಕ್ಷಿಣ ಮುಂಬೈನ ಆಜಾದ್ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು, ಎನ್‌ಡಿಎ ಮೈತ್ರಿಕೂಟದ ಪ್ರಮುಖ ನಾಯಕರು, ಮೈತ್ರಿಕೂಟ ಸರಕಾರವಿರುವ ರಾಜ್ಯಗಳ 22 ಮುಖ್ಯಮಂತ್ರಿಗಳು, ದೇಶದ ವಿವಿಧೆಡೆಯ ಪ್ರಮುಖ ಹಿಂದೂ ಸಂತರ ಉಪಸ್ಥಿತಿಯಲ್ಲಿ ನಡೆಯಲಿರುವ ಬೃಹತ್ ಸಮಾವೇಶದಲ್ಲಿ ದೇವೇಂದ್ರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಈ ಸಮಾರಂಭಕ್ಕಾಗಿಯೇ ವಿಶೇಷ ರೀತಿಯಲ್ಲಿ 3 ಪ್ರಧಾನ ವೇದಿಕೆಗಳನ್ನು ಒಂದೇ ಸಾಲಿನಲ್ಲಿ ನಿರ್ಮಿಸಲಾಗಿದೆ. ಮಧ್ಯದ ವೇದಿಕೆಯಲ್ಲಿ ಪ್ರಮಾಣವಚನ ಜರುಗಿದರೆ, ಮತ್ತೊಂದರಲ್ಲಿ ಸಂತರಿಗೆ ಆಸನ ವ್ಯವಸ್ಥೆಯಾಗಿದೆ. ಇನ್ನೊಂದು ವೇದಿಕೆಯಲ್ಲಿ ಸಂಗೀತೋತ್ಸವ ನಡೆಯಲಿದೆ. 2,000 ವಿವಿಐಪಿಗಳು ಮತ್ತು 40 ಸಾವಿರ ಬೆಂಬಲಿಗರು ಕಾರ್ಯಕ್ರಮಕ್ಕೆ ಆಗಮಿಸುವ ನಿರೀಕ್ಷೆಯಿದೆ.

ಎರಡನೇ ಬ್ರಾಹ್ಮಣ ಮುಖ್ಯಮಂತ್ರಿ

ದೇವೇಂದ್ರ ಫಡ್ನವಿಸ್ 2014ರಲ್ಲಿ ಮೊದಲ ಬಾರಿ ಸಿಎಂ ಅಧಿಕಾರ ಸ್ವೀಕರಿಸಿದಾಗಲೇ ಮರಾಠಾ ನಾಡಿನಲ್ಲಿ ಮುಖ್ಯಮಂತ್ರಿ ಹುದ್ದೆಗೇರಿದ ಬ್ರಾಹ್ಮಣ ಸಮುದಾಯದ ಎರಡನೇ ವ್ಯಕ್ತಿ ಎನಿಸಿಕೊಂಡರು. ಅದಕ್ಕೂ ಮುನ್ನ ಮಹಾರಾಷ್ಟ್ರದಲ್ಲಿ ಸಿಎಂ ಆದ ಮೊದಲ ಬ್ರಾಹ್ಮಣ ಸಮುದಾಯದ ವ್ಯಕ್ತಿ ಮನೋಹರ ಜೋಶಿ.

22ಕ್ಕೆ ಕಾರ್ಪೊರೇಟರ್, 27ಕ್ಕೆ ಮೇಯರ್

- 1970 ಜುಲೈ 22 ನಾಗಪುರದಲ್ಲಿ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬದಲ್ಲಿ ದೇವೇಂದ್ರ ಫಡ್ನವಿಸ್ ಜನನ.
- ತಂದೆ ಗಂಗಾಧರ ರಾವ್ ವಿಧಾನಪರಿಷತ್ ಸದಸ್ಯ-ತಾಯಿ ಸರಿತಾ ಸಹಕಾರಿ ಸಂಸ್ಥೆ ನಿರ್ದೇಶಕಿ
- ಶಾಲಾ ದಿನಗಳಿಂದಲೇ ಉತ್ತಮ ಚರ್ಚಾಪಟುವಾಗಿ ಗುರುತಿಸಿಕೊಂಡಿದ್ದ ದೇವೇಂದ್ರ
- ತಂದೆಯನ್ನು ತುರ್ತು ಪರಿಸ್ಥಿತಿ ಸಂದರ್ಭ ಇಂದಿರಾ ಗಾಂಧಿ ಸರಕಾರ ಜೈಲಿಗೆ ಹಾಕಿತೆಂದು ಸಿಟ್ಟಾಗಿ 'ಇಂದಿರಾ ಕಾನ್ವೆಂಟ್' ಹೆಸರಿನ ಶಾಲೆಯನ್ನೇ ತೊರೆದ ಬಾಲಕ
- ಮಹಾರಾಷ್ಟ್ರದ ಧರಂಪೇಟ್‌ನಲ್ಲಿ ಆರ್‌ಎಸ್‌ಎಸ್ ಶಾಖೆಯಲ್ಲಿ ಸ್ವಯಂ ಸೇವಕನಾಗಿ ರೂಪುಗೊಂಡ ಪ್ರತಿಭೆ
- ಬಾಲ್ಯದಲ್ಲೇ ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿ
- 1989ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ಗೆ ಸೇರ್ಪಡೆ
- ನಾಗಪುರ ಸರಕಾರಿ ಕಾನೂನು ಕಾಲೇಜಲ್ಲಿ ಕಾನೂನು ಪದವಿ. ಬಳಿಕ ಎಂಬಿಎ ವ್ಯಾಸಂಗ, ವಕೀಲ ವೃತ್ತಿಯಲ್ಲೂ ಅನುಭವ
- ಜರ್ಮನಿಯ ಬರ್ಲಿನ್‌ನಲ್ಲಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಡಿಪ್ಲೊಮಾ ವ್ಯಾಸಂಗ
- 22ನೇ ವರ್ಷದಲ್ಲೇ ನಾಗಪುರದಲ್ಲಿ ಕಾರ್ಪೊರೇಟರ್ ಆಗಿ ರಾಜಕೀಯ ಪ್ರವೇಶ
- 27ನೇ ವರ್ಷಕ್ಕೆ 1997ರಲ್ಲಿ ನಾಗಪುರದ ಮಹಾಪೌರನಾಗಿ ಅಧಿಕಾರಕ್ಕೆ- ಸತತ 2 ಬಾರಿ ಮೇಯರ್
- ನಾಗಪುರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ 1999ರಲ್ಲಿ ಮೊದಲ ಬಾರಿ ಶಾಸಕ, ಇದೇ ಕ್ಷೇತ್ರದಲ್ಲಿ ಸತತವಾಗಿ 7 ಬಾರಿ ಶಾಸಕನಾಗಿ ಆಯ್ಕೆ
- 2010ರಲ್ಲಿ ಮಹಾರಾಷ್ಟ್ರ ಬಿಜೆಪಿ ಘಟಕ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ
- 2013ರಲ್ಲಿ ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷರಾಗಿ ನೇಮಕ

ಬರ್ಲಿನ್‌ನಲ್ಲಿ ಯುವಕ ದೇವೇಂದ್ರ.

27ರ ವಯಸ್ಸಿನಲ್ಲಿ ನಾಗಪುರ ಮೇಯರ್.



ಮೆಚ್ಚಿನ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರ ಜತೆ ಬಾಲಕ ದೇವೇಂದ್ರ ಫಡ್ನವಿಸ್(ಬಲತುದಿ)

ಮೊದಲ ಬಾರಿ ನಾಗಪುರ ದಕ್ಷಿಣ ಕ್ಷೇತ್ರದ ಶಾಸಕ.

ಮೊದಲ ಬಾರಿ ಮಹಾರಾಷ್ಟ್ರ ಸಿಎಂ ಆದಾಗ ಪ್ರಮಾಣ ವಚನ.

- ಪ್ರಧಾನಿ ನರೇಂದ್ರ ಮೋದಿ ಅವರಿಂದ 'ದೇಶಕ್ಕೆ ನಾಗಪುರದಿಂದ ಸಿಕ್ಕ ದೊಡ್ಡ ಉಡುಗೊರೆ' ಎಂಬ ಪ್ರಶಂಸೆಗೆ ಪಾತ್ರ
- 2014 ಅ.31ರಂದು ಮಹಾರಾಷ್ಟ್ರದ 27ನೇ ಸಿಎಂ ಆಗಿ ಅಧಿಕಾರ ಸ್ವೀಕಾರ
- 2019ರ ನ.23ರಂದು 2ನೇ ಬಾರಿಗೆ ಮಹಾರಾಷ್ಟ್ರ ಸಿಎಂ ಆಗಿ ಪ್ರಮಾಣ ವಚನ
- 2022ರಲ್ಲಿ ಸಿಎಂ ಏಕನಾಥ ಶಿಂಧೆ ಸರಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ
- ದೇವೇಂದ್ರ ಫಡ್ನವಿಸ್(54) ಮಹಾರಾಷ್ಟ್ರದ 2ನೇ ಬ್ರಾಹ್ಮಣ ಮುಖ್ಯಮಂತ್ರಿ. ಮೊದಲ ಸಿಎಂ ಜೋಷಿ
- 2005ರಲ್ಲಿ ಅಮೃತಾ ರಾನಡೆ ಜತೆ ವಿವಾಹ

ಮೂವರೂ ಸೇರಿ ಸರಕಾರ ನಡೆಸುತ್ತೇವೆ

ಶಿಂಧೆ, ಅಜಿತ್ ಜತೆ ರಾಜ್ಯಪಾಲರ ಬಳಿ ಹಕ್ಕು ಮಂಡಿಸಿದ ಫಡ್ನವಿಸ್

ನಿಯೋಜಿತ ಸಿಎಂ ದೇವೇಂದ್ರ ಫಡ್ನವಿಸ್, ಏಕನಾಥ್ ಶಿಂಧೆ, ಅಜಿತ್ ಪವಾರ್ ಜತೆಗೂಡಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಸರಕಾರ ರಚನೆಯ ಹಕ್ಕುಪತ್ರ ಮಂಡಿಸಿದರು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಪ್ರಮುಖರಾದ ಪ್ರಫುಲ್ ಪಟೇಲ್, ವಿಜಯ್ ರೂಪಾನಿ ಮತ್ತಿತರರಿದ್ದರು.

ಮುಂಬೈ: ಏಕನಾಥ್ ಶಿಂಧೆ, ಅಜಿತ್ ಪವಾರ್ ಮತ್ತು ನಾನು ಮೂವರೂ ಸೇರಿಕೊಂಡೇ ಹೊಸ ಸರಕಾರವನ್ನು ಮುನ್ನಡೆಸುತ್ತೇವೆ ಎಂದು ನಿಯೋಜಿತ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಹೇಳಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಬಳಿಕ ದೇವೇಂದ್ರ ಫಡ್ನವಿಸ್ ಬುಧವಾರ ಮಧ್ಯಾಹ್ನ ಶಿವಸೇನೆಯ ಏಕನಾಥ್ ಶಿಂಧೆ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಜತೆಗೂಡಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ಮಹಾಯುತಿ 2.0 ಸರಕಾರ ರಚನೆಗೆ ಹಕ್ಕು ಮಂಡಿಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಫಡ್ನವಿಸ್, 'ಸಿಎಂ ಮತ್ತು ಡಿಸಿಎಂ ಎಂಬುದೆಲ್ಲಾ ಕೇವಲ ತಾಂತ್ರಿಕ ಹುದ್ದೆಗಳಷ್ಟೆ. ನಾವೆಲ್ಲರೂ ಒಟ್ಟಾಗಿಯೇ ಮಹಾರಾಷ್ಟ್ರದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇವೆ. ಪ್ರಮಾಣ ವಚನ ಸ್ವೀಕಾರ ನಂತರ ಸಭೆ ನಡೆಸಿ ಸಚಿವರ ಸಂಖ್ಯೆ, ಖಾತೆಗಳ ವಿಚಾರ ನಿರ್ಧರಿಸಲಾಗುವುದು' ಎಂದರು.

ರಾಜ್ಯಪಾಲರಿಗೆ 3 ಪಕ್ಷಗಳ ಶಾಸಕರ ಬೆಂಬಲಪತ್ರ ಸಲ್ಲಿಸಿ ಸರಕಾರ ರಚನೆಗೆ ಹಕ್ಕು ಮಂಡಿಸಿದ್ದೇವೆ. ಸಿಎಂ ಸ್ಥಾನಕ್ಕೆ ನನ್ನ ಹೆಸರು ಶಿಫಾರಸು ಮಾಡಿ ಶಿವಸೇನೆ ಶಾಸಕಾಂಗ ಪಕ್ಷದ ನಾಯಕ ಏಕನಾಥ್ ಶಿಂಧೆ, ಎನ್‌ಸಿಪಿ ಶಾಸಕಾಂಗ ಪಕ್ಷ ನಾಯಕ ಅಜಿತ್ ಪವಾರ್ ರಾಜ್ಯಪಾಲರಿಗೆ ಪತ್ರ ನೀಡಿದ್ದಾರೆ. ಬೆಂಬಲಿಗ ಪಕ್ಷೇತರ ಶಾಸಕರೂ ರಾಜ್ಯಪಾಲರಿಗೆ ಪತ್ರ ಸಲ್ಲಿಸಿದ್ದಾರೆ ಎಂದು ಫಡ್ನವಿಸ್ ವಿವರಿಸಿದರು.

ಫಡ್ನವಿಸ್ ಹೆಸರು ಬದಲು!

ಮುಂಬೈ: ಮಹಾರಾಷ್ಟ್ರ ಸಿಎಂ ಪದಗ್ರಹಣ ಸಮಾರಂಭದ ಆಹ್ವಾನ ಪತ್ರಿಕೆ ವಿಶೇಷ ಕಾರಣಕ್ಕೆ ಗಮನ ಸೆಳೆದಿದೆ. ನಿಯೋಜಿತ ಸಿಎಂ ದೇವೇಂದ್ರ ಫಡ್ನವಿಸ್ ಹೆಸರು ಬದಲಾಗಿದೆ. 'ದೇವೇಂದ್ರ ಸರಿತಾ ಗಂಗಾಧರ ರಾವ್ ಫಡ್ನವಿಸ್' ಎಂದು ಮುದ್ರಿಸಲಾಗಿದೆ. ಫಡ್ನವಿಸ್ ತಮ್ಮ ಹೆಸರಿನಲ್ಲಿ ತಂದೆ-ತಾಯಿ ಹೆಸರನ್ನೂ ಸೇರಿಸಿ ಗೌರವ ಸಲ್ಲಿಸಿದ್ದಾರೆ. ವಿಧಾನಸಭೆ ಚುನಾವಣೆ ನಾಮಪತ್ರ ಜತೆಗಿನ ಪ್ರಮಾಣಪತ್ರದಲ್ಲಿ ದೇವೇಂದ್ರ ಗಂಗಾಧರ ಫಡ್ನವಿಸ್ ಎಂದಷ್ಟೇ ಇದ್ದಿತು.

ಕಡೆಗೂ ಬಾಂಗ್ಲಾಗೆ ಅಮೆರಿಕದ ಸೂಚನೆ

ವಾಷಿಂಗ್ಟನ್: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರ, ದೌರ್ಜನ್ಯದತ್ತ ಅಮೆರಿಕದ ಕಡೆಗೂ ಕಣ್ಣು ತೆರೆದು ನೋಡಿದೆ. 'ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮಾನವಹಕ್ಕು ಸೇರಿದಂತೆ ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯವನ್ನು ಗೌರವಿಸಬೇಕಿದೆ. ಆ ನಿಟ್ಟಿನಲ್ಲಿ ಕ್ರಮ ಜರುಗಿಸಿ' ಎಂದು ಬಾಂಗ್ಲಾದೇಶದ ಮಧ್ಯಂತರ ಸರಕಾರಕ್ಕೆ ಅಮೆರಿಕ ಸೂಚನೆ ನೀಡಿದೆ.

ವಾಷಿಂಗ್ಟನ್‌ನಲ್ಲಿ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ವಿದೇಶಾಂಗ ಇಲಾಖೆ ವಕ್ತಾರ ವೇದಾಂತ್ ಪಟೇಲ್, ಅಮೆರಿಕದೊಂದಿಗೆ ಬಾಂಧವ್ಯ ಹೊಂದಿರುವ ಎಲ್ಲಾ ದೇಶಗಳ ಸರಕಾರ ಗಳ ಜತೆಗೂ ಸ್ಥಿರ ಸಂಬಂಧವನ್ನು ಹೊಂದಿದ್ದೇವೆ. ಹಾಗಾಗಿಯೇ ಬಾಂಗ್ಲಾದೇಶಕ್ಕೂ ಈ ಸೂಚನೆ ನೀಡಿದ್ದೇವೆ' ಎಂದರು.

ಪ್ರತಿ ಸರಕಾರವೂ ನೆಲದ ಕಾನೂನು ಮತ್ತು ಮಾನವ ಹಕ್ಕುಗಳನ್ನು ಗೌರವಿಸ ಬೇಕಿದೆ. ಪ್ರತಿಭಟನೆಗಳೂ ಶಾಂತಿಯುತವಾಗಿರ ಬೇಕಿದೆ. ಬಂಧನಕ್ಕೆ ಒಳಪಟ್ಟವರಿಗೆ ಅವರ ಪರ ವಾದ ಮಂಡನೆಗೆ, ಕಾನೂನು ನೆರವು ಪಡೆಯುವುದಕ್ಕೆ ಸರಕಾರ ಅವಕಾಶ ಮಾಡಿಕೊಡಬೇಕು. ಆ ಮೂಲಕ ಮೂಲಭೂತ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕು ಎಂದು ಪಟೇಲ್ ಹೇಳಿದ್ದಾರೆ.

ಆರು ನ್ಯಾಯಾಧೀಶೆಯರ ವಜಾ; ಹೈಕೋರ್ಟ್‌ಗೆ ಸುಪ್ರೀಂ ತರಾಟೆ

ದೆಹಲಿ: ಮಧ್ಯಪ್ರದೇಶದ ನ್ಯಾಯಾಧೀಶೆಯರ ವಜಾ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ರಾಜ್ಯದಲ್ಲಿ ಮಹಿಳಾ ಸಿವಿಲ್ ನ್ಯಾಯಾಧೀಶರ ಸೇವೆಯನ್ನು ವಜಾಗೊಳಿಸಿದ್ದಕ್ಕಾಗಿ ಮತ್ತು ಕೆಲವು ನ್ಯಾಯಾಧೀಶೆಯರನ್ನು ಮರುನೇಮಕ ಮಾಡಿಕೊಳ್ಳಲು ನಿರಾಕರಿಸಿದ್ದಕ್ಕೆ ಮಧ್ಯಪ್ರದೇಶ ಹೈಕೋರ್ಟ್‌ಗೆ ತೀವ್ರವಾಗಿ ತರಾಟೆ ತೆಗೆದುಕೊಂಡಿದೆ. ಋತುಮತಿಯಾಗುವ ನೈಸರ್ಗಿಕ ಪ್ರಕ್ರಿಯೆ ಪುರುಷರಿಗೂ ಇದ್ದಿದ್ದರೆ ಅವರಿಗೆ ಅದರ ಕಷ್ಟ ಅರ್ಥವಾಗುತ್ತಿತ್ತು ಎಂದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾ.ಎನ್. ಕೋಟೀಶ್ವರ ಸಿಂಗ್ ಅವರ ದ್ವಿಸದಸ್ಯ ಪೀಠ, ಮಧ್ಯಪ್ರದೇಶ ಹೈಕೋರ್ಟ್ ವರ್ತನೆ ಸಂವೇದನಾಶೀಲವಾಗಿಲ್ಲ ಎಂದು ಪರೋಕ್ಷವಾಗಿ ಕುಟುಕಿದೆ.

- **ಪುರುಷರೂ ಋತುಮತಿ ಆಗುವಂತಿದ್ದರೆ ಅರ್ಥವಾಗುತ್ತಿತ್ತು: ಪೀಠ ಕಿಡಿ**
- **2023ರಲ್ಲಿ ಮಧ್ಯಪ್ರದೇಶದಲ್ಲಿ 6 ನ್ಯಾಯಾಧೀಶೆಯರ ವಜಾ ಪ್ರಕರಣ**

ಮಹಿಳೆಯರು ಋತುಚಕ್ರ ಹಾಗೂ ಋತುಬಂಧ ಸಂದರ್ಭಗಳಲ್ಲಿ ದೈಹಿಕ-ಮಾನಸಿಕವಾಗಿ ಬಳಲುತ್ತಿರುತ್ತಾರೆ. ಆ ಸಂದರ್ಭಗಳಲ್ಲಿ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರುತ್ತಾ ಕೆಲಸದಿಂದಲೇ ತೆಗೆದುಹಾಕಬೇಡಿ ಎಂದು ಪೀಠ ಮಾತಿನಲ್ಲೇ ತಿವಿದಿದೆ.

ಪುರುಷ ನ್ಯಾಯಾಧೀಶರು ಮತ್ತು ನ್ಯಾಯಾಂಗ ಅಧಿಕಾರಿಗಳಿಗೆ ಇದೇ ಬಗೆಯ ಮಾನದಂಡವಿದ್ದರೆ ಆಗ ಏನಾಗುತ್ತದೆ ಎಂದು ನೋಡೋಣ? ಎಂದು ಆಕ್ಷೇಪ ವ್ಯಕ್ತಪಡಿಸಿದ ನ್ಯಾ.ನಾಗರತ್ನ ಅವರು, ವಿಚಾರಣೆ ಡಿ.12ಕ್ಕೆ ಮುಂದೂಡಿದರು.

ಸ್ವಯಂಪ್ರೇರಿತ ವಿಚಾರಣೆ

2023ರ ಜೂನ್‌ನಲ್ಲಿ ಮಧ್ಯಪ್ರದೇಶ ಸರಕಾರ ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂಬ ಆರೋಪದಡಿ ನ್ಯಾಯಾಧೀಶೆಯರಾದ ಸರಿತಾ ಚೌಧರಿ, ಪ್ರಿಯಾ ಶರ್ಮಾ, ರಚನಾ ಅತುಲ್ಕರ್ ಜೋಷಿ, ಅದಿತಿ ಕುಮಾರ್ ಶರ್ಮಾ, ಸೋನಾಕ್ಷಿ ಜೋಶಿ ಮತ್ತು ಜ್ಯೋತಿ ಬರ್ಖಾಡೆ ಅವರನ್ನು ವಜಾಗೊಳಿಸಿತ್ತು. ಈ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇದೇ ವರ್ಷದ ಜನವರಿಯಲ್ಲಿ ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡಿದೆ.

ಭಾರತ ಪ್ರಯೋಗಾಲಯ; ಗೇಟ್ಸ್ ಅಭಿಪ್ರಾಯಕ್ಕೆ ಟೀಕೆ

ನ್ಯೂಯಾರ್ಕ್: ಯಾವುದೇ ಬಗೆಯ ಪರೀಕ್ಷೆ ನಡೆಸುವುದಕ್ಕೂ ಭಾರತ ಉತ್ತಮ ಪ್ರಯೋಗಶಾಲೆ ಎಂದು ಮೈಕ್ರೊಸಾಫ್ಟ್ ಕಂಪನಿ ಸಂಸ್ಥಾಪಕ ಬಿಲ್ ಗೇಟ್ಸ್ ಹೇಳಿರುವುದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ಲಿಂಕ್ಡ್ ಇನ್‌ನ ರೀಡ್ ಹಾಫ್‌ಮನ್ ಜತೆಗಿನ ಸಂವಾದದಲ್ಲಿ ಗೇಟ್ಸ್, 'ಭಾರತದಲ್ಲಿ 20 ವರ್ಷಗಳ ಬಳಿಕ ಜನಜೀವನದಲ್ಲಿ ಗಣನೀಯ ಬದಲಾವಣೆ ಕಾಣಲಿದೆ. ಭಾರತ ಸದಾ ಉತ್ತಮ ಪ್ರಯೋಗಾಲಯವಾಗಿದೆ. ಭಾರತದಲ್ಲಿ ಪ್ರಯೋಗ ನಡೆಸಿ ದೃಢಪಟ್ಟದ್ದನ್ನು ವಿಶ್ವದೆಲ್ಲೆಡೆಗೆ ಸುಲಭವಾಗಿ ತಲುಪಿಸಿ ಒಪ್ಪಿಸಬಹುದು ಎಂದು ಹೇಳಿದ್ದಾರೆ.

ಭಾರತ-ಭಾರತೀಯರ ಕುರಿತು ಗೇಟ್ಸ್ ಹೇಳಿರುವುದಕ್ಕೆ ಜಾಲತಾಣದಲ್ಲಿ ಭಾರೀ ಟೀಕೆ ವ್ಯಕ್ತವಾಗುತ್ತಿದೆ. 2009ರಲ್ಲಿ ಕ್ಲಿನಿಕಲ್ ಟ್ರಯಲ್ ಹೆಸರಲ್ಲಿ ಬಿಲ್ ಮತ್ತು ಮಿಲಿಂಡಾ ಗೇಟ್ಸ್ ಪ್ರತಿಷ್ಠಾನ ಭಾರತದ ಆದಿವಾಸಿಗಳ ಮೇಲೆ ನಡೆಸಿದ ಪ್ರಯೋಗದಿಂದ 7 ಬಾಲಕಿಯರು ಸಾವಿಗೀಡಾದರು. ಹಲವರು ತೀವ್ರ ಅಸ್ವಸ್ಥರಾದರು' ಎಂಬುದನ್ನು 'ದಿ ಸ್ಕಿನ್ ಡಾಕ್ಟರ್' ಹೆಸರಿನ 'ಎಕ್ಸ್' ಖಾತೆಯಲ್ಲಿ ಸ್ಕಾಟ್‌ಲೆಂಡ್ ವೈದ್ಯರು ಉಲ್ಲೇಖಿಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾಜಿ ಡಿಸಿಎಂ ಬಾದಲ್‌ಗೆ ಗುಂಡಿಕ್ಕಿ ಹತ್ಯೆ ಯತ್ನ: ಸೆರೆ

ಅಮೃತಸರ: ಶಿರೋಮಣಿ ಅಕಾಲಿ ದಳ(ಎಸ್‌ಎಡಿ) ಮುಖ್ಯಸ್ಥ, ಮಾಜಿ ಡಿಸಿಎಂ ಸುಖಬೀರ್ ಸಿಂಗ್ ಬಾದಲ್ ಅವರ ಹತ್ಯೆಗೆ ಬುಧವಾರ ಯತ್ನ ನಡೆದಿದ್ದು, ಆರೋಪಿಯನ್ನು ಸ್ಥಳದಲ್ಲೇ ಸೆರೆಹಿಡಿಯಲಾಗಿದೆ.

ಅಮೃತಸರದ ಸ್ವರ್ಣ ಮಂದಿರದ ಹೊರಗೆ ಬೆಳಗ್ಗೆ 9.30ರ ವೇಳೆ ಬಾದಲ್ ಅವರತ್ತ ಖಲಿಸ್ತಾನಿ ಮಾಜಿ ಉಗ್ರ ನಾರಾಯಣ ಸಿಂಗ್ ಚೌರಾ ಗುಂಡು ಹಾರಿಸಿದ. ಗುಂಡು ಗುರಿ ತಪ್ಪಿ ಹತ್ತಿರದ ಗೋಡೆ ಹೊಕ್ಕಿತು. ಬಾದಲ್ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾದರು.

ಅಕಾಲ್ ತಖ್ತ್ ಸೋಮವಾರ ಸುಖಬೀರ್ ಸಿಂಗ್ ಬಾದಲ್ ಮತ್ತು ಎಸ್‌ಎಡಿಯ ಇತರೆ ನಾಯಕರಿಗೆ 'ತಂಖಾ' (ಧಾರ್ಮಿಕ ಶಿಕ್ಷೆ) ವಿಧಿಸಿತ್ತು. ಇತ್ತೀಚೆಗಷ್ಟೇ ಕಾಲಿನ ಮೂಳೆ ಮುರಿತಕ್ಕೆ ಒಳಗಾಗಿದ್ದ ಬಾದಲ್, ಒಂದು ಕೈಯಲ್ಲಿ ಈಟಿ ಹಿಡಿದು ಗಾಲಿಕುರ್ಚಿ ಮೇಲೆ ಕುಳಿತು ಕಾವಲುಗಾರನ ಸೇವೆ ಸಲ್ಲಿಸುತ್ತಿದ್ದರು. ಈ ಸಂದರ್ಭ ಬಾದಲ್ ಅವರತ್ತ ದಾಳಿಕೋರ ಚೌರಾ ಗುಂಡು ಹಾರಿಸಿದ. ಸ್ಥಳದಲ್ಲಿದ್ದವರು ತಕ್ಷಣವೇ ಚೌರಾನನ್ನು ಸೆರೆಹಿಡಿದರು.

ಘಟನೆ ಕುರಿತು ಪ್ರತಿಕ್ರಿಯಿಸಿದ ಎಸ್‌ಎಡಿ ನಾಯಕ ದಲ್ಜಿತ್ ಸಿಂಗ್ ಚೀಮಾ, ಇದು ರಾಜ್ಯವನ್ನು ಮತ್ತೆ ಪ್ರಕ್ಷುಬ್ಧತೆಗೆ ತಳ್ಳುವ ಪಿತೂರಿ ಎಂದು ಟೀಕಿಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ವಿರುದ್ಧ ವಾಗ್ದಾಳಿ ನಡೆಸಿದರು. ಹತ್ಯಾ ಪ್ರಯತ್ನ ನಡೆದಿದ್ದರೂ ನಾವು ಶಿಕ್ಷೆಯ 'ಸೇವೆ' ಮುಂದುವರಿಸುತ್ತೇವೆ ಎಂದ ಚೀಮಾ, ಘಟನೆ ಬಗ್ಗೆ ಉನ್ನತ ಮಟ್ಟದ ನ್ಯಾಯಾಂಗ ತನಿಖೆಯಾಗಬೇಕು ಎಂದು ಆಗ್ರಹಿಸಿದರು.



ಅಕಾಲ್ ತಖ್ತ್ ಜಾಥೇದಾರ್(ಪ್ರಧಾನ ಅರ್ಚಕ) ಗಿಯಾನಿ ರಘ್ಬೀರ್ ಸಿಂಗ್ ಮತ್ತು ಮಾಜಿ ಸಿಎಂ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು, ಬಾದಲ್ ಹತ್ಯಾ ಯತ್ನವನ್ನು ತೀವ್ರವಾಗಿ ಖಂಡಿಸಿದ್ದಾರೆ. ದುಷ್ಕರ್ಮಿಗಳ ಉದ್ದೇಶ ಬಹಿರಂಗಪಡಿಸಲು ರಾಜ್ಯ ಸರಕಾರ ಕೂಲಂಕಷ ತನಿಖೆ ಮಾಡಿಸಬೇಕೆಂದು ಒತ್ತಾಯಿಸಿದ್ದಾರೆ.

ಆರೋಪಿ ಚೌರಾ ವಿರುದ್ಧ ಪ್ರಕರಣಗಳ ಸರಮಾಲೆ!: ಬಾದಲ್ ಅವರತ್ತ ಗುಂಡು ಹಾರಿಸಿದ ಆರೋಪಿ, ಖಲಿಸ್ತಾನ್ ಪರ ಭಯೋತ್ಪಾದಕ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್‌ನ ಮಾಜಿ ಸದಸ್ಯ ನಾರಾಯಣ ಸಿಂಗ್ ಚೌರಾ ಎಂದು ಗುರುತಿಸಲಾಗಿದೆ. ಚೌರಾ ಹಲವು ಉಗ್ರ ಚಟುವಟಿಕೆಗಳಲ್ಲಿ ಆರೋಪಿ.

ಅಮೃತಸರದ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ 2010ರ ಮೇ 8ರಂದು ಸ್ಫೋಟಕ ಕಾಯ್ದೆಯಡಿ ಈತನ ವಿರುದ್ಧ ಪ್ರಕರಣ ದಾಖಲಾಗಿದೆ. ಅಲ್ಲದೇ 30 ಪ್ರಕರಣ ಗಳಲ್ಲಿ ಈಗ ಪಂಜಾಬ್ ಪೊಲೀಸರಿಗೆ ಬೇಕಾಗಿದ್ದಾನೆ.

ಅಮೃತಸರ, ತರಣ್ ತರಣ್ ಮತ್ತು ರೋಪರ್ ಜಿಲ್ಲೆಗಳಲ್ಲಿ 'ಯುಎಪಿಎ' ಕಾಯಿದೆಯಡಿ ಹಲವು ಪ್ರಕರಣಗಳಲ್ಲಿ ಚೌರಾ ಆರೋಪಿಯಾಗಿದ್ದಾನೆ. ಚೌರಾನನ್ನು 2013ರ ಫೆ.28ರಂದು ಜಲಾಲಾಬಾದ್ ಗ್ರಾಮದ ತರಣ್ ತರಣ್‌ನಲ್ಲಿ ಬಂಧಿಸಲಾಗಿತ್ತು. ನಂತರ ಜಾಮೀನಿನ ಮೇಲೆ ಆತ ಬಿಡುಗಡೆಗೊಂಡಿದ್ದ. 1984ರಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳ ದೊಡ್ಡ ಮಟ್ಟದ ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದ. ಪಾಕಿಸ್ತಾನದಲ್ಲಿದ್ದಾಗ ಗೆರಿಲ್ಲಾ ಯುದ್ಧತಂತ್ರ ಮತ್ತು ದೇಶದ್ರೋಹಿ ಸಾಹಿತ್ಯ ಕುರಿತು ಪುಸ್ತಕವನ್ನು ಬರೆದಿದ್ದ ಎಂದು ತಿಳಿದುಬಂದಿದೆ.

ರೈತರಿಗೆ ಅನ್ಯಾಯವಾಗಲು ಬಿಜೆಪಿ ಬಿಡುವುದಿಲ್ಲ

ನಮ್ಮ ಭೂಮಿ ನಮ್ಮ ಹಕ್ಕು' ಜನಜಾಗೃತಿ ಅಭಿಯಾನ | ಜಿಲ್ಲೆಯಲ್ಲಿ ಬೃಹತ್ ಪಾದಯಾತ್ರೆ, ಸಹಸ್ರಾರು ಜನ ಭಾಗಿ | ಬಿವೈವಿ ತಂಡದಿಂದ ವಕ್ಫ್ ವಿರುದ್ಧ ರಣಕಹಳೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ವಕ್ಫ್ ಬೋರ್ಡ್ ಹೆಸರಿನಲ್ಲಿ ರೈತರ, ಬಡವರ, ಮಠ-ಮಂದಿರಗಳ ಜಮೀನುಗಳನ್ನು ಅಕ್ರಮವಾಗಿ ಕಬಳಿಸುತ್ತಿರುವುದನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದ ತಂಡದಿಂದ 'ನಮ್ಮ ಭೂಮಿ ನಮ್ಮ ಹಕ್ಕು' ವಕ್ಫ್ ಬೋರ್ಡ್ ವಿರುದ್ಧದ ಬೃಹತ್ ಜನಾಂದೋಲನ ಪಾದಯಾತ್ರೆ ನಡೆಸಲಾಯಿತು.

ಬುಧವಾರ ಜಿಲ್ಲಾ ಬಿಜೆಪಿ ವತಿಯಿಂದ ಕಲಬುರಗಿಯ ನಗರೇಶ್ವರ ಶಾಲೆಯಿಂದ ಜಗತ್ ವೃತ್ತದ ವರೆಗೂ ನಡೆದ ಬೃಹತ್ ಪಾದಯಾತ್ರೆಯಲ್ಲಿ ಜಿಲ್ಲೆಯ ಬಿಜೆಪಿ ಮುಖಂಡರು, ಮಠಾಧೀಶರು, ಸಾರ್ವಜನಿಕರು ಸೇರಿ ಸಹಸ್ರಾರು ಸಂಖ್ಯೆಯಲ್ಲಿ ರೈತರು ಭಾಗವಹಿಸಿ ವಕ್ಫ್ ಬೋರ್ಡ್ ಕಾನೂನು ಹಾಗೂ ಸರಕಾರದ ದೋರಣೆ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಮಾತನಾಡಿ, ಕಾಂಗ್ರೆಸ್ ಸರಕಾರಕ್ಕೆ ಅಧಿಕಾರದ ದರ್ಪ ತಲೆಗೆ ಹತ್ತಿ, ಮದದಿಂದ ಮೆರೆಯುತ್ತಿದೆ. ಶತಮಾನಗಳಿಂದ ಉಳಿಮೆ ಮಾಡಿಕೊಂಡು ಬಂದಿರುವ ರೈತರ ಜಮೀನುಗಳನ್ನು ವಕ್ಫ್ ಹೆಸರಿನಲ್ಲಿ ಕಬಳಿಸಲು ಹೊರಟಿರುವ ಸರಕಾರಕ್ಕೆ ಒಳ್ಳೆಯದಾಗಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ದೇಶಕ್ಕೆ ಅನ್ನ ನೀಡುವ ರೈತರನ್ನು ವಕ್ಫ್ ಬೋರ್ಡ್ ಮೂಲಕ ಅನ್ಯಾಯ ಮಾಡುತ್ತಿರುವ ಸಿಎಂ ಸಿದ್ದರಾಮಯ್ಯ ಅವರು ಕೇವಲ ಅಲ್ಪಸಂಖ್ಯಾತರ ಮತಗಳಿಂದ ಮುಖ್ಯಮಂತ್ರಿ ಆಗಿದ್ದಾರೆ ಎಂಬಂತೆ ವರ್ತಿಸುತ್ತಿದ್ದು, ಕೇವಲ ಒಂದು ಕೋಮಿಗೆ ಮುಖ್ಯಮಂತ್ರಿ ಆಗಿದ್ದರೋ ಎನ್ನುವ ಅನುಮಾನ ಮೂಡುತ್ತಿದೆ. ಹಿಂದೂಗಳು, ರೈತರ ಮೇಲೆ ನಿಮಗೆ ಏಕೆ ಇಷ್ಟು ಅಸಮಾಧಾನ.? ಹಿಂದೂಗಳು ನಿಮಗೆ ಮತ ಹಾಕಿಲ್ವೇ ಎಂದು ಕಿಡಿಕಾರಿದರು.

ಸಿಎಂ ಸಿದ್ದರಾಮಯ್ಯನವರ ಆದೇಶದ ಮೇರೆಗೆ ಸಚಿವ ಜಮೀರ್ ಅಹ್ಮದ್ ಖಾನ್ ಅವರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಅಲ್ಲಿನ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಿ ಕೃಷಿ ಜಮೀನುಗಳ ಪಹಣಿಯಲ್ಲಿ ವಕ್ಫ್ ಹೆಸರು ಸೇರಿಸಿದ್ದಾರೆ. ಬಳಿಕ ರೈತರನ್ನೇ ಒಕ್ಕಲೆಬ್ಬಿಸುವ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲ ಸಾವಿರಾರು ವರ್ಷಗಳ ಇತಿಹಾಸವುಳ್ಳ ಮಠ-ಮಂದಿರಗಳ ಆಸ್ತಿ ಮೇಲೂ ವಕ್ಫ್ ದೃಷ್ಟಿ ಹರಿಸಿ ಹಿಂದೂ ಧರ್ಮದವರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ಯಾವುದೇ ಕಾರಣಕ್ಕೂ ಬಿಜೆಪಿ ರೈತರಿಗೆ ಅನ್ಯಾಯ ಆಗಲು ಬಿಡುವುದಿಲ್ಲ, ಕೊನೆ ಉಸಿರಿರುವವರೆಗೆ ಹೋರಾಟ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.

ನಮ್ಮ ಭೂಮಿ ನಮ್ಮ ಹಕ್ಕು' ಜನಜಾಗೃತಿ ಅಭಿಯಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ,ಮತ್ತಿತರರು ಇದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿಂದ ಒಂದಾದ ಮೇಲೊಂದು ಹಗರಣಗಳನ್ನು ನಡೆಸುತ್ತಿದ್ದು, ಬಿಜೆಪಿ ಭ್ರಷ್ಟ ಆಡಳಿತದ ವಿರುದ್ಧ ನಿರಂತರ ಹೋರಾಟ ಮಾಡಿಕೊಂಡು ಬರುತ್ತಿದೆ. ಎಸ್.ಸಿ-ಎಸ್‌ಟಿ ಮೀಸಲು ಹಣ, ವಾಲ್ಮೀಕಿ ನಿಗಮ ಮತ್ತು ಮೈಸೂರು ಮುಡಾ ಹಗರಣ ಹೀಗೆ ಅನೇಕ ಹಗರಣ ನಡೆಸಿದೆ. ಆರಂಭದಲ್ಲಿ ನಮ್ಮ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಹೇಳುತ್ತಿದ್ದ ಸಿಎಂ, ಬಿಜೆಪಿ ಮತ್ತು ಸಾರ್ವಜನಿಕರ ಹೋರಾಟ ಭುಗಿಲೇಳುತ್ತಿದ್ದಂತೆ, ತಮ್ಮ ಸಿಎಂ ಸ್ಥಾನಕ್ಕೆ ಕುತ್ತು ಬರುವ ಆತಂಕಕ್ಕೆ ಎಲ್ಲವನ್ನು ಒಪ್ಪಿಕೊಂಡಿದ್ದಾರೆ. ನಾವು ಸರಕಾರದ ತೇಜೋವಧೆ ಮಾಡುತ್ತಿಲ್ಲ. ಸರಕಾರದಿಂದ ಜನರಿಗೆ ಆಗುತ್ತಿರುವ ಮೋಸಕ್ಕೆ ನ್ಯಾಯ ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಕಲಬುರಗಿಯಲ್ಲಿ ವಕ್ಫ್ ಬೋರ್ಡ್ ಹಾವಳಿ ಹೆಚ್ಚಾಗಿದೆ. ರೈತರಿಗೆ ನೋಟಿಸ್ ನೀಡಿ ಅನ್ಯಾಯ ಮಾಡುತ್ತಿದೆ. ಜಿಲ್ಲೆಯ ಚಿಂಚೋಳಿ ಸುತ್ತಮುತ್ತ 1000 ಎಕರೆ ಜಾಗಕ್ಕೆ ವಕ್ಫ್ ನೋಟಿಸ್ ನೀಡಿದೆ. ಇನ್ನೂ ಸಾವಿರ ಎಕರೆ ರೈತರ ಭೂಮಿಗೂ ನೋಟಿಸ್ ನೀಡಲಿದೆ. ಅಲ್ಲದೇ, ಚಿಂಚೋಳಿಯ ಮಹಾತೇಶ್ವರ ದೇವಸ್ಥಾನ, ಭೀರಲಿಂಗೇಶ್ವರ ದೇವಸ್ಥಾನ ಸೇರಿ ಅನೇಕ ಮಠ ಮಂದಿರಗಳಿಗೂ ನೋಟಿಸ್ ನೀಡಿ ಬಡವರು, ರೈತರು ಬೀದಿಗೆ ಬರುವಂತೆ ಮಾಡಿದೆ. ನೋಟಿಸ್ ವಾಪಾಸ್ ಪಡೆದು ಮೊಸಳೆ ಕಣ್ಣೀರುವ ಹಾಕಿದರೆ, ನಡೆಯುವುದಿಲ್ಲ. ವಕ್ಫ್ 1975 ಕಾಯ್ದೆಯ ಗಜೆಟ್ ಅನ್ನು ಕೂಡಲೇ ರದ್ದು ಮಾಡಬೇಕು ಎಂದು ಅಗ್ರಹಿಸಿದರು.

ಮಾಜಿ ಉಪ ಮುಖ್ಯಮಂತ್ರಿ ಬಿ. ಶ್ರೀರಾಮುಲು ಮಾತನಾಡಿ, ಸರಕಾರ ಅಧಿಕಾರಿಕ್ಕೆ ಬಂದು ಒಂದೂವರೆ ವರ್ಷ ಕಳೆದರು, ಇಲ್ಲಿವರೆಗೂ ಯಾವುದೇ ಅಭಿವೃದ್ಧಿ ಕೆಲಸವಾಗಿಲ್ಲ, ಸಿಎಂ ಹಿಡಿದು ಎಲ್ಲಾ ಸಚಿವರು ಪೈಪೋಟಿಗೆ ಬಿದ್ದು ಭ್ರಷ್ಟಾಚಾರ ಮಾಡುತ್ತಿದ್ದಾರೆ. ವಾಲ್ಮೀಕಿ ನಿಗಮ ಹಗರಣ, ಮುಡಾ ಹಗರಣ, ಅಬಕಾರಿ ಹಗರಣ ಸೇರಿ ಎಲ್ಲಾ ನಿಗಮಗಳಲ್ಲೂ ಭ್ರಷ್ಟಚಾರ ಮಾಡುತ್ತಿದ್ದಾರೆ. ವಿಧಾನಸಭೆಯ ಮೂರನೇ ಮಹಡಿಯಲ್ಲೂ ಭ್ರಷ್ಟಚಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಶಾಸಕ ಭೈರತಿ ಬಸವರಾಜ್, ಮಾಜಿ ಶಾಸಕರಾದ ಮುರುಗೇಶ್ ನಿರಾಣಿ, ಎಂ.ಪಿ ರೇಣುಕಾಚಾರ್ಯ, ಬಿಜೆಪಿ ಮಹಾನಗರ ಜಿಲ್ಲಾಧ್ಯಕ್ಷರ ಚಂದು ಪಾಟೀಲ್ ಮಾತನಾಡಿದರು. ಬಿಜೆಪಿ ಕಲಬುರಗಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರದಾನ ಕಾರ್ಯದರ್ಶಿ ಪಿ.ರಾಜೀವ್, ಕೇಂದ್ರ ಮಾಜಿ ಸಚಿವ ಭಗವಂತ ಖುಬಾ, ಶಾಸಕರಾದ ಬಸವರಾಜ್ ಮತ್ತಿಮಡು, ಅವಿನಾಶ್ ಜಾಧವ, ಶರಣು ಸಲಗಾರ, ಶೈಲೇಂದ್ರ ಬೆಲ್ದಾಳೆ, ಸಿದ್ದು ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ನಮೋಶಿ, ಸುನೀಲ್ ವಲ್ಲ್ಯಾಪೂರೆ, ಬಿ.ಜಿ ಪಾಟೀಲ್, ಮಾಜಿ ಶಾಸಕರಾದ ಮುರುಗೇಶ್ ನಿರಾಣಿ, ಎಂ.ಪಿ ರೇಣುಕಾಚಾರ್ಯ, ಸುಭಾಸ್ ಗುತ್ತೇದಾರ, ಅಮರನಾಥ್ ಪಾಟೀಲ್, ರಾಜಕುಮಾರ ಪಾಟೀಲ್ ತೆಲ್ಕೂರ್, ದತ್ತಾತ್ರೇಯ ಪಾಟೀಲ್ ರೇವೂರ್, ಮುಖಂಡರಾದ ಅವ್ವಣ್ಣ ಮ್ಯಾಕೇರಿ, ನಿತೀನ್ ಗುತ್ತೇದಾರ, ಮಣಿಕಂಠ ರಾಠೋ ಡ್, ಹರ್ಷನಂದ ಗುತ್ತೇದಾರ ಇದ್ದರು.

> ಮುಂದಿನ ವಿಧಾನ ಸಭೆ ಚುನಾವಣೆ ಯಾವಾಗಬೇಕಾದರೂ ನಡೆಯಲಿ. ರಾಜ್ಯದಲ್ಲಿ ಬಿಜೆಪಿಗೆ 130 ಸ್ಥಾನಗಳಲ್ಲಿ ಸ್ವಂತ ಬಲದಲ್ಲಿ ಗೆಲ್ಲಿಸಿ, ಅಧಿಕಾರಕ್ಕೆ ತರುತ್ತೇನೆ. ಅಲ್ಲಿಯವರೆಗೂ ವಿಶ್ರಮಿಸುವ ಪ್ರಶ್ನೆಯೇ ಇಲ್ಲ. ನಾಡಿನ ಎಲ್ಲಾ ಕಾರ್ಯಕರ್ತರು ತಲೆ ತಗ್ಗಿಸದಂತೆ ನೋಡಿಕೊಳ್ಳುತ್ತೇನೆ. ನಿಮ್ಮ ಸಹಕಾರ ಸದಾ ಇರಲಿ.
> - ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ವಯಸ್ಸಿನಲ್ಲಿ ಚಿಕ್ಕವರಿರಬಹುದು, ಆದರೆ, ತಮ್ಮ ತಂದೆ ಮಾಜಿ ಸಿಎಂ ಯಡಿಯೂರಪ್ಪ ಅವರ ಗರಡಿಯಲ್ಲಿ ಪಳಗಿದ ಅನುಭವವಿದೆ. ವಾಲ್ಮೀಕಿ ಹಗರಣ, ಮುಡಾ ಹಗರಣ, ವಕ್ಫ್ ಹಗರಣ ಸೇರಿ ಸರಕಾರ ನಡೆಸಿರುವ ಭ್ರಷ್ಟಚಾರ ವಿರುದ್ಧ ಹೋರಾಟ ನಡೆಸಿ ಸಿಎಂ ಹಾಗೂ ಡಿಸಿಎಂ ಅವರನ್ನು ಒಂಟಿ ಕಾಲಲ್ಲಿ ನಿಲ್ಲಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ದೊಡ್ಡ ಸಾಮರ್ಥ್ಯ ವಿಜಯೇಂದ್ರಗಿದೆ. ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆ ಎದುರಿಸಿ, ಸಿಎಂ ಸ್ಥಾನದಲ್ಲಿ ನೋಡುತ್ತೇವೆ.
> - ಎಂ.ಪಿ ರೇಣುಕಾಚಾರ್ಯ, ಮಾಜಿ ಶಾಸಕ

> ಬಸವಣ್ಣನ ನಾಡಲ್ಲಿ ವಕ್ಫ್ ಬೋರ್ಡ್ ವಿರುದ್ಧ ಮೂರು ತಂಡಗಳಲ್ಲಿ ಬಿಜೆಪಿ ಹೋರಾಟ ಆರಂಭಿಸಿದೆ. ಕೇವಲ ಒಂದು ಸಮುದಾಯಕ್ಕೆ ಸಹಾಯ ಮಾಡಲು ಮಠ, ಮಂದಿರ್, ರೈತರ ಜಮೀನು ಕಬಳಿಕೆ ಮಾಡಿ, ಆಸ್ತಿಗಳ ಪಹಣಿಯಲ್ಲಿ ವಕ್ಫ್ ಹೆಸರು ಬರುವಂತೆ ಮಾಡಿದೆ. ಶತಮಾನದ ಉಳಿಮೆ ಮಾಡಿದ ನಮ್ಮ ಆಸ್ತಿ ಯಾರಿಗೂ ಬಿಟ್ಟು ಕೊಡುವ ಮಾತ್ತೆಯಿಲ್ಲ. ಓಲೈಕೆ ರಾಜಕಾರಣ ನಡೆಯಲ್ಲ. ನಾವೇನು ಬಳೆ ತೊಟ್ಟುಕೊಂಡಿಲ್ಲ. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದಂತೆ ಈಗ, ಮತ್ತೆ, ವಕ್ಫ್ ವಿರುದ್ಧ ಹೊಸ ಸ್ವಾತಂತ್ರ್ಯ ಹೋರಾಟ ಆರಂಭಿಸಬೇಕಿದೆ.
> - ಬಿ.ಶ್ರೀರಾಮುಲು, ಮಾಜಿ ಉಪ ಮುಖ್ಯಮಂತ್ರಿ

ಕಲಬುರಗಿಯಲ್ಲಿ ಹೇಳೋರು, ಕೇಳೋರು ಯಾರು ಇಲ್ಲ

ಇನ್ನೂ, ಕಲಬುರಗಿಯಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಯಾರಿಗೆ ಯಾವಾಗ ಏನಾಗುತ್ತೋ ಎನ್ನುವ ಭಯದಲ್ಲಿಲೇ ಜನ ಓಡಾಡುತ್ತಿದ್ದಾರೆ. ಮೊನ್ನೆಯಷ್ಟೇ, ಯಡ್ರಾಮಿಯಲ್ಲಿ 11 ವರ್ಷದ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ, ಚಂದ್ರಂಪಳ್ಳಿಯಲ್ಲಿ ವೃದ್ದೆಯ ಮೇಲೆ ಅತ್ಯಾಚಾರ, ಆಳಂದನಲ್ಲಿ ಅತ್ಯಾಚಾರ ಸೇರಿ ಅನೇಕ ಲೈಂಗಿಕ ಕಿರುಕುಳ ಪ್ರಕರಣಗಳಿಂದ ಕಲಬುರಗಿಯಲ್ಲಿ ಯಾರೊಬ್ಬ ಮಹಿಳೆಯು ಸಹ ಗೌರವದಿಂದ ಓಡಾಡುವ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಕರಾಳ ದಿನ ಕಲಬುರಗಿಗೆ ಬಂದಿವೆ.ಜನರೇ ಬಡಿಗೆ ಹಿಡಿದು ಜನಪ್ರತಿನಿದಿನಗಳಿಗೆ ಹೊಡೆಯುವ ದಿನಗಳು ದೂರ ಉಳಿದಿಲ್ಲ. ಸರಕಾರಕ್ಕೆ ಮುಂದಿನ ದಿನಗಳಲ್ಲಿ ಜನ ತಕ್ಕಪಾಠ ಕಲಿಸುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ಕಲಬುರಗಿ ಕಾನೂನು ಸುವ್ಯವಸ್ಥೆ ಕುರಿತು ಗುಡುಗಿದರು.

ಸಮಾಚಾರ ಸಣ್ಣದಲ್ಲ

ಚನ್ನಬಸವ ಆಸ್ಪರಿಗೆ ಪಿಎಚ್.ಡಿ ಪದವಿ

ಕಾರಟಗಿ: ಪಟ್ಟಣದ ಸರಕಾರಿ ಪಿಯು ಕಾಲೇಜು ಇಂಗ್ಲಿಷ್ ಉಪನ್ಯಾಸಕ ಚನ್ನಬಸವ ಆಸ್ಪರಿ ಅವರಿಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ (ಪಿಎಚ್.ಡಿ) ಪಡೆದಿದ್ದಾರೆ. ಬೆಂಗಳೂರು ನಗರ ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮಾರ್ಗದರ್ಶಕರಾದ ಡಾ. ತಾಂಡವ ಗೌಡ ಟಿ. ಎನ್. ಅವರ ಮಾರ್ಗದರ್ಶನದಲ್ಲಿ ಆಸ್ಪರಿ ಅವರು ಸಂಶೋಧನೆ ಜಕ್ಸ ಪೋಸ್ಟಿಂಗ್ ಮಾಡರ್ನ್ ಆ್ಯಂಡ್ ಪೋಸ್ಟ್ ಮಾಡರ್ನ್ ಲಿಟರರಿ ಥಿಯರೀಸ್ - ಎ ಕ್ರಿಟಿಕಲ್ ಅಪ್ರೋಚ್ ಟು ದ ನೆರೆಟಿವ್ಸ್ ಆಫ್ ಅಮಿತ್ ಚೌಧುರಿ ಎಂಬ ಮಹಾಪ್ರಬಂಧ ಇಂಗ್ಲಿಷ್ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ವಿಶ್ವವಿದ್ಯಾಲಯದ ಪಿಎಚ್.ಡಿ ನಿಯಮಾವಳಿಗಳಡಿಯಲ್ಲಿ ಅಂಗೀಕರಿಸಲಾಗಿದೆ. ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಆಸ್ಪರಿ ಅವರಿಗೆ ಪಿಎಚ್.ಡಿ ಪದವಿ ಪ್ರಧಾನ ಮಾಡಲಾಯಿತು.

ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಕೊಪ್ಪಳ: ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ವಿವಿಧ ಯೋಜನೆಗಳ ಸೌಲಭ್ಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿ ಡಿ.20 ರವರೆಗೆ ವಿಸ್ತರಿಸಲಾಗಿದೆ. ಮೆಟ್ರಿಕ್ ನಂತರದ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ 'ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ', 'ಶುಲ್ಕ ಮರುಪಾವತಿ', ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ವಿಸ್ತರಿಸಲಾಗಿದೆ. ಅರ್ಹರು ಇಲಾಖೆ ವೆಬ್‌ಸೈಟ್ https://ssp.postmatric.karnataka.gov.inನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ https://bcwd.karnataka.gov.in ಗೆ ಭೇಟಿ ನೀಡಬಹುದು. ಮಾಹಿತಿಗೆ ಸಹಾಯವಾಣಿ: 8050770005, ಇ-ಮೇಲ್ ಗೆ ಸಂಪರ್ಕಿಸಬಹುದು.

ಮದ್ಯ ಮಾರಾಟ ನಿಷೇಧ: ಡಿಸಿ ಆದೇಶ

ಗಂಗಾವತಿ: ತಾಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಡಿ. 12 ಮತ್ತು 13 ರಂದು ನಡೆಯಲಿರುವ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಹಾಗೂ ಅಂಜನಾದ್ರಿ ಬೆಟ್ಟದಲ್ಲಿ ಹನುಮ ಮಾಲೆ ವಿಸರ್ಜನೆ ಕಾರ್ಯಕ್ರಮ ಹಿನ್ನೆಲೆ ಗಂಗಾವತಿ ನಗರ ಠಾಣಾ ವ್ಯಾಪ್ತಿಯಲ್ಲಿ ಮದ್ಯಪಾನ ಹಾಗೂ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಅಹಿತಕರ ಘಟನೆ ಜರುಗದಂತೆ ಕಾನೂನು ಮತ್ತು ಸುವ್ಯವಸ್ಥೆ, ಶಾಂತಿ ಪಾಲನೆಗೆ ಮತ್ತು ಸಾರ್ವಜನಿಕ ಹಿತಾಸಕ್ತಿ ಕಾಯುವ ಉದ್ದೇಶಕ್ಕೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 21ರ ಪ್ರಕಾರ ಡಿ. 11 ರ ಸಂಜೆ 4 ಗಂಟೆಯಿಂದ ಡಿ.13ರ ಮಧ್ಯರಾತ್ರಿ ವರೆಗೆ ಹಾಗೂ ಡಿ.12 ರ ಸಂಜೆ 4 ಗಂಟೆಯಿಂದ ಡಿ.13 ರ ಮಧ್ಯರಾತ್ರಿವರೆಗೆ ಗಂಗಾವತಿ ಗ್ರಾಮೀಣ ಠಾಣೆ ವ್ಯಾಪ್ತಿಯಲ್ಲಿ ನಿಷೇಧಿಸಿದೆ. ಈ ಸಂಬಂಧವಾಗಿ ಅಬಕಾರಿ ಉಪ ಆಯುಕ್ತರ ನೇತೃತ್ವದಲ್ಲಿ ತನಿಖಾ ತಂಡ ರಚಿಸಿ, ಅದರಲ್ಲಿ ಆರಕ್ಷಕ ವೃತ್ತ ನಿರೀಕ್ಷಕರು, ಅಬಕಾರಿ ವೃತ್ತ ನಿರೀಕ್ಷಕರು ಕಾರ್ಯನಿರ್ವಹಿಸಬೇಕು. ಆದೇಶ ಜಾರಿಗೆ ತರುವಲ್ಲಿ ನಿರ್ಲಕ್ಷ್ಯ ತೋರಿದವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ನೇಕಾರರ ಪ್ಯಾಕೇಜ್ ಪ್ರಸ್ತಾವನೆಗೆ ಆಹ್ವಾನ

ಕೊಪ್ಪಳ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ವಿಶೇಷ ಘಟಕ, ಗಿರಿಜನ ಉಪ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ಎಸ್‌ಎಮ್‌ಇ ಘಟಕ ಸ್ಥಾಪನೆಗೆ ಸಹಾಯ ಧನಕ್ಕೆ ಅರ್ಹ ಫಲಾನುಭವಿಗಳಿಂದ ಪ್ರಸ್ತಾವನೆ ಆಹ್ವಾನಿಸಲಾಗಿದೆ. ಕೊಪ್ಪಳ ಜಿಲ್ಲೆಗೆ 3 ವಿಶೇಷ ಘಟಕ ಯೋಜನೆ ಮತ್ತು 1 ಗಿರಿಜನ ಉಪ ಯೋಜನೆ ಗುರಿ ನಿಗದಿ ಮಾಡಲಾಗಿದೆ. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ ಎಸ್‌ಎಮ್‌ಇ ಘಟಕ ಸ್ಥಾಪಿಸಲು ಇಚ್ಛಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳು ಡಿ.20ರ ಒಳಗಾಗಿ ಉಪ ನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಅಶೋಕ ಸರ್ಕಲ್ ಹತ್ತಿರ ಕೊಪ್ಪಳ ಈ ಕಚೇರಿಗೆ ಪರಿಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸಬಹುದು. ಮಾಹಿತಿಗೆ ದೂರವಾಣಿ ಸಂಖ್ಯೆ: 08539-295469ಕ್ಕೆ ಸಂಪರ್ಕಿಸಬಹುದು.

{ ಕೃಷ್ಣ ಬೈರೇಗೌಡ } ಸಚಿವ

ಬಿಜೆಪಿಯವರ ಅವಧಿಯಲ್ಲಿ 4 ಸಾವಿರ ಆಸ್ತಿಗಳನ್ನು ವಕ್ಫ್ ಖಾತೆಗೆ ಮಾಡಿಕೊಟ್ಟಿದ್ದಾರೆ. ಆಗ ಇವರೆಲ್ಲಾ ಎಲ್ಲಿ ಹೋಗಿದ್ರು? ಬಿಜೆಪಿ ಹೋರಾಟ ಮಾಡ್ತಿರುವುದು ಜನರನ್ನು ವಂಚಿಸಲು. ಕಾಂಗ್ರೆಸ್ ಸರಕಾರದ ಮೇಲೆ ಇರುವ ಜನರ ಅಭಿಮಾನ ಸಹಿಸಲಾಗದೆ ಸುಳ್ಳು ಸುದ್ದಿಗಳನ್ನು ಹಬ್ಬಿಸಿ, ಜನರ ಮನಸು ಬೇರೆಡೆ ಸೆಳೆಯುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ.

ರೈತರು ಸಂಘಟಿತರಾಗಿ ಸಮಸ್ಯೆ ಪರ ಹೋರಾಟಕ್ಕಿಳಿಯಲಿ

ರಾಯಚೂರು: ದೇಶದ ಉದ್ದಗಲಕ್ಕೂ ರೈತರ ಸಾಲು ಸಾಲು ಸಮಸ್ಯೆಗಳಿವೆ ಆದರೆ ಸಮಸ್ಯೆಗಳಿಗೆ ಮಾತ್ರ ಸೂಕ್ತ ಪರಿಹಾರ ದೊರಕುತ್ತಿಲ್ಲ, ರೈತರು ಸಂಘಟಿತರಾಗಿ ಹೋರಾಟ ಮಾಡಬೇಕೆ ವಿನಃ ರಾಜಕೀ ಯ ಮಾಡುವ ಸಂಘಟನೆಗಳಾಗ ಬಾರದು. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರೈತ ಸಂಘಟನೆಗಳು ಹುಟ್ಟಿಕೊಂಡಿದ್ದು, ಹಸಿರು ಶಾಲು ಹಾಕಿಕೊಂಡು ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಿವೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ ಕಳವಳ ವ್ಯಕ್ತಪಡಿಸಿದರು.

ನಗರದ ಕೃಷಿ ವಿಶ್ವ ವಿದ್ಯಾಲಯದ ಪ್ರೇಕ್ಷಾ ಗೃಹದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹ ಭಾಗಿತ್ವದಲ್ಲಿ ಹಮ್ಮಿಕೊಂಡ ರೈತರ ಜಾಗೃತ ಸಮಾವೇಶ ಉದ್ಘಾಟಿಸಿದರು.

ಹತ್ತಿ ಬೆಳೆದ ಬೆಳೆಗಾರರಿಗೆ ಮಾರುಕಟ್ಟೆಯಲ್ಲಿ ದಲ್ಲಾಳಿಗಳಿಂದ ಮೋಸ, ವಂಚನೆಗಳಾಗುತ್ತಿವೆ. ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ರೈತರಿಂದ ಖರೀದಿಸುತ್ತಿದ್ದಾರೆ. ದಲ್ಲಾಲಿಗಳ ಹಾವಳಿ ನಿಯಂತ್ರಿಸಬೇಕಾಗಿದೆ. ಕೊನೆ ಬಾಗದ ರೈತರಿಗೆ ನೀರು ದೊರೆಯುತ್ತಿಲ್ಲ. ಸಮಸ್ಯೆಗಳಿಗೆ ಇದಕ್ಕಾಗಿ ರಾಜ್ಯದ ಉದ್ದಗಲಕ್ಕೂ ರೈತ ಸಂಘಟನೆ ಮಾಡಿ ರೈತರ ಬೇಡಿಕೆ ಮತ್ತು ಸಮಸ್ಯೆಗಳ ಬಗೆಹರಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಜಿಲ್ಲಾಧ್ಯಕ್ಷ ಶಿವಾರ್ಜುನ ಮಾತನಾಡಿ, ಜಿಲ್ಲೆಯಲ್ಲಿ ರೈತರು ಸಾಕಷ್ಟು ಸಮಸ್ಯೆಗಳು ಎದುರಿಸುತ್ತಿದ್ದಾರೆ. ಭತ್ತಕ್ಕೆ ಬೆಂಬಲ ಬೆಲೆಯಿಲ್ಲ, ಇದ್ದರೂ ಖರೀದಿ ಕೇಂದ್ರಗಳಿಲ್ಲ. ಪ್ರತಿ ಟ್ವಿಂಟಲ್‌ಗೆ 500 ಪ್ರೋತ್ಸಾಹ ಧನ ನೀಡಬೇಕಾಗಿದೆ.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಸಹ ಭಾಗಿತ್ವದಲ್ಲಿ ರೈತರ ಜಾಗೃತ ಸಮಾವೇಶವನ್ನು ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ ಉದ್ಘಾಟಿಸಿದರು.

> ರೈತರು ಹೆಗಲ ಮೇಲೆ ಹಾಕಿಕೊಳ್ಳುವ ಹಸಿರು ಶಾಲಿಗೆ ತನ್ನದೇ ಆದ ಪ್ರಾಮುಖ್ಯತೆ ಇದೆ. ಆದರೆ ಇಂದು ಅದಕ್ಕೆ ಅಗೌರವ ತರುವ ಕೆಲಸವಾಗುತ್ತಿದೆ. ದೇಶ ಮತ್ತು ರಾಜ್ಯದಲ್ಲಿ ರೈತರ ವಿವಿಧ ಸಮಸ್ಯೆಗಳಿಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹತ್ತಿ, ಭತ್ತ ಸೇರಿ ಇತರೆ ಬೆಳೆಗಾರರು ಸಾಕಷ್ಟು ಸಮಸ್ಯೆಗಳು ಎದರುಸುತ್ತಿದ್ದಾರೆ.
> -ಕುರುಬೂರು ಶಾಂತಕುಮಾರ ರಾಜ್ಯಾಧ್ಯಕ್ಷ

ನೀರಾವರಿ ಇಲಾಖೆ ಅಧಿಕಾರಿಗಳು ಕೆಳ ಭಾಗದ ರೈತರಿಗೆ ನೀರು ಒದಗಿಸುವಲ್ಲಿ ಅನ್ಯಾಯ ಮಾಡುತ್ತಿದ್ದಾರೆ ಎಂದರು.

ಕೆವಿಕೆ ಮುಖ್ಯಸ್ಥ ಹನುಮಂತಪ್ಪ ಮಾತನಾಡಿ, ಜಿಲ್ಲೆಯಲ್ಲಿ ಸಾಕಷ್ಟು ರೈತರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಹೆಚ್ಚಾಗಿ ಹತ್ತಿ ಬೆಳೆಯನ್ನು ಬೆಳೆಯಲಾಗುತ್ತದೆ ಎಂದರು.

ಸಮಾವೇಶದಲ್ಲಿ ಸಂಗಮೇಶ ನಾಯಕ, ತಾಯಪ್ಪ ಶಿವಂಗಿ, ಶಂಕರರೆಡ್ಡಿ ರಾಂಪೂರ, ಮಸ್ತಾನ್ ನಾಯಕ ಖಾನಾಪೂರ, ಸಾಧಿಕ್ ಹುಸೇನ್ ಸೇರಿದಂತೆ ರೈತರು ಭಾಗವಹಿಸಿದ್ದರು.

ಬೀದಿಬದಿ ಅಂಗಡಿಗಳ ತೆರವಿಗೆ ಸೂಚನೆ

ಬೀದಿ ಬದಿ ಅಂಗಡಿ ತೆರವುಗೊಳಿಸಲು ವ್ಯಾಪಾರಸ್ಥರಿಗೆ ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ಹೇಳಿದರು.

ಮುದಗಲ್: ಪಟ್ಟಣದಲ್ಲಿ ಅಂಬೇಡ್ಕರ್ ವೃತ್ತ ನಿರ್ಮಾಣ ಮಾಡುವ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆ ಪಕ್ಕದ ಬೀದಿ ಬದಿ ಅಂಗಡಿಗಳನ್ನ ತೆರವುಗೊಳಿಸಲು ವ್ಯಾಪಾರಸ್ಥರಿಗೆ ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ಮಂಗಳವಾರ ಸೂಚಿಸಿದರು.

ಅನಧಿಕೃತವಾಗಿ ಬೀದಿಬದಿ ವ್ಯಾಪಾರ ನಡೆಸುತ್ತಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಪಾದಚಾರಿಗಳ ನಿರಾತಂಕ ಓಡಾಟಕ್ಕೆ ಅಡಚಣೆ ಆಗುತ್ತಿರುವ ಬಗ್ಗೆ ಹಾಗೂ ಅಂಬೇಡ್ಕರ್ ವೃತ್ತ ನಿರ್ಮಾಣ ಮಾಡಬೇಕಾಗಿದ್ದು, ಹೀಗಾಗಿ ಅಂಗಡಿ ತೆರವುಗೊಳಿಸುವಂತೆ ಅವರು ಹೇಳಿದರು.

ಈ ವೇಳೆ ಕೆಪಿಸಿಸಿ ಕಾರ್ಯದರ್ಶಿ ತಮ್ಮಣ್ಣ ಗುತ್ತೇದಾರ, ಬಿಜೆಪಿ ಅಧ್ಯಕ್ಷ ಕರಿಯಪ್ಪ ಯಾದವ, ಪುರಸಭೆ ಸದಸ್ಯ ದುರಗಪ್ಪ ಕಟ್ಟಿಮನಿ, ಡಿಎಸ್‌ಎಸ್ ತಾಲೂಕು ಸಂಚಾಲಕ ಶರಣಪ್ಪ ಕಟ್ಟಿಮನಿ, ಸೇರಿದಂತೆ ಅನೇಕರಿದ್ದರು.

ನಗರಸಭೆ ಸಾಮಾನ್ಯ ಸಭೆ ಡಿ.7ಕ್ಕೆ

ಕೊಪ್ಪಳ: ಇಲ್ಲಿನ ನಗರಸಭೆ ಸಾಮಾನ್ಯ ಸಭೆ ಡಿ.7ರ ಬೆಳಗ್ಗೆ 11ಕ್ಕೆ ನಗರಸಭೆ ಕಚೇರಿಯಲ್ಲಿಯ ಸಭಾಂಗಣದಲ್ಲಿ ನಡೆಯಲಿದೆ. ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶ ಪರೀಕ್ಷೆ ಮಕ್ಕಳಿಗೆ ಸ್ಕಾಲರ್‌ಶಿಪ್

ಕಾರಟಗಿ: ರೆಡ್ಡಿ ವೀರಣ್ಣ ಸಂಜೀವಪ್ಪ ವಸತಿ ಶಾಲೆ ಹಾಗೂ ಕಾಲೇಜಿಗೆ 2025-26ನೇ ಸಾಲಿಗೆ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಶೇ. 80 ರಿಂದ 90 ಅಂಕ ಪಡೆಯುವ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ಕಮ್ಮುವಾರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಕೊಲ್ಲಾ ಶೇಷಗಿರಿ ರಾವ್ ಹೇಳಿದರು.

ತಾಲೂಕಿನ ರವಿನಗರ ಬಳಿಯ ರೆಡ್ಡಿ ವೀರಣ್ಣ ಸಂಜೀವಪ್ಪ ವಸತಿ ಶಾಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದರು.

ಕಾಲೇಜಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಡಿ. 22 ರಂದು ಬೆಳಗ್ಗೆ 10ಕ್ಕೆ ಶಾಲೆಯಲ್ಲಿ ಪ್ರವೇಶ ಪರೀಕ್ಷೆ ನಡೆಯಲಿವೆ. ಇದರಲ್ಲಿ 60 ಬಹು ಆಯ್ಕೆ ಪ್ರಶ್ನೆಗಳಿದ್ದು, ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸಬಹುದು. ಉತ್ತರಿಸಲು 1 ಗಂಟೆ ಅವಕಾಶ ಇದೆ. ಪರೀಕ್ಷೆಯಲ್ಲಿ ಶೇ. 80 ಅಂಕ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ 30 ಸಾವಿರ ರು. ವಿದ್ಯಾರ್ಥಿ ವೇತನ ದೊರೆಯಲಿದೆ.

ಇದೇ ರೀತಿ 5 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ 2025 ಜ. 5 ರಂದು ಪರೀಕ್ಷೆ ನಡೆಯಲಿದ್ದು, ಶೇ. 90ಕ್ಕಿಂತ ಮೇಲ್ಪಟ್ಟು ಪಡೆದವರಿಗೆ, 5 ಸಾವಿರ ರೂ. ಹಾಗೂ ಶೇ. 80-89ರವರೆಗೆ ಅಂಕ ಪಡೆದರೆ 4 ಸಾವಿರ ರು. ವಿದ್ಯಾರ್ಥಿ ವೇತನ ದೊರೆಯಲಿದ್ದು, ಇದು ಕೇವಲ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಇದೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಅನುಕೂಲಕ್ಕೆ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು. ವಿದ್ಯಾರ್ಥಿ ವೇತನ ಪ್ರವೇಶ ಶುಲ್ಕದಲ್ಲಿ ಕಡಿತಗೊಳಿಸಿ ಉಳಿದ ಹಣ ಪಡೆಯುವುದಾಗಿ ತಿಳಿಸಿದರು.

ಆಡಳಿತ ಅಧಿಕಾರಿ ವಿ. ಶ್ರೀಮನ್ನಾರಾಯಣ, ಪ್ರಾಚಾರ್ಯ ಕೆ.ಎಸ್. ಗುರುಮಠ, ಉಪ ಪ್ರಾಚಾರ್ಯ ಮಹಮ್ಮದ್ ರಫೀಕ್ ಖಾನ್, ಕೋ-ಆರ್ಡಿನೇಟರ್ ಶ್ರೀದೇವಿ ಕೊಲ್ಲಾ ಇದ್ದರು.

ರವಿನಗರ ಬಳಿಯ ರೆಡ್ಡಿ ವೀರಣ್ಣ ಸಂಜೀವಪ್ಪ ವಸತಿ ಶಾಲೆಯಲ್ಲಿ ವಿದ್ಯಾರ್ಥಿ ವೇತನ ಕುರಿತ ಕರ ಪತ್ರಗಳನ್ನು ಕೊಲ್ಲಾ ಶೇಷಗಿರಿ ರಾವ್ ಬಿಡುಗಡೆಗೊಳಿಸಿದರು.

ಮನೆಗೊಂದು ಶೌಚಾಲಯ ನಿರ್ಮಿಸಿ: ಪಿಡಿಒ

ಕಮಲನಗರ: ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ನಿರ್ಮಿಸಿಕೊಂಡ ಶೌಚಾಲಯಗಳನ್ನು ಬಳಕೆ ಮಾಡಬೇಕು ಬಯಲು ಮುಕ್ತ ಶೌಚಾಲಯವನ್ನಾಗಿ ಮಾಡಲು ಎಲ್ಲರು ಮುಂದಾಗಬೇಕು. ಪ್ರತಿ ಮನ್ನೆಯಲ್ಲೂ ಶೌಚಾಲಯವನ್ನು ನಿರ್ಮಿಸಿಕೊಳ್ಳಬೇಕು.

ವಿಶ್ವ ಶೌಚಾಲಯ ಮತ್ತು ವಿಶ್ವ ಮಾನವ ಹಕ್ಕುಗಳ ಅಂಗವಾಗಿ ನಮ್ಮ ಶೌಚಾಲಯ-ನಮ್ಮ ಗೌರವ ಎಂಬ ಶಿರ್ಷಿಕೆ ಹಾಗೂ ಅಂದದ ಶೌಚಾಲಯ ಆನಂದದ ಜೀವನ ಎಂಬ ಅಭಿಯಾನದ ನಿಮಿತ್ಯ ಕಮಲನಗರ ತಾಲೂಕಿನ ಕೊರೆಕಲ್ ಗ್ರಾಮ ಪಂಚಾಯತ್‌ನಲ್ಲಿ ಮಂಗಳವಾರ ನಡೆದ ಅಭಿಯಾನ ಕುರಿತು ಅವರು ಮಾತನಾಡಿದರು. ಗ್ರಾಮೀಣ ಸಮುದಾಯದಲ್ಲಿ ಸುರಕ್ಷಿತ, ನೈರ್ಮಲ್ಯ, ಶುಚಿತ್ವ, ಕುರಿತು ಡಿ.12 ವರೆಗೆ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ ಗ್ರಾಮದ ಮನೆಗಳಲ್ಲಿ ವೈಯಕ್ತಿಕ ಹಾಗೂ ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ನಿರ್ಮಿಸಿಕೊಂಡ ಸಮುದಾಯ ಶೌಚಾಲಯ ಬಳಕೆ ಮಾಡದೆ ಇದ್ದಲ್ಲಿ ಬಳಕೆ ಮಾಡಿಕೊಳ್ಳಿ ಎಂದು ಗ್ರಾಮಸ್ಥರಿಗೆ ತಿಳಿಸಿದರು. ಶೌಚಾಲಯ ಬಳಸುವಂತೆ ಪ್ರೇರಣೆ ನೀಡಬೇಕು. ಯಾರ ಮನೆಯಲ್ಲಿ ಶೌಚಾಲಯವಿಲ್ಲವೋ ಅಂಥವರು ಗ್ರಾಮ ಪಂಚಾಯತಗೆ ಬಂದು ಅರ್ಜಿ ಸಲ್ಲಿಸಿರಿ ಮನೆಯ ಹೆಣ್ಣು ಮಕ್ಕಳು ಬಹಿರ್ದೆಸೆಗೆ ಹೋಗದಂತೆ ತಡೆಯಿರಿ ಎಂದರು. ಈ ಸಂದರ್ಭದಲ್ಲಿ ಡಿಇಒ ಭಗವಾನ ಜಾನಾಪೂರಿ , ಕಾರ್ಯದರ್ಶಿ ಬಸವರಾಜ ಚಿಮಕೊಡ, ವಾಟರ್ ಮ್ಯಾನ್ ರಾಮ ಸೂರಟೆ, ಗ್ರಾಮ ಕಾಯಕ ಮಿತ್ರರಾದ ಮೀನಾಕುಮಾರಿ ಸಾಗವೆ, ಮಾಹಿತಿ ಶಿಕ್ಷಣ ಸಂವಹನ ಸಂಯೋಜಕರಾದ ಸವಿತಾ ನಾಗೇ ಶ್ ಬನ್ನಾಳೆ, ರಾಜೀವ್ ಗಾಂಧಿ ಸಂಯೋ ಜಕರಾದ ಸಂಪತ್, ನೀತಿ ಆಯೋಗದ ಸಂಯೋಜಕ 'ರಾದ ಅಮರ್ ಕೋಟೆ, ಶಿಕ್ಷಕರಾದ ಮೀರಾಬಾಯಿ, ಬೈರಾಮ್, ಗ್ರಂಥಪಾಲಕರಾದ ತಂಗೆಮ್ಮಾ, ಶಾಲಾ ಮಕ್ಕಳು, ಶಾಲಾ ಶಿಕ್ಷಕರು ಸೇರಿದಂತೆ ಗ್ರಾಮ ಪಂಚಾಯತ್ ಸಿಬ್ಬಂದಿ ಮತ್ತಿತರರು ಇದ್ದರು.

ಪೇಜಾವರ ಶ್ರೀ ವಿರುದ್ಧ ಕ್ರಮಕ್ಕೆ ಗೋಸ್ಲೆ ಒತ್ತಾಯ

ಲಿಂಗಸಗೂರು: ನಮ್ಮನ್ನು ಗೌರವಿಸುವ ಸಂವಿಧಾನ ಬರಲಿ ಎಂದು ಹೇಳಿಕೆ ನೀಡುವ ಮೂಲಕ ಈಗಿರುವ ಶ್ರೇಷ್ಟ ಸಂವಿಧಾನಕ್ಕೆ ಅಗೌರವ ಸೂಚಿಸಿರುವ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಶ್ರೀ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲೂಕು ಸಂಚಾಲಕ ರಮೇಶ ಗೋಸ್ಲೆ ಸರಕಾರಕ್ಕೆ ಆಗ್ರಹಿಸಿದ್ದಾರೆ. ಶ್ರೀಗಳು ಆಡಿರುವ ಮಾತು, ದೇಶದ ಸಮಸ್ತ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾ ತರು, ಮಹಿಳೆಯರು ಹಾಗೂ ಸ್ವಾತಂತ್ರ್ಯ ಪ್ರಿಯರ ಹಕ್ಕುಗಳನ್ನು ಕಸಿಯುವ ಹುನ್ನಾರದ ಭಾಗವಾಗಿ ಗೋಚರಿಸುತ್ತಿದೆ ಎಂದು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಆರೋಪಿಸಿದ್ದಾರೆ. ಬಿಜೆಪಿಯ ಅನಂತ ಕುಮಾರ ಹೆಗಡೆ ಸಂವಿಧಾನವನ್ನು ಬದಲಿಸುವ ಮಾತು ಹೇಳಿದ್ದರು. ಆ ಮಾತನ್ನು ಆರ್‌ಎಸ್‌ಎಸ್‌ನ ವಕ್ತಾರರಂತಿರುವ ಪೇಜಾವರ ಶ್ರೀ ಈಗ ಹೇಳುತ್ತಿದ್ದಾರೆ. ಸಂವಿಧಾನವನ್ನು ಬದಲಿಸುವ ಮಾತು ಆಡುವ ಬದಲು ಈ ದೇಶದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ತೊಲಗಿಸಲು ಶ್ರೀಗಳು ಪ್ರಯತ್ನಿಸಬೇಕೆಂದು ಅವರು ಆಗ್ರಹಿಸಿದ್ದಾರೆ. ಕಾರಣ ಪೇಜಾವರ ಶ್ರೀಗಳ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕೆಂದು ಎಂದು ಪತ್ರಿಕಾ ಪ್ರಕಟಣೆಯ ಮೂಲಕ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಬಸ್ಸಿನ ಸೌಕರ್ಯ ಕಲ್ಪಿಸಲು ಮನವಿ

ಲಿಂಗಸೂಗೂರು: ತಾಲೂಕಿನ ಕೊನೆಯ ಅಂಚಿನಲ್ಲಿರುವ ಅಂಕನಾಳ, ಹಾಗೂ ತೊಂಡಿಹಾಳ, ಗ್ರಾಮಗಳಿಂದ ಸುಮಾರು 50 ರಿಂದ 55 ವಿದ್ಯಾರ್ಥಿಗಳು ಹಲಕವಟಗಿ ಸರಕಾರಿ ಪ್ರೌಢಶಾಲೆಗೆ ಹೋಗುತ್ತಾರೆ. ಸುಮಾರು 7ಕಿ.ಮೀ. ಅಂತರದಲ್ಲಿರುವ ಶಾಲೆಗೆ ಸರಿಯಾದ ಸಮಯಕ್ಕೆ ಬಸ್ಸಿನ ಸೌಕರ್ಯವಿಲ್ಲದೇ ಶಾಲಾ ಮಕ್ಕಳು ಶಾಲಾ ಅವಧಿಯ ಸಮಯಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಬಸ್ ಸೌಕರ್ಯ ಕಲ್ಪಿಸಬೇಕೆಂದು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸಾರಿಗೆ ಸಂಸ್ಥೆ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ಒಂದು ವಾರದ ಒಳಗಾಗಿ ವಿದ್ಯಾರ್ಥಿಗಳಿಗೆ ಬಸ್ಸಿನ ಸೌಕರ್ಯ ಒದಗಿಸಿಕೊಡಬೇಕು. ಒಂದು ವೇಳೆ ಒಂದು ವಾರದ ಒಳಗಾಗಿ ಶಾಲಾ ಮಕ್ಕಳಿಗೆ ಬಸ್ಸಿನ ಸೌಕರ್ಯ ಒದಗಿಸದೇ ಹೋದಲ್ಲಿ ತಮ್ಮ ಘಟಕದ ಮುಂಭಾಗದಲ್ಲಿ ಸಂಘಟನೆಯ ಹಾಗೂ ವಿದ್ಯಾರ್ಥಿನಿಯರು ಹಾಗೂ ಮಕ್ಕಳ ಪಾಲಕರು ಎಲ್ಲರೂ ಸೇರಿಕೊಂಡು ಧರಣಿ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷ ತಿಮ್ಮರೆಡ್ಡಿ ಮುನ್ನೂರ, ಪ್ರಧಾನ ಕಾರ್ಯದರ್ಶಿ ರಮೇಶ ಗುತ್ತೇದಾರ್, ಶರಣಮ್ಮ, ಜ್ಯೋತಿ ಸುಂಕದ ಸೇರಿದಂತೆ, ವಿದ್ಯಾರ್ಥಿಗಳು ಇತರರು ಇದ್ದರು.

ವಿವಿಧ ಕಳವು ಪ್ರಕರಣ: 4.70 ಲಕ್ಷ ನಗದು ವಶಕ್ಕೆ

ಕೊಪ್ಪಳ: ಕುಕನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ವಿವಿಧ ಅಪರಾಧ ಪ್ರಕರಣದಲ್ಲಿ 6 ಆರೋಪಿಗಳನ್ನು ಬಂಧಿಸಿ, 4.70 ಲಕ್ಷ ರು. ನಗದು ಸೇರಿ ಒಟ್ಟು 13.30 ಲಕ್ಷ ರು. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ ತಿಳಿಸಿದರು. ನಗರದ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಬುಧವಾರ ಮಾತನಾಡಿ, ಕುಕನೂರು ಎಪಿಎಂಸಿಯಲ್ಲಿ ರಾಜು ಟ್ರೇಡಿಂಗ್ ಕಂಪನಿ ಹಿಂದೆ ನಿಲ್ಲಿಸಿದ್ದ 1.90 ಲಕ್ಷ ರು. ಮೌಲ್ಯದ ಟ್ರ್ಯಾಕ್ಟರ್, ಟ್ರೆಲರ್ ಕಳ್ಳತನ ಆಗಿತ್ತು. ಶರೀಫಸಾಬ ಎಂಬುವರು ನ.23ರಂದು ಪ್ರಕರಣ ದಾಖಲಿಸಿದ್ದರು. ಪ್ರಕರಣದಲ್ಲಿ ಆಡೂರು ಗ್ರಾಮದ ಬಸವರಾಜ ಹೊಸಮನಿ ಎಂಬಾತನನ್ನು ಬಂಧಿಸಿದ್ದು, 5 ಲಕ್ಷ ರು. ಮೌಲ್ಯದ ಟ್ರ್ಯಾಕ್ಟರ್, ಟ್ರೇಲರ್ ವಶಕ್ಕೆ ಪಡೆಯಲಾಗಿದೆ. ಶಿರೂರು ಗ್ರಾಮದ ಶರಣಪ್ಪ ಎಂಬುವರ ಹೊಲದಲ್ಲಿ ಕಳೆದ ಜೂನ್‌ನಲ್ಲಿ 1.32 ಲಕ್ಷ ರು. ಮೌಲ್ಯದ 11 ಶ್ರೀಗಂಧದ ಮರ ಕಳ್ಳತನ ಮಾಡಿದ್ದರು. ಪ್ರಕರಣದಲ್ಲಿ ಪರಸಪ್ಪ ಭಜಂತ್ರಿ, ಶಿವಾನಂದ ಭಜಂತ್ರಿ ಎಂಬುವವರನ್ನು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದಾರೆ. ಕಳ್ಳರಿಂದ 70 ಸಾವಿರ ರು. ಮೌಲ್ಯದ ಎತ್ತುಗಳು, 1.50 ಲಕ್ಷ ರು.ನ ವಾಹನ ಮತ್ತು ಎರಡು ಆಕಳು ಮಾರಾಟ ಮಾಡಿದ 20 ಸಾವಿರ ರು. ಹಣ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸೇನೆ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ

ಸಿಂಧನೂರು: ಸರಕಾರಿ ಆಸ್ಪತ್ರೆಯಲ್ಲಿ ಬಾಣಂತಿ ಮಹಿಳೆಯರ ಸರಣಿ ಸಾವಿನ ಪ್ರಕರಣಗಳ ಕುರಿತಂತೆ ಕಠಿಣ ಕ್ರಮಕ್ಕೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆಯಿಂದ ಡಿ.3 ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದ್ದು, ಉಪವಾಸ ನಿರತ ಇಬ್ಬರು ಪದಾಧಿಕಾರಿಗಳ ಸ್ಥಿತಿ ಗಂಭೀರವಾಗಿದ್ದರೂ, ಸಂಬಂಧಿಸಿದ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ಸಂಘಟನೆಯ ಕಾರ್ಯಕರ್ತರು ಆರೋಪಿಸಿದ್ದಾರೆ. ನಮ್ಮ ಕರ್ನಾಟಕ ಸೇನೆಯ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಗಾಣಗೇರ, ರಾಜ್ಯ ಘಟಕದ ಕಾರ್ಯಾಧ್ಯಕ್ಷ ಬಸವರಾಜ ಖರಬದಿನ್ನಿ ನಿನ್ನೆಯಿಂದ ಉಪವಾಸ ನಿರತರಾಗಿದ್ದು, ರಾತ್ರಿ ವೇಳೆ ಸರಕಾರಿ ಆಸ್ಪತ್ರೆಯ ವೈದ್ಯರೊಬ್ಬರು ಬಂದು ಆರೋಗ್ಯ ತಪಾಸಣೆ ನಡೆಸಿ ಹೋಗಿದ್ದು ಬಿಟ್ಟರೆ, ತಾಲೂಕು ಅಧಿಕಾರಿಗಳಾಗಲಿ, ಜಿಲ್ಲಾಡಳಿತ, ಆರೋಗ್ಯ ಇಲಾಖೆಯವರಾಗಲಿ ಧರಣಿ ಸ್ಥಳಕ್ಕೆ ಬಂದು ವಿಚಾರಿಸಿಲ್ಲ. ಅನಿರ್ಧಿಷ್ಟ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದ್ದು, ಧರಣಿ ಸ್ಥಳಕ್ಕೆ ಶಾಸಕ ಹಂಪನಗೌಡ ಬಾದರ್ಲಿ ಅವರು ಬಂದು ಅಹವಾಲು ಆಲಿಸಿಲ್ಲ. ಇನ್ನೂ ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿ ದ್ದಾರೆ. ಉಪವಾಸನಿರತ ನಮ್ಮ ಸಂಘಟನೆಯ ಮುಖಂಡರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು, ಒಂದು ವೇಳೆ ಏನಾದರೂ ಸಮಸ್ಯೆಯಾದರೆ ತಾಲೂಕು, ಜಿಲ್ಲಾಡಳಿತ ಹಾಗೂ ಶಾಸಕರು ನೇರ ಹೊಣೆಗಾರರಾಗುತ್ತಾರೆ ಎಂದು ಧರಣಿ ನಿರತ ಸಂಘಟನೆಯ ಪದಾಧಿಕಾರಿಗಳು ಎಚ್ಚರಿಸಿದ್ದಾರೆ.

@vishwavaninews

ವಿಶ್ವವಾಣಿ ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಬೆಂಗಳೂರು
ಗುರುವಾರ
05 | 12 | 2024

ಡಾ. ಚೌಡಯ್ಯ

ಕಾರ್ಮಿಕ ಸಂಘಟನೆಯಲ್ಲಿ ಅಪಾರ ಕೊಡುಗೆ

ಕಾರ್ಮಿಕ ಸಂಘಟನೆಯಲ್ಲಿ ಅಪಾರ ಪರಿಶ್ರಮ ತೋರಿ, ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದು, ಸುಮಾರು 25 ಪುಸ್ತಕಗಳನ್ನು ರಚಿಸಿರುವ ಡಾ. ಚೌಡಯ್ಯ ಇವರು ಇತ್ತೀಚೆಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್'ಗೆ ಭಾಜನರಾಗಿರುವುದು ವಿಶೇಷ ಎನಿಸಿದೆ.

ಸರಕಾರಿ ನೌಕರಿ ಎಂದರೆ ಹೆಚ್ಚಿನ ಜವಾಬ್ದಾರಿ ಮತ್ತು ಬಿಡುವಿಲ್ಲದ ಕೆಲಸ; ಕೆಲವು ಬಾರಿ ನಿಷ್ಠೆಯಿಂದ ಕೆಲಸ ಮಾಡಿದರೂ, ಎಲ್ಲಾ ನೌಕರರಿಗೂ ಸೂಕ್ತ ಸೌಲಭ್ಯಗಳು ಮತ್ತು ಅನುಕೂಲಗಳು ದೊರೆಯದೇ ಇರುವುದೂ ಇದೆ; ಅಂತಹ ಸಂದರ್ಭಗಳಲ್ಲಿ ಕಾರ್ಮಿಕರು ಒಗ್ಗಟ್ಟಾಗಿ ಮನವಿ ನೀಡುವುದು, ಸಣ್ಣ ಮಟ್ಟದ ಹೋರಾಟ ನಡೆಸುವುದು ಅನಿವಾರ್ಯ. ಇಂತಹ ಹೋರಾಟಗಳನ್ನು ಸಂಘಟಿಸುವುದು ಅಪಾರ ಕೌಶಲ್ಯ ಮತ್ತು ಪರಿಶ್ರಮ ಬೇಡುವ ಕೆಲಸ.

ಸರಕಾರಿ ನೌಕರರ ಹಿತರಕ್ಷಣೆಯನ್ನೇ ಮುಖ್ಯ ಉದ್ದೇಶವನ್ನಾಗಿಸಿಕೊಂಡು, ಅವರನ್ನು ಸಂಘಟಿಸಿ, ಮನವಿಗಳನ್ನು ಸಲ್ಲಿಸಿ ಹೋರಾಟದ ನಾಯಕತ್ವ ವಹಿಸುವಲ್ಲಿ ಡಾ. ಚೌಡಯ್ಯನವರು ಯಶಸ್ವಿಯಾಗಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕು ತ್ಯಾಮಗೊಂಡ್ಲು ಹೋಬಳಿ ತೋಟನ ಹಳ್ಳಿ ಗ್ರಾಮದಲ್ಲಿ ಜನಿಸಿದ ಡಾ. ಚೌಡಯ್ಯನವರು ಗ್ರಾಮೀಣ ಪ್ರದೇಶವಾದ ತ್ಯಾಮಗೊಂಡ್ಲುವಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ನಂತರ, ಸಿದ್ದಗಂಗಾ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದರು. ಬಡ ಕುಟುಂಬದಿಂದ ಬಂದ ಚೌಡಯ್ಯನವರು, ವಿದ್ಯಾರ್ಥಿದೆಸೆಯಲ್ಲೇ ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಕೊಂಡಿದ್ದರು.

ಸರಕಾರಿ ನೌಕರಿಯನ್ನು ಸೇರಿದ ಮೇಲೆ, ಸಹೋದ್ಯೋಗಿ ನೌಕರರ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘಕ್ಕೆ 1988ರ ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ರಾಜ್ಯಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾಗಿ ನಂತರ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಜನರಲ್ ಹುದ್ದೆಗೆ ಆಯ್ಕೆಯಾಗಿ ಕಾರ್ಯನಿರ್ವಹಿಸಿದರು. 1998ರಿಂದ 2013ರ ತನ ಸತತ 25 ವರ್ಷಗಳ ಕಾಲ ಖಜಾಂಜಿಯಾಗಿ ಕಾರ್ಯನಿರ್ವಹಿಸಿ, ಐತಿಹಾಸಿಕ ದಾಖಲೆ ನಿರ್ಮಾಣ ಮಾಡಿದರು. 1993ರಿಂದ 1998ರ ತನಕ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು.

ಡಾ. ಚೌಡಯ್ಯ ಅವರ ಹೋರಾಟದ ಮಜಲುಗಳು

- ಆಮರಣಾಂತ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು
- ಅನಿರ್ದಿಷ್ಟ ಮುಷ್ಕರಗಳ ಸಮಯದಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ, ನೌಕರರನ್ನು ಸಂಘಟಿಸಿದ್ದು
- ಸರಕಾರಿ ನೌಕರರ ಬೇಡಿಕೆಗಳ ಚರ್ಚೆ ವಿಫಲಗೊಂಡು, ಮುಷ್ಕರ ಮುಂದುವರಿದ ಕಾರಣ ಪೊಲೀಸ್ ಬಂಧನಕ್ಕೆ ಒಳಗಾದರು
- ವಿಧಾನಸೌಧ ಚಲೋ, ರಾಜಭವನ ಚಲೋ ಮೊದಲಾದ ಕಾರ್ಯಕ್ರಮಗಳು ಯಶಸ್ವಿಯಾಗಲು ಮುಂಚೂಣಿಯಲ್ಲಿದ್ದು ಇತರರನ್ನು ಹುರಿದುಂಬಿಸಿದ್ದು
- ವಿಶ್ವ ಮಟ್ಟದ ಹಲವು ವಿಚಾರ ಸಂಕಿರಣ, ಸಮ್ಮೇಳನದಲ್ಲಿ ಭಾಗವಹಿಸಿ, ಕಾರ್ಮಿಕ ಸಂಘಟನೆಗಳ ಕರ್ನಾಟಕ ಕೋ ಆರ್ಡಿನೇಟರ್ ಹುದ್ದೆಯ ಜವಾಬ್ದಾರಿ
- ಕರ್ನಾಟಕವನ್ನು ಪ್ರತಿನಿಧಿಸಿ ನೇಪಾಳ, ಶ್ರೀಲಂಕಾ, ಸಿಂಗಾಪುರ, ಮಲೇಷ್ಯಾ, ದುಬೈ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ನಡೆದ ವರ್ಲ್ಡ್ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿ ನೌಕರರ ಸಮಸ್ಯೆಗಳ ಕುರಿತು ಚರ್ಚಿಸಿ, ಭಾಷಣ ಮಾಡಿದರು
- ನ್ಯಾಷನಲ್ ಫೆಡರೇಶನ್ ಆಫ್ ಸ್ಟೇಟ್ ಗೌರ್ನಮೆಂಟ್ ಎಂಪ್ಲಾಯೀಸ್, ನವದೆಹಲಿ ಇದರ ಕಾರ್ಯಕಾರಿ ಸಮಿತಿಯ ಸದಸ್ಯರು

ಸ್ವಯಂ ನಿವೃತ್ತಿ

ಸರಕಾರಿ ಸೇವೆಯಲ್ಲಿ ಇದ್ದುಕೊಂಡು, ದೀನ ದಲಿತರ ಅಲ್ಪಸಂಖ್ಯಾತರ ಮತ್ತು ಹಿಂದುಳಿದವರ ಶ್ರೇಯೋಭಿವೃದ್ಧಿಗೆ ಹಾಗೂ ಸಾಹಿತ್ಯ ಸಾಮಾಜಿಕ ಶೈಕ್ಷಣಿಕ ಕ್ಷೇತ್ರದಲ್ಲಿ ತೃಪ್ತಿಕರವಾಗಿ ಹೆಚ್ಚಿನ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದು ನಿರ್ಧರಿಸಿ, 28.2.2013ರಲ್ಲಿ ಸರಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದು, ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ.

ನೆಲಮಂಗಲ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗಾರಿ ಶ್ರೀ ಸಪ್ತಗಿರಿ ಸೇವಾ ಟ್ರಸ್ಟ್ (ರಿ) ನೋಂದಾಯಿಸಿ, ದಾಬಸ್‌ಪೇಟೆ ಮತ್ತು ಶಿವಗಂಗೆ ರಸ್ತೆಯ ಹೆದ್ದಾರಿಯ ಸನಿಹ ಬರಗೇನಹಳ್ಳಿ ಗ್ರಾಮದಲ್ಲಿ ನಿವೇಶನ ಖರೀದಿಸಿ, ಸಮುದಾಯ ಭವನ ನಿರ್ಮಾಣ ಮಾಡಲು ಅಡಿಗಲ್ಲು ಹಾಕಿಸಲಾಗಿದ್ದು, ಸಮುದಾಯ ಭವನದ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದ್ದು, ಇದರಲ್ಲಿ ಡಾ. ಚೌಡಯ್ಯನವರ ಕೊಡುಗೆ ಗಣನೀಯ ಎನಿಸಿದೆ. ಕರ್ನಾಟಕ ರಾಜ್ಯ ಭೋವಿ ವಡ್ಡರ ಸಂಘ ಭೋವಿ ಪಾಳ್ಯ ಮಹಾಲಕ್ಷ್ಮಿ ಲೇ ಔಟ್ ಬೆಂಗಳೂರು ಇದರ ವತಿಯಿಂದ, ಬೆಂಗಳೂರು, ಬಳ್ಳಾರಿ, ಹೊಸಪೇಟೆ, ವಿಜಯನಗರ, ಧಾರವಾಡ ಮತ್ತು ಗದಗ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ನೀಡುತ್ತಿದ್ದಾರೆ.



ನಟನಾ ಕ್ಷೇತ್ರದಲ್ಲಿ

ಡಾ. ಚೌಡಯ್ಯನವರು ಬಾಲ್ಯದಲ್ಲಿ ಶಾಲೆಯಲ್ಲಿ ಕಲಿಯುವಾಗಲೇ ತಮ್ಮಲ್ಲಿ ಅಡಗಿದ್ದ ಕಲಾಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದರು. ಶಾಲಾ ಕಾಲೇಜಿನ ದಿನಗಳಲ್ಲಿ, ವಾರ್ಷಿಕೋತ್ಸವದ ಸಮಾರಂಭಗಳಲ್ಲಿ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಲ್ಲಿ ಪಾತ್ರಗಳ್ನು ನಿರ್ವಹಿಸುತ್ತಿದ್ದರು. ರಾಜ್ಯಮಟ್ಟದ ನಾಟಕೋತ್ಸವದಲ್ಲಿ ಕುರುಕ್ಷೇತ್ರ ನಾಟಕ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಶಕುನಿಯ ಪಾತ್ರ ನಟಿಸಿದ ಚೌಡಯ್ಯನವರು ಉತ್ತಮ ನಟರೆಂದು ಬಿರುದು ಪಡೆದುಕೊಂಡಿದ್ದಾರೆ. ಈಗ ಡಾ. ಚೌಡಯ್ಯನವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಗೌರವಕ್ಕೆ ಪಾತ್ರರಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಸಮಾಜ ಸೇವೆಯನ್ನು ಮಾಡಲು ಈ ಪ್ರಶಸ್ತಿ ತನಗೆ ಸ್ಫೂರ್ತಿ ನೀಡಿದೆ ಎಂದು ಹೇಳಿದ್ದಾರೆ.

ಗೌರವ ಡಾಕ್ಟರೇಟ್

ಡಾ. ಚೌಡಯ್ಯನವರು ಕಾರ್ಮಿಕ ಸಂಘಟನೆಯಲ್ಲಿ ಮಾಡಿದ ಕೆಲಸ, ನೌಕರರ ಹಿತರಕ್ಷಣೆಗಾಗಿ ನಡೆಸಿದ ಹೋರಾಟ,ಮತ್ತು ಸಂಘಟನೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳನ್ನು ಗುರುತಿಸಿ, ಅಂತಾರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ಕೊಲೊಂಬೋ ಇವರು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದ್ದಾರೆ. 19.6.2011ರಂದು ಮಲೇಷ್ಯಾದ ಕೌಲಾಲಂಪುರ್‌ನಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲಾಯಿತು.

ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ

ಡಾ. ಚೌಡಯ್ಯನವರು ಸುಮಾರು 25 ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೃತಿಗಳು : 1. ಭೋವಿಗಳು (ವಡ್ಡರು) ನಡೆದು ಬಂದ ದಾರಿ. 2.ಸಿದ್ಧರಾಮನ ವಚನಗಳು 3. ಸೊನ್ನಲಗೆಯ ಸಿದ್ಧಪುರುಷ 4. ಕುರುಬರು, ಯಾದವರು, ತಿಗಳರು ಮತ್ತು ವೈಶ್ಯರ ಸಾಂಸ್ಕೃತಿಕ ಮತ್ತು ರಾಜಕೀಯ ಪರಂಪರೆ 5. ನೆಲಮಂಗಲ ದರ್ಶನ 6. ಶಿವಗಂಗಾ ದರ್ಶನ 7. ಒಂದು ಸೀಮೆಯ ಎರಡು ಚರಿತ್ರೆಗಳು 8. ಸರ್ಕಾರಿ ನೌಕರರ ಹೋರಾಟ 9. ಅವಲೋಕನ 10. ಭೋವಿ ರತ್ನಗಳು 11. ಎತ್ತಿನಹೊಳೆ ಯೋಜನೆ ಮೊದಲಾದವು. ಇವರು ನೆಲಮಂಗಲ ತಾಲ್ಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಜಪಾನ್ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ತಾಂತ್ರಿಕವಾಗಿ ಜಗತ್ತಿನಲ್ಲೇ ಮುಂದುವರಿದ ದೇಶವಾಗಿದ್ದು, ಅಂತಹ ಸ್ಥಳದಲ್ಲಿ ಜಾಗತಿಕ ಮಟ್ಟದ ಪ್ರಶಸ್ತಿ ಪಡೆದಿದ್ದು ನನಗೆ ಬಹಳ ಸಂತಸವಿದೆ. ವಿಶ್ವವಾಣಿ ಹೀಗೆ ಕರ್ನಾಟಕದ ಸಾಧಕರನ್ನು ಗುರುತಿಸಿ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲಿ. ನಾನು ಈ ಹಿಂದೆ 25 ಕ್ಕೂ ಹೆಚ್ಚು ಪ್ರವಾಸಗಳನ್ನು ಕೈಗೊಂಡಿದ್ದೇನೆ. ಆದರೆ ಈ ರೀತಿ ಜಪಾನ್ ದೇಶಕ್ಕೆ ಗಣ್ಯರೊಂದಿಗಿನ ಪ್ರವಾಸ ಇದೇ ಮೊದಲು. ಇಂತಹ ಅವಕಾಶ ಒದಗಿಸಿದ್ದಕ್ಕಾಗಿ ನಮ್ಮ ಪೂಜ್ಯ ಗುರುಗಳಾದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಶ್ರೀ ಶಾಂತವೀರ ಮಹಾ ಸ್ವಾಮೀಜಿಗಳು ಮತು ವಿಶ್ವವಾಣಿ ಸಂಪಾದಕರಾದ ವಿಶ್ವೇಶ್ವರ ಭಟ್‌ರವರಿಗೆ ನನ್ನ ಕೃತಜ್ಞತೆಗಳು. ಈ ಪ್ರವಾಸದ ಬಗ್ಗೆ ಮುಂದಿನ ದಿನದಲ್ಲಿ ಒಂದು ಪುಸ್ತಕವನ್ನು ಹೊರತರುವ ಬಗ್ಗೆ ಚಿಂತಿಸುತ್ತಿದ್ದೇನೆ. ಈ ಪ್ರವಾಸ ಅವಿಸ್ಮರಣೀಯ. ವಿಶ್ವವಾಣಿ ತಂಡಕ್ಕೆ ಶುಭವಾಗಲಿ.

-ಡಾ. ಚೌಡಯ್ಯ

ಎಲೆ ಕೋಸಿನ ಪುಟಾಣಿ ಅವತಾರ ಎನ್ನಬಹುದಾದ ಕೋಸು ಇದು!

ಕಿರು ಕೋಸು

ಅಮೆರಿಕದ ಅಂಗಡಿಗಳಲ್ಲಿ ಬೃಹತ್ ಗಾತ್ರದ ಹಣ್ಣುಗಳು ಹಾಗು ತರಕಾರಿಗಳನ್ನೇ ನೋಡಿದ್ದವನಿಗೆ ಒಂದೆರಡು ಅಂಗುಲದಷ್ಟು ಗಾತ್ರದ ಕೋಸುಗಳ ರಾಶಿ ಕಂಡಾಗ ಅಚ್ಚರಿಯೆನಿಸಿತು. ಕೋಸು ಇಷ್ಟು ಚಿಕ್ಕದಾಗಿರಲು ಸಾಧ್ಯವೆ? ಎಂಬ ಪ್ರಶ್ನೆಯೂ ಮನದಲ್ಲಿ ಮೂಡಿತು. ಅಲ್ಲಿದ್ದ ನಾಮಫಲಕದಿಂದ ಅದು 'ಬ್ರಸಲ್ಸ್ ಸ್ಪ್ರೌಟ್ಸ್' ಎಂದು ತಿಳಿಯಿತು. ಇದನ್ನು ಕಿರು ಕೋಸು ಅಥವಾ ಕೋಸಿನ ಕೂಸು ಎನ್ನಬಹುದಲ್ಲವೆ ಎನಿಸಿತು. ಇನ್ನೊಮ್ಮೆ ಬೃಹತ್ ಮಳಿಗೆಯೊಂದರಲ್ಲಿ ಕಾಂಡಸಮೇತ ಈ ಕೋಸಿನ ಕೂಸುಗಳನ್ನು ಕಂಡಾಗ ಪ್ರಕೃತಿಯ ಚೆಲುವಿಗೆ ಮನ ಸೋತಿತು. ಇದರ ಬಗ್ಗೆ ಇನ್ನಷ್ಟು ತಿಳಿಯಬೇಕೆಂಬ ಹಂಬಲ ಮೂಡಿತು.



- ಇದು ಕೋಸಿನ ಸಂಕುಲಕ್ಕೆ ಸೇರಿದೆ. ಇದರ ಸಸ್ಯಶಾಸ್ತ್ರೀಯ ಹೆಸರು ಬ್ರಾಸಿಕಾ ಅಲರೇಸಿಯಾ.
- ಬಿ, ಸಿ, ಡಿ ಮತ್ತು ಕೆ ಜೀವಸತ್ವಗಳು ಹಾಗು ಸೋಡಿಯಂ, ಪೊಟಾಶಿಯಂ, ಕ್ಯಾಲ್ಶಿಯಂ, ಮೆಗ್ನೀಸಿಯಂ, ಕಬ್ಬಿಣ, ಇತ್ಯಾದಿ ಪೋಷಕಾಂಶಗಳ ಆಗರವಾಗಿದೆ.
- ದಪ್ಪ ಕಾಂಡಗಳ ಮೇಲೆ ಬೆಳೆಯುತ್ತದೆ. ಒಂದು ಕಾಂಡದಲ್ಲಿ ಅರವತ್ತರಿಂದ ನೂರು ಕುಡಿಗಳಿರುತ್ತವೆ.
- ಇದರ ಇಪ್ಪತ್ತಕ್ಕೂ ಹೆಚ್ಚು ಪ್ರಭೇದಗಳಿವೆ.
- ಚಳಿಗಾಲದಲ್ಲಿ ಇದರ ಪರಿಮಳ ವೃದ್ಧಿಸುತ್ತದೆ.
- ಉತ್ತರ ಅಮೆರಿಕದಲ್ಲಿ ಪ್ರತಿ ವರ್ಷ ಎಪ್ಪತ್ತು ಮಿಲಿಯನ್ (ದಶಲಕ್ಷ) ಟನ್ ಬ್ರಸಲ್ಸ್ ಸ್ಪ್ರೌಟ್ಸ್ ಬೆಳೆಯುತ್ತಾರೆ. ಇದರಲ್ಲಿ ಕ್ಯಾಲಿಫೋರ್ನಿಯ ರಾಜ್ಯದ ಪಾಲು ಅತ್ಯಧಿಕ.
- ಬ್ರಸಲ್ಸ್ ಸ್ಪ್ರೌಟ್ಸ್ ಬ್ರಿಟಿಷರಿಗೆ ಅತಿ ಪ್ರಿಯವಾದ ತರಕಾರಿ. ಅವರು ಪ್ರತಿ ವರ್ಷ ಜನವರಿ 31ರಂದು ಈಟ್ ಬ್ರಸಲ್ಸ್ ಸ್ಪ್ರೌಟ್ಸ್ ಡೇ ಆಚರಿಸುತ್ತಾರೆ.

16ನೆಯ ಶತಮಾನದಲ್ಲಿ ಇದು ಬೆಲ್ಜಿಯಂ ದೇಶದ ರಾಜಧಾನಿ ಬ್ರಸಲ್ಸ್‌ನಲ್ಲಿ ಜನಪ್ರಿಯವಾಯಿತು. ಹಾಗಾಗಿ ಬ್ರಸಲ್ಸ್ ಎಂಬ ಹೆಸರು ಇದರೊಡನೆ ಸೇರ್ಪಡೆಯಾಯಿತು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಲೋಕೋಕ್ತಿಗೆ ಕಿರು ಕೋಸು ಒಂದು ನಿದರ್ಶನ ಎನ್ನಬಹುದು.

• **ಮಂಜುನಾಥ ಡಿ. ಎಸ್.**

ನೀವೂ ಬರೆಯಬಹುದು

ನಮ್ಮ ವಿಳಾಸ:

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

ಇ-ಮೇಲ್: vishwavanimagazine@gmail.com

ಮಕ್ಕಳಿಗೆ ನಡಿಗೆ ಕಲಿಸುವ ಆಟಿಕೆ!

ಪುಟಾಣಿಗಳು ನಡಿಗೆ ಕಲಿಯುವಾಗ, ಬೀಳುವುದು ಸಾಮಾನ್ಯ; ಅಂತಹ ಸಮಯದಲ್ಲಿ ಆಟಿಕೆಯೊಂದನ್ನು ಅವರ ಕೈಗೆ ನೀಡಿದರೆ, ಧೈರ್ಯವಾಗಿ ನಡೆಯುತ್ತಾರೆ, ಬೇಗನೆ ನಡೆಯುವುದನ್ನು ಸಹ ಕಲಿಯುತ್ತಾರೆ. ಅಂತಹ ಒಂದು ಆಟಿಕೆಯೇ ಗಿಳಿ ನಡಿಗೆ!



ಇದೊಂದು ನಡಿಗೆ ಅಭ್ಯಾಸ ಮಾಡಲು ನೆರವಾಗುವ ಚಿಕ್ಕ ಮಕ್ಕಳ ಆಟಿಕೆ. ಆಗಷ್ಟೇ ನಡಿಗೆ ಕಲಿತ ಮಕ್ಕಳ ಸ್ಪಷ್ಟ ಹೆಜ್ಜೆಗಳಿಗಾಗಿ ರೂಪುಗೊಂಡ ಸಾಂಪ್ರದಾಯಿಕ ಆಟಿಕೆ ವಸ್ತು. ಆಟಿಕೆಯ ಹೆಸರು 'ಗಿಳಿ ನಡಿಗೆ!'

ಮರದ ದಂಡಕ್ಕೆ ಚಿಕ್ಕ ಗಾಲಿಯೊಂದನ್ನು ಜೋಡಿಸಿ ಅದಕ್ಕೂ ದಂಡಕ್ಕೂ ಸೇರಿಸಿ ತಗಡಿನ ಗಿಳಿಯ ಆಕೃತಿಯೊಂದನ್ನು ಜೋಡಿಸಲಾಗಿದೆ. ಮಗು ದಂಡವನ್ನು ಹಿಡಿದು ನಿಧಾನವಾಗಿ ಹೆಜ್ಜೆ ಹಾಕಿದಂತೆ ಗಾಲಿ ತಿರುಗಿ, ಅದಕ್ಕೆ ಜೋಡಿಸಿದ ಗಿಳಿಯ ಆಕೃತಿಯೂ ಕೂಡಾ ಮೇಲೆ, ಕೆಳಗೆ ಚಲಿಸುತ್ತದೆ. ಈ ಚಲನೆ ಮಗುವಿನ ನಡಿಗೆಯನ್ನು ಉತ್ತೇಜಿಸುತ್ತದೆ.

ಈ ಸರಳವಾದ ಚಲನೆಯೇ ಮಕ್ಕಳಿಗೆ ಅಪಾರ ಸಂತೋಷವನ್ನು ನೀಡುತ್ತಿತ್ತು. ಮಗುವಿನ ಗಮನ ಆಟಿಕೆ ಮೇಲೆ ಕೇಂದ್ರೀಕೃತವಾಗುವುದಲ್ಲದೇ, ಗಿಳಿಯೊಂದಿಗೆ ಸಂವಾದಿಸುತ್ತಲೇ, ಅದರೊಂದಿಗೆ ಕಾಲ ಕಳೆಯುತ್ತದೆ. ಮಗುವಿನ ಮನಸ್ಸನ್ನು ರಂಜಿಸುತ್ತಾ, ನಡೆಯುವಾಗ ದೇಹದ ಸಮತೋಲನಕ್ಕೊಂದು ಊರುಗೋಲಾಗುವ ಈ ಆಟಿಕೆಯಿಂದ ಸ್ವತಂತ್ರವಾದ ನಡಿಗೆಯೂ ಸಾಧ್ಯವಾಗುತ್ತದೆ. ಈ ಆಟಿಕೆಯ ವಿನ್ಯಾಸವೇ ಅದರ ಆಕರ್ಷಣೆಯನ್ನು ಹೆಚ್ಚಿಸುತ್ತದೆ. ಈ ಆಟಿಕೆಗಳು ಸಾಮಾನ್ಯವಾಗಿ ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟಿದ್ದರಿಂದ ಪರಿಸರ ಸ್ನೇಹಿಯಾಗಿದ್ದವು. ಇವುಗಳ ತಯಾರಿಕೆಯಲ್ಲಿ ಸ್ಥಳೀಯ ಕಲೆ ಮತ್ತು ಕುಶಲತೆ ಪ್ರತಿಫಲಿಸುತ್ತದೆ.

ಆಧುನಿಕ ಕಾಲದಲ್ಲಿ ಮಕ್ಕಳು ಹೆಚ್ಚು ತಂತ್ರಜ್ಞಾನ ಆಧಾರಿತ ಆಟಿಕೆಗಳೊಂದಿಗೆ ಆಡುತ್ತಿದ್ದಾರೆ. ಮೊಬೈಲ್ ಫೋನ್‌ಗಳು ಮತ್ತು ವೀಡಿಯೋ ಗೇಮ್‌ಗಳಲ್ಲಿ ಕಳೆದು ಹೋಗಿದ್ದಾರೆ. ಆದರೆ, ಈ ಸರಳವಾದ ಆಟಿಕೆಗಳು ಮಕ್ಕಳಿಗೆ ನಿಜವಾದ ಸಂತೋಷವನ್ನು ನೀಡುವುದಲ್ಲದೇ, ಮಕ್ಕಳನ್ನು ಪ್ರಕೃತಿಯೊಂದಿಗೆ ಸಂಪರ್ಕಿಸಲು ಸಹಾಯ ಮಾಡುತ್ತದೆ.

ಮರಮುಟ್ಟಿನ ಈ ಸರಳ ಆಟಿಕೆಯನ್ನು ಕಂಡಾಗ, ನಮ್ಮ ಮನಸ್ಸಿಗೆ ಬಾಲ್ಯದ ಅನೇಕ ಸುಂದರ ಕ್ಷಣಗಳು ನೆನಪಾಗುತ್ತವೆ. ನಮ್ಮ ಪೂರ್ವಜರಿಂದ ಸೃಷ್ಟಿಯಾದ ಇಂಥ ಎಷ್ಟೋ ಆಟಿಕೆಗಳನ್ನು ಮರು ಸೃಷ್ಟಿಸಿ ಮಕ್ಕಳ ಕೈಗೆ ಕೊಡುವ ಕೆಲಸ ಆಗಬೇಕಿದೆ.

• ಚಿತ್ರ ಬರಹ : **ಹೊಸ್ಮನೆ ಮುತ್ತು**

ಬೆಂಗಳೂರಿನಲ್ಲಿ ಯಕ್ಷಗಾನ ಸಾಹಸ!

• **ರವಿ ಮಡೋಡಿ**

ಬೆಂಗಳೂರಿನ 20ಕ್ಕೂ ಹೆಚ್ಚು ಯಕ್ಷಗಾನ ತಂಡ ಮತ್ತು 80 ಕ್ಕೂ ಹೆಚ್ಚಿನ ಕಲಾವಿರದನ್ನು ಒಳಗೊಂಡಂತೆ, ಒಂದು ರಾತ್ರಿಯ ಯಕ್ಷಗಾನ ಪ್ರದರ್ಶನ ಡಿಸೆಂಬರ್ 7 ರಂದು ನಡೆಯಲಿದೆ.

ಡಾ. ಶಿವರಾಮ ಕಾರಂತರು ಯಕ್ಷಗಾನವನ್ನು ಪ್ರವೇಶಿಸಿದಾಗ ಅವರೊಂದಿಗೆ ದೊಡ್ಡಮಟ್ಟದಲ್ಲಿ ವಿದ್ಯಾವಂತರು, ನೌಕರರು, ಯಕ್ಷಗಾನ ಆಸಕ್ತರು, ಕೃಷಿಕರು ಯಕ್ಷಗಾನದತ್ತ ಹೊರಳಿದ್ದು ಯಕ್ಷಗಾನದ ಮಟ್ಟಿಗೆ ದೊಡ್ಡ ಬೆಳವಣಿಗೆ. ಬಹುತೇಕ ಊರುಗಳಲ್ಲಿ ಯಕ್ಷಗಾನಕ್ಕಾಗಿಯೇ ಸಂಘ ಸಂಸ್ಥೆಗಳು ಹುಟ್ಟಿಕೊಂಡು ಅದರಲ್ಲಿ ಕಲಾವಿದರಾಗಿ ಕಾಣಿಸಿಕೊಂಡು ವರ್ಷದಲ್ಲಿ ಅನೇಕ ಪ್ರಯೋಗಗಳನ್ನು ಪ್ರದರ್ಶನಗಳನ್ನು ಮಾಡುತ್ತಾ ತಮ್ಮ ಕಲಾರಾಧನೆಯನ್ನು ಮಾಡುತ್ತಾ ಬರುತ್ತಿರುವುದು ಗಮನಾರ್ಹ. ಹಲವಾರು ಮಂದಿ ಪಟ್ಟಣಗಳನ್ನು, ಬೆಂಗಳೂರಿನಂತಹ ನಗರಗಳನ್ನು ಆಶ್ರಯಿಸಿ ಉದ್ಯೋಗ ವ್ಯವಹಾರಗಳನ್ನು ಮಾಡುತ್ತಾ ತಮ್ಮ ಜೀವನವನ್ನು ರೂಪಿಸಿಕೊಂಡರು. ಅವರೊಳಗಿದ್ದ ಕಲಾಪ್ರೇಮ, ಯಕ್ಷಗಾನದ ಬಗೆಗಿನ ಪ್ರೀತಿ ಒಂದಿನಿತು ಕಡಿಮೆಯಾಗಲಿಲ್ಲ. ತಾವು ಹೋದ ಸ್ಥಳದಲ್ಲಿಯೇ ಯಕ್ಷಗಾನ ಸಂಸ್ಥೆಗಳನ್ನು, ಸಂಘಗಳನ್ನು ಕಟ್ಟಿದರು, ಯಕ್ಷಗಾನವನ್ನು ಕಲಿತರು, ಬಣ್ಣ ಹಚ್ಚಿ ಕುಣಿದು ಸಂತೋಷವನ್ನು ಅನುಭವಿಸಿದರು. ಇದೆಲ್ಲ ಯಕ್ಷಗಾನದ ವಲಯವನ್ನು ವಿಸ್ತರಿಸುವ ಹೆಜ್ಜೆಗಳಾದವು. ಬೆಂಗಳೂರಿನಂತಹ ಬೆಳೆಯುತ್ತಿರುವ ನಗರದಲ್ಲಿ, ಆಧುನಿಕತೆಯ ಜೊತೆಗೆ, ತನ್ನದೇಯಾದ ಸಾಂಸ್ಕೃತಿಕ, ವೈವಿಧ್ಯವಾದ ಕಲಾ ಪಂರಂಪರೆ ಸಹಾ ಬೆಳೆಯುತ್ತಿದೆ. ಬೆಂಗಳೂರಿನ ಯಕ್ಷಗಾನದ ಇತಿಹಾಸವನ್ನು ಗಮನಿಸುವಾಗ ಇಲ್ಲಿ ಆರಂಭವಾಗಿದ್ದು 1940 ರಲ್ಲಿ . 1950ರ ಹಾಗೆ ಗಜಾನನ ಯಕ್ಷಗಾನ ಮಂಡಳಿ ಎಂಬ ಹೆಸರಿನಿಂದ ಹವ್ಯಾಸಿ ಯಕ್ಷಗಾನವನ್ನು ಕಟ್ಟಿಕೊಂಡು ಯಕ್ಷಗಾನವನ್ನು ಮಾಡುತ್ತಿದ್ದರು. ಅಲ್ಲಿಂದ ಇಲ್ಲಿಯವರೆಗೆ ನಿರಂತರವಾಗಿ ಯಕ್ಷಗಾನ ಬೆಂಗಳೂರಿನ ಮೂಲೆ ಮೂಲೆಯಲ್ಲಿ ಯಕ್ಷ ಕಲರವ ಕೇಳಿಬರುತ್ತಿದೆ.

ಬೆಂಗಳೂರಿನಲ್ಲಿ ಯಕ್ಷಗಾನವನ್ನು ಕಲಿತು ವೃತ್ತಿ ಮೇಳದಲ್ಲಿ ಕಲಾವಿದರಾಗಿ ಕಾಣಿಸಿಕೊಂಡ ಅನೇಕ ಮಂದಿಗಳನ್ನು ಕಾಣಬಹುದು. ಜೊತೆಗೆ ಯಕ್ಷಗಾನದ ಸಿದ್ದ ವಲಯವನ್ನು ಬಿಟ್ಟು ಮತ್ತೊಂದು ವಲಯದಿಂದ ಬಂದು ಯಕ್ಷಗಾನವನ್ನು ಕಲಿತು ಕಲಾವಿದರಾಗಿರುವುದು ಸಹ ಗಮನಾರ್ಹ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ರಾಜಗೋಪಾಲ ಕನ್ಯಾನ ಅವರು ಬೆಂಗಳೂರಿನಲ್ಲಿರುವ ಬಗ್ಗೆ ಮಾಡಿರುವ ಅಧ್ಯಯನದಲ್ಲಿ 50ಕ್ಕೂ ಅಧಿಕ ಸಂಘ ಸಂಸ್ಥೆಗಳನ್ನು ಇಲ್ಲಿ ಕಾಣಬಹುದಾಗಿದೆ. ಇಂದು ಇಡೀ ಯಕ್ಷಗಾನ ವಲಯದಲ್ಲಿ ಒಂದು ವರುಷಕ್ಕೆ ಹತ್ತು ಸಾವಿರ ಪ್ರದರ್ಶನಗಳು ನಡೆದರೆ, ಅದರಲ್ಲಿ ಬೆಂಗಳೂರಿನಲ್ಲಿ ಒಂದು ಸಾವಿರ ಪ್ರದರ್ಶನಗಳು ನಡೆಯುತ್ತಿವೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇದೆಲ್ಲ ಬೆಂಗಳೂರಿನಲ್ಲಿ ಯಕ್ಷಗಾನವು ಗಟ್ಟಿಯಾಗಿ ಬೆಳೆದಿರುವುದಕ್ಕೆ ಸಾಕ್ಷಿಗಳಾಗಿವೆ.

ಬೆಂಗಳೂರಿನ ಯಕ್ಷಪ್ರಿಯರಿಗೆ ಸಿಹಿ ಸುದ್ದಿ ಒಂದಿದೆ. ಈಗ ಟೀಮ್ ತಿತ್ತೈತ್ತೈ ತಂಡವು ನೂತನ ಪ್ರಯತ್ನವೆಂಬಂತೆ, ಇದೇ ಮೊದಲಬಾರಿಗೆ 80 ಕ್ಕೂ ಹೆಚ್ಚು ಬೆಂಗಳೂರಿನ ಹವ್ಯಾಸಿ ಕಲಾವಿದರುಗಳನ್ನು, 20ಕ್ಕೂ ಹೆಚ್ಚು ತಂಡಗಳನ್ನು, 25ಕ್ಕೂ ಅಧಿಕ ಯಕ್ಷಗುರುಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಬೆಂಗಳೂರಿನ ಯಕ್ಷ ತಂಡಗಳ ಸ್ನೇಹ ಕೂ(ಡಾ)ಟ ಎಂಬ ಹೆಸರಿನಲ್ಲಿ, ಇದೇ ಶನಿವಾರ (7.12.2024) ರವೀಂದ್ರ ಕಲಾಕ್ಷೇತ್ರದಲ್ಲಿ ಇಡೀ ರಾತ್ರಿಯ ಕಾರ್ಯಕ್ರಮವನ್ನು ಆಯೋಜಿಸಿದೆ. ಇಲ್ಲಿ ಪೂರ್ವರಂಗ (ತೆಂಕು) ಧರ್ಮಾಂಗಧ ದಿಗ್ವಿಜಯ, ಸೇತು ಬಂಧನ, ಕರ್ಣಾರ್ಜುನ ಕಾಳಗ, ದಕ್ಷಯಜ್ಞ, ಭಕ್ತ ಸುಧನ್ವ ಮತ್ತು ಮೀನಾಕ್ಷಿ ಕಲ್ಯಾಣ ಎಂಬ ಆರು ಪೌರಾಣಿಕ ಆಖ್ಯಾನಗಳನ್ನು ಕಲಾವಿದರುಗಳು ಪ್ರಸ್ತುತಗೊಳಿಸಲಿದ್ದಾರೆ. ಬೆಂಗಳೂರಿನ ಯಕ್ಷಗಾನ ವಲಯದಲ್ಲಿ ಇದೊಂದು ಹೊಸ ಕಲಾಸಾಹಸ ಎನ್ನುವುದರಲ್ಲಿ ಸಂದೇಹವಿಲ್ಲ.

ನಾಲ್ಕು ವಿಧದ ಭಕ್ತರು

ನಾಲ್ಕು ಬಗೆಯ ಭಕ್ತರಿರುತ್ತಾರೆ ಎಂದು ಕೃಷ್ಣ ಹೇಳುತ್ತಾನೆ. ಮೊದಲನೆಯ ವರ್ಗಕ್ಕೆ ಸೇರಿದವನು ತಾನು ಜೀವನದಲ್ಲಿ ಎದುರಿಸುತ್ತಿರುವ ದುಃಖ ದುಮ್ಮಾನಗಳಿಂದ ಹೊರಬರಲು ಪ್ರಯತ್ನಿಸುತ್ತಾನೆ. ಎರಡನೆಯವನು ಭೌತಿಕ ಸಂಪತ್ತು ಮತ್ತು ಲೌಕಿಕ ಸುಖವನ್ನು ಹೊಂದಲು ಬಯಸುತ್ತಾನೆ. ಬಹಳಷ್ಟು ಜನರು ಯಾವುದೇ ಸಂಸ್ಕೃತಿ, ಲಿಂಗ, ನಂಬಿಕೆ ಬೇಧವಿಲ್ಲದೆ ಈ ಎರಡು ವಿಭಾಗಗಳಲ್ಲಿ ಬರುತ್ತಾರೆ.

ಈ ಎರಡು ವಿಭಾಗದ ಭಕ್ತರು ಬೇರೆ ಬೇರೆ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ ಹಾಗೂ ಧಾರ್ಮಿಕ ಕ್ರಿಯೆಗಳನ್ನು ನಡೆಸುತ್ತಾರೆ ಎಂದು ಕೃಷ್ಣ ಹೇಳುತ್ತಾನೆ. ಇದು ವ್ಯಕ್ತಿ ತಾನು ಅನುಭವಿಸುತ್ತಿರುವ ಖಾಯಿಲೆಗೆ ಸಂಬಂಧಿಸಿದಂತೆ ಸರಿಯಾದ ವೈದ್ಯರ ಬಳಿಗೆ ಹೋಗುವ ಹಾಗಿದೆ. ಈ ಭಕ್ತರ ಬೇಡಿಕೆಗಳು ಅವರ ಶ್ರದ್ಧೆಯಿಂದಾಗಿ ನೆರವೇರುತ್ತವೆ ಎಂಬುದು ಕೃಷ್ಣನ ಹೇಳಿಕೆ. ಮೂಲಭೂತವಾಗಿ ಇದು ಶರಣಾಗತಿ ಆಗಿದೆ.



ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • **ಕೆ.ಶಿವಪ್ರಸಾದ್**

ಈ ಉದಾಹರಣೆ ಶ್ರದ್ಧೆಯನ್ನು ವಿವರಿಸುತ್ತದೆ. ಅಕ್ಕ ಪಕ್ಕದಲ್ಲಿ ಜಮೀನು ಹೊಂದಿದ ಎರಡು ಜನ ರೈತರು ತಮ್ಮ ಜಮೀನಿಗೆ ನೀರುಣಿಸಲು ಒಂದು ಬಾವಿ ತೆಗೆಯಲು ನಿರ್ಣಯಿ ಸುತ್ತಾರೆ. ಮೊದಲನೆಯ ರೈತನು ಒಂದೆರಡು ದಿನ ಬಾವಿ ತೆಗೆದು ನೀರು ಸಿಗದೇ ಇದ್ದಾಗ ಹೊಸದಾಗಿ ಬೇರೆ ಕಡೆ ಬಾವಿ ತೆಗೆಯಲು ಪ್ರಾರಂಭಿಸುತ್ತಾನೆ. ಎರಡನೇ ರೈತನು ಒಂದೇ ಸ್ಥಳದಲ್ಲಿ ಸತತವಾಗಿ ಬಾವಿ ತೆಗೆಯುತ್ತಿರುತ್ತಾನೆ.ಸುಮಾರು ಒಂದು ತಿಂಗಳು ಕೊನೆಗೆ ಮೊದಲನೇ ರೈತನ ಜಮೀನಿನಲ್ಲಿ ಎಲ್ಲಿ ನೋಡಿದಲ್ಲಿ ಹೊಂಡಗಳೇ ಕಾಣುತ್ತವೆ. ಆದರೆ ಎರಡನೇ ರೈತನ ಜಮೀನಿನಲ್ಲಿ ಒಂದು ಕಡೆ ಬಾವಿ ಪೂರ್ಣವಾಗಿ ನೀರು ತುಂಬಿರುತ್ತದೆ. ನಮ್ಮ ಇಂದ್ರಿಯಗಳಿಗೆ ಪ್ರತ್ಯಕ್ಷವಾಗಿ ಏನು ಕಾಣದಿದ್ದರೂ (ಈ ಸಂದರ್ಭದಲ್ಲಿ ನೀರಿನ ಹಾಗೆ) ಎರಡನೇ ರೈತನ ವಿಷಯದಲ್ಲಿ ಆದ ಹಾಗೆ ಆಂತರಿಕ ಶ್ರದ್ಧೆಯು ನಮ್ಮ ಕೆಲಸವನ್ನು ಮುಂದುವರಿಸುವಂತೆ ಮಾಡುತ್ತದೆ. ಶ್ರದ್ಧೆಯು ನಿರ್ಭಯ ಶಕ್ತಿ ಹಾಗೂ ಅದು ಸಂದೇಹ ರಹಿತವಾಗಿರುತ್ತದೆ.

ಯಶಸ್ಸಿನಲ್ಲಿ ಕೊನೆಗೊಳ್ಳಬಹುದಾದ ಶ್ರದ್ಧೆಯ ಹಿಂದೆ ತಾನು ಇರುತ್ತೇನೆ ಎಂದು ಕೃಷ್ಣ ಹೇಳುತ್ತಾನೆ. ಶ್ರದ್ಧೆಯಿಂದಾಗಿ ನಾವು ನಮ್ಮ ಸಂಬಂಧಗಳಲ್ಲಿ ಕೌಟುಂಬಿಕ ಬಂಧನದಲ್ಲಿ ಹಾಗೂ ವೃತ್ತಿಯಲ್ಲಿ ಪವಾಡಗಳನ್ನು ಸಾಧಿಸಬಹುದು. ಮೂರನೇ ಬಗೆಯ ಭಕ್ತನು ಆಸೆಗಳ ಮಿತಿಯನ್ನು ದಾಟುವುದರಲ್ಲಿರುತ್ತಾನೆ. ಅವನು ಕುತೂಹಲಕಾರಿಯಾಗಿದ್ದು ಆತ್ಮ ಜ್ಞಾನದ ಶೋಧನೆಯಲ್ಲಿರುತ್ತಾನೆ. ನಾಲ್ಕನೇ ಬಗೆಯ ಭಕ್ತನು ಜ್ಞಾನಿ ಹಾಗೂ ಅವನು ಆಸೆಗಳ ಗಡಿಯನ್ನು ದಾಟಿರುತ್ತಾನೆ. ಅವನು ಪ್ರತಿಯೊಂದರಲ್ಲಿ, ಪ್ರತಿ ಸ್ಥಳದಲ್ಲಿ ಭಗವಂತನನ್ನು ಕಾಣುತ್ತಾನೆ ಹಾಗೂ ಭಗವಂತನಲ್ಲಿ ಏಕತೆ ಹೊಂದಿರುತ್ತಾನೆ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್
ವಿಶ್ವವಾಣಿ
05.12.2024 ಗುರುವಾರ
vishwavani.news

ದಿನ ದರ್ಶಿಕೆ

ಮಾರ್ಗಶಿರ ಮಾಸ, ಶುಕ್ಲ ಪಕ್ಷ, ಚತುರ್ಥಿ ತಿಥಿ, ಉತ್ತರಾಷಾಢ ನಕ್ಷತ್ರ, ಮಕರ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ನಿಂಬೆ ನೀರಿನ ಸೇವನೆಯು ಹೊಟ್ಟೆಯ ಅನೇಕ ಸಮಸ್ಯೆಗಳಿಗೆ ಪ್ರಯೋಜನಕಾರಿಯಾಗಿದೆ. ಆಸಿಡ್ ರಿಫ್ಲಕ್ಸ್‌ನ ಲಕ್ಷಣಗಳನ್ನು ಕಡಿಮೆ ಮಾಡಲು ಸಹ ಇದು ಸಹಾಯಕವಾಗಿದೆ. ನಿಂಬೆಯಲ್ಲಿ ವಿಟಮಿನ್ ಸಿ ಸಮೃದ್ಧವಾಗಿದೆ, ಇದನ್ನು ಆಸ್ಕೋರ್ಬಿಕ್ ಆಮ್ಲ ಎಂದೂ ಕರೆಯುತ್ತಾರೆ. ಇದು ಶಕ್ತಿಯುತವಾದ ಉತ್ಕರ್ಷಣ ನಿರೋಧಕವಾಗಿದ್ದು, ಆಹಾರವನ್ನು ತ್ವರಿತವಾಗಿ ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ.

ಸೌಂದರ್ಯ ಸೂತ್ರ

2 ಚ. ಸಾಸಿವೆ ಎಣ್ಣೆ, 2 ಚ. ತೆಂಗಿನ ಎಣ್ಣೆ, 1 ಚ.ವ್ಯಾಸಲಿನ್ 1/2 ಚ. ಕರ್ಪೂರ ಪೌಡರ್, 2 ವಿಟಮಿನ್ ಇ ಕ್ಯಾಪ್ಸ್ಯೂಲ್‌ಗಳನ್ನು ಸೇರಿಸಿ ಒಂದು ಸಣ್ಣ ಬಟ್ಟಲಿಗೆ ಹಾಕಿ ಬಿಸಿನೀರಿನಲ್ಲಿ ಬಟ್ಟಲನ್ನು ಇಡಿ. ಅದಾದನಂತರ ಅರ್ಧ ಗಂಟೆ ಫ್ರಿಜ್‌ನಲ್ಲಿಡಿ. ಇದನ್ನು ದಿನಕ್ಕೆ 2 ಬಾರಿಯಾದರೂ ನಿಮ್ಮ ಪಾದಗಳಿಗೆ ಹಚ್ಚಿ. ಇದು ಪಾದಗಳ ಬಿರುಕನ್ನು ಹೋಗಲಾಡಿಸುತ್ತದೆ.

ದಿನ ಭವಿಷ್ಯ

ಮೇಷ: ಹೇರಳ ಶಕ್ತಿ ಹೊಂದಿರುತ್ತೀರಿ - ಆದರೆ ಕೆಲಸದ ಒತ್ತಡ ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಬೇಕಾದವರು ಹಣ ಕೇಳುತ್ತಾರೆ.

ವೃಷಭ: ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ. ವಿಶ್ವಾಸ ಮೂಡುತ್ತದೆ.

ಮಿಥುನ: ಕೆಟ್ಟ ಚಟಗಳು ನಾಶಗೊಳಿಸುತ್ತವೆ. ಯಾವುದಾದರೂ ಕೆಟ್ಟಚಟಗಳನ್ನು ಮಾಡುತ್ತಿದ್ದರೆ, ಇಂದಿನಿಂದಲೇ ಬಿಟ್ಟುಬಿಡಿ.

ಕಟಕ: ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ಪ್ರಯೋಜನಕಾರಿಯಾಗುತ್ತದೆ.

ಸಿಂಹ: ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ತಂದೆಯ ಯಾವುದೇ ಸಲಹೆಗಳು ಲಾಭ ಕೊಡುತ್ತವೆ,.

ಕನ್ಯಾ: ಇತರರನ್ನು ಟೀಕಿಸುವ ಅಭ್ಯಾಸದಿಂದಾಗಿ ಇಂದು ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ.

ತುಲಾ: ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲು ಒಳ್ಳೆಯ ದಿನ. ದೀರ್ಘಕಾಲದ ದೃಷ್ಟಿಕೊನದಿಂದ ಹೂಡಿಕೆ ಮಾಡಬೇಕು.

ವೃಶ್ಚಿಕ: ಯೋಗ, ಧ್ಯಾನ ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ.

ಧನು: ಭಾವನಾತ್ಮಕವಾಗಿ ತುಂಬ ಸ್ಥಿರವಾಗಿರುವುದಿಲ್ಲ; ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಮತ್ತು ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ.

ಮಕರ: ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ.

ಕುಂಭ: ನಿಮ್ಮ ನರಮಂಡಲದ ಕಾರ್ಯವೆಸಗುತ್ತಿರಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ,

ಮೀನ: ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 2013: ಖ್ಯಾತ ಹೋರಾಟಗಾರ, ನಾಯಕ ನೆಲ್ಸನ್ ಮಂಡೆಲಾ ಅವರು ತಮ್ಮ 95ನೇ ವಯಸ್ಸಿಗೆ ಪ್ರಾಣ ತ್ಯಾಗ ಮಾಡಿದರು.
- 1971: ಗಾಝಿಯಾಬಾದ್ ಹೋರಾಟದ ನಂತರ ಭಾರತ ಗಾಝಿಯಾಬಾದ್ ಅನ್ನು ಬಾಂಗ್ಲಾದೇಶಕ್ಕೆ ಬಿಟ್ಟುಕೊಟ್ಟಿತು.
- 1894: ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯವಾಗಿ ಭಾಗಿಯಾಗಿದ್ದ ಎಚ್.ಸಿ. ದಾಸಪ್ಪ ಅವರು ಜನಿಸಿದರು.

ಚಿತ್ರಸ್ಫೂರ್ತಿ

ಬೆಂಗಳೂರಿನಲ್ಲಂತೂ ಫೆಂಗಲ್ ವಿಚಾರದಿಂದ ಕೆಂಗಾಲಾಗಿರುವ ಜನತೆ, ಸ್ವಲ್ಪ ಬಿಸಿಲು ಬಿದ್ದಿದೆನಿಸಿದ ಮರುಕ್ಷಣವೇ ಮಳೆ ಶುರುವಾಗುತ್ತಿದೆ. ಇನ್ನೂ ಬೆಳಿಗ್ಗೆಯಂತೂ, ಫ್ರಿಜ್‌ನಲ್ಲಿರುವ ರೀತ್ಯಾಭಾವ. ಇದೆಲ್ಲ ಕರ್ನಾಟಕದಲ್ಲಿ ಆದರೂ, ಅಮೆರಿಕದ ಓಹಿಯೋದಲ್ಲಿಯೂ ಇದೇ ರೀತಿಯ ಸಮಯ, ಅಲ್ಲಿ ಮಂಜು ಸಹ ಬೀಳುತ್ತೆ!ಋ ಏನೂ ಇಲ್ಲ, ಎಲ್ಲರಿಗೂ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಕ್ಷಟ ಕೊಡುತ್ತೆ, ಅಷ್ಟೇ!

ಚಿತ್ರ: ಅನಾಡೊಲು

ಮತ್ತೊಬ್ಬರ ಕಡೆಗೆ ಬೆರಳು ತೋರುವ ಮುನ್ನ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಯಾವುದೋ ಕಾರ್ಯ ನಿಮಿತ್ತ ದಂಪತಿಗಳು ತಮ್ಮ ಪುಟ್ಟ ಮಗುವೊಂದನ್ನು ಮನೆಯಲ್ಲಿಯೇ ಬಿಟ್ಟು ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾರೆ. ಹಡಗು ಮುಳುಗುತ್ತಲಿದೆ. ಹಡಗಿನಲ್ಲಿರುವ ಎಲ್ಲರೂ ಲೈಫ್ ಬೋಟ್ಗೆ ಜಿಗಿದು ಹೋಗುತ್ತಿದ್ದಾರೆ. ಆ ಲೈಫ್ ಬೋಟ್‌ನಲ್ಲಿ ಒಬ್ಬ ವ್ಯಕ್ತಿಗೆ ಮಾತ್ರ ಸ್ಥಳಾವಕಾಶವಿದೆ. ಮುಳುಗುತ್ತಿರುವ ಹಡಗಿನಲ್ಲಿ ಈ ದಂಪತಿಗಳು ಮಾತ್ರ ಉಳಿದಿದ್ದರು, ಇಬ್ಬರಲ್ಲಿ ಒಬ್ಬರು ಮಾತ್ರ ಲೈಫ್ ಬೋಟ್‌ಗೆ ಹೋಗಬಹುದು. ಇಬ್ಬರೂ ಯೋಚಿಸುತ್ತಿದ್ದಾರೆ, ಇದ್ದಕ್ಕಿದ್ದಂತೆ ಪತಿ ತನ್ನ ಹೆಂಡತಿಯನ್ನು ಮುಳುಗುವ ಆ ಹಡಗಿನಲ್ಲಿ ಬಿಟ್ಟು ಲೈಫ್ ಬೋಟ್ಗೆ ಹಾರಿಯೇಬಿಟ್ಟ!

ಹೆಂಡತಿ ಹಿಂದಿನಿಂದ ಕೂಗುತ್ತಾ ಏನೋ ಹೇಳುತ್ತಿದ್ದಾಳೆ...,

ತರಗತಿಯಲ್ಲಿ ಈ ಕಥೆ ಹೇಳುತ್ತಿದ್ದ ಶಿಕ್ಷಕರು ಇಲ್ಲಿಗೆ ಕಥೆ ಹೇಳುವುದನ್ನು ನಿಲ್ಲಿಸಿದರು.

'ಆ ಪತ್ನಿ ತನ್ನ ಪತಿಯೊಂದಿಗೆ ಏನು ಹೇಳಿರಬಹುದೆಂದು ನಿಮ್ಮಲ್ಲಿ ಯಾರಾದರೂ ಹೇಳುವಿರಾ?' ಎಂದು ಶಿಕ್ಷಕರು ವಿದ್ಯಾರ್ಥಿಗಳನ್ನು ಕೇಳಿದರು.

ಆಗ ಎಲ್ಲ 'ಮಕ್ಕಳು ನೀನು ಎಂತಹ ಮೋಸ ಮಾಡಿದೆ, ನಾನು ನಿನ್ನನ್ನು ಕುರುಡಾಗಿ ನಂಬಿದ್ದೆ ಎಂದು ಹೇಳಿರಬಹುದು' ಎಂದರು.

ಆದರೆ ಒಬ್ಬ ವಿದ್ಯಾರ್ಥಿ ಮಾತ್ರ ಮೌನವಾಗಿ ಕುಳಿತಿದ್ದ. 'ನೀನು ಏನು ಹೇಳುತ್ತೀಯ?' ಎಂದು ಗುರುಗಳು ಅವನನ್ನು ಕೇಳಿದರು. 'ನಮ್ಮ ಮಗುವನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿರಬಹುದು' ಎಂದ.

ಟೀಚರ್ ಕಣ್ಣಲ್ಲಿ ಆಶ್ಚರ್ಯ, 'ಈ ಕಥೆ ನಿನಗೆ ಮೊದಲೇ ಗೊತ್ತಿತ್ತಾ?'

ಅವನು ತಲೆ ಅಲ್ಲಾಡಿಸಿದ, 'ಇಲ್ಲ, ಈ ಕಥೆ ನನಗೇನು ಗೊತ್ತಿರಲಿಲ್ಲ, ನನ್ನ ತಾಯಿ ಅನಾರೋಗ್ಯದಿಂದ ಸಾಯುವ ಸ್ಥಿತಿಯಲ್ಲಿದ್ದಾಗ ನನ್ನ ತಂದೆಗೆ ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಂಡಿದ್ದೆ, ''ನಮ್ಮ ಮಗು ಹುಷಾರು, ಅವನನ್ನು ಚೆನ್ನಾಗಿ ಪೋಷಿಸಿ, ಬೆಳೆಸಿರಿ,..'''

ಈ ವೇಳೆ ಶಿಕ್ಷಕರ ಕಣ್ಣಲ್ಲಿ ನೀರು ತುಂಬಿತು. ಈ ಕಥೆಯಲ್ಲಿ ಹೆಂಡತಿ ಕೂಡ ಅದನ್ನೇ ಹೇಳಿದ್ದು, ನಿನ್ನ ಉತ್ತರ ಸರಿಯಾಗಿದೆ ಎಂದು ಶಿಕ್ಷಕರು ಹೇಳಿದರು.

ಈ ಕಥೆಯ ವಿಚಾರಕ್ಕೆ ಬಂದರೆ, ಆ ಗಂಡ ಮನೆ ತಲುಪಿ ತಮ್ಮ ಮಗಳನ್ನು ಕಣ್ಣಿನ ರೆಪ್ಪೆಯಂತೆ ನೋಡಿಕೊಳ್ಳುತ್ತಾನೆ, ಆಕೆಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಮದುವೆ ಮಾಡಿಸಿ ಒಳ್ಳೆಯ ಜೀವನ ನೀಡಿ ಒಂದು ದಿನ ಕಣ್ಣು ಮುಚ್ಚುತ್ತಾನೆ. ನಂತರ ಒಂದು ದಿನ ಮಗಳು ಅಪ್ಪನ ಸಾಮಾನುಗಳನ್ನು ಜೋಡಿಸಿ ಒಪ್ಪವಾಗಿ ಒಂದು ಪಕ್ಕದಲ್ಲಿ ಇಡುತ್ತಿರುವಾಗ ತಂದೆಯ ದಿನಚರಿ(ಛಚಜ್ಞಿಢ) ಕಂಡುಬಂದಿತು ಕುತೂಹಲ ತಾಳಲಾರದೆ ಅದನ್ನು ತೆಗೆದು ಓದ ತೊಡಗಿದಳು, ಅದರಲ್ಲಿ ಅವರು ತಮ್ಮ ಹೆಂಡತಿಗೆ ಅಂದರೆ ಇವಳ ಅಮ್ಮನಿಗೆ ಬರೆದಿದ್ದರು,

'ನಿನ್ನ ಜೊತೆಯಲ್ಲಿ ಹಡಗಿನಲ್ಲಿ ನಿನ್ನೊಂದಿಗೆ ಮುಳುಗಿ ನಿನ್ನೊಡನೆ ಶಾಶ್ವತವಾಗಿ ಇರಬೇಕೆಂದು ನನಗೆ ಅನಿಸಿತು, ಆದರೆ ನಮ್ಮ ಈ ಪುಟ್ಟ ಕಂದನನ್ನು ಯಾರು ನೋಡಿಕೊಳ್ಳುತ್ತಾರೆ!? ನಿನ್ನನ್ನು ಆ ಲೈಫ್ ಬೋಟಿಗೆ ಕಳುಹಿಸಿ ನಿನ್ನನ್ನು ಉಳಿಸೋಣವೆಂದರೆ ನಿನಗಿರುವ ಮಾರಣಾಂತಿಕ ಕಾಯಿಲೆ ಕೊನೆಯ ಹಂತದಲ್ಲಿದೆ, ನೀನು ಆಗಲೇ ಸಾವಿನ ಅಂಚಿನಲ್ಲಿದ್ದೆ, ಅದಕ್ಕಾಗಿಯೇ ನಾನು ಲೈಫ್ ಬೋಟ್‌ಗೆ ಹಾರಿದೆ, ಏಕೆಂದರೆ ನಾನು ಆ ಕ್ಷಣದಲ್ಲಿ ಇನ್ನೂ ಯೋಚಿಸಿದರೆ ನಾನು ದುರ್ಬಲನಾಗುತ್ತೇನೆ. ನನ್ನ ಹೃದಯದಲ್ಲಿ ಅದೆಷ್ಟು ನೋವಿದೆಯೆಂದು ನಿನ್ನನ್ನು ಹೊರತುಪಡಿಸಿ ಯಾರಿಗೂ ಅರ್ಥವಾಗುವುದಿಲ್ಲ' ಎಂದು ಅವನು ತನ್ನ ಡೈರಿಯಲ್ಲಿ ತನ್ನ ಹೆಂಡತಿಗೆ ಬರೆದಿದ್ದನು.

ನಾವುಗಳು ಸಾಮಾನ್ಯವಾಗಿ ಮೇಲ್ನೋಟಕ್ಕೆ ಕಂಡ ವಿಷಯಗಳನ್ನೇ ಆಧಾರವಾಗಿಟ್ಟುಕೊಂಡು ಮತ್ತೊಬ್ಬರ ಜೀವನವನ್ನು ಅಳೆದುಬಿಡುತ್ತೇವೆ. ನಮ್ಮ ಕಣ್ಣಿಗೆ ಕಾಣುವ ವಿಚಾರಗಳು ನಮ್ಮ ದೃಷ್ಟಿಕೋನದಿಂದ ಸರಿಯಾಗಿರಬಹುದು. ಆದರೆ ಅವರ ಜೀವನದ ದೃಷ್ಟಿಕೋನದಿಂದ ನೋಡಿದಾಗ ಅದು ಬೇರೆಯಾಗಿ ಕಾಣುತ್ತದೆ. ಆದ್ದರಿಂದಲೇ ಪ್ರತಿಯೊಂದು ವಿಷಯವನ್ನು ಕೂಲಂಕಶವಾಗಿ ತಿಳಿದುಕೊಳ್ಳುವವರೆಗೆ ಯಾವುದೇ ನಿರ್ಧಾರಕ್ಕೆ ಬರುವುದು ಸೂಕ್ತವಲ್ಲ. ಅನಗತ್ಯವಾಗಿ ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡಿಕೊಳ್ಳಬೇಡಿ ತಾಳ್ಮೆ ಇದ್ದಲ್ಲಿ ನೆಮ್ಮದಿ ಇರುತ್ತದೆ.

ಪದಬಂಧ



ಎಡದಿಂದ ಬಲಕ್ಕೆ

1 ಇದು ಇತಿಹಾಸಕ್ಕೆ ಸಂಬಂಧಿಸಿದ್ದು (4)
4. ಹೋಗುವಿಕೆಯಲ್ಲ, ಬರುವುದು (4)
6. ಬೆಳಗಿನ ಜಾವ (3)
7. ಎರಡಕ್ಷರದಲ್ಲಿ ಹೆದರು (2)
8. ಮೊದಲೇ ಮಾಡಿಕೊಂಡ ಸಿದ್ಧತೆ (3)
10. ವಿರಳವಾಗಿ ಬಂದ ವಿಷ್ಣುವಿನ ಪತ್ನಿ (3)
12. ನರರು ಒಪ್ಪಿಸಿದ ಕಾಣಿಕೆ (3)
14. ನೂಲುವ ರಾಟೆಯಿದು (3)
16. ಕಣ್ಣಿನ ಪೊರೆಗೆ ಮತ್ತೊಂದು ಹೆಸರು (3)
18. ಅಗಲವಾದ ಹಲ್ಲೆಯುಳ್ಳ ಗುದ್ದಲಿ (3)
19. ಹಣ್ಣುಗಳ ರಾಜ (2)
20. ಅತಿಯಾದ ದುಃಖ (3)
21. ಹೊಸದಾದ ಬೆಣ್ಣೆ (4)
22. ಹದಿನಾಲ್ಕು ವರ್ಷಗಳ ವನವಾಸದಲ್ಲಿ ರಾಮ ಲಕ್ಷ್ಮಣರು ಇದ್ದ ಪ್ರದೇಶ ತಿರುಗಿದೆ (4)

ಎಡದಿಂದ ಬಲಕ್ಕೆ

2. ರೀತಿಯೊಂದಿಗೆ ಬಂದಿರುವ ಜೋಡಿಪದ (3)
3. ಯತಿಗಳ ಬಳಿಯಲ್ಲಿರುವ ನೀರಿನ ಪಾತ್ರೆ (4)
4. ಸೊಂಡಿಲಿರುವ ದೊಡ್ಡದಾದ ಪ್ರಾಣಿ (2)
5. ನರಿಯ ಮಧ್ಯೆಯೇ ಕಾಣಲುಸಿಗುವ ಒಂದುಬಗೆಯ ಚರ್ಮವಾದ್ಯ (3)
7. ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆ (3)
9. ಬೇಡುವವನು (3)
11. ಕುಟ ಕುಟ ಸದ್ದು ಮಾಡುತ್ತಾ ಬಂದ ಹುಂಜ (3)
13. ಹೆತ್ತ ತಾಯಿ (3)
15. ಹರಾಜಿಗೆ ಮತ್ತೊಂದು ಹೆಸರು (3)
17. ಹೊಡೆದಾಟ, ಜಗಳ (4)
18. ಇವನು ಸಭ್ಯ (3)
19. ಮಾಯಾಜಿಂಕೆಯಾಗಿ ಸೀತಾಮಾತೆಯ ಮುಂದೆ ಓಡಾಡಿದ ರಾಕ್ಷಸ (3)
20. ಮತ್ತೊಬ್ಬ ಸಾಧು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಕುತೂಹಲ 3. ಬಾಕಿದಾರ 7. ಉಪಜೀವನ 10. ಸವಿನಯ 11. ಸಂಪಾದಕ 13. ನಂದಿಬಟ್ಟಲು 16. ದುರುಗುಟ್ಟು 17. ವೈವಾಹಿಕ

ಎಡದಿಂದ ಬಲಕ್ಕೆ: 2. ತೂಕ 4. ದಾಹ 5. ಸಜೀವ 6. ಒಂಟಿಸಲಗ 7. ಉಪನಯನ 8. ನಗೆಪಾಟಲು 9. ಉಪಕರಣ 12. ಸಂಬಳ 14. ತಾರು 15. ಕಹಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ದೊಡ್ಡ ಆಕೃತಿ; ಎಷ್ಟು ದೊಡ್ಡದು ಗೊತ್ತಾ?

ನಮಗೆ ಗೊತ್ತಿರುವ ದೊಡ್ಡ ಆಕೃತಿಗಳಾವುದು? ಕೆಲಸವರು ಬುರ್ಜ್ ಖಲೀಫಾ, ಸರ್ದಾರ್ ಪಟೇಲರ ಏಕತಾ ಮೂರ್ತಿ, ಗ್ರೇಟ್ ವಾಲ್ ಆಫ್

ಚೀನಾ ಎಂದೂ ಹೇಳಬಹುದು. ಅದೆಲ್ಲದೂ ದೊಡ್ಡದೇ, ಆದರೆ ಭೂಮಿ ಮೇಲೆ, ಆದರೆ, ಅಂತರಿಕ್ಷದಲ್ಲಿ ದೊಡ್ಡ ಆಕೃತಿಗಳಾವವು ಗೊತ್ತಾ? ಅದರ ಹೆಸರು, ಹರ್ಕ್ಯುಲಸ್ ಕರೋನಾ ಬೊರಿಯಾಲಿಸ್ ಗ್ರೇಟ್ ವಾಲ್ ಅಂತ. ಇಲ್ಲಿಯವರೆಗೂ ಕಂಡುಹಿಡಿದ ಅತಿದೊಡ್ಡ ಆಕೃತಿ ಎಂಬ ಬಿರುದನ್ನು ಪಡೆದುಕೊಂಡಿರುವ ಈ ಬೃಹತ್ ಗ್ಯಾಲಕ್ಸಿಯ ತಂತಿನಲ್ಲಿ ಹಲವಾರು ಗ್ಯಾಲಕ್ಸಿಗಳು, ಗಾಳಿ, ಡಾರ್ಕ್ ಮ್ಯಾಟರ್ ಗಳೆಲ್ಲವೂ ಇದೆ. ಇದರ ಗಾತ್ರ ಎಷ್ಟುದೊಡ್ಡದು ಎಂದು ಅಂದಾಜು ಮಾಡಿಕೊಳ್ಳಲೇ ಬೇಡಿ, ಏಕೆಂದರೆ, ಇದು 10 ಬಿಲಿಯನ್ ಬೆಳಕಿನ ವರ್ಷಗಳಷ್ಟು ದೊಡ್ಡದು, ಎಂದರೆ, ನಾವು ಬೆಳಕಿನ ವರ್ಷದಷ್ಟು ವೇಗವಾಗಿ ಚಲಿಸಲ ಶುರುಮಾಡಿದರೆ, 10 ಬಿಲಿಯನ್ ವರ್ಷಗಳು, ಅದಕ್ಕೂ ಬಿಡಿಸಿ ಹೇಳಬೇಕೆಂದರೆ, ಒಂದು ವರ್ಷದಲ್ಲಿ ಒಂದು ಟ್ರಿಲಿಯನ್ ವೇಗದಲ್ಲಿ ಹೋದರೆ, ಆ ಆಕೃತಿಯನ್ನು ಮುಗಿಸಲು 10 ಬಿಲಿಯನ್ ವರ್ಷ ಬೇಕಾಗುತ್ತೆ. ಅದನ್ನು ಯಾರೂ ಮಾಡೋಕೂ ಆಗಲ್ಲ, ತಲೆಕೆಡಿಸಿಕೊಳ್ಳದಿರಿ.

ಪುಸ್ತಕ ಲೋಕ

ಚಿಂತೆ ಬಿಡಿ Chill ಮಾಡಿ

ಶ್ವೇತಾ ಭಿಡೆ ಅವರು ಬರೆದಿರುವ ವ್ಯಕ್ತಿತ್ವ ವಿಕಸನ ಕುರಿತ ಕೃತಿಯಾಗಿರುವ ಇದು, ನಮ್ಮದೀಗ ಜಂಜಾಟದ ಬದುಕು. ಗೊತ್ತೊ ಗೊತ್ತಿಲ್ಲದೆಯೋ ಚಿಂತೆಗಳು ನಮ್ಮನ್ನು ಮುತ್ತುತ್ತಿರುತ್ತವೆ. ವಿಕ್ರಮಾದಿತ್ಯನ ಹೆಗಲಿಗೆ ಬಿದ್ದ ಬೇತಾಳನಂತೆ ಸೆಸ್ ನಮ್ಮ ಜೀವನಕ್ಕೂ ತಾಗಿಕೊಂಡೇ ಇರುತ್ತದೆ.



'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಎನ್ನುವ ತ್ರಿಶಂಕು ಮನಸ್ಥಿತಿ ನಮ್ಮ ದೇಹದ ಮೇಲೆ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವುದೂ ಅಲ್ಲದೆ, ಚಿಂತೆ ಎನ್ನುವುದು ನಮ್ಮ ಪೂರ್ಣ ಜೀವಿತಾವಧಿಯನ್ನು ನುಂಗಿ ನೀರು ಕುಡಿದು ಹಾಯಾಗಿದೆ. ಮತ್ತೆ ನಾವು? ಅದರ ಸುತ್ತಲೇ ಗಿರಕಿ ಹೊಡೆದು ನಲುಗುತ್ತಿದ್ದೇವೆ. ಹೌದು, ನಮಗೂ ಚಿಂತೆಗಳಿವೆ. ಕಾಡುತ್ತವೆ, ನೋಯಿಸುತ್ತವೆ. ಆದರೆ ಯಾವುದನ್ನು ಎದುರಿಸಿಯೂ, ಸ್ವಿಕರಿಸಿಯೂ ನೆಮ್ಮದಿಯಿಂದ ಬದುಕುವುದು ಹೇಗೆ ಎನ್ನುವ ಹುಡುಕಾಟಕ್ಕೆ ಉತ್ತರಗಳು ಇಲ್ಲಿವೆ. ಇಲ್ಯಾವುದೋ ದೊಡ್ಡ ಆದರ್ಶಗಳು, ಪ್ರವಚನಗಳು ಅಥವಾ ಗಂಭೀರವಾದ ವಿಚಾರಧಾರೆಗಳಿಲ್ಲ. ಸರಳವಾಗಿ ದಿನನಿತ್ಯ ನೀವೇ ಕೇಳಿಕೊಳ್ಳುವ ಪ್ರಶ್ನೆಗಳಿಗೆ ಬೇರೆ ಆಯಾಮದ ಉತ್ತರಗಳಿವೆ. ಯಾರಿಗೋ ಕೇಳಿ ಅರ್ಥ ಮಾಡಿಸಬೇಕಾದ ಗೊಂದಲಗಳಿಲ್ಲದೇ ನಿಮ್ಮದೇ ಪ್ರಶ್ನೆಗಳಿಗೆ ನೀವಿಲ್ಲಿ ಉತ್ತರ ಕಂಡುಕೊಳ್ಳಬಹುದು. ಯಾಕೆಂದರೆ ಲೈಫ್ ತುಂಬಾ ಸಿಂಪಲ್ ಇದೆ. ಅದನ್ನು ಕಷ್ಟ ಮಾಡಿಕೊಂಡು ಒದ್ದಾಡೋದೇ ಅಭ್ಯಾಸ ಮಾಡಿಕೊಂಡಿದ್ದೇವೆ. ಇನ್ನಾದರೂ ಅವುಗಳಿಂದ ಮುಕ್ತರಾಗೋಣ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ



- ಸುದ್ದಿಯಲ್ಲಿ ಕಂಡುಬಂದ 'ಇಎಸ್ ಕಾರಿಟಿಕ್ಸ್ ಕೇವ್' ಯಾವ ದೇಶದಲ್ಲಿ ಕಂಡುಬರುತ್ತದೆ?
- ಎ. ಬೊಲಿವಿಯಾ.
- ಬಿ. ಕ್ಯೂಬಾ.
- ಸಿ. ಕಜಕಿಸ್ಥಾನ್.
- ಡಿ. ಸ್ಪೇನ್.

ಉತ್ತರ: ಡಿ. ಸ್ಪೇನ್.

ಮಾಹಿತಿ

'ಇಎಸ್ ಕಾರಿಟಿಕ್ಸ್ ಕೇವ್', ಸ್ಪ್ಯಾನಿಷ್ ದ್ವೀಪವಾದ ಮೆನೋರ್ಕಾದಲ್ಲಿದೆ. ಕ್ರಿ.ಪೂ 800ರ ವರೆಗೆ ಸುಮಾರು ಆರು ಶತಮಾನಗಳವರೆಗೆ ಅಂತ್ಯಕ್ರಿಯೆಯ ಸ್ಥಳವಾಗಿತ್ತಂತೆ. ಸಂಶೋಧಕರು ಈ ಸ್ಥಳದಲ್ಲಿ ಭ್ರಾಮಕ ಔಷಧಿಗಳ ಉಪಸ್ಥಿತಿಯನ್ನು ಕಂಡುಕೊಂಡಿದ್ದಾರೆ. 3 ಸಹಸ್ರಮಾನಗಳ ಹಿಂದೆ ಜನರು ಅವುಗಳನ್ನು ಸೇವಿಸುವ ಸಾಧ್ಯತೆಯನ್ನು ಸ್ಪಷ್ಟಪಡಿಸಿದ್ದಾರೆ.

ಸೌರ ಶಕ್ತಿಯನ್ನು ದ್ರವರೂಪದಲ್ಲಿ ಸಂಗ್ರಹಿಸಿಡಬಹುದೇ?

ತಿಳಿಯೋಣ

● ಎಲ್.ಪಿ.ಕುಲಕರ್ಣಿ

ಜಗತ್ತಿನ ಪ್ರತಿಷ್ಠಿತ ವಿಜ್ಞಾನ-ತಂತ್ರಜ್ಞಾನ ಸಂಶೋಧನಾ ಪ್ರಯೋಗಶಾಲೆಗಳಲ್ಲಿ ವಿಜ್ಞಾನಿಗಳು ಪ್ರತಿನಿತ್ಯ ಒಂದಿಲ್ಲ ಒಂದು ಸಂಶೋಧನಾತ್ಮಕ ಅಧ್ಯಯನದಲ್ಲಿ ತೊಡಗೇ ಇರುತ್ತಾರೆ. ಹಾಗೆ ಸ್ವೀಡನ್ನ ಚಾಲ್ಮರ್ಸ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯ ಸಂಶೋಧಕರು ಸೌರ ಶಕ್ತಿಯನ್ನು ದ್ರವ ರೂಪದಲ್ಲಿ ಸಂಗ್ರಹಿಸುವ ಮತ್ತು ಈಗ ಅದರಿಂದ ವಿದ್ಯುತ್ ಉತ್ಪಾದಿಸುವ ನವೀನ ಶಕ್ತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದಾರೆ.

ಆಣ್ವಿಕ ಸೌರ ಥರ್ಮಲ್ (ಎಮ್‌ಒಎಸ್‌ಟಿ) ವ್ಯವಸ್ಥೆ ಎಂದು ಕರೆಯಲ್ಪಡುವ ಈ ವ್ಯವಸ್ಥೆಯು ಒಂದು ದಶಕದಿಂದ ಅಭಿವೃದ್ಧಿಯಲ್ಲಿದೆ; ಇಂಗಾಲ, ಹೈಡ್ರೋಜನ್ ಮತ್ತು ಸಾರಜನಕದಿಂದ ವಿಶೇಷವಾಗಿ ವಿನ್ಯಾಸಗೊಳಿಸಲಾದ ಅಣುವನ್ನು ಇದು ಬಳಸುತ್ತದೆ.

ಸೂರ್ಯನ ಬೆಳಕಿಗೆ ಒಡ್ಡಿಕೊಂಡಾಗ, ಅಣುವು ಅದರ ಆಕಾರವನ್ನು ಬದಲಾಯಿಸುತ್ತದೆ, ಶಕ್ತಿ-ಸಮೃದ್ಧ ಐಸೋಮರ್ ಆಗಿ ರೂಪಾಂತರಗೊಳ್ಳುತ್ತದೆ. ಇದನ್ನು 18 ವರ್ಷಗಳವರೆಗೆ ದ್ರವ ರೂಪದಲ್ಲಿ ಸಂಗ್ರಹಿಸಬಹುದು ಎನ್ನುತ್ತಾರೆ ಸಂಶೋಧಕರು. ವೇಗವರ್ಧಕವು ಅಣುವನ್ನು ಅದರ



ಮೂಲ ಸ್ಥಿತಿಗೆ ಹಿಂತಿರುಗಿಸಲು ಪ್ರಚೋದಿಸಿದಾಗ ಶಕ್ತಿಯು ಶಾಖದ ರೂಪದಲ್ಲಿ ಬಿಡುಗಡೆಯಾಗುತ್ತದೆ. ಇತ್ತೀಚಿನ ಪ್ರಗತಿಯು ಈ ಶಾಖವನ್ನು ವಿದ್ಯುತ್ ಆಗಿ ಪರಿವರ್ತಿಸಲು ಅವಕಾಶ ಮಾಡಿಕೊಟ್ಟಿದೆ.

ಚಾಲ್ಮರ್ಸ್ ತಂಡವು ಚೀನಾದ ಶಾಂಘೈ ಜಿಯಾವೊ ಟಾಂಗ್ ವಿಶ್ವವಿದ್ಯಾನಿಲಯದ ಸಂಶೋಧಕರೊಂದಿಗೆ ಸಹಕರಿಸಿ ಕಾಂಪ್ಯಾಕ್ಟ್ ಥರ್ಮೋಎಲೆಕ್ಟ್ರಿಕ್ ಜನರೇಟರ್ ಅನ್ನು ರಚಿಸಿದೆ. ಅದು ಸಂಗ್ರಹಿಸಲಾದ ಸೌರ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ. ಈ ವ್ಯವಸ್ಥೆಯು ಪ್ರಸ್ತುತ ಸಣ್ಣ ಪ್ರಮಾಣದ ವಿದ್ಯುತ್ ಅನ್ನು ಮಾತ್ರ ಉತ್ಪಾದಿಸುತ್ತಿದೆ. ಆದರೂ ಸಂಶೋಧಕರು ಅದರ ಸಾಮರ್ಥ್ಯದ ಬಗ್ಗೆ ಆಶಾವಾದಿಯಾಗಿದ್ದಾರೆ. ಸ್ಮಾರ್ಟ್‌ವಾಚ್‌ಗಳು ಮತ್ತು ಹೆಡ್‌ಫೋಬನ್‌ಗಳಂತಹ ಎಲೆಕ್ಟ್ರಾನಿಕ್ಸ್‌ಗೆ ಸಂಯೋಜಿಸಬಹುದಾದ ಅಲ್ಟ್ರಾ-ಥಿನ್ ಜನರೇಟರ್, ಸೌರಶಕ್ತಿಯ ಮಧ್ಯಂತರ ಸ್ವಭಾವವನ್ನು ಮೀರಿಸಿ, ಬೇಡಿಕೆಯ ಮೇರೆಗೆ ಸೌರ ಶಕ್ತಿಯನ್ನು ಸಂಗ್ರಹಿಸಬಹುದು ಮತ್ತು ಬಳಸಬಹುದಾದ ಸ್ವಯಂ ಚಾರ್ಜಿಂಗ್ ಸಾಧನಗಳ ಕಡೆಗಿನ ಭರವಸೆಯ ಹೆಜ್ಜೆಯನ್ನು ಗುರುತಿಸುತ್ತದೆ.

ಎಮ್‌ಒಎಸ್‌ಟಿ ವ್ಯವಸ್ಥೆಯು ಸೌರ ಶಕ್ತಿಯ ಶೇಖರಣೆ ಮತ್ತು ಉತ್ಪಾದನೆಗೆ ಒಂದು ಅದ್ಭುತವಾದ ವಿಧಾನವನ್ನು ನೀಡುತ್ತದೆ. ಸಾಂಪ್ರದಾಯಿಕ ಸೌರ ಫಲಕಗಳಿಗಿಂತ ಭಿನ್ನವಾಗಿ, ಇದು ಹವಾಮಾನ, ದಿನದ ಸಮಯ ಅಥವಾ ಭೌಗೋಳಿಕ ಸ್ಥಳವನ್ನು ಲೆಕ್ಕಿಸದೆ ಮತ್ತು ಇಂಗಾಲದ ಡೈಆಕ್ಸೈಡ್ ಅನ್ನು ಹೊರಸೂಸದೆ ವಿದ್ಯುತ್ ಉತ್ಪಾದಿಸುತ್ತದೆ. ಸಂಶೋಧಕರು ಈಗ ವ್ಯವಸ್ಥೆಯ ದಕ್ಷತೆಯನ್ನು ಸುಧಾರಿಸಲು ಮತ್ತು ವಾಣಿಜ್ಯ ಬಳಕೆಗೆ ವೆಚ್ಚ-ಪರಿಣಾಮಕಾರಿಯಾಗಿಸುವಡೆ ಗಮನಹರಿಸಿದ್ದಾರೆ. ಈ ತಂತ್ರಜ್ಞಾನವು ನಿರಂತರವಾಗಿ ಮತ್ತು ಸಮರ್ಥವಾಗಿ ಕಾರ್ಯನಿರ್ವಹಿಸುವ ಸೌರ-ಚಾಲಿತ ಗ್ಯಾಜೆಟ್‌ಗಳು ಮತ್ತು ಮನೆಯ ತಾಪನ ವ್ಯವಸ್ಥೆಗಳಿಗೆ ದಾರಿ ಮಾಡಿಕೊಡುತ್ತದೆ.

ಮುನಿಸು ತೋರಿತೇ ಪ್ರಕೃತಿಯು

● ಭಾಗ್ಯಶ್ರೀ ರತನ್ ಶೆಟ್ಟಿ

ನಿಸರ್ಗದ ನಡುವೆ ಬೆಚ್ಚಗೆ ಆಶ್ರಯಿಸಿದ್ದ ಸಕಲ ಜೀವಿಗಳನ್ನು ಪೋಷಿಸಿದ್ದ ಪ್ರಕೃತಿ, ಅದೇಕೋ ಒಮ್ಮೆಲೇ ತನ್ನೊಡಲ ನೋವನ್ನು ಹೊರಹಾಕಿತೋ, ಅಥವಾ ಮನುಷ್ಯನ ಸ್ವಾರ್ಥಕ್ಕೆ ತನ್ನ ಮುನಿಸು ತೋರಿತೋ, ಆದರೆ ಅದರ ಪರಿಣಾಮ ಮಾತ್ರ ಘನಘೋರ. ನೆಮ್ಮದಿಯಾಗಿ ಮಲಗಿದ್ದವರೆಲ್ಲರಿಗೂ ಆಘಾತವಾಗಿತ್ತು. ಒಮ್ಮೆಲೇ ಸುರಿದ ವರುಣಾಗಮನ ಬದುಕನ್ನೇ ಬೀದಿ ಪಾಲಾಗಿಸಿದ್ದರೆ, ಇನ್ನೊಂಡೆಗೆ ನಾಳೆಗಳ ಕನಸು ಕಾಣುತ್ತ ಮಲಗಿದ್ದ ಅದೆಷ್ಟೋ ಮಂದಿಯ ಬದುಕು ನಿದಿರೆಯಲ್ಲೇ ಕೊನೆಯಾಗಿತ್ತು. ಆ ದೃಶ್ಯ ನೋಡುವುದಿರಲಿ ಕೇಳಲು ಭಯಾನಕವೆನಿಸುತ್ತದೆ. ಆದರೆ ಅದನ್ನು ಅನುಭವಿಸಿದವರ ಸಂಕಟ ಎಷ್ಟಿರಬಹುದು? ವರುಷವೆಲ್ಲ ಬೆಳೆದ ರೈತರ ಶ್ರಮದ ಬೆಳೆ ಹೊಳೆಯ ಪಾಲಾಗಿತ್ತು. ವೃಕ್ಷಗಳಲ್ಲೇ ಗೂಡು ಕಟ್ಟಿದ್ದ ಪುಟ್ಟ ಹಕ್ಕಿಗಳು, ವನ್ಯ ಜೀವಿಗಳು ಎಲ್ಲವೂ ಒಂದೇ ತಾಸಿನೊಳಗೆ ನಾಶವಾಗಿತ್ತು.

ಆದರೆ ಇದಕ್ಕೆಲ್ಲ ಕಾರಣ ಏನಿರಬಹುದು? ಒಂದೊಮ್ಮೆ ಮನುಷ್ಯನ ಸ್ವಾರ್ಥಕ್ಕೆ ಪರಿಸರದ ಮುನಿಸು ಎಂದರೂ, ಅದನ್ನು ಹೇಗೆ ಸ್ವೀಕರಿಸಬಹುದು? ಹಾಗೆ ನೋಡಿದರೆ ಅಲ್ಲಿ ನೊಂದವರಾರು ಆ ಪ್ರಕೃತಿಯನ್ನು ನಶಿಸಿದವರಲ್ಲ. ಯಾರದೋ ಸಂಪಾದನೆಗೆ, ಯಾವುದೋ ಅಭಿವೃದ್ಧಿಯ ಹೆಸರಲ್ಲಿ ಗುಡ್ಡಗಾಡುಗಳನ್ನು ನಶಿಸಿದ್ದು ಯಾರೋ, ಆದರೆ ಅದಕ್ಕೆ ಬಲಿಯಾದವರು ನಿಜಕ್ಕೂ ಅಮಾಯಕರು. ಅದರಲ್ಲೂ ಪುಟ್ಟ ಕಂದಮ್ಮಗಳು, ಈಗಿನ್ನೂ ಹೆತ್ತವರ ಮಡಿಲಲ್ಲಿದ್ದ ಆ ಮುಗ್ಧ ಜೀವಗಳಿಗೆ ಯಾವ ಸ್ವಾರ್ಥವಿತ್ತು ಹೇಳಿ? ಸಿಕ್ಕಿದ್ದನ್ನು ಹೆಕ್ಕಿ ತಿನ್ನುವ ಹಕ್ಕಿಗಳು, ಉಳಿದ ಆಹಾರ ತಿನ್ನುವ ಶ್ವಾನಗಳು, ಮುಗ್ಧ ಗೋವುಗಳು ಇವೆಲ್ಲವೂ ಮಾಡಿದ ತಪ್ಪಾದರೂ ಏನು?

ಜೀವನವೆಲ್ಲ ಶ್ರಮಪಟ್ಟು ಕಟ್ಟಿದ್ದ ಅದೊಂದೆ ಸೂರು ಹೊಳೆಯಾಗಿ ಹರಿದು ಹೋಗಿದ್ದರೆ, ತಮ್ಮನ್ನು ಗುರುತಿಸಬಲ್ಲ ಯಾವುದೇ ಕಾಗದ ಪತ್ರಗಳು ಉಳಿದಿಲ್ಲ. ಪರಿಹಾರದ ಭರವಸೆ ಹೊತ್ತುಮರಳಿ ಸಿಗದ ಕಳೆದುಕೊಂಡ ವಿಷಯಗಳಿಗೆ ಮರುಕ ಪಡುತ್ತಾ, ಕಳೆದುಕೊಂಡ ತಮ್ಮವರಿಗಾಗಿ ಕಂಬನಿ ಸುರಿಸುವ ಆ ಮುಗ್ಧ ಜನರ ನೋವಿಗೆ ಯಾವ ಸಾಂತ್ವನದ ನುಡಿಗಳು ಕೂಡ ಸಮಾಧಾನ ನೀಡಲಾರವು. ಇತ್ತ ಮನುಷ್ಯನಂತೆ ಹೇಳಿಕೊಳ್ಳಲೂ ಬಾರದ ಮುಗ್ಧ ಜೀವಿಗಳ ನೋವಂತೂ ಕರುಳು ಹಿಂಡುವಂತಿದೆ.

ನೀರಿನ ನಡುವೆ ಸಿಲುಕಿದ ಮೂಖ ಪ್ರಾಣಿಗಳ ರಕ್ಷಣೆ ಮಾಡುವವರಾರು? ಹಸಿದು ಕಂಗೆಟ್ಟ ಆ ಜೀವಿಗಳಿಗೆ ಆಹಾರ ಕೂಡ ಇಲ್ಲದಾಗಿದೆ. ಬಡವ ಬಲ್ಲಿದನೆಂಬ ಭೇದವಿಲ್ಲದೆ ಎಲ್ಲರನ್ನೂ ಬೀದಿ ಪಾಲಾಗಿಸಿದ ಮಳೆಯ ಆರ್ಭಟಕ್ಕೆ ಜನರು ಆಶ್ರಯ ಕೇಂದ್ರಗಳಲ್ಲಿ ಉಳಿದುಕೊಳ್ಳುವಂತಾಗಿದೆ

ಇಲ್ಲಿ ಯಾರಿಂದ ತಪ್ಪಾಗಿರಬಹುದು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು, ಹೇಗೆ ಈ ಸಮಸ್ಯೆ ಮುಂದುವರಿಯದಂತೆ ತಡೆಯಬೇಕು ಎಂಬುದು ಬಹಳ ಮುಖ್ಯವಾಗುತ್ತದೆ. ಯಾರ ಆರೈಕೆಯನ್ನು ಬಯಸದೆ ಸೊಂಪಾಗಿ ಬೆಳೆದ ವೃಕ್ಷಗಳಿಗೆ ಬದುಕಲು ಅವಕಾಶ ನೀಡುವುದು ನಮ್ಮ ಕರ್ತವ್ಯವಲ್ಲವೇ? ಮರದ ನೆರಳಲ್ಲಿ ಬೆಳೆವ ಹುಲ್ಲು, ಇತರೆ ಸಸ್ಯರಾಶಿಗಳು ಮಣ್ಣ ಸವಕಳಿಯನ್ನು ತಡೆಯಬಹುದು ಅಲ್ಲವೇ? ಒಂದು ವ್ಯಾಪ್ತಿಗೆ ಎಷ್ಟು ಕೊಳವೆ ಭಾವಿಗಳಿಗೆ ಅವಕಾಶ? ಬರಡಾದ ಭೂಮಿಯನ್ನು ಸರಿಪಡಿಸುವ ಬಗೆ ಯಾವುದು? ಇದೆಲ್ಲದರ ಪರಿಹಾರ ಕಂಡುಕೊಂಡರೆ? ಮುಂದೇ ಹೀಗಾಗದಂತೆ ತಡೆಯಬಹುದು. ಆದರೆ ಆ ದಿಕ್ಕಿನತ್ತ ನಮ್ಮ ಯೋಚನೆಗಳು ಯಾಕೋ ಸಾಗುತ್ತಿಲ್ಲ. ಒಮ್ಮೆ ಬಂದ ಪ್ರವಾಹ ಇಳಿದು ಹೋಗುತ್ತಲೇ ಪರಿಸರ ಸಂರಕ್ಷಣೆಯ ಬಗೆಗೆ ಚಿಂತೆ ಇಲ್ಲವಾದರೆ, ಮುಂದಿನ ದಿನಗಳಲ್ಲಿ ಮತ್ತೆ ಮತ್ತೆ ಇಂತಹ ಸಂದರ್ಭಗಳು ಮರುಗಕಳಿಸಬಹುದಲ್ಲವೇ.

ಸಮಾಚಾರ ಸಣ್ಣದಲ್ಲ

ಎಸ್‌ಟಿಎಫ್‌ಗೆ ಸಾರಾ ತೆಂಡೂಲ್ಕರ್ ನಿರ್ದೇಶಕಿ

ಬೆಂಗಳೂರು: ಸಚಿನ್ ತೆಂಡೂಲ್ಕರ್ ಫೌಂಡೇಷನ್ (ಎಸ್ ಟಿಎಫ್) ಡೈರೆಕ್ಟರ್ ಆಗಿ ಪುತ್ರಿ ಸಾರಾ ತೆಂಡೂಲ್ಕರ್ ಅವರನ್ನು ನೇಮಿಸಲಾಗಿದೆ ಎಂದು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಘೋಷಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಸಚಿನ್ ತೆಂಡೂಲ್ಕರ್ ಸಂತೋಷವನ್ನು ಹಂಚಿಕೊಂಡಿದ್ದಾರೆ. 'ಸಾರಾ ಅವರು ಯೂನಿವರ್ಸಿಟಿ ಕಾಲೇಜು ಲಂಡನ್‌ನಿಂದ ಕ್ಲಿನಿಕಲ್ ಮತ್ತು ಪಬ್ಲಿಕ್ ಹೆಲ್ತ್ ನ್ಯೂಟ್ರಿಷನ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ' ಎಂದು ಸಚಿನ್ ಮಾಹಿತಿ ನೀಡಿದ್ದಾರೆ.

'ಕ್ರೀಡೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ಮೂಲಕ ಭಾರತವನ್ನು ಸಶಕ್ತಗೊಳಿಸಲು ಆಕೆ ಪ್ರಯಾಣವನ್ನು ಪ್ರಾರಂಭಿಸಿದಾಗ ಜಾಗತಿಕ ಕಲಿಕೆಯು ಹೇಗೆ ಪರಿಪೂರ್ಣತೆಗೆ ತಲುಪಿದೆ ಎಂಬುದನ್ನು ನೆನಪಿಸುತ್ತದೆ' ಎಂದು ಅವರು ಹೇಳಿದ್ದಾರೆ. 2019ರಲ್ಲಿ ಸಚಿನ್ ತೆಂಡೂಲ್ಕರ್ ಫೌಂಡೇಷನ್ ಅನ್ನು ಸ್ಥಾಪಿಸಲಾಗಿತ್ತು. ಮುಂದಿನ ಪೀಳಿಗೆಯ ಮಕ್ಕಳಿಗೆ ಸಮಾನ ಅವಕಾಶ ನೀಡುವ ಮೂಲಕ ಉತ್ತಮ ಸಮಾಜ ಹಾಗೂ ಜಗತ್ತನ್ನು ನಿರ್ಮಿಸಲು ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತಿದೆ.

ಫುಟ್ಬಾಲ್: ಸ್ಪೋರ್ಟಿಂಗ್ ಕ್ಲಬ್‌ಗೆ ಭರ್ಜರಿ ಜಯ

ಬೆಂಗಳೂರು: ಅಬನ್ಸ್ಯ್‌ಸ್ ಡಿವಿಶನ್ ಲೀಗ್ ಫುಟ್ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಎಫ್ಸಿ ಬೆಂಗಳೂರು ಯುನೈಟೆಡ್ ಮತ್ತು ಎಂಇಜಿ ಅಂಡ್ ಸೆಂಟರ್ ತಂಡಗಳು ಡ್ರಾ ಮಾಡಿಕೊಂಡರೆ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡ ಭರ್ಜರಿ ಜಯ ಸಾಧಿಸಿತು. ಇಲ್ಲಿನ ಬಿಎಫ್ಸಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಎಫ್ಸಿ ಬೆಂಗಳೂರು ಯುನೈಟೆಡ್ ಎದುರಾಳಿ ಎಂಇಜಿ ಅಂಡ್ ಸೆಂಟರ್ ತಂಡದ ವಿರುದ್ಧ 4–4 ಗೋಲುಗಳಿಂದ ಡ್ರಾ ಮಾಡಿಕೊಂಡಿತು. ಎಫ್ಸಿ ಬೆಂಗಳೂರು ಯುನೈಟೆಡ್ ಪರ ಆರ್ಯನ್ ಆಮ್ಲಾ (21ನೇನಿಮಿಷ), ಅಕ್ಷುನ್ನಾ ತ್ಯಾಗಿ (28, 35 ನಿಮಿಷ), ಎನ್. ರಾಕೇಶ್ ಸಿಂಗ್ (70ನೇ ನಿಮಿಷ) ಗೋಲುಗಳನ್ನು ಹೊಡೆದರು. ಎಂಇಜಿ ಪರ ಆಯುಷ್ (37ನೇ ನಿಮಿಷ), ಶರತ್ ನಾರಾಯಣ ಎಂ. (55 ಮತ್ತು 58ನೇನಿಮಿಷ), ಅಭಿನಂದ್ (61ನೇ ನಿಮಿಷ) ಗೋಲುಗಳನ್ನು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡ ಎದುರಾಳಿ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡದ ವಿರುದ್ಧ 4–0 ಅಂತರದಿಂದ ಭರ್ಜರಿ ಗೆಲುವು ಪಡೆಯಿತು. ಸ್ಪೋರ್ಟಿಂಗ್ ಕ್ಲಬ್ ತಂಡ ಪರ ತರುಣ್ (12ನೇ ನಿಮಿಷ), ಸೂರ್ಯ (20ನೇ ನಿಮಿಷ), ಅರ್ಜುನ್ (32ನೇ ನಿಮಿಷ), ಯೊಕ್ಷಿಮ್ (89ನೇ ನಿಮಿಷ) ಗೋಲುಗಳನ್ನು ಬಾರಿಸಿದರು.

ಜಯ್ ಶಾ ನಂತರ ಖಾಲಿಯಾಗಿರುವ ಸ್ಥಾನ | ಕಾರ್ಯದರ್ಶಿ ಸ್ಥಾನದ ಮೇಲೆ ಇದೆ ಹಲವರ ಕಣ್ಣು

ಬಿಸಿಸಿಐಗೆ ಯಾರು ಬಾಸ್?

ದೆಹಲಿ: ಜಯ್ ಶಾ ಅವರು ಡಿಸೆಂಬರ್ 1ರಂದು ಐಸಿಸಿಯ ಅತಿ ಕಿರಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅತ್ಯಂತ ಪ್ರಭಾವಶಾಲಿ ಹುದ್ದೆಯಾದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಸ್ಥಾನ ಖಾಲಿ ಉಳಿದಿದೆ. ಮುಂದಿನ ಕಾರ್ಯಬಾರ ವಹಿಸಲು ಈ ಹುದ್ದೆಗೆ ಯಾರು ಬರುತ್ತಾರೆಂಬ ಕುತೂಹಲದಲ್ಲಿ ಅಧಿಕಾರಿಗಳಿದ್ದಾರೆ.

2022ರಲ್ಲಿ ಮಂಡಳಿಯ ನಿಯಮಾವಳಿಗೆ ತಿದ್ದುಪಡಿ ತಂದ ಮೇಲೆ ಬಿಸಿಸಿಐನಲ್ಲಿ ಕಾರ್ಯದರ್ಶಿ ಹುದ್ದೆ ಅತ್ಯಂತ ಪ್ರಭಾವಶಾಲಿಯತಾಗಿದೆ. ಕ್ರಿಕೆಟ್ ಮತ್ತು ಕ್ರಿಕೆಟ್‌ಗೆ ಹೊರತಾದ ವಿಷಯಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ಕಾರ್ಯದರ್ಶಿಗಿದೆ. ಸಿಇಒ ಸಹ ಅವರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಾರೆ.

ಐಸಿಸಿ ವರಿಷ್ಠ ಹುದ್ದೆಗೆ ಕಳೆದ ಆಗಸ್ಟ್‌ನಲ್ಲಿ ಶಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಂದಿನಿಂದ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಹೇಗೆ ನಡೆಯಬಹುದೆಂಬ ಕುತೂಹಲ ಉಳಿದಿದೆ.

ಸದ್ಯ ಏನಾಗುತ್ತಿದೆ ಎಂಬುದು ತಿಳಿಯುತ್ತಿಲ್ಲ. ಎಲ್ಲರೂ (ಬಿಸಿಸಿಐ ಅಧಿಕಾರಿಗಳು, ರಾಜ್ಯ ಘಟಕಗಳು) ಈ ವಿಷಯದಲ್ಲಿ ಮೌನ ತಳೆದಿದ್ದಾರೆ. ಜಂಟಿ ಕಾರ್ಯದರ್ಶಿ (ಸೈಕಿಯಾ) ಬಹುತೇಕ ಹಂಗಾಮಿಯಾಗಿ ಅಧಿಕಾರ ವಹಿಸಿಕೊಳ್ಳಬಹುದು ಎಂದು ಬಿಸಿಸಿಐ ಆಡಳಿತಾಧಿಕಾರಿ ಒಬ್ಬರು ತಿಳಿಸಿದರು.

ಆಯ್ಕೆಯಾದ ಪದಾಧಿಕಾರಿ ರಾಜೀನಾಮೆ ನೀಡಿದಲ್ಲಿ ಅವರ ಉತ್ತರಾಧಿಕಾರಿ ಆಯ್ಕೆ ನಡೆಸಲು 45 ದಿನಗಳ ಒಳಗೆ ವಿಶೇಷ ಸರ್ವಸದಸ್ಯರ ಸಭೆ ಕರೆಯಬೇಕಾಗುತ್ತದೆ. ಈಗಿನ ಪ್ರಕಾರ ಜನವರಿ ಮಧ್ಯದೊಳಗೆ ಈ ಸಭೆ ಕರೆಯಬೇಕಾಗಿದೆ. ಚುನಾವಣೆಗೆ ನಾಲ್ಕು ವಾರಗಳ ಮೊದಲ ಚುನಾವಣಾ ಅಧಿಕಾರಿಯನ್ನು ನೇಮಿಸಬೇಕು ಎಂಬ ನಿಯಮವಿದೆ.

ಕೇಳಿಬರುತ್ತಿರುವ ಹೆಸರು!

ಗುಜರಾತ್‌ನ ಅನಿಲ್ ಪಟೇಲ್ ಮತ್ತು ಬಿಸಿಸಿಐನ ಹಾಲಿ ಜಂಟಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಜಯ್ ಶಾ ಸ್ಥಾನಕ್ಕೆ ತುಂಬಬಹುದು. ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರೋಹನ್ ಜೇಟ್ಲಿ ಅವರು ಈ ಸ್ಥಾನಕ್ಕೆ ಬರಬಹುದೆಂಬ ವದಂತಿಗಳೂ ಕೇಳಿಬಂದಿದ್ದವು.

ಈ ಪ್ರಕ್ರಿಯೆ ಸರಾಗವಾಗಿ ನಡೆಯಲು ಬಿಸಿಸಿಐ ಮುಂದೆ ಸಾಕಷ್ಟು ಕಾಲಾವಕಾಶವಿದೆ ಎಂದು ರಾಜ್ಯ ಘಟಕದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಈ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಇಷ್ಟೊತ್ತಿಗೆ ಪೂರ್ಣಗೊಳ್ಳಬೇಕಿತ್ತು. ಕಾರ್ಯದರ್ಶಿಯವರು ಹೆಚ್ಚಿನ ಕಡತಗಳಿಗೆ ಸಹಿ ಹಾಕಬೇಕಾಗಿರುತ್ತದೆ. ಈ ವಿಷಯವನ್ನು ಸೆಪ್ಟೆಂಬರ್‌ನಲ್ಲಿ ನಡೆದ ಎಜಿಎಂನಲ್ಲಿ ಕೈಗೊಳ್ಳಬೇಕಾಗಿತ್ತು. ಆದರೆ ಆಗ ಯಾರೂ ಪ್ರಶ್ನೆ ಎತ್ತಲಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದರು.

ವಿಶ್ವದ ಅತ್ಯಂತ ಬಲಿಷ್ಠ ಕ್ರಿಕೆಟ್ ಸಂಸ್ಥೆಯಾದ ಬಿಸಿಸಿಐನಲ್ಲಿ ಈಗ ಅಧಿಕಾರದ ನಿರ್ವಾತ ಸೃಷ್ಟಿಯಾಗಿದೆ ಎಂದು ಇನ್ನೊಬ್ಬ ಅಧಿಕಾರಿ ತಿಳಿಸಿದರು.

ಹಾಲಿ ಅಧಿಕಾರವರ್ಗದ ಮೂರು ವರ್ಷಗಳ ಅವಧಿ ಮುಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಕೊನೆಗೊಳ್ಳಲಿದೆ. ಹೀಗಾಗಿ ಈಗ ಅಧಿಕಾರ ವಹಿಸುವ ಕಾರ್ಯದರ್ಶಿ ಅವರಿಗೆ ಒಂದು ವರ್ಷ ಅವಧಿ ಸಿಗಲಿದೆ.

ಐಸಿಸಿ ಮಂಡಳಿಯಲ್ಲಿ ಬಿಸಿಸಿಐ ಪ್ರತಿನಿಧಿ ಯಾರು ಎಂಬ ವಿಷಯದಲ್ಲೂ ನಿರ್ಧಾರ ಆಗಿಲ್ಲ. ಷಾ ಅವರು ಈ ಹೊಣೆಯನ್ನೂ ತಮ್ಮಲ್ಲೇ ಇಟ್ಟುಕೊಂಡಿದ್ದರು. ಈಗ ಮಂಡಳಿಯಲ್ಲಿ ನಿರ್ದೇಶಕ ಸ್ಥಾನಕ್ಕೆ ರೋಜರ್ ಬಿನ್ನಿ ಹೆಸರು ಕೇಳಿಬರುತ್ತಿದೆ.

ಐಸಿಸಿಯ ಚೀಫ್ ಎಕ್ಸಿಕ್ಯೂಟಿವ್ ಸಮಿತಿಗೆ ಅರುಣ್ ಧುಮಾಲ್ ಭಾರತದ ಪ್ರತಿನಿಧಿಯಾಗಿದ್ದಾರೆ.

ಕಾಂಬ್ಳಿ- ಸಚಿನ್ ಭೇಟಿ

ಮುಂಬೈ: ಸಚಿನ್ ತೆಂಡೂಲ್ಕರ್ ಹಾಗೂ ವಿನೋದ್ ಕಾಂಬ್ಳಿ ಅತ್ಯಾಪ್ತರಾಗಿ ಬಳಿಕ ವಿರುದ್ಧ ದಿಕ್ಕನಲ್ಲಿ ಸಾಗಿದ್ದರು. ಇದೀಗ ಒಂದಾದರೂ ಮಾತುಕತೆ, ಸಂಪರ್ಕ ಅಷ್ಟಕಷ್ಟೆ. ಕಾರ್ಯಕ್ರಮ ಸೇರಿದಂತೆ ವಿಶೇಷ ಸಂದರ್ಭದಲ್ಲಿ ಭೇಟಿಯಾದರೆ ಮಾತುಕತೆ. ಇದೀಗ ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಚಿನ್ ತೆಂಡೂಲ್ಕರ್ ಹಾಗೂ ವಿನೋದ್ ಕಾಂಬ್ಳಿ ಭೇಟಿಯಾಗಿದ್ದಾರೆ. ವೇದಿಕೆಯಲ್ಲಿ ಮೂಲೆಯಲ್ಲಿ ಕುಳಿತಿದ್ದ ವಿನೋದ್ ಕಾಂಬ್ಳಿಯನ್ನು ಸಚಿನ್ ತೆಂಡೂಲ್ಕರ್ ಭೇಟಿಯಾಗಿ ಮಾತನಾಡಿದ್ದಾರೆ.

ಸಚಿನ್ ತೆಂಡೂಲ್ಕರ್ ಬಾಲ್ಯದ ಕೋಚ್ ರಮಾಕಾಂತ್ ಅಚ್ರೇಕರ್ ಮೆಮೋರಿಯಲ್ ಅನಾವರಣ ಕಾರ್ಯಕ್ರಮದಲ್ಲಿ ಸಚಿನ್ ತೆಂಡೂಲ್ಕರ್ ಮುಖ್ಯ ಅತಿಥಿಯಾಗಿದ್ದರು. ವಿನೋದ್ ಕಾಂಬ್ಳಿಯನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಇನ್ನು ರಾಜ್ ಠಾಕ್ರೆ ಸೇರಿದಂತೆ ಹಲವು ದಿಗ್ಗಜರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮುಖ್ಯ ಅತಿಥಿ ಸಚಿನ್ ತೆಂಡೂಲ್ಕರ್ ವೇದಿಕೆ ಮಧ್ಯಭಾಗದಲ್ಲಿ ಕುಳಿತಿದ್ದರು. ಆಹ್ವಾನಿತ ಗಣ್ಯರ ಪೈಕಿ ವಿನೋದ್ ಕಾಂಬ್ಳಿ ವೇದಿಕೆಯ ಬದಿಯಲ್ಲಿ ಕುಳಿತಿದ್ದರು.

ಇದೇ ವೇಳೆ ಬದಿಯಲ್ಲಿ ಕುಳಿತಿದ್ದ ವಿನೋದ್ ಕಾಂಬ್ಳಿಯನ್ನು ನೋಡಿದ ಸಚಿನ್ ತೆಂಡೂಲ್ಕರ್ ಕುರ್ಚಿಯಿಂದ ಎದ್ದು ಕಾಂಬ್ಳಿ ಬಳಿ ತೆರಳಿದ್ದಾರೆ. ಈ ವೇಳೆ ವಿನೋದ್ ಕಾಂಬ್ಳಿ ಪಕ್ಕದಲ್ಲಿದ್ದವರ ಜೊತೆ ಮಾತಿನಲ್ಲಿ ತಲ್ಲೀನರಾಗಿದ್ದರು ವಿನೋದ್ ಕಾಂಬ್ಳಿ ಬಳಿ ತೆರಳಿದ ಸಚಿನ್ ತೆಂಡೂಲ್ಕರ್, ಕೈಹಿಡಿದು ಮಾತನಾಡಿಸಿದ್ದಾರೆ. ಸಚಿನ್ ಕೈಗಳನ್ನು ಗಟ್ಟಿಯಾಗಿ ಹಿಡಿದು ಮಾತು ಆರಂಭಿಸಿದ್ದಾರೆ. ಕಾಂಬ್ಳಿ ಅತೀವ ಸಂತಸಗೊಂಡಿದ್ದಾರೆ. ಹೀಗಾಗಿ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಸಚಿನ್ ಒತ್ತಾಯಿಸಿದ್ದಾರೆ.

ಈ ವಿಡಿಯೋ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಅಂಡರ್ 19ರ ಸೆಮಿಸ್‌ಗೆ ಪ್ರವೇಶ ಪಡೆದ ಭಾರತ ತಂಡ

ಭಾರತದ ಬ್ಯಾಟಿಂಗ್ ವೈಭವ

ಶಾರ್ಜಾ: ಹದಿಮೂರು ವರ್ಷದ ಪೋರ ವೈಭವ್ ಸೂರ್ಯವಂಶಿ ಅವರ ಪ್ರತಿಭೆಯನ್ನು ಸಾಬೀತುಪಡಿಸಿದರು. ಅವರ ಸಾಮರ್ಥ್ಯದ ಕುರಿತು ಅಚ್ಚರಿ, ಅನುಮಾನ ವ್ಯಕ್ತಪಡಿಸಿದವರಿಗೆ ಇಲ್ಲಿ ತಕ್ಕ ಉತ್ತರ ನೀಡಿದರು.

ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಸೆಮಿಫೈನಲ್ ಪ್ರವೇಶಿಸಲು ವೈಭವ್ (ಔಟಾಗದೆ 76; 46ಎ) ಅರ್ಧಶತಕದ ಕಾಣಿಕೆ ನೀಡಿದರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತದ 19 ವರ್ಷದೊಳಗಿನವರ ತಂಡವು 10 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದ ಯುಎಇ ತಂಡವು 44 ಓವರ್‌ಗಳಲ್ಲಿ 137 ರನ್ ಗಳಿಸಿತು. ರಯಾನ್ ಖಾನ್ (35; 48ಎ, 4ಗಿ3, 6ಗಿ1) ಮತ್ತು ಅಕ್ಷತ್ ರಾಯ್ (26; 52ಎ) ಅವರುತಂಡಕ್ಕೆ ಆಸರೆಯಾದರು.

ಭಾರತ ತಂಡದ ಯುದ್ಧಜೀತ್ ಗುಹಾ (15ಕ್ಕೆ3), ಚೇತನ್ ಶರ್ಮಾ (27ಕ್ಕೆ2) ಮತ್ತು ಕರ್ನಾಟಕದ ಹುಡುಗ ಹಾರ್ದಿಕ್ ರಾಜ್ (28ಕ್ಕೆ2)ಅವರು ಯುಎಇ ತಂಡದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರು.

ಗುರಿ ಬೆನ್ನಟ್ಟಿದ ಭಾರತ ತಂಡವು 16.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 143 ರನ್ ಗಳಿಸಿ ಜಯಿಸಿತು.

ವೈಭವ್ ಮತ್ತು ಆಯುಷ್ ಮಾತ್ರೆ (ಔಟಾಗದೆ 67, 51ಎ) ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಈಚೆಗೆ ನಡೆದಿದ್ದ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವು 1.10 ಕೋಟಿ ರು. ನೀಡಿ ಬಿಹಾರ್ ಮೂಲದ ವೈಭವ್ ಸೂರ್ಯವಂಶಿಯನ್ನು ಖರೀದಿಸಿತ್ತು. ಐಪಿಎಲ್‌ನಲ್ಲಿ ಆಯ್ಕೆಯಾದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಅವರಾಗಿದ್ದಾರೆ.

ಸಂಕ್ಷಿಪ್ತ ಸ್ಕೋರು: ಯುಎಇ: 44 ಓವರ್‌ಗಳಲ್ಲಿ 137 (ಮೊಹಮ್ಮದ್ ರಯಾನ್ 35, ಯುದ್ಧಜೀತ್ ಗುಹಾ (15ಕ್ಕೆ3, ಚೇತನ್ ಶರ್ಮಾ 27ಕ್ಕೆ2, ಹಾರ್ದಿಕ್ ರಾಜ್ 28ಕ್ಕೆ2) ಭಾರತ: 16.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 143 (ವೈಭವ್ ಸೂರ್ಯವಂಶಿ ಔಟಾಗದೆ 76, ಆಯುಷ್ ಮಾತ್ರೆ ಔಟಾಗದೆ 67) ಫಲಿತಾಂಶ ಭಾರತ ತಂಡಕ್ಕೆ 10 ವಿಕೆಟ್‌ಗಳ ಜಯ.

ಬಾಂಗ್ಲಾದೇಶ- ವೆಸ್ಟ್ ಇಂಡೀಸ್ ನಡುವಿನ 2ನೇ ಟೆಸ್ಟ್ | ವೆಸ್ಟ್ ಇಂಡೀಸ್‌ನ್ನು 101 ರನ್‌ನಲ್ಲಿ ಸೋಲಿಸಿದ ಬಾಂಗ್ಲಾ

ಇಂಡೀಸ್ ನೆಲದಲ್ಲಿ ಬಾಂಗ್ಲಾ ವಿಕ್ರಮ

15 ವರ್ಷಗಳಲ್ಲಿ ಮೊದಲ ಟೆಸ್ಟ್ ಜಯ

ಕಿಂಗ್‌ಸ್ಟನ್ (ಜಮೈಕಾ): ಬಾಂಗ್ಲಾದೇಶ ತಂಡ ಎರಡನೇ ಟೆಸ್ಟ್ ಪಂದ್ಯದಲ್ಲಿ ಮಂಗಳವಾರ ವೆಸ್ಟ್ ಇಂಡೀಸ್ ತಂಡವನ್ನು 101 ರನ್‌ಗಳಿಂದ ಸೋಲಿಸಿತು. ಆ ಮೂಲಕ 15 ವರ್ಷಗಳಲ್ಲಿ ಮೊದಲ ಬಾರಿ ಕೆರಿಬಿಯನ್ ನೆಲದಲ್ಲಿ ಟೆಸ್ಟ್ ಪಂದ್ಯವನ್ನು ಜಯಿಸಿದ ಗೌರವಕ್ಕೆ ಪಾತ್ರವಾಯಿತು.

ಈ ಮೂಲಕ ಎರಡು ಟೆಸ್ಟ್‌ಗಳ ಸರಣಿ 1–1 ಸಮಬಲದಲ್ಲಿ ಮುಗಿಯಿತು. ಗೆಲುವಿಗೆ 287 ರನ್‌ಗಳ ಗುರಿ ಎದುರಿಸಿದ್ದ ವೆಸ್ಟ್ ಇಂಡೀಸ್ ತಂಡ, ಎಡಗೈ ಸ್ಪಿನ್ನರ್ ತೈಜುಲ್ ಇಸ್ಲಾಂ ದಾಳಿಗೆ ಸಿಲುಕಿ 50 ಓವರುಗಳಲ್ಲಿ 185 ರನ್‌ಗಳಿಗೆ ಆಲೌಟ್ ಆಯಿತು. ತೈಜುಲ್ (50ಕ್ಕೆ5) ಐದು ವಿಕೆಟ್‌ಗಳ ಗೊಂಚಲು ಪಡೆದರು. ಆತಿಥೇಯರ ಕೊನೆಯ ಆರು ವಿಕೆಟ್‌ಗಳು 42 ರನ್ನಿಗೆ ಉರುಳಿದವು. ಆರಂಭ ಆಟಗಾರ ಕ್ರೆಗ್ ಬ್ರಾತ್ವೇಟ್ (43) ಮತ್ತು ಕವೆಮ್ ಹಾಜ್ (55) ಬಿಟ್ಟರೆ ಉಳಿದವರು ಪ್ರತಿರೋಧ ತೋರಲಿಲ್ಲ.

ಇದಕ್ಕೆ ಮೊದಲು ಮೂರನೇ ದಿನದಂತ್ಯಕ್ಕೆ 5 ವಿಕೆಟ್‌ಗೆ 193 ರನ್ ಗಳಿಸಿದ್ದ ಬಾಂಗ್ಲಾದೇಶ ಎರಡನೇ ಇನ್ನಿಂಗ್ಸ್‌ನಲ್ಲಿ 268 ರನ್ ಗಳಿಸಿ ಸವಾಲಿನ ಗುರಿ ನಿಗದಿಪಡಿಸಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ಜೇಕರ್ ಅಲಿ (91, 106ಎ) ಅವರ ಆಟ ಪ್ರವಾಸಿ ತಂಡದ ಮೊತ್ತ ಬೆಳೆಯಲು ಕಾರಣವಾಯಿತು.

ಕಳೆದ ವಾರ ಆ್ಯಂಟಿಗಾದಲ್ಲಿ ನಡೆದ ಮೊದಲ ಟೆಸ್ಟ್ ಸೇರಿದಂತೆ ಬಾಂಗ್ಲಾದೇಶ ತಂಡವು, ಕೆರಿಬಿಯನ್ ನೆಲದಲ್ಲಿ ಆಡಿದ ಏಳು ಟೆಸ್ಟ್‌ಗಳಲ್ಲಿ ಸೋಲನುಭವಿಸಿತ್ತು.

ಸ್ಕೋರುಗಳು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 164; ವೆಸ್ಟ್ ಇಂಡೀಸ್: 146; ಎರಡನೇ ಇನ್ನಿಂಗ್ಸ್: ಬಾಂಗ್ಲಾದೇಶ: 268 (ಜೇಕರ್ ಅಲಿ 91; ಅಲ್ಜಾರಿ ಜೋಸೆಫ್ 77ಕ್ಕೆ3, ಕೇಮಾರ್ ರೋಚ್ 36ಕ್ಕೆ3); ವೆಸ್ಟ್ ಇಂಡೀಸ್: 50 ಓವರುಗಳಲ್ಲಿ 185 (ಬ್ರಾತ್ವೇಟ್ 43, ಕವೆಮ್ ಹಾಜ್ 55; ತೈಜುಲ್ ಇಸ್ಲಾಂ 50ಕ್ಕೆ5, ಹಸನ್ ಮೆಹಮೂದ್ 20ಕ್ಕೆ2, ತಸ್ಕಿನ್ ಅಹ್ಮದ್ 45ಕ್ಕೆ2). ಪಂದ್ಯದ ಆಟಗಾರ: ತೈಜುಲ್ ಇಸ್ಲಾಂ; ಸರಣಿಯ ಆಟಗಾರ: ತಸ್ಕಿನ್ ಅಹ್ಮದ್ ಮತ್ತು ಜೇಡನ್ ಸೀಲ್ಸ್.

ವಿಟಾಕೀಸ್

ಮನದ ಕಡಲಲಿ ಮನಗೆದ್ದ ರಾಶಿಕಾ

ಶೀರ್ಷಿಕೆಯಲ್ಲಿಯೇ ಮನಗೆದ್ದ ಮನದ ಕಡಲು ಅಂತಿಮ ಹಂತದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದೆ. ಯೋಗರಾಜ್ ಭಟ್ ನಿರ್ದೇಶನದ ಈ ಚಿತ್ರದಲ್ಲಿ ಹೊಸಬರ ದಂಡೇ ಇದೆ. ಅವರಲ್ಲಿ ನಟಿ ರಾಶಿಕಾ ಶೆಟ್ಟಿ ಕೂಡ ಒಬ್ಬರು.

ಬಾಲ್ಯದಿಂದಲೇ ನಟಿಯಾಗಬೇಕು ಎಂಬ ಹಂಬಲ ಹೊಂದಿದ್ದ ರಾಶಿಕಾ, ವ್ಯಾಸಂಗ ಮುಗಿಸಿ ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸುವ ಅವಕಾಶ ಪಡೆದರು. ಈಗ ಯೋಗರಾಜ್ ಭಟ್ ನಿರ್ದೇಶನದ ಮನದ ಕಡಲು ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಬಾಲ್ಯದಲ್ಲಿ ಮೂಡಿದ ಕನಸು

ನನ್ನದು ಮೂಲತಃ ಚಿಕ್ಕಮಗಳೂರು ನಮ್ಮೂರಿನ ಸುತ್ತಮುತ್ತ ಹಲವು ಸಿನಿಮಾಗಳ ಶೂಟಿಂಗ್ ನಡೆಯುತ್ತಿದ್ದವು. ಅದನ್ನು ನೋಡುತ್ತಿದ್ದರೆ ಮುಂದೆ ನಾನು ನಟಿಯಾಗಬೇಕು ಎಂಬ ಆಸೆ ಮನದಲ್ಲಿ ಮೂಡುತ್ತಿತ್ತು. ಬರು ಬರುತ್ತಾ ಆ ಆಸೆ ಮನದಲ್ಲಿ ಬಲವಾಗಿ ಬೇರೂರಿತು. ಚಿತ್ರರಂಗದತ್ತಲೇ ನನ್ನ ಗುರಿ ನೆಟ್ಟಿತ್ತು. ಹಾಗಾಗಿ ವ್ಯಾಸಂಗ ಮುಗಿಸಿ ಫ್ಯಾಷನ್ ಡಿಸೈನಿಂಗ್ ಕೋರ್ಸ್ ಮಾಡಿದೆ. ಆ ಬಳಿಕ ಬಣ್ಣದಲೋಕಕ್ಕೆ ಜಿಗಿದೆ. ಮೊದಲು ಒಂದೆರಡು ಸೀರಿಯಲ್‌ಗಳಲ್ಲಿ ನಟಿಸಿದೆ. ಅಭಿನಯದ ಬಗ್ಗೆ ಕಲಿತುಕೊಂಡೆ. ಅಲ್ಲಿಂದ ಸಿನಿಮಾದಲ್ಲಿ ನಟಿಸಲೇಬೇಕು ಎಂಬ ಹಠ ಮೂಡಿತು.

ಅದೇ ಹೊತ್ತಿನಲ್ಲಿ ಯೋಗರಾಜ್ ಭಟ್ ಸರ್ ನಿರ್ದೇಶನದಲ್ಲಿ ಮನದಕಡಲು ಸಿನಿಮಾ ಸೆಟ್ಟೇರಿತ್ತು. ಆ ಸಿನಿಮಾದ ಆಡಿಷನ್‌ಗೆ ಹೋಗಿದ್ದೆ, ಕೊನೆಗೂ ಚಿತ್ರದ ನಾಯಕಿಯಾಗಿ ಆಯ್ಕೆಯಾದೆ.

ಬಯಸದೆ ಬಂದ ಭಾಗ್ಯ

ಮನದ ಕಡಲು ಚಿತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದು ನಿಜವಾಗಿಯೂ ನನ್ನ ಅದೃಷ್ಟ. ಮೊದಲ ಸಿನಿಮಾದಲ್ಲಿಯೇ ಯೋಗರಾಜ್ ಭಟ್ ಅವರಂಥಹ ನಿರ್ದೇಶಕರ ಬಳಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ಖುಷಿಕೊಟ್ಟಿದೆ. ನಾನು ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿರುವುದು ಹೆಮ್ಮೆ ತರಿಸಿದೆ. ನಾನು ಈ ಚಿತ್ರದಲ್ಲಿ ಕ್ರಿಕೆಟರ್ ಆಗಿ ಕಾಣಿಸಿ ಕೊಂಡಿದ್ದು, ಮೃದು ಸ್ವಭಾವದ ಹುಡುಗಿಯಾಗಿ ನಟಿಸಿದ್ದೇನೆ. ಚಿತ್ರದ ಕಥೆ, ನನ್ನ ಪಾತ್ರಕ್ಕೆ ತಕ್ಕಂತೆ ತಯಾರಿ ನಡೆಸಿ ಕ್ಯಾಮೆರಾ ಮುಂದೆ ನಿಂತೆ. ಹಾಗಾಗಿ ನನಗೆ ನೀಡಿದ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಾಧ್ಯವಾಯಿತು.

ನಾನು ಒಂದನೇ ತರಗತಿಯಲ್ಲಿ ಇರುವಾಗಲೇ ಡಾನ್ಸ್ ಪ್ರಾಕ್ಟೀಸ್ ಮಾಡುತ್ತಿದ್ದೆ. ಅದೇ ಸಮಯದಲ್ಲಿ ರಮ್ಯಾ ಮತ್ತು ರಕ್ಷಿತಾ ನಟನೆಯ ತನನಂ ತನನಂ ಸಿನಿಮಾದ ಶೂಟಿಂಗ್ ನಡೆಯುತ್ತಿತ್ತು. ಆ ಚಿತ್ರದ ಹಾಡೊಂದರ ಶೂಟಿಂಗ್‌ಗೆ ಕರೆದುಕೊಂಡು ಹೋದರು. ಆ ಚಿತ್ರದಲ್ಲಿ ಬರುವ ಮಕ್ಕಳ ಹಾಡಿಗೆ ನಾನೂ ಡಾನ್ಸ್ ಮಾಡಿದ್ದೆ. ಅಂದಿನಿಂದ ಸಿನಿಮಾದ ಸೆಳೆತ ಆರಂಭವಾಯಿತು.

ಮನದ ಕಡಲು ಸಿನಿಮಾದ ಮೂಲಕ ಮೊದಲ ಹೆಜ್ಜೆ ಇಡುತ್ತಿದ್ದೇನೆ. ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಇದೆ. ಮನದ ಕಡಲು ಸಿನಿಮಾ ಶೂಟಿಂಗ್ ನಡೆಯುತ್ತಿರುವಾಗಲೇ ಮತ್ತೊಂದು ಸಿನಿಮಾದಲ್ಲಿ ನಟಿಸಲು ಅವಕಾಶ ಬಂತು. ಕಥೆ ಕೇಳಿ ಇಷ್ಟವಾಯಿತು. ನಟಿಸಲು ಸಮ್ಮತಿಸಿದೆ. ಆ ಚಿತ್ರದಲ್ಲಿಯೂ ಹೊಸಬರ ತಂಡವೇ ಇದೆ.

ಜನವರಿಯಲ್ಲಿ ಫಾರೆಸ್ಟ್ ತೆರೆಗೆ

ಆರಂಭದಿಂದಲೂ ಸಾಕಷ್ಟು ಕುತೂಹಲ ಮೂಡಿಸಿರುವ ಅಡ್ವೆಂಚರ್ಸ್ ಕಾಮಿಡಿ ಕಥಾಹಂದರದ ಮಲ್ಟಿ ಸ್ಟಾರರ್ ಸಿನಿಮಾ ಫಾರೆಸ್ಟ್ ಜನವರಿ 24 ರಂದು ತೆರೆಗೆ ಬರಲಿದೆ. ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡಿದೆ. ಸಮಾಜಕ್ಕೆ ಸದಭಿರುಚಿಯ ಚಿತ್ರಗಳನ್ನು ನೀಡುವ ಹಂಬಲ ಹೊಂದಿರುವ ಎನ್.ಎಂ.ಕಾಂತರಾಜ್, ಎನ್.ಎಂ.ಕೆ.ಸಿನಿಮಾಸ್ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕಾಡಿನಲ್ಲೇ ನಡೆಯುವ ಅಡ್ವೆಂಚರಸ್ ಕಾಮಿಡಿ ಕಥೆಯ ಈ ಚಿತ್ರವನ್ನು ಚಂದ್ರಮೋಹನ್ ನಿರ್ದೇಶನ ಮಾಡಿದ್ದಾರೆ. ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್ ಹಾಗೂ ರಂಗಾಯಣ ರಘು ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶರಣ್ಯಾ ಶೆಟ್ಟಿ, ಅರ್ಚನಾ ಕೊಟ್ಟಿಗೆ, ಅವಿನಾಶ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ ಪಾಣಂಜೆ, ಸೂರಜ್ ಪಾಪ್ಸ್, ಸುನೀಲ್ ಕುಮಾರ್ ಮುಂತಾದ ಫಾರೆಸ್ಟ್ ತಾರಾಗಣದಲ್ಲಿದ್ದಾರೆ.

ಸತ್ಯಶೌರ್ಯ ಸಾಗರ್ ಹಾಗೂ ಚಂದ್ರಮೋಹನ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ರಚಿಸಿದ್ದಾರೆ. ಸತ್ಯಶೌರ್ಯ ಸಾಗರ್ ಅವರೆ ಸಂಭಾಷಣೆಯನ್ನೂ ಬರೆದಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್ ರಾಜಾವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಮತ್ತೆ ಬೆಳ್ಳಿತೆರೆಯಲ್ಲಿ ರಮ್ಯಾ

ಮೋಹಕತಾರೆ ರಮ್ಯಾ ಅವರನ್ನು ತೆರೆಯಲ್ಲಿ ಕಾಣದೆ ಅವರ ಅಭಿಮಾನಿಗಳು ಬೇಸರಗೊಂಡಿದ್ದರು. ಈಗ ರಮ್ಯಾ ಅಭಿಮಾನಿಗಳಿಗೆ ಸಿಹಿ ಸುದ್ದಿ ಸಿಕ್ಕಿದೆ. ರಮ್ಯಾ ಅಭಿನಯದ ರಕ್ತ ಕಾಶ್ಮೀರ ಚಿತ್ರ ತೆರೆಗೆ ಬರಲಿದ್ದು, ಮತ್ತೊಮ್ಮೆ ರಮ್ಯಾ ಅವರನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ಹೌದು, ಪಾಕ್ ಆಕ್ರಮಿತ ಕಾಶ್ಮೀರದ ಕಥೆಯನ್ನು ಒಳಗೊಂಡಿರುವ ರಕ್ತ ಕಾಶ್ಮೀರ ಚಿತ್ರ ಈ ಹಿಂದೆಯೇ ಸಿದ್ಧವಾಗಿತ್ತು. ಆದರೆ ಕಾರಣಾಂತರಗಳಿಂದ ಚಿತ್ರ ತೆರೆಗೆ ಬರುವುದು ತಡವಾಗಿತ್ತು. ಅಂತು ಈಗ ರಕ್ತ ಕಾಶ್ಮೀರ ಬಿಡುಗಡೆಗೆ ಕಾಲ ಕೂಡಿಬಂದಿದೆ. ಈ ಸಿನಿಮಾ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಉಪೇಂದ್ರ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ರಮ್ಯಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಇದೇ ಚಿತ್ರದ ಪ್ರಮುಖ ಕಥಾಹಂದರವಾಗಿದೆ. ಗಡಿ ಪ್ರದೇಶ ಅಷ್ಟೇ ಅಲ್ಲ, ಬೆಂಗಳೂರಿನಲ್ಲೂ ಉಗ್ರಗಾಮಿಗಳು ಅಡಗಿದ್ದರು, ಅದರ ನಿರ್ಮೂಲನೆಗೆ ಸಂಬಂಧಿಸಿದ ಸ್ಟೋರಿಯೂ ಚಿತ್ರದಲ್ಲಿದೆ. ತೆಲುಗು ನಟಿ ಅನಿಲಾ, ದೊಡ್ಡಣ್ಣ, ಓಂಪ್ರಕಾಶ್ ರಾವ್, ಕುರಿ ಪ್ರತಾಪ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎಂಡಿಎಂ ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಎಂ.ಎಸ್.ರಮೇಶ್ ಸಂಭಾಷಣೆ ಬರೆದಿದ್ದು, ಗುರುಕಿರಣ್ ಸಂಗೀತ ಸಂಯೋಜಿಸಿದ್ದಾರೆ.